ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ

ರಾಜಸ್ಥಾನ: ಬಿಜೆಪಿ ದಿಗ್ವಿಜಯ ಮತ್ತು 'ಇಂಡಿಯಾ' ಮೈತ್ರಿಕೂಟ

'ಐ.ಟಿ ಕಂಪನಿಗಳಿಗೆ ಕೇರಳ ಗಾಳ' 10

ಸುಮಲತಾ ಬೆಂಬಲ ಕೋರಿದ ಎಚ್‌ಡಿಕೆ 4

ರೆಪೊ ದರ ಯಥಾಸ್ಥಿತಿ? 10

ಬಂಧನ ವಿರುದ್ಧ 'ಇಂಡಿಯಾ' ಒಂದು

ಕೇಜ್ರಿವಾಲ್, ಸೊರೇನ್ ಸೆರೆ ಖಂಡಿಸಿ ರ್‍ಯಾಲಿ: ಪ್ರಜಾಪ್ರಭುತ್ವ ಉಳಿಸಲು, ಸಂವಿಧಾನ ರಕ್ಷಿಸಲು ಪಣ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ವಿರೋಧಿಸಿ, ಇಲ್ಲಿನ ರಾಮಲೀಲಾ ಮೈದಾನದಲ್ಲಿ ಭಾನುವಾರ ನಡೆದ 'ಇಂಡಿಯಾ' ಮೈತ್ರಿಕೂಟದ ರ್‍ಯಾಲಿಯು ವಿರೋಧ ಪಕ್ಷಗಳ ಒಕ್ಕೂಟದ ಒಗ್ಗಟ್ಟು ಮತ್ತು ಬೃಹತ್ ಶಕ್ತಿ ಪ್ರದರ್ಶನಕ್ಕೆ ವೇದಿಕೆಯಾಯಿತು.

ಪ್ರಮುಖ ವಿರೋಧ ಪಕ್ಷಗಳಾದ ಕಾಂಗ್ರೆಸ್, ಎಎಪಿ, ಶಿವಸೇನಾ (ಉದ್ಧವ್ ಬಣ), ಟಿಎಂಸಿ, ಡಿಎಂಕೆ, ಎನ್‌ಸಿಪಿ (ಶರದ್ ಪವಾರ್ ಬಣ), ಆರ್‌ಜೆಡಿ, ಎಡಪಕ್ಷ ಸೇರಿದಂತೆ 'ಇಂಡಿಯಾ' ಕೂಟದ ಬಹುತೇಕ ಪಕ್ಷಗಳ ಮುಖಂಡರು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಇಡೀ ಮೈದಾನದಲ್ಲಿ ಎಎಪಿ ಸೇರಿದಂತೆ ವಿರೋಧ ಪಕ್ಷಗಳ ಕಾರ್ಯಕರ್ತರು, ಬೆಂಬಲಿಗರು ಕಿಕ್ಕಿರಿದು ಸೇರಿದ್ದರು.

11ನೇ ಪುಟ ನೋಡಿ

'ಮ್ಯಾಚ್‌ಫಿಕ್ಸಿಂಗ್'

ರಾಹುಲ್ ಗಾಂಧಿ

'ಒಂದು ವೇಳೆ ಚುನಾವಣೆಯಲ್ಲಿ ಬಿಜೆಪಿ ಗೆದ್ದು, ಸಂವಿಧಾನವನ್ನು ಬದಲಿಸಿದರೆ ದೇಶವೇ ಹೊತ್ತಿ ಉರಿಯುತ್ತದೆ. ಈ ಬಾರಿಯ ಚುನಾವಣೆ, ದೇಶದ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಉಳಿಸುವ ಚುನಾವಣೆಯಾಗಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದರು.

'ಚುನಾವಣೆಯ ಅಂಪೈರ್‌ಗಳನ್ನು ಆಯ್ಕೆ ಮಾಡಿದವರು ಯಾರು? ಪಂದ್ಯಕ್ಕೂ ಮುನ್ನವೇ ಎದುರಾಳಿ ತಂಡದ ಇಬ್ಬರನ್ನು ಬಂಧಿಸಲಾಗಿದೆ. ಹೀಗೆ ಪ್ರಧಾನಿ ಚುನಾವಣೆಯಲ್ಲಿ ಮ್ಯಾಚ್‌ಫಿಕ್ಸಿಂಗ್ ಮಾಡಲು ಯತ್ನಿಸಿದ್ದಾರೆ' ಎಂದು ಆರೋಪಿಸಿದರು.

'ದ್ವೀಪವನ್ನು ಶ್ರೀಲಂಕಾಕ್ಕೆ ಬಿಟ್ಟುಕೊಟ್ಟ ಕಾಂಗ್ರೆಸ್'

ನರೇಂದ್ರ ಮೋದಿ

ನವದೆಹಲಿ: ಕಾಂಗ್ರೆಸ್ ಪಕ್ಷವು 1974ರಲ್ಲಿ ಕಚ್ಚತೀವು (ಪಾರ್ಕ್ ಸ್ಟ್ರೈಟ್) ದ್ವೀಪವನ್ನು ಶ್ರೀಲಂಕಾಕ್ಕೆ ಉದಾರವಾಗಿ ನೀಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ಭಾನುವಾರ ವಾಗ್ದಾಳಿ ನಡೆಸಿದರು.

'ಕಾಂಗ್ರೆಸ್ ಹೇಗೆ ಕಚ್ಚತೀವು ದ್ವೀಪವನ್ನು ಬಿಟ್ಟುಕೊಟ್ಟದೆ ಎಂಬ ಸತ್ಯ ಸಂಗತಿ ಬೆಳಕಿಗೆ ಬಂದಿದೆ. ಕಾಂಗ್ರೆಸ್ ಅನ್ನು ಎಂದಿಗೂ ನಂಬಬಾರದು ಎಂಬ ಸಂಗತಿ ಜನರಿಗೆ ಗೊತ್ತಾಗಿದೆ' ಎಂದು ಮೋದಿ ಅವರು ಎಕ್ಸ್‌'ನಲ್ಲಿ ತಿಳಿಸಿದ್ದಾರೆ.

ತಮಿಳುನಾಡು ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಅವರ ಆರ್‌ಟಿಐ ಅರ್ಜಿಗೆ ಸಿಕ್ಕ ಉತ್ತರವನ್ನು ಉಲ್ಲೇಖಿಸಿ ಮೋದಿ ಕಾಂಗ್ರೆಸ್ ವಿರುದ್ಧ ಕಿಡಿಕಾರಿದ್ದಾರೆ. '75 ವರ್ಷಗಳ ಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಭಾರತದ ಭಾವೈಕ್ಯ ಮತ್ತು ಹಿತಾಸಕ್ತಿಯನ್ನು ಕಡೆಗಣಿಸಿದೆ' ಎಂದು ಆರೋಪಿಸಿದರು.

'ಮೋದಿ ಸರ್ಕಾರವೇಕೆ ಮರಳಿ ಪಡೆಯಲಿಲ್ಲ'

ಮಲ್ಲಿಕಾರ್ಜುನ ಖರ್ಗೆ

ಪ್ರಧಾನಿ ಮೋದಿ ಆರೋಪಕ್ಕೆ ತಿರುಗೇಟು ನೀಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, 'ಕಳೆದ 10 ವರ್ಷಗಳಲ್ಲಿ ಮೋದಿ ಯವರು ದ್ವೀಪವನ್ನು ಮರಳಿ ಪಡೆಯುವ ಪ್ರಯತ್ನ ಯಾಕೆ ಮಾಡಿಲ್ಲ? ಚುನಾವಣೆ ಸಮಯದಲ್ಲಿ ಸೂಕ್ಷ್ಮ ವಿಷಯಗಳನ್ನು ಮುನ್ನೆಲೆಗೆ ತರುತ್ತಿರುವುದು ಅವರ ಹತಾಶೆಯನ್ನು ತೋರಿಸುತ್ತದೆ' ಎಂದರು.

'ಗಾಲ್ವನ್ ಕಣಿವೆಯಲ್ಲಿ ಭಾರತದ 20 ವೀರ ಯೋಧರು ಪ್ರಾಣಾರ್ಪಣೆ ಮಾಡಿದ ಬಳಿಕ ಪ್ರಧಾನಿ ಮೋದಿಯವರು ಚೀನಾವನ್ನು ಯಾಕೆ 'ಆರೋಪಮುಕ್ತ' ಮಾಡಿದರು' ಎಂದೂ ಪ್ರಶ್ನಿಸಿದರು. '1974ರ ಸ್ನೇಹಪರ ಒಪ್ಪಂದದ ಪ್ರಕಾರ ದ್ವೀಪವನ್ನು ಬಿಟ್ಟುಕೊಡಲಾಗಿದೆ. ಬಾಂಗ್ಲಾದೇಶದ ಜೊತೆಗೂ ಇದೇ ರೀತಿಯ ಸ್ನೇಹದ ಭಾವನೆಯನ್ನು ತೋರಲಾಗಿದೆ ಎಂಬುವುದನ್ನು ಮೋದಿ ಸರ್ಕಾರ ಮರೆಯಬಾರದು' ಎಂದರು.

ರೋಹನ್–ಎಬ್ಡೆನ್ ಮುಡಿಗೆ ಮಯಾಮಿ ಟೆನಿಸ್ ಕಿರೀಟ

ಮಯಾಮಿ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ಶನಿವಾರ ತಡರಾತ್ರಿ ಮಯಾಮಿ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಈ ಗೆಲುವಿನೊಂದಿಗೆ 44 ವರ್ಷದ ಕನ್ನಡಿಗ ರೋಹನ್ ಎಟಿಪಿ ಡಬಲ್ಸ್ ರ್‍ಯಾಂಕಿಂಗ್‌ನಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಏರಿದರು.

ಫೈನಲ್ ಹಣಾಹಣಿ

6-7, 6-3, 10-6

ರಿಂದ ಕ್ರೊವೇಷ್ಯಾದ ಇವಾನ್ ದೊಡಿಗ್ ಮತ್ತು ಅಮೆರಿಕದ ಆಸ್ಟಿನ್ ಕ್ರಾಜಿಕ್ ಜೋಡಿಯ ವಿರುದ್ಧ ಗೆಲುವು

ಎಟಿಪಿ ಮಾಸ್ಟರ್ಸ್ 1000 ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಅತ್ಯಂತ ಹಿರಿಯ ಆಟಗಾರ ಎಂಬ ತಮ್ಮದೇ ದಾಖಲೆ ಉತ್ತಮಪಡಿಸಿದ ರೋಹನ್

ಮ್ಯಾಥ್ಯೂ ಎಬ್ಡೆನ್ ರೋಹನ್ ಬೋಪಣ್ಣ

₹1,744 ಕೋಟಿ ಪಾವತಿಸಿ: 'ಕೈ'ಗೆ ಮತ್ತೊಂದು ಶಾಕ್

ನವದೆಹಲಿ (ಪಿಟಿಐ): ಆದಾಯ ತೆರಿಗೆ (ಐಟಿ) ಇಲಾಖೆಯಿಂದ ಕಾಂಗ್ರೆಸ್ ಪಕ್ಷಕ್ಕೆ ಮತ್ತೊಂದು ನೋಟಿಸ್ ಜಾರಿಯಾಗಿದ್ದು, ₹1,744 ಕೋಟಿ ತೆರಿಗೆ ಪಾವತಿಸುವಂತೆ ಸೂಚಿಸಲಾಗಿದೆ. ಇತ್ತೀಚೆಗಷ್ಟೇ ಐಟಿ ಇಲಾಖೆಯು ₹1,823 ಕೋಟಿ ತೆರಿಗೆ ಪಾವತಿಸುವಂತೆ ಕಾಂಗ್ರೆಸ್‌ಗೆ ನೋಟಿಸ್ ನೀಡಿತ್ತು. ಅದರ ಬೆನ್ನಲ್ಲೇ ಇದೀಗ ಹೊಸ ನೋಟಿಸ್ ನೀಡಲಾಗಿದೆ.

ಹೊಸ ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿರುವ ಮೊತ್ತವನ್ನೂ ಸೇರಿಸಿದರೆ ಕಾಂಗ್ರೆಸ್ ಪಕ್ಷವು ಒಟ್ಟಾರೆ ಪಾವತಿಸಬೇಕಾದ ತೆರಿಗೆಯ ಮೊತ್ತ ₹3,568 ಕೋಟಿಗೆ ಏರಿದಂತಾಗಿದೆ.

ಹೊಸ ತೆರಿಗೆ ನೋಟಿಸ್ ಪ್ರಕಾರ, 2014–15 (₹663 ಕೋಟಿ), 2015–16 (ಸುಮಾರು ₹664 ಕೋಟಿ) ಮತ್ತು 2016–17ನೇ (ಸುಮಾರು₹ 417 ಕೋಟಿ) ಸಾಲಿನಲ್ಲಿ ಕಾಂಗ್ರೆಸ್ ಒಟ್ಟಾರೆ ₹1,744 ಕೋಟಿ ಪಾವತಿಸ ಬೇಕಾಗಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಅಂಕಿ ಅಂಶಗಳು

₹3,567 ಕೋಟಿ ಕಾಂಗ್ರೆಸ್ ಪಾವತಿಸಬೇಕಾದ ಮೊತ್ತ

₹135 ಕೋಟಿ ಆದಾಯ ತೆರಿಗೆ ಇಲಾಖೆಯು ಕಾಂಗ್ರೆಸ್ ಖಾತೆಯಿಂದ ಪಡೆದಿರುವ ಮೊತ್ತ

ಬಿಜೆಪಿಯ ಬಾಂಡ್ 'ಹಗರಣ' ಬಹಿರಂಗವಾದ್ದರಿಂದ ಕೇಂದ್ರ ಸರ್ಕಾರವು ಸೇಡಿನ ಕ್ರಮವಾಗಿ, ಆದಾಯ ತೆರಿಗೆ ಇಲಾಖೆಯಿಂದ ಕಾಂಗ್ರೆಸ್ ಪಕ್ಷಕ್ಕೆ ನೋಟಿಸ್ ಕೊಡಿಸಿದೆ

ವರ್ಷಾ ಗಾಯಕವಾಡ್, ಮುಂಬೈ ಕಾಂಗ್ರೆಸ್ ಘಟಕದ ಮುಖ್ಯಸ್ಥೆ

ರಾಜಕೀಯ ಪಕ್ಷಗಳಿಗೆ ಲಭ್ಯವಿರುವ ತೆರಿಗೆ ವಿನಾಯಿತಿಯನ್ನು ಐಟಿ ಇಲಾಖೆ ಕೊನೆಗೊಳಿಸಿದೆ. ಸಂಗ್ರಹವಾದ ದೇಣಿಗೆಯ ಮೊತ್ತಕ್ಕೆ ಪಕ್ಷಕ್ಕೆ ತೆರಿಗೆ ವಿಧಿಸಲಾಗುತ್ತಿದೆ ಎಂದು ಕಾಂಗ್ರೆಸ್ ಹೇಳಿದೆ.

11ನೇ ಪುಟ ನೋಡಿ

ಬಿರುಗಾಳಿ: ಪಶ್ಚಿಮ ಬಂಗಾಳದಲ್ಲಿ ನಾಲ್ವರ ಸಾವು

ಜಲಪೈಗುರಿ/ಗುವಾಹಟಿ (ಪಿಟಿಐ): ಪಶ್ಚಿಮ ಬಂಗಾಳ ಹಾಗೂ ಅಸ್ಸಾಂನಲ್ಲಿ ಭಾನುವಾರ ಬಿರುಗಾಳಿಯೊಂದಿಗೆ ಮಳೆ ಸುರಿದಿದೆ. ಪಶ್ಚಿಮ ಬಂಗಾಳದ ಜಲಪೈಗುರಿ ಜಿಲ್ಲೆಯಲ್ಲಿ ಮಳೆ ಸಂಬಂಧಿತ ಅವಘಡಗಳಲ್ಲಿ ನಾಲ್ವರು ಮೃತಪಟ್ಟಿದ್ದು, 100ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಅಸ್ಸಾಂ ರಾಜಧಾನಿ ಗುವಾಹಟಿಯಲ್ಲಿರುವ ಲೋಕಪ್ರಿಯ ಗೋಪಿನಾಥ ಬೋರ್ದಲೋಯಿ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಹಾನಿಯಾಗಿದೆ.

4ನೇ ಪುಟ ನೋಡಿ

ಸಿಯುಇಟಿ– ಯುಜಿ: ಅರ್ಜಿ ಸಲ್ಲಿಕೆಗೆ ಏ.5 ಕೊನೆ ದಿನಾಂಕ

ನವದೆಹಲಿ (ಪಿಟಿಐ): ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಯುಇಟಿ– ಯುಜಿ) ಅರ್ಜಿ ಸಲ್ಲಿಸುವ ಕಡೆಯ ದಿನಾಂಕವನ್ನು ಮತ್ತೆ ವಿಸ್ತರಿಸಲಾಗಿದ್ದು, ಏಪ್ರಿಲ್ 5ಕ್ಕೆ ನಿಗದಿ ಪಡಿಸಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಆಯೋಗದ ಹಿರಿಯ ನಿರ್ದೇಶಕಿ (ಪರೀಕ್ಷೆ) ಸಾಧನಾ ಪರಾಶರ್ ತಿಳಿಸಿದ್ದಾರೆ.

ಪ್ರವೇಶ ಪರೀಕ್ಷೆಗಳು ಮೇ 15ರಿಂದ 31ರ ಒಳಗೆ ನಡೆಯಲಿವೆ. ಈ ಮೊದಲು, ಅರ್ಜಿ ಸಲ್ಲಿಸಲು ಕಡೆಯ ದಿನಾಂಕವನ್ನು ಮಾರ್ಚ್ 26ಕ್ಕೆ ನಿಗದಿಪಡಿಸಲಾಗಿತ್ತು, ಆನಂತರ ಮಾ. 31ಕ್ಕೆ ವಿಸ್ತರಿಸಲಾಗಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್‌ಆ್ಯಪ್ ಮಾಡಿ: 9606038256

‘ಕೆಟ್ಟು ನಿಂತಿರುವ ಕಾರು ಸ್ಥಳಾಂತರಿಸಿ’

ರಸ್ತೆಯ ಪಕ್ಕದಲ್ಲಿಯೇ ಕೆಟ್ಟು ನಿಂತಿರುವ ಕಾರು

ಮಲ್ಲೇಶ್ವರ ರೈಲು ನಿಲ್ದಾಣದ ಹಿಂಭಾಗದ ರಸ್ತೆಯಲ್ಲಿ (ಗಾಯತ್ರಿನಗರದ ಕಡೆಗೆ) ಬಹಳ ದಿನಗಳಿಂದ ಕಾರೊಂದು ಕೆಟ್ಟು ನಿಂತಿದೆ. ಈ ರಸ್ತೆಯು ಯಶವಂತಪುರ ಮತ್ತು ಮೆಜೆಸ್ಟಿಕ್‌ಗೆ ಸಂಪರ್ಕ ಕಲ್ಪಿಸುತ್ತದೆ. ಪ್ರತಿನಿತ್ಯ ಈ ರಸ್ತೆಯಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತವೆ. ಈ ಹಳೆಯ ಕಾರು ರಸ್ತೆಯ ಪಕ್ಕದಲ್ಲಿ ನಿಲ್ಲಿಸಿರುವುದರಿಂದ ವಾಹನ ದಟ್ಟಣೆ ಆಗುತ್ತಿದೆ. ಜೊತೆಗೆ ಅಪಘಾತಗಳು ಸಂಭವಿಸುತ್ತವೆ. ನಗರದ ಸೌಂದರ್ಯಕ್ಕೆ ಕಪ್ಪು ಚುಕ್ಕೆ ಆಗಿರುವ ಈ ಕಾರನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳಾಂತರಿಸಬೇಕು. ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಲೋಕೇಶ್ ಗೌಡ, ಮಲ್ಲೇಶ್ವರ

‘ಪಾದಚಾರಿ ಮಾರ್ಗದಲ್ಲಿನ ಕಸ ತೆರವುಗೊಳಿಸಿ’



ಕೆಂಪೇಗೌಡ ರಸ್ತೆ ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಹಾಕಲಾಗಿದೆ. ಇದರ ಪಕ್ಕದಲ್ಲಿ ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಗಳಿವೆ. ನಗರಕ್ಕೆ ಪ್ರವೇಶಿಸುವವರಿಗೆ ಈ ಕಸದ ರಾಶಿಯೇ ಸ್ವಾಗತಿಸುತ್ತದೆ. ಕೆಂಪೇಗೌಡ ರಸ್ತೆಯ 2ನೇ ಅಡ್ಡರಸ್ತೆಯಲ್ಲಿ ಬಹಳ ದಿನಗಳಿಂದಲೂ ಪ್ಲಾಸ್ಟಿಕ್, ಮನೆಯ ತ್ಯಾಜ್ಯ, ಕಟ್ಟಡ ತ್ಯಾಜ್ಯವನ್ನು ಹಾಕಲಾಗಿದೆ. ಬಿಬಿಎಂಪಿಯ ಸಿಬ್ಬಂದಿ ಕೂಡಲೇ ಇಲ್ಲಿನ ತ್ಯಾಜ್ಯವನ್ನು ತೆರವುಗೊಳಿಸಿ ನಗರದ ಸೌಂದರ್ಯ ಕಾಪಾಡಬೇಕು.

ಶಿವಪ್ರಸಾದ್, ಪಾದಚಾರಿ

‘ಉಯ್ಯಾಲೆಗೆ ಹಲಗೆಗಳನ್ನು ಅಳವಡಿಸಿ’

ಬಸವನಗುಡಿ ವಿಧಾನಸಭೆ ಕ್ಷೇತ್ರದ ಚನ್ನಮ್ಮನಕೆರೆ ಅಚ್ಚುಕಟ್ಟಿನ ಉದ್ಯಾನದಲ್ಲಿರುವ ಉಯ್ಯಾಲೆಗೆ ಕಳೆದ ಎರಡು ವರ್ಷಗಳಿಂದ ಹಲಗೆಗಳನ್ನು ಅಳವಡಿಸಿಲ್ಲ. ಉದ್ಯಾನದಲ್ಲಿ ಉಯ್ಯಾಲೆಯನ್ನು ಹಾಕುವುದಕ್ಕೆ ಬೇಕಾದ ಸರಪಳಿ ಮತ್ತು ಕಂಬಗಳನ್ನು ಅಳವಡಿಸಿದ್ದಾರೆ. ಆದರೆ, ಅದಕ್ಕೆ ಹಲಗೆಗಳನ್ನು ಮಾತ್ರ ಹಾಕಿಲ್ಲ. ಇದರಿಂದಾಗಿ ಇದು ಸಾರ್ವಜನಿಕರ ಉಪಯೋಗಕ್ಕೆ ಬರುತ್ತಿಲ್ಲ. ಅರ್ಧಂಬರ್ಧ ಸ್ಥಿತಿಯಲ್ಲಿರುವ ಉಯ್ಯಾಲೆಯನ್ನು ಸರಿಪಡಿಸಿ ಉದ್ಯಾನಕ್ಕೆ ಬರುವ ವಾಯುವಿಹಾರಿಗಳಿಗೆ ಇದರ ಸೌಲಭ್ಯ ಸಿಗುವಂತೆ ಮಾಡಬೇಕು.

ಕುಮಾರ್ ಎನ್, ತ್ಯಾಗರಾಜನಗರ

‘ಕೆಂಗೇರಿ: ಚರಂಡಿ ಸ್ವಚ್ಛಗೊಳಿಸಿ’

ಕೆಂಗೇರಿ ವಿದ್ಯಾಪೀಠ ರಸ್ತೆಯ ಬಾಪೂಜಿ ಕಾಲೊನಿಯ 6ನೇ ಅಡ್ಡರಸ್ತೆಯು ಅವ್ಯವಸ್ಥೆಯ ಆಗರವಾಗಿದೆ. ಸ್ಥಳೀಯ ನಿವಾಸಿಗಳು ಇಲ್ಲಿನ ಚರಂಡಿಗಳಲ್ಲಿ ಕಸ ಹಾಕುವುದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಚರಂಡಿಗಳನ್ನು ಸ್ವಚ್ಛಗೊಳಿಸುವ ಕೆಲಸವಾಗಬೇಕು. ಕಾಲೊನಿಗೆ ಸಂಪರ್ಕ ಕಲ್ಪಿಸುವ ರಸ್ತೆ ಕಿರಿದಾಗಿದ್ದು, ಸಂಪೂರ್ಣ ಹಾಳಾಗಿದೆ. ಇದರಿಂದ, ಬೆಂಗಳೂರು ಜಲಮಂಡಳಿ ಪೂರೈಕೆ ಮಾಡುತ್ತಿರುವ ಉಚಿತ ಕುಡಿಯುವ ನೀರಿನ ಟ್ಯಾಂಕರ್‌ಗಳು ನಮ್ಮ ಮನೆಗಳಿಗೆ ತಲುಪುತ್ತಿಲ್ಲ. ಕೂಡಲೇ ಬಿಬಿಎಂಪಿ ಇಲ್ಲಿನ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು.

ಉಮಾ, ಬಾಪೂಜಿ ಕಾಲೊನಿ

ನಗರದಲ್ಲಿ ಇಂದು

ಪ್ರವಚನ ವಾಹಿನಿ: ‘ಷಟ್ ಪ್ರಶ್ನೋಪನಿಷತ್ ಚಿಂತನೆ’ ಕುರಿತು ಉಪನ್ಯಾಸ: ಎ. ಗುರುಪ್ರಸಾದ್ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ದಿ ಓಪನ್ ಫ್ರೇಮ್’ ಎ ಫಿಲ್ಮ್ ಆನ್ ದಿ ಲೈಫ್ ಆ್ಯಂಡ್ ಆರ್ಟ್ಸ್ ಆಫ್ ಎಸ್.ಜಿ. ವಾಸುದೇವ್: ಭಾಷಣಕಾರರು: ರವಿಕುಮಾರ್ ಕಾಶಿ, ಸುಮನ್ ಗೋಪಿನಾಥ್, ನವರೋಜ್ ಕಾಂಟ್ರಾಕ್ಟರ್, ಪ್ರಸನ್ನ, ನಳಿನಿ ಮಾಳವಿಯಾ, ಚೇತನ್ ಶಾ, ಲತಾ ಮಣಿ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

‘ರಾಮನ ಆದರ್ಶ ಗುಣಗಳು’ ಧಾರ್ಮಿಕ ಪ್ರವಚನ: ರಾಘವೇಂದ್ರಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಬಂಧನಕ್ಕೆ ವ್ಯಾಪಕ ಆಕ್ರೋಶ

ಬಂಧನ ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ಖಂಡಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ‘ಇಂಡಿಯಾ’ ಒಕ್ಕೂಟದಿಂದ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಅಕ್ರಮವಾಗಿ ಬಂಧಿಸಲಾಗಿದೆ’ ಎಂದು ಆರೋಪಿಸಿ, ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ಆಮ್ ಆದ್ಮಿ ಪಕ್ಷದ(ಎಎಪಿ) ರಾಜ್ಯ ಘಟಕದ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಅವರ ನೇತೃತ್ವದಲ್ಲಿ ಇಂಡಿಯಾ ಒಕ್ಕೂಟದಿಂದ ಪ್ರತಿಭಟನೆ ನಡೆಯಿತು.

ಕೇಂದ್ರ ಸರ್ಕಾರ, ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮಿತ್ ಶಾ ವಿರುದ್ಧ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿ, ಧಿಕ್ಕಾರ ಕೂಗಿದರು.

‘ಮುಖ್ಯಮಂತ್ರಿ’ ಚಂದ್ರು ಅವರು ಮಾತನಾಡಿ, ‘ಜಾರಿ ನಿರ್ದೇಶನಾಲಯ (ಇ.ಡಿ), ಸಿಬಿಐ, ತೆರಿಗೆ ಇಲಾಖೆ ಅಧಿಕಾರಿಗಳು ಸ್ವತಂತ್ರವಾಗಿ ಕೆಲಸ ಮಾಡುತ್ತಿಲ್ಲ. ಬದಲಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಗುಲಾಮರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ’ ಎಂದು ಆಪಾದಿಸಿದರು.

‘ಕಳೆದ 10 ವರ್ಷಗಳಿಂದ ಪ್ರಜಾಪ್ರಭುತ್ವ ವ್ಯವಸ್ಥೆಯ ಕಗ್ಗೊಲೆ ನಡೆಸಲಾಗುತ್ತಿದೆ’ ಎಂದು ದೂರಿದರು.

‘ಬಿಜೆಪಿಯೇತರ ಆಡಳಿತವಿರುವ ರಾಜ್ಯಗಳಲ್ಲಿ ರಾಜ್ಯಪಾಲರ ಮೂಲಕ ಕಡಿವಾಣ ಹಾಕುತ್ತಿದ್ದಾರೆ. ದೆಹಲಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಮೂಲಕ ರಾಜ್ಯದ ಆಡಳಿತವನ್ನು ಹತೋಟಿಯಲ್ಲಿ ಇಡಲು ಯತ್ನಿಸುತ್ತಿದ್ದಾರೆ. ಜೈಲಿನಲ್ಲಿರಬೇಕಾದ ಕಡುಭ್ರಷ್ಟರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಮಂತ್ರಿ, ಮುಖ್ಯಮಂತ್ರಿ ಮಾಡುತ್ತಿದ್ದಾರೆ. ಅದೇ ರಾಜಕೀಯ ಎದುರಾಳಿಗಳನ್ನು ಇ.ಡಿ, ಸಿಬಿಐ, ತೆರಿಗೆ ಇಲಾಖೆ ಮತ್ತಿತರ ತನಿಖಾ ಸಂಸ್ಥೆಗಳ ಮೂಲಕ ಸುಳ್ಳು ಪ್ರಕರಣಗಳಡಿ ಆರೋಪಿಗಳಾಗಿಸಿ ಕಿರುಕುಳ ಕೊಡುತ್ತಿದ್ದಾರೆ’ ಎಂದು ದೂರಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ‘ಬಿಜೆಪಿಯ ಪೂರ್ವಜರು ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್‌ನವರಾಗಿದ್ದಾರೆ. ಅವರು ಯಾರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಲ್ಲ. ಮನುವಾದಿ, ಸರ್ವಾಧಿಕಾರಿ ಧೋರಣೆಯಲ್ಲಿ ನಂಬಿಕೆ ಇಟ್ಟವರಾಗಿದ್ದಾರೆ. ಸಂವಿಧಾನ ವಿರೋಧಿಗಳು. ಭಾರತದಲ್ಲಿ ಈಗ ಸರ್ವಾಧಿಕಾರ ಚಾಲ್ತಿಯಲ್ಲಿದೆ’ ಎಂದು ಆಪಾದಿಸಿದರು.

ಸಿಪಿಎಂ ಮುಖಂಡ ಜಿ.ಎನ್. ನಾಗರಾಜ್ ಮಾತನಾಡಿ, ‘ಪ್ರಧಾನಿ ನರೇಂದ್ರ ಮೋದಿ ಹಿಂದಿರುವ ಆರ್‌ಎಸ್‌ಎಸ್ ಈ ದೇಶವನ್ನು ನಿಯಂತ್ರಿಸುತ್ತಿದೆ. ಮನುವಾದಿ, ಕೋಮು ದ್ವೇಷದ ಚಿಂತನೆಗಳನ್ನು ಹೊಂದಿರುವ, ಸರ್ವಾಧಿಕಾರಿ ಧೋರಣೆ ಆರ್‌ಎಸ್‌ಎಸ್ ಕಳೆದ ನೂರು ವರ್ಷಗಳಿಂದ ವ್ಯವಸ್ಥಿತವಾಗಿ ಭಾರತವನ್ನು ತನ್ನ ಕೈವಶ ಮಾಡಿಕೊಳ್ಳುತ್ತ ಬಂದಿದೆ’ ಎಂದು ಹೇಳಿದರು.

ಎಸ್‌ಡಿಪಿಐ ಮುಖಂಡ ಅಬ್ದುಲ್ ಮಜೀದ್, ಸಾಮಾಜಿಕ ಹೋರಾಟಗಾರ ನೂರ್ ಶ್ರೀಧರ್, ಸಲೀಲ್ ಶೆಟ್ಟಿ, ಎಎಪಿ ರಾಜ್ಯ ಉಪಾಧ್ಯಕ್ಷರಾದ ಮೋಹನ್ ದಾಸರಿ, ವಿಜಯ್ ಶರ್ಮಾ, ರಮೇಶ್ ಬೆಲ್ಲಂಕೊಂಡ, ವೆಂಕಟೇಶ್, ಶಾಂತಲಾ ದಾಮ್ಲೆ, ಸಂಪತ್ ಶೆಟ್ಟಿ, ನಸೀಮುದ್ದಿನ್ ಪಟೇಲ್, ರುದ್ರಯ್ಯ ನವಲೀಹಿರೇಮಠ್, ಸುದೇಶ್ ರಾಥೋಡ್, ವಿವೇಕಾನಂದ ಸಾಲಿನ್ಸ್, ಉಮಾಶಂಕರ್, ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಚಿತ್ ಸಹಾನಿ, ಪ್ರಕಾಶ್ ನಡುಂನುಡಿ, ರಾಜ್ಯ ಮಾಧ್ಯಮ ಸಂಚಾಲಕರಾದ ಜಗದೀಶ್ ವಿ. ಸದಂ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹವ್ಯಕ ಮಹಾಸಭೆ ಸಂಸ್ಥಾಪನೋತ್ಸವದಲ್ಲಿ ಡಾ. ಗಿರಿಧರ ಕಜೆ ಹೇಳಿಕೆ

‘ಎಲ್ಲರನ್ನು ಒಳಗೊಂಡು ಸಮ್ಮೇಳನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೂರನೇ ವಿಶ್ವ ಹವ್ಯಕ ಸಮ್ಮೇಳನವು 2024ರ ಡಿ.27ರಿಂದ 29ರವರೆಗೆ ಇಲ್ಲಿನ ಅರಮನೆ ಮೈದಾನದಲ್ಲಿ ನಡೆಯಲಿದೆ. ಈ ಸಮ್ಮೇಳನವು ಎಲ್ಲ ಸಮಾಜವನ್ನೂ ಒಳಗೊಳ್ಳಲಿದ್ದು, ಹವ್ಯಕರ ವಿಶೇಷತೆಗಳನ್ನು ತಿಳಿಸಿಕೊಡಲಾಗುತ್ತದೆ’ ಎಂದು ಅಖಿಲ ಹವ್ಯಕ ಮಹಾಸಭೆ ಅಧ್ಯಕ್ಷ ಡಾ. ಗಿರಿಧರ ಕಜೆ ತಿಳಿಸಿದರು.

ಮಹಾಸಭೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಸಂಸ್ಥಾಪನೋತ್ಸವ ಹಾಗೂ ವಿಶೇಷ ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

‘ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಹತ್ತಾರು ಸಮಾವೇಶಗಳು ನಡೆಯಲಿದ್ದು, ಇದು ಎಲ್ಲ ಸಮಾಜದವರಿಗೂ ಮುಕ್ತವಾಗಿರಲಿದೆ. ಇದು ಜಾತಿಯ ಸಮಾವೇಶವಾಗದೇ, ಹವ್ಯಕ ಸಮಾಜವನ್ನು ಸಮಷ್ಟಿ ಸಮಾಜಕ್ಕೆ ಪರಿಚಯಿಸುವ ಕಾರ್ಯ ಇಲ್ಲಿ ನಡೆಯಲಿದೆ. 2018ರಲ್ಲಿ ನಡೆದ ಎರಡನೇ ವಿಶ್ವ ಹವ್ಯಕ ಸಮ್ಮೇಳನಕ್ಕೂ ನಾಡಿನಾದ್ಯಂತ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿತ್ತು. ಹವ್ಯಕ ಸಮಾಜ ಆದರ್ಶ ಸಮಾಜವಾಗಿದೆ. ಲೋಕಕಲ್ಯಾಣದ ಕಾರಣಕ್ಕಾಗಿಯೇ ಹುಟ್ಟಿಕೊಂಡವರು ಹವ್ಯಕರು. ಈ ಸಮಾಜವು ತನ್ನತನವನ್ನು ಇಟ್ಟುಕೊಂಡು ದೊಡ್ಡ ವೃಕ್ಷವಾಗಿ ಇಡೀ ಲೋಕಕ್ಕೆ ನೆರಳನ್ನು ನೀಡಬೇಕಾಗಿದೆ’ ಎಂದು ಹೇಳಿದರು.

> ಹವ್ಯಕರು ಮೂರ್ತಿ ಪೂಜಕರು. ನಾವು ಶಿಲ್ಪಶಾಸ್ತ್ರದ ಕುರಿತಾಗಿಯೂ ಬಲ್ಲವರಾದರೆ ಇನ್ನೂ ಹೆಚ್ಚಿನ ಅಧ್ಯಾತ್ಮ ಸಾಧನೆ ಸಾಧ್ಯ
> **ಗಣೇಶ್ ಎಲ್. ಭಟ್,** ಶಿಲ್ಪಿ

> ಹವ್ಯಕ ಸಮಾಜ ಪರಿಸರ ತಜ್ಞ ಸಮಾಜವಾಗಿದೆ. ಪರಿಸರದ ಸೂಕ್ಷ್ಮಗಳನ್ನು ಗಮನಿಸಿ, ಕೃಷಿಯನ್ನು ಕಟ್ಟಿ ಬೆಳಸಿದ ಹೆಮ್ಮೆ ಈ ಸಮಾಜದ್ದಾಗಿದೆ
> **ಶಿವಾನಂದ ಕಳವೆ,** ಪರಿಸರ ತಜ್ಞ

ಭಾಷಾ ತಜ್ಞ ಪಾದೇಕಲ್ಲು ವಿಷ್ಣು ಭಟ್ಟ, ‘ನಮ್ಮಲ್ಲಿರುವ ಜ್ಞಾನವನ್ನು ಹಂಚುವುದರ ಮೂಲಕ ಸಮಾಜಕ್ಕೆ ನಾವು ಉಪಕಾರಿಯಾಗಬೇಕು. ನಮ್ಮ ಸಾಧನೆಯ ಜೊತೆ ಜೊತೆಗೆ ನಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಜ್ಞಾನವನ್ನೂ ನಾವು ಹಂಚಬೇಕು. ನಮ್ಮ ಅನುಭವಗಳನ್ನು ದಾಖಲಿಸಬೇಕು’ ಎಂದರು.

‘ಹವ್ಯಕ ವಿಭೂಷಣ ಪ್ರಶಸ್ತಿ’ ಪುರಸ್ಕೃತ ಸಾಹಿತಿ ಎಚ್.ಎಂ. ತಿಮ್ಮಪ್ಪ ಕಲಸಿ, ‘ವಾಸ್ತವದಲ್ಲಿ ಹವ್ಯಕರು ಅಲ್ಪಸಂಖ್ಯಾತರಾಗಿದ್ದಾರೆ. ಈ ಸಮುದಾಯ ದವರಿಗೆ ಯಾವುದೇ ಸರ್ಕಾರಿ ಸೌಲಭ್ಯಗಳು ಸಿಗುತ್ತಿಲ್ಲ. ತಮ್ಮಲ್ಲಿರುವ ಪ್ರತಿಭೆಯಿಂದ ಎಲ್ಲ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿದ್ದಾರೆ. ಹವ್ಯಕರನ್ನು ಕದಂಬ ದೊರೆ ಮಯೂರವರ್ಮ ಉತ್ತರದ ಅಹಿಚ್ಛತ್ರದಿಂದ ಕರೆದುಕೊಂಡು ಬಂದ ಎಂಬುದು ನಿಜವಾದರೂ, ಹವ್ಯಕರು ಮೂಲತಃ ಈ ನಾಡಿನವರು. ಕಾರಣಾಂತರಗಳಿಂದ ಇಲ್ಲಿಂದ ಉತ್ತರ ಭಾರತಕ್ಕೆ ವಲಸೆ ಹೋಗಿದ್ದರು. ಮಯೂರವರ್ಮ ಮತ್ತೆ ಹವ್ಯಕರನ್ನು ಈ ಮಣ್ಣಿಗೆ ಕರೆತಂದ’ ಎಂದು ತಿಳಿಸಿದರು.

HEALTH SPECIAL ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

WANTED MALE/ Female Office Assistant Known Accounts with Tally Having Fluency English & Hindi In and Around Rajajinagar Contact: 9108458798/ 080-23384085

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

General

DRYFRUITS, FLAVOURED Cashews, Gift Boxes. Free Home Delivery Throughout Bengaluru. Irresistible Prices Impeccable Quality and Immaculate Taste Contact 'Farms India' 8095059460/ 6360940295

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

EDUCATION

To Place your Classified Ads Contact: 9845114560

ಸುಧಾ, ಮಯೂರ ಓದಿರಿ

ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ

ಪ್ರಜಾವಾಣಿ ವಾರ್ತೆ

ಡಾ.ಎಸ್‌.ಆರ್‌.ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಡಾ.ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್.ಶಿವಣ್ಣ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಿದರು.

ಕೆ.ಆರ್.ಪುರ: ‘ಯಾವುದೇ ಜಾತಿ, ಧರ್ಮ ಭೇದಭಾವವಿಲ್ಲದೇ ಕಡು ಬಡತನದ ಹಿನ್ನಲೆಯಿರುವ ಮಕ್ಕಳನ್ನು ಗುರುತಿಸಿ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸಲಾಗುತ್ತಿದೆ’ ಎಂದು ಡಾ.ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಮಳವಳ್ಳಿ ಹೇಳಿದರು.

ಸರ್ವಜ್ಞನಗರ ಸಮೀಪದ ಲಿಂಗರಾಜಪುರದ ಡಾ.ಎಸ್. ಆರ್.ಚಂದ್ರಶೇಖರ್ ವಾಕ್ ಮತ್ತು ಶ್ರವಣ ಸಂಸ್ಥೆಯಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 15 ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್ ವಿತರಿಸಿ ಅವರು ಮಾತನಾಡಿದರು.

‘ಗ್ರಾಮೀಣ ಮಕ್ಕಳು, ಪೌರ ಕಾರ್ಮಿಕರು, ಕೂಲಿ ಕಾರ್ಮಿಕರು, ಆಟೊ ಚಾಲಕರ ಮಕ್ಕಳು, ಗಾರ್ಮೆಂಟ್ ಇನ್ನಿತರ ವಲಯಗಳಲ್ಲಿ ಕೆಲಸ ಮಾಡುವ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬದ ಮಕ್ಕಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ. ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೆರವಿಗೆ ಧಾವಿಸಿ ಲ್ಯಾಪ್‌ಟಾಪ್ ವಿತರಿಸಬೇಕು’ ಎಂದು ಹೇಳಿದರು.

‘ಕೋವಿಡ್ ಕಾಲದಲ್ಲಿ 2019ರಲ್ಲಿ ಉಚಿತ ಲ್ಯಾಪ್‌ಟಾಪ್ ವಿತರಣೆ ಕಾರ್ಯ ಆರಂಭವಾಯಿತು. ಒಂದು ಸಾವಿರ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಿಸುವ ಗುರಿ ಇದೆ. ಇಲ್ಲಿಯವರೆಗೆ 365 ಬಡ ವಿದ್ಯಾರ್ಥಿಗಳಿಗೆ ಲ್ಯಾಪ್‌ ಟಾಪ್ ವಿತರಿಸಲಾಗಿದೆ’ ಎಂದು ವಿವರಿಸಿದರು.

ಮಹಿಳಾ ಕಥಾ ಸ್ಪರ್ಧೆಗೆ ಕಥೆಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು ವೈದ್ಯೆ, ಕಥೆಗಾರ್ತಿ ಡಾ.ಅನುಪಮಾ ನಿರಂಜನ ಅವರ ಹುಟ್ಟುಹಬ್ಬದ ಅಂಗವಾಗಿ ಉದಯೋನ್ಮುಖ ಕಥೆಗಾರ್ತಿಯರಿಗೆ ‘ಮಹಿಳಾ ಕಥಾ ಸ್ಪರ್ಧೆ’ ಆಯೋಜಿಸಿದೆ.

ಇದುವರೆಗೆ ಒಂದೂ ಕಥಾ ಸಂಕಲನ ಪ್ರಕಟಿಸದೆ ಇರುವವರು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಕಥೆಯು ಸ್ವಂತ ರಚನೆಯಾಗಿದ್ದು, ಮಹಿಳಾ ಕೇಂದ್ರಿತ ಕಥಾವಸ್ತು ಆಗಿರಬೇಕು. ಸ್ಪರ್ಧೆಗೆ ಕಳುಹಿಸುವ ಕಥೆಯು ಈ ಮೊದಲು ಎಲ್ಲೂ ಪ್ರಕಟ ಆಗಿರಬಾರದು. ಪ್ರಥಮ ಬಹುಮಾನ ₹2,500, ದ್ವಿತೀಯ ₹2,000 ಹಾಗೂ ತೃತೀಯ ₹1,500 ನಗದು ಒಳಗೊಂಡಿದೆ.

ಪ್ರವೇಶ ಶುಲ್ಕ ₹200 ನಿಗದಿಪಡಿ ಸಲಾಗಿದೆ. ಕಥೆಗಳನ್ನು ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷ, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇತಿರುವು, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು-560056 ವಿಳಾಸಕ್ಕೆ ಏ.30 ರೊಳಗೆ ಕಳುಹಿಸಬೇಕು. ಸಂಪರ್ಕ:9739001410

‘ನುಡಿ ಮಿಲನ’ ಕಾರ್ಯಕ್ರಮದಲ್ಲಿ ಕಥೆಗಾರ ವಿವೇಕ ಶಾನಭಾಗ ಬೇಸರ

‘ಈಗ ವಿಮರ್ಶೆಗೆ ಜಾಗ ಇಲ್ಲದಂತಾಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೃಜನಶೀಲ ಸಾಹಿತ್ಯ ಸೃಷ್ಟಿಗೆ ವಿಮರ್ಶೆ ಅತ್ಯಗತ್ಯ. ವಿಮರ್ಶೆ ಇಲ್ಲದಿದ್ದರೆ ಸಾಹಿತ್ಯ ಬೆಳವಣಿಗೆ ಹೊಂದಲು ಸಾಧ್ಯವಿಲ್ಲ. ಆದರೆ, ಈಗ ಕನ್ನಡದಲ್ಲಿ ವಿಮರ್ಶೆಗೆ ಜಾಗ ಇಲ್ಲದಂತಾಗಿದೆ’ ಎಂದು ಕಥೆಗಾರ ವಿವೇಕ ಶಾನಭಾಗ ಬೇಸರ ವ್ಯಕ್ತಪಡಿಸಿದರು.

ವೀರಲೋಕ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ‘ನುಡಿ ಮಿಲನ’ ಕಾರ್ಯಕ್ರಮದಲ್ಲಿ ಕೇಶವ ಮಳಗಿ ಅವರು ಸಂಪಾದಿಸಿರುವ ‘ಕುಸುರೆಳ್ಳು’ ಹಾಗೂ ‘ಕಥಾ ಸಂಕ್ರಾಂತಿ’ ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ‘ಕಥಾ ಸಂಕ್ರಾಂತಿ’ ಪುಸ್ತಕವು ತೆಲುಗು, ಮಲಯಾಳಂ ಹಾಗೂ ಇಂಗ್ಲಿಷ್ ಭಾಷೆಗೂ ಅನುವಾದಗೊಂಡಿದೆ.

ಈ ಕಾರ್ಯಕ್ರಮದಲ್ಲಿ ಮಾತನಾಡಿದ ವಿವೇಕ ಶಾನಭಾಗ, ‘ಇತ್ತೀಚೆಗೆ ಪತ್ರಿಕೆಗಳಲ್ಲಿಯೂ ಪುಸ್ತಕ ವಿಮರ್ಶೆಗಳು ಅಷ್ಟಾಗಿ ಬರುತ್ತಿಲ್ಲ. ಹೊಸ ಬರಹಗಾರರಿಗೂ ವಿಮರ್ಶೆಯಲ್ಲಿ ಆಸಕ್ತಿ ಕಡಿಮೆ ಆಗುತ್ತಿದೆ. ಬರವಣಿಗೆಯ ಕೌಶಲ ವೃದ್ಧಿಯಾಗಬೇಕಾದರೆ ವಿಮರ್ಶೆಗಳನ್ನು ಓದಬೇಕಾಗುತ್ತದೆ. ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ಕಥೆಗಳನ್ನು ಮಾದರಿ ಕಥೆಗಳೆಂದು ಸ್ವೀಕರಿಸಬಾರದು. ಕನ್ನಡಕ್ಕೆ ದೊಡ್ಡ ಕಥಾ ಪರಂಪರೆಯಿದೆ. ಹಿಂದೆ ‘ಪ್ರಜಾವಾಣಿ’ ಕಥಾ ಸ್ಪರ್ಧೆಯಲ್ಲಿ ಮೂರನೇ, ಸಮಾಧಾನಕರ ಬಹುಮಾನ ಪಡೆದವರೂ ಮುಂದೆ ದೊಡ್ಡ ಕಥೆಗಾರರಾಗಿ ಹೊರಹೊಮ್ಮಿದ್ದಾರೆ’ ಎಂದು ಹೇಳಿದರು. ‘ಕಥೆಗಳನ್ನು ಬರೆಯುವವರು ತಮ್ಮ ಅನುಭವಕ್ಕೆ ಚಿಂತನೆಯ ಸ್ಪರ್ಶ ನೀಡಬೇಕು. ಅನುಭವ ಆಕಾರ ಪಡೆಯಲು ಸಮಯ ಬೇಕಾಗುತ್ತದೆ. ಎಲ್ಲವನ್ನೂ ಸಿದ್ಧ ಶಬ್ದಗಳಲ್ಲಿ ಹೇಳದೆ, ಹೊಸ ಮಾದರಿ ಸೃಷ್ಟಿಸಬೇಕು’ ಎಂದು ತಿಳಿಸಿದರು.

ಕಥೆಗಾರ ಕೇಶವ ಮಳಗಿ, ‘ಇತ್ತೀಚೆಗೆ ಹಣದಿಂದ ಕಥಾ ಸ್ಪರ್ಧೆಗಳನ್ನು ನೋಡುತ್ತಿದ್ದೇವೆ. ದೊಡ್ಡ ಮೊತ್ತದ ನಗದು ಬಹುಮಾನವಿದ್ದಾಗ ಉತ್ತಮ ಕಥೆಗಳು ಬರುತ್ತವೆ ಎನ್ನಲು ಸಾಧ್ಯವಿಲ್ಲ. ಕನ್ನಡದ ಕಥೆಗಳ ಬಗ್ಗೆ ಸಿದ್ಧ ಮಾದರಿಯಲ್ಲಿದ್ದೇವೆ. ಕನ್ನಡದಲ್ಲಿ ಅನುವಾದಕರನ್ನು ಹುಡುಕುವುದು ಕಷ್ಟ’ ಎಂದು ಹೇಳಿದರು.

ಇಂಗ್ಲಿಷ್ ಲೇಖಕಿ ಕಾವೇರಿ ನಂಬೀಸನ್, ‘ವಿವಿಧ ವ್ಯಕ್ತಿತ್ವಗಳನ್ನು ಅರ್ಥ ಮಾಡಿಕೊಂಡಾಗ ಬರವಣಿಗೆ ಸುಲಭವಾಗುತ್ತದೆ. ಬರಹಗಾರರು ಓದುವಿಕೆಯನ್ನು ರೂಢಿಸಿಕೊಳ್ಳಬೇಕು’ ಎಂದು ತಿಳಿಸಿದರು.

ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್, ‘ಹೊರ ರಾಜ್ಯಗಳಲ್ಲಿಯೂ ಪುಸ್ತಕಗಳ ಬಿಡುಗಡೆಗೆ ಯೋಜನೆ ರೂಪಿಸಲಾಗುತ್ತಿದೆ. ಬೇರೆ ಬೇರೆ ಭಾಷೆಗೆ ಕನ್ನಡದ ಪುಸ್ತಕಗಳನ್ನು ಅನುವಾದಿಸಿ, ಪ್ರಕಟಿಸಲಾಗುತ್ತಿದೆ’ ಎಂದು ಹೇಳಿದರು.

ಅನುವಾದಕರಾದ ಸುಧಾಕರನ್ ರಾಮಂತಳಿ ಹಾಗೂ ಅಶೋಕ್ ಪಿನ್ನಮನೇನಿ ಅವರು ಅನುವಾದದ ಮಹತ್ವದ ಬಗ್ಗೆ ಮಾತನಾಡಿದರು.

ಪುಸ್ತಕ ಪರಿಚಯ

ಪುಸ್ತಕ: ‘ಕುಸುರೆಳ್ಳು’
ಸಂಪಾದಕರು: ಕೇಶವ ಮಳಗಿ
ಪುಟಗಳು: 268
ಬೆಲೆ: ₹320

***

ಪುಸ್ತಕ: ‘ಕಥಾ ಸಂಕ್ರಾಂತಿ’
ಸಂಪಾದಕರು: ಕೇಶವ ಮಳಗಿ
ಪುಟಗಳು: 156
ಬೆಲೆ: ₹185

*ಎರಡೂ ಪುಸ್ತಕಗಳನ್ನು ವೀರಲೋಕ ಪ್ರಕಾಶನ ಪ್ರಕಟಿಸಿದೆ

ಕಾರ್ಯಕ್ರಮದಲ್ಲಿ ಕೇಶವ ಮಳಗಿ (ಎಡದಿಂದ ಮೂರನೆಯವರು) ಅವರು ‘ಕುಸುರೆಳ್ಳು’ ಹಾಗೂ ‘ಕಥಾ ಸಂಕ್ರಾಂತಿ’ ಪುಸ್ತಕವನ್ನು ಬಿಡುಗಡೆ ಮಾಡಿದರು. ವೀರಕಪುತ್ರ ಶ್ರೀನಿವಾಸ್, ಕಾವೇರಿ ನಂಬೀಸನ್, ಸುಧಾಕರನ್ ರಾಮಂತಳಿ, ವಿವೇಕ ಶಾನಭಾಗ ಮತ್ತು ಅಶೋಕ್ ಪಿನ್ನಮನೇನಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಬಿಬಿಎಂಪಿ ವ್ಯಾಪ್ತಿಯಲ್ಲಿ ಮೂಲಸೌಕರ್ಯ ಕಾಮಗಾರಿಗಳ ಕಾರ್ಯಾರಂಭಕ್ಕೆ ಮೀನಮೇಷ

ಯೋಜನೆ ಅಸಂಖ್ಯ, ಅನುಷ್ಠಾನಕ್ಕೆ ನಿರ್ಲಕ್ಷ್ಯ

• ಆರ್. ಮಂಜುನಾಥ್

ಮೂರು ವರ್ಷಗಳಿಂದ ಸ್ಥಗಿತಗೊಂಡಿರುವ ಈಜಿಪುರ ಮೇಲ್ಸೇತುವೆ ಕಾಮಗಾರಿ

ಮತ ಮಂಥನ

ಬೆಂಗಳೂರು: ನಗರದ ವಾಹನ ದಟ್ಟಣೆ, ಗುಂಡಿತುಂಬಿದ ರಸ್ತೆಗಳು, ತೆರವು ಮಾಡದ ಕಸ, ಹೂಳು ತುಂಬಿದ ಚರಂಡಿಗಳು, ಮಳೆ ಬಂದಾಗ ಮನೆಗಳಿಗೆ ನೀರು ತುಂಬಿಸುವ ರಾಜಕಾಲುವೆಗಳು, ಸುಗಮ ಸಂಚಾರಕ್ಕೆ ಮೇಲ್ಸೇತುವೆಗಳು, ಅಂಡರ್‌ಪಾಸ್‌ಗಳು... ಇವೆಲ್ಲವೂ ಪ್ರತಿ ಚುನಾವಣೆಯ ಪ್ರಚಾರದ ಪ್ರಮುಖ ವಿಷಯಗಳು.

ಬೆಂಗಳೂರಿಗೆ ಮೂಲಸೌಕರ್ಯ ಒದಗಿಸುವ ಯೋಜನೆಗಳ ಬಗ್ಗೆ ಹಿಂದಿನ ಲೋಕಸಭೆ, ವಿಧಾನಸಭೆ ಚುನಾವಣೆಗಳಲ್ಲಿ ಸಾಕಷ್ಟು ಭರವಸೆಗಳನ್ನು ನೀಡಲಾಗಿತ್ತು. ಸೌಕರ್ಯಗಳಿಲ್ಲದ ಬಗ್ಗೆ ಪ್ರತಿಪಕ್ಷದವರು ಆಡಳಿತ ಪಕ್ಷವನ್ನು ಜರಿದಿದ್ದರು. ಈ ಬಾರಿಯ ಲೋಕಸಭಾ ಚುನಾವಣೆಯ ಪ್ರಚಾರದಲ್ಲೂ ಇದೇ ತರಹದ ಕಾಯಕ ಮುಂದುವರಿಯಲಿದೆ.

ವಾಹನ ದಟ್ಟಣೆ ಸುಧಾರಣೆ ಹಾಗೂ ಸಿಗ್ನಲ್‌ರಹಿತ ಯೋಜನೆಗಳನ್ನು ಹತ್ತಾರು ವರ್ಷಗಳಿಂದ ರೂಪಿಸಲಾಗುತ್ತಿದೆ. ಕಳೆದ ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ಈ ಎರಡೂ ವಿಷಯಗಳು ಹೆಚ್ಚು ಪ್ರಚಾರ, ಆರೋಪಗಳಲ್ಲಿದ್ದವು. ಆದರೆ, ಈವರೆಗೂ ಯೋಜನೆಗಳು ಅನುಷ್ಠಾನವಾಗಿಲ್ಲ.

ನಗರದಲ್ಲಿ ಹತ್ತು ತಿಂಗಳಲ್ಲಿ ಪ್ರಮುಖ ಯೋಜನೆಗಳು ಸ್ಥಗಿತಗೊಂಡಿವೆ. ಅದರಲ್ಲೂ ಮೇಲ್ಸೇತುವೆಗಳ ಕಾಮಗಾರಿಗಳು ಸ್ಥಗಿತಗೊಂಡು ಜನರಿಗೆ ತೊಂದರೆ ನೀಡುತ್ತಿವೆ. ಜೊತೆಗೆ, ಪಾಲಿಕೆಗೆ ಆರ್ಥಿಕ ಹೊರೆಯೂ ಹೆಚ್ಚಾಗುತ್ತಿದೆ. ಇದು ರಾಜಕಾರಣದ ತಂತ್ರಗಳು. ಹಿಂದಿನ ಸರ್ಕಾರ ಅನುಷ್ಠಾನಗೊಳಿಸಿದ ಯೋಜನೆಗಳಿಗೆ ಹೊಸ ಸರ್ಕಾರ ತಡೆಯೊಡ್ಡಿದ ಕೆಲವು ಪ್ರಕರಣಗಳಿವೆ. ಯಲಹಂಕ, ನಾಯಂಡಹಳ್ಳಿ ಬಳಿಯ ಹೊರ ವರ್ತುಲ ರಸ್ತೆ ಹಾಗೂ ರಾಜರಾಜೇಶ್ವರಿನಗರದ ಆರ್ಚ್ ಬಳಿಯ ಮೇಲ್ಸೇತುವೆಗಳ ಕಾಮಗಾರಿಗಳು ಹಲವು ತಿಂಗಳುಗಳಿಂದ ಸ್ಥಗಿತಗೊಂಡಿವೆ. ಹಣ ಬಿಡುಗಡೆ ಮಾಡದಿರುವುದು ಇದಕ್ಕೆ ಕಾರಣ. ಅಲ್ಲದೆ, ಸ್ಥಳೀಯ ಶಾಸಕರು ಮತ್ತು ಆಡಳಿತ ಪಕ್ಷದ ನಡುವಿನ ಜಟಾಪಟಿಯೂ ಪ್ರಮುಖ ಕಾರಣ. ಇದು ಲೋಕಸಭೆ ಚುನಾವಣೆಯ ಪ್ರಚಾರದ ಸಮಯದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ನಡುವಿನ ಪ್ರತ್ಯಾರೋಪಗಳಿಗೆ ಕಾರಣವಾಗಲಿದೆ.

ಕೋರಮಂಗಲದಲ್ಲಿ ಸಂಚಾರ ದಟ್ಟಣೆ ಕಡಿಮೆಗೊಳಿಸುವ ಪ್ರಮುಖ ಯೋಜನೆಯಾದ ಈಜಿಪುರ ಮೇಲ್ಸೇತುವೆ ಕಾಮಗಾರಿಯ ಕಥೆ ಮತ್ತೊಂದು ರೀತಿಯದ್ದೇ ಆಗಿದೆ. ಇದು 2016ರಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಜಾರಿಯಾದ ಯೋಜನೆ. ಆದರೆ, ಬಿಜೆಪಿ ಸರ್ಕಾರವಿದ್ದಾಗ ಸ್ಥಗಿತಗೊಂಡಿತ್ತು. ಆಗ ಬಿಜೆಪಿ ವಿರುದ್ಧ ಕಾಂಗ್ರೆಸ್‌ನ ಜನಪ್ರತಿನಿಧಿಗಳು ಆರೋಪ ಮಾಡಿದ್ದರು. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬಿಟಿಎಂ ವಿಧಾನಸಭೆ ಕ್ಷೇತ್ರದ ಪ್ರಮುಖ ಅಸ್ತ್ರವೂ ಇದೇ ಆಗಿತ್ತು.

‘ಅಧಿಕಾರಕ್ಕೆ ಬಂದ 11 ತಿಂಗಳಲ್ಲಿ ಈ ಕಾಮಗಾರಿ ಪೂರ್ಣಗೊಳಿಸುವುದಾಗಿ’ ರಾಮಲಿಂಗಾರೆಡ್ಡಿ ಅವರೇ ಹೇಳಿದ್ದರು. ಆದರೆ, ಅರ್ಧಕ್ಕೆ ನಿಂತ ಈಜಿಪುರ ಮೇಲ್ಸೇತುವೆಯ ಕಾಮಗಾರಿ, ಗುತ್ತಿಗೆ ನೀಡಿ ಐದು ತಿಂಗಳಾದರೂ ಕೆಲಸವೇ ಆರಂಭವಾಗಿಲ್ಲ. ಮೊದಲು ಮುಂಗಡ ಹಣ ನೀಡಿಲ್ಲ ಎಂದು ನಿಧಾನವಾದರೆ, ಇದೀಗ ಭೂಸ್ವಾಧೀನವಾಗಿಲ್ಲ ಎಂದು ಕಾಮಗಾರಿ ನಡೆಯುತ್ತಿಲ್ಲ.

ಸೈಕಲ್, ಹೊಲಿಗೆ ಯಂತ್ರ, ಅಂಗವಿಕಲರಿಗೆ ವಾಹನ ವಿತರಣೆ ಸೇರಿದಂತೆ ಸಮಾಜ ಕಲ್ಯಾಣದ ನೂರಾರು ಕೋಟಿ ವೆಚ್ಚದ ಸೌಲಭ್ಯಗಳನ್ನೂ ಎರಡು ವರ್ಷಗಳಿಂದ ಫಲಾನುಭವಿಗಳಿಗೆ ನೀಡಿಲ್ಲ. ರಸ್ತೆಗಳನ್ನು ಗುಂಡಿ ಮುಕ್ತವಾಗಿಸುವ ಕಾರ್ಯ ಇನ್ನೂ ಆರಂಭವೇ ಆಗಿಲ್ಲ. ಚರಂಡಿಗಳಲ್ಲಿ ಹೂಳು ತುಂಬಿಕೊಂಡೇ ಇದೆ. ಪಾದಚಾರಿ ಮಾರ್ಗವಂತೂ ನಡೆಯುವ ಪರಿಸ್ಥಿತಿಯಲ್ಲಿ ಇಲ್ಲ. ಉದ್ಯಾನಗಳಲ್ಲಿ ಗಿಡ–ಮರಗಳು ಒಣಗುತ್ತಿದ್ದರೂ, ನೀರು ಹಾಕುವ ಕೆಲಸವೂ ಆಗಿಲ್ಲ. ಸಾರ್ವಜನಿಕ ಶೌಚಾಲಯ ಸ್ಥಾಪಿಸುವ ಕಾಮಗಾರಿಗೆ ಚಾಲನೆ ಸಿಕ್ಕಿಲ್ಲ. ವೈಟ್ ಟಾಪಿಂಗ್ ರಸ್ತೆಗಾಗಿ ₹2,000 ಕೋಟಿ ವೆಚ್ಚ ಮಾಡಲು ಉದ್ದೇಶಿಸಿದ್ದರೂ ಅದರ ಕಾಮಗಾರಿಗೆ ಅನುಮೋದನೆ ದೊರೆತಿಲ್ಲ.

ಈ ಎಲ್ಲ ಯೋಜನೆಗಳೂ ಸೇರಿದಂತೆ ರಸ್ತೆಗೆ ಡಾಂಬರು ಹಾಕಲು, ಕೊಳವೆಬಾವಿ ಕೊರೆಯಲು ಲೋಕಸಭಾ ಚುನಾವಣೆ ಪ್ರಕಟವಾಗುವ ಕೆಲವೇ ದಿನಗಳ ಮೊದಲು ಟೆಂಡರ್ ಕರೆದಿದ್ದಾರೆ. ಆದರೆ, ಇವೆಲ್ಲ ಕಾಮಗಾರಿಗಳು ಚುನಾವಣೆಯ ನಂತರವಷ್ಟೇ ಅನುಮೋದನೆಯಾಗಿ, ಕಾರ್ಯಾದೇಶ ಪಡೆಯಬೇಕು. ಮುಂದಿನ ಆರು ತಿಂಗಳಲ್ಲಿ ಇವು ಅನುಷ್ಠಾನವಾಗುವ ಖಾತರಿ ಇಲ್ಲ. ‘ಬ್ರ್ಯಾಂಡ್ ಬೆಂಗಳೂರು’ ಪರಿಕಲ್ಪನೆಯಲ್ಲಿ ಸುರಂಗ ರಸ್ತೆ, ಸ್ಕೈಡೆಕ್ ಸೇರಿದಂತೆ ಹಲವು ಯೋಜನೆಗಳು ಪ್ರಕಟವಾಗಿದ್ದರೂ, ಅವುಗಳಿಗೆ ಸ್ಪಷ್ಟ ರೂಪುರೇಷೆ ಇನ್ನೂ ಸಿಕ್ಕಿಲ್ಲ.

ಬಿಬಿಎಂಪಿ ಬಜೆಟ್

₹12,371.63 ಕೋಟಿ 2024-25 | ₹11,885.57 ಕೋಟಿ 2023-24

ಅನುದಾನ ಹಂಚಿಕೆ (ಕೋಟಿಗಳಲ್ಲಿ)

	2024-25	2023-24
ಸಾರ್ವಜನಿಕ ಕಾಮಗಾರಿ	₹7,280.93	₹7,103.53
ಘನತ್ಯಾಜ್ಯ ನಿರ್ವಹಣೆ	₹1,952.19	₹1,643.72
ಸಮಾಜ ಕಲ್ಯಾಣ	₹829.63	₹513.16
ಸಾರ್ವಜನಿಕ ಆರೋಗ್ಯ	₹483.26	₹344.62
ತೋಟಗಾರಿಕೆ	₹248.08	₹129.85
ಸಾರ್ವಜನಿಕ ಶಿಕ್ಷಣ	₹ 214.82	₹152.61
ನಗರ ಯೋಜನೆ	₹62.30	₹72.63

ಮಳೆಗಾಲದಲ್ಲೂ ಪರಿಸ್ಥಿತಿ ಸುಧಾರಿಸಲ್ಲ!

2022ರ ಮಳೆಗಾಲದಲ್ಲಿ ಬೆಂಗಳೂರಿನ ಪೂರ್ವ ಭಾಗ ಮುಳುಗಿಹೋಗಿತ್ತು. ‘ಸಂಪೂರ್ಣ ಬೆಂಗಳೂರೇ ಮುಳುಗಿ ಹೋಯಿತು’ ಎಂಬ ಅಭಿಪ್ರಾಯಗಳು ವ್ಯಕ್ತವಾದವು. ರಾಜಕೀಯವಾಗಿ ಎಲ್ಲ ಪಕ್ಷಗಳೂ ಪರಸ್ಪರ ಆರೋಪಗಳಿಗೆ ಆ ವರ್ಷದ ಅತಿ ಹೆಚ್ಚಿನ ಮಳೆ ಹಾಗೂ ಬಿಬಿಎಂಪಿಯ ನಿರ್ಲಕ್ಷ್ಯ ಅವಕಾಶ ಮಾಡಿಕೊಟ್ಟಿತ್ತು. 2022ಕ್ಕೆ ಹೋಲಿಸಿದರೆ 2024ರ ಪರಿಸ್ಥಿತಿ ಭಿನ್ನವಾಗೇನೂ ಇಲ್ಲ. 2023ರಲ್ಲಿ ಮಳೆಯ ಪ್ರಮಾಣ ಕಡಿಮೆಯಾದ್ದರಿಂದ ಸಮಸ್ಯೆ ಅರಿವು ಬಹಿರಂಗವಾಗಲಿಲ್ಲ.

ಈ ವರ್ಷ ಮಳೆಗಾಲದಲ್ಲಿ ವಾಡಿಕೆಯಷ್ಟು ಮಳೆಯಾದರೆ ಅಥವಾ ಒಂದೇ ದಿನ ಸುಮಾರು 80 ಮಿ.ಮೀಯಿಂದ 100 ಮಿ.ಮೀ ಮಳೆಯಾದರೆ ಅದನ್ನು ತಡೆದುಕೊಳ್ಳುವ ಶಕ್ತಿ ಇನ್ನೂ ಬೆಂಗಳೂರು ಪಡೆದುಕೊಂಡಿಲ್ಲ. ಏಕೆಂದರೆ, ರಾಜಕಾಲುವೆಗಳ ನಿರ್ಮಾಣ, ಅವುಗಳ ಒತ್ತುವರಿ ತೆರವು, ತಗ್ಗುಪ್ರದೇಶಗಳ ಅಭಿವೃದ್ಧಿ ಕಾರ್ಯ ಇನ್ನೂ ಆಗಿಲ್ಲ. ‘ಈ ಎಲ್ಲ ಕ್ರಮಗಳನ್ನು ಕೈಗೊಂಡು ಮುಂದಿನ ವರ್ಷ ಯಾವುದೇ ಸಮಸ್ಯೆ ಆಗದಂತೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಮುಖ್ಯಮಂತ್ರಿಯಿಂದ ಹಿಡಿದು ಜನಪ್ರತಿನಿಧಿಗಳು, ಬಿಬಿಎಂಪಿ ಅಧಿಕಾರಿಗಳು ಹೇಳಿದ್ದರು. ಆದರೆ, ವಾಸ್ತವದಲ್ಲಿ ಇದು ಇನ್ನೂ ಕಾರ್ಯಗತಗೊಂಡಿಲ್ಲ.

ರಾಜಕಾಲುವೆ ಹಾಗೂ ಕೆರೆಗಳ ಒತ್ತುವರಿ ತೆರವುಗೊಳಿಸುವುದಾಗಿ ಅವಧಿ ಸಹಿತ ಕ್ರಿಯಾಯೋಜನೆಯನ್ನು ಹೈಕೋರ್ಟ್‌ಗೆ ಬಿಬಿಎಂಪಿ ಸಲ್ಲಿಸಿತ್ತು. ಈ ಕ್ರಿಯಾಯೋಜನೆಯ ಅವಧಿ ಮೀರಿ ಮಳೆಗಾಲ ಸಮೀಪಿಸುತ್ತಿದ್ದರೂ ಒತ್ತುವರಿ ತೆರವುಗೊಳಿಸುವ ಪ್ರಕ್ರಿಯೆಯನ್ನೇ ಬಿಬಿಎಂಪಿ ಆರಂಭಿಸಿಲ್ಲ. ಹೀಗಾಗಿ, ಈ ಬಾರಿ ಮಳೆಗಾಲದಲ್ಲಿ ಸಮಸ್ಯೆಯು ಕಟ್ಟಿಟ್ಟ ಬುತ್ತಿಯಂತೆ ಕಾಯುತ್ತಿದೆ.

ತ್ಯಾಜ್ಯ: ಹೊಸ ಯೋಜನೆಗಳೂ ಸ್ಥಗಿತ!

ನಗರದಲ್ಲಿ ತ್ಯಾಜ್ಯ ನಿರ್ವಹಣೆಗೆ ಎರಡನೇ ಹಂತದ ವರ್ಗಾವಣೆ ಕೇಂದ್ರ (ಎಸ್‌ಟಿಎಸ್), ಮಿನಿ ಟ್ರಾನ್ಸ್‌ಫರ್ ಸ್ಟೇಷನ್ (ಎಂಟಿಎಸ್) ಯೋಜನೆಗಳು ವರ್ಷಗಳಿಂದ ಅನುಷ್ಠಾನವಾಗದೆ ಗೊಂದಲದಲ್ಲೇ ಮುಳುಗಿವೆ. ಎಸ್‌ಟಿಎಸ್, ಎಂಟಿಎಸ್‌ಗಳಿಂದ ಸ್ಥಳೀಯ ಕಸ ಅದೇ ಪ್ರದೇಶದಲ್ಲಿ ವಿಂಗಡಣೆಯಾಗಿ ಸಾಗಾಟವಾಗುತ್ತಿದೆ. ಇದರಿಂದ ರಸ್ತೆಯಲ್ಲಿ ಕಸದ ವರ್ಗಾವಣೆ, ಸುರಿಯುವಿಕೆ ಇರುವುದಿಲ್ಲ. ಹೊಸ ಪ್ಯಾಕೇಜ್‌ಗಳು ಬರುತ್ತವೆ ಎಂದು ಎರಡು ವರ್ಷಗಳಿಂದ ಬಿಬಿಎಂಪಿ ಹೇಳುತ್ತಲೇ ಇದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಎಂಬ ಕಂಪನಿಯನ್ನೇ ಸ್ಥಾಪಿಸಿದ್ದು, ಅದಕ್ಕೆ ನೂರಾರು ಕೋಟಿಯನ್ನು ಬಿಡುಗಡೆ ಮಾಡಲಾಗುತ್ತಿದೆ. ಆದರೆ, ಅನುಷ್ಠಾನ ಮಾತ್ರ ಇನ್ನೂ ಆಗಿಲ್ಲ.

ನನ್ನ ಕ್ಷೇತ್ರ ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ

96060 38256

1 ಸಾವಿರ ಎಲ್‌ಇಡಿ ಟಿ.ವಿ ಜಪ್ತಿ

ಬೆಂಗಳೂರು: ದಕ್ಷಿಣ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಬಿ.ಟಿ.ಎಂ ಲೇಔಟ್‌ನಲ್ಲಿ ಕ್ಷಿಪ್ರ ಪಡೆಯ ಸಿಬ್ಬಂದಿ ಶನಿವಾರ ಕಾರ್ಯಾಚರಣೆ ನಡೆಸಿ ದಾಖಲೆಗಳಿಲ್ಲದ 1 ಸಾವಿರ ಎಲ್‌ಇಡಿ ಟಿ.ವಿಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ. ಇವುಗಳ ಮೌಲ್ಯ ₹87 ಲಕ್ಷ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.

‘ಗೋದಾಮಿನಲ್ಲಿ ದಾಸ್ತಾನು ಮಾಡಲಾಗಿತ್ತು. ಬಿಲ್‌ಗಳು ಇರಲಿಲ್ಲ. ವಶಕ್ಕೆ ಪಡೆಯಲಾಗಿದೆ. ದಾಖಲೆ ತರುವಂತೆ ಸೂಚಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸುಧಾಕರ್ ಭೇಟಿಗೆ ಸಿಗದ ವಿಶ್ವನಾಥ್

ಪ್ರಜಾವಾಣಿ ವಾರ್ತೆ

ವಿಶ್ವನಾಥ್

ಸುಧಾಕರ್

ಬೆಂಗಳೂರು: ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಿಂದ ತಮ್ಮ ಪುತ್ರನಿಗೆ ಟಿಕೆಟ್ ಸಿಗದ ಕಾರಣ ಮುನಿಸಿಕೊಂಡಿರುವ ಯಲಹಂಕ ಶಾಸಕ ಎಸ್.ಆರ್.ವಿಶ್ವನಾಥ್ ಅವರು ಭಾನುವಾರ ತಮ್ಮ ಮನೆಗೆ ಬಂದ ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರನ್ನು ಭೇಟಿಯಾಗಲಿಲ್ಲ. ಇದರಿಂದ ನಿರಾಶರಾಗಿ ಸುಧಾಕರ್ ಅವರು ಹಿಂದಕ್ಕೆ ಮರಳಿದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸುಧಾಕರ್ ಅವರು, ‘ಈಗಾಗಲೇ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಚಾರ ಕಾರ್ಯ ಆರಂಭವಾಗಿದೆ. ಯಲಹಂಕ ಕ್ಷೇತ್ರದಲ್ಲಿ ಆರಂಭವಾಗಿರಲಿಲ್ಲ. ವಿಶ್ವನಾಥ್ ಅವರು ತಮ್ಮ ಮಗನಿಗೆ ಟಿಕೆಟ್ ಸಿಗದಿರುವುದರಿಂದ ಬೇಸರದಲ್ಲಿದ್ದಾರೆ. ಅವರಿಗೆ ಹಲವು ಬಾರಿ ಫೋನ್, ಮೆಸೇಜ್ ಮಾಡಿದರೂ ಪ್ರತಿಕ್ರಿಯಿಸಿರಲಿಲ್ಲ. ಇಂದು ಅವರು ಸಿಂಗನಾಯಕನಹಳ್ಳಿಯ ಮನೆಯಲ್ಲಿ ಇರುವುದನ್ನು ಖಚಿತಪಡಿಸಿಕೊಂಡು ನೇರವಾಗಿ ಭೇಟಿ ಮಾಡಲು ಬಂದಿದ್ದೆ. ಆದರೆ, ಅವರು ಮನೆಯಲ್ಲಿ ಇಲ್ಲ ಎಂದು ಭದ್ರತಾ ಸಿಬ್ಬಂದಿ ಹೇಳುತ್ತಿದ್ದಾರೆ’ ಎಂದು ತಿಳಿಸಿದರು.

‘ಇನ್ನೂ ಒಂದೆರಡು ಬಾರಿ ಅವರ ಮನವೊಲಿಸಲು ಪ್ರಯತ್ನಿಸುತ್ತೇನೆ. ಬಿ.ಎಸ್. ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರು, ವಿಶ್ವನಾಥ್ ಅವರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದಾರೆ. ಒಂದೇ ಪಕ್ಷದಲ್ಲಿ ನಾವೆಲ್ಲರೂ ಮುಂದೆ ಸಾಗಬೇಕಾಗಿದ್ದು, ಇದೇ ಚುನಾವಣೆ ಕೊನೆಯಲ್ಲ. ಪಕ್ಷದ ಸಿದ್ಧಾಂತ ಮತ್ತು ವರಿಷ್ಠರ ತೀರ್ಮಾನಕ್ಕೆ ನಾವೆಲ್ಲರೂ ಬದ್ಧರಾಗಿರಬೇಕಾಗಿರುವುದರಿಂದ ಅವರ ಸಹಕಾರವನ್ನು ಪಡೆಯಲು ಬಂದಿದ್ದೇನೆ. ಅಮಿತ್ ಶಾ ಅವರು ಬೆಂಗಳೂರಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸಮಸ್ಯೆ ಬಗೆಹರಿಯಬಹುದು ಎಂದು ನಿರೀಕ್ಷಿಸಿದ್ದೇನೆ’ ಎಂದು ತಿಳಿಸಿದರು.

ಅಸಮಾಧಾನ: ಶಾಸಕ ಎಸ್.ಆರ್. ವಿಶ್ವನಾಥ್ ಅವರು ಪುತ್ರ ಅಲೋಕ್‌ಗೆ ಟಿಕೆಟ್ ಕೊಡಿಸಲು ಪ್ರಯತ್ನಿಸಿದ್ದರು. ಕ್ಷೇತ್ರದಲ್ಲಿ ತಂದೆ ಮತ್ತು ಮಗ ಪ್ರಚಾರ ಕೂಡ ನಡೆಸಿದ್ದರು. ಬಿಜೆಪಿ ವರಿಷ್ಠರು ಸುಧಾಕರ್ ಅವರಿಗೆ ಟಿಕೆಟ್ ಘೋಷಿಸಿದಾಗ ವಿಶ್ವನಾಥ್‌ಗೆ ಅಸಮಾಧಾನ ಉಂಟಾಗಿತ್ತು. ಇದರಿಂದ ರೊಚ್ಚಿಗೆದ್ದ ವಿಶ್ವನಾಥ್ ಅಭಿಮಾನಿಗಳು ‘ಗೋ ಬ್ಯಾಕ್ ಸುಧಾಕರ್’ ಅಭಿಯಾನವನ್ನು ನಡೆಸಿದ್ದರು. ಪ್ರತಿಭಟನೆಗಳನ್ನು ಹಮ್ಮಿಕೊಂಡಿದ್ದರು.

‘ಕಾರ್ಯಕರ್ತರು ಮತ್ತು ಮುಖಂಡರ ಕಷ್ಟಗಳಿಗೆ ಸುಧಾಕರ್ ಸ್ಪಂದಿಸಿಲ್ಲ. ಆರೋಗ್ಯ ಸಚಿವರಾಗಿದ್ದಾಗ ಕೋವಿಡ್ ಸಂದರ್ಭದಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸದೆ ಕೋವಿಡ್ ಸಾಮಗ್ರಿಗಳ ಖರೀದಿಯಲ್ಲಿ ಭ್ರಷ್ಟಾಚಾರ ನಡೆಸಿದ್ದರು. ಇಂತಹ ವ್ಯಕ್ತಿಯ ಪರವಾಗಿ ಜನರ ಬಳಿಗೆ ತೆರಳಿ ಮತಕೇಳಲು ಮುಜುಗರವಾಗುತ್ತಿದೆ’ ಎಂದು ಆಗ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದ್ದರು.

ಅನಂತರ ಬಿಜೆಪಿ ಮುಖಂಡರ ಸಭೆ ನಡೆದಿತ್ತು. ‘ನಾನು ಸುಧಾಕರ್ ಪರ ಮತಯಾಚಿಸದೆ, ಪ್ರಧಾನಿ ಮೋದಿ ಅವರ ಹೆಸರಿನಲ್ಲಿ ಮತ ಕೇಳುತ್ತೇನೆ. ಸುಧಾಕರ್ ಜೊತೆಗೆ ವೇದಿಕೆ ಹಂಚಿಕೊಳ್ಳುವುದಿಲ್ಲ’ ಎಂದು ಸಭೆಯಲ್ಲಿ ವಿಶ್ವನಾಥ್ ಹೇಳಿದ್ದರು. ಈ ಹಿನ್ನೆಲೆಯಲ್ಲಿ ವಿಶ್ವನಾಥ್ ಅವರ ಮನವೊಲಿಸಲು ಸುಧಾಕರ್ ಬಂದಿದ್ದರು.

‘ಕೋಮುವಾದಿಯಾದ ಜೆಡಿಎಸ್’

ಪ್ರಜಾವಾಣಿ ವಾರ್ತೆ

ಸಲೀಂ ಅಹಮದ್

ಬೆಂಗಳೂರು: ‘ದೇವೇಗೌಡರು ರಾಜ್ಯದಿಂದ ಮಾಜಿ ಪ್ರಧಾನಿ ಎಂದು ಹೇಳಲು ಕಾರಣ ಕಾಂಗ್ರೆಸ್ ಪಕ್ಷ. ಗೌಡರಿಗೆ ಕಾಂಗ್ರೆಸ್ ಪಕ್ಷದ ಮೇಲೆ ಋಣ ಇದೆ’ ಎಂದು ವಿಧಾನ ಪರಿಷತ್‌ನ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಹೇಳಿದ್ದಾರೆ.

‘ದೇಶದಲ್ಲಿ ಕಾಂಗ್ರೆಸ್ ಎಲ್ಲಿದೆ?’ ಎಂಬ ದೇವೇಗೌಡರ ಹೇಳಿಕೆಯನ್ನು ಖಂಡಿಸಿರುವ ಅವರು, ‘ಕಾಂಗ್ರೆಸ್ 140 ಕೋಟಿ ಜನರ ಮನಸ್ಸಿನಲ್ಲಿದೆ. ಪಕ್ಷಕ್ಕೆ 140 ವರ್ಷಗಳ ಇತಿಹಾಸವಿದೆ’ ಎಂದಿದ್ದಾರೆ.

‘ಕುಟುಂಬ ರಕ್ಷಣೆಗಾಗಿ ಬಿಜೆಪಿ ಜೊತೆ ಕೈ ಜೋಡಿಸಿ ಜಾತ್ಯತೀತ ಸಿದ್ಧಾಂತವನ್ನು ದೇವೇಗೌಡರು ಬಲಿ ಕೊಟ್ಟಿದ್ದಾರೆ. ಜಾತ್ಯತೀತ ಪಕ್ಷ ಎನ್ನುವ ಕಾರಣಕ್ಕೆ ಜೆಡಿಎಸ್ ಜೊತೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿತ್ತು. ಜೆಡಿಎಸ್ ಈಗ ಜಾತ್ಯತೀತವಾಗಿ ಉಳಿದಿಲ್ಲ. ಕೋಮುವಾದಿಯಾಗಿ ಪರಿವರ್ತನೆಯಾಗಿದೆ’ ಎಂದು ಟೀಕಿಸಿದ್ದಾರೆ.

ಜನಸೇವೆ ‘ಕೈ’ ಹಿಡಿವ ವಿಶ್ವಾಸ

ರಾಜರಾಜೇಶ್ವರಿ ನಗರದ ಅಪಾರ್ಟ್‌ಮೆಂಟ್‌ಗಳಲ್ಲಿ ಮತಯಾಚಿಸಿದ ಡಿಕೆಶಿ

ಪ್ರಜಾವಾಣಿ ವಾರ್ತೆ

ಆರ್‌ಆರ್ ನಗರ ವಿಧಾನಸಭಾ ಕ್ಷೇತ್ರದ ಡಿವೈನಿಟಿ ಸತ್ವ ಅಪಾರ್ಟ್‌ಮೆಂಟ್‌ನಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮತದಾರರ ಭೇಟಿ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಭಾಗವಹಿಸಿ ಮತದಾರರ ಜತೆ ಮಾತುಕತೆ ನಡೆಸಿದರು

ಬೆಂಗಳೂರು: ‘ಕೋವಿಡ್ ಸಮಯದಲ್ಲಿ ಸಂಸದ ಡಿ.ಕೆ. ಸುರೇಶ್ ಅವರು ಮಾಡಿದ ಜನಸೇವೆ, ಕೆಲಸಗಳನ್ನು ಕುಮಾರಣ್ಣ ಮಾತ್ರವಲ್ಲ ದೇಶದ ಬೇರೆ ಯಾವುದೇ ನಾಯಕ ಮಾಡಿಲ್ಲ’ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಆರ್‌ಆರ್ ನಗರ ವ್ಯಾಪ್ತಿಯ ಅಪಾರ್ಟ್‌ಮೆಂಟ್ ನಿವಾಸಿಗಳನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಶಿವಕುಮಾರ್, ‘ಕ್ಷೇತ್ರದ ಉಪ ಚುನಾವಣೆಯಲ್ಲಿ 50 ಸಾವಿರ ಮತಗಳ ಅಂತರದಿಂದ ನಾವು (ಕಾಂಗ್ರೆಸ್) ಸೋತರೆ, ವಿಧಾನಸಭೆ ಚುನಾವಣೆಯಲ್ಲಿ ಕೇವಲ 10 ಸಾವಿರ ಮತಗಳಿಂದ ಸೋತಿದ್ದೆವು. ಲೋಕಸಭೆ ಚುನಾವಣೆಯಲ್ಲಿ ಕನಿಷ್ಠ 25-30 ಸಾವಿರ ಮುನ್ನಡೆ ಪಡೆಯುವ ವಿಶ್ವಾಸವಿದೆ. ನಾವು ಕೊಟ್ಟ ಮಾತು ಉಳಿಸಿಕೊಳ್ಳುತ್ತೇವೆ ಎಂಬುದು ಜನರಿಗೆ ಅರಿವಾಗಿದೆ’ ಎಂದರು.

‘ಸುರೇಶ್ ಮಾಡಿರುವ ಕೆಲಸಕ್ಕೆ ಜನ ಮತ ಹಾಕುತ್ತಾರೆ. ಜನ ಉಪಕಾರ ಸ್ಮರಣೆ ಮಾಡುತ್ತಾರೆ. ರಾಜ್ಯದಲ್ಲೂ ಜನ ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಾರೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿಯಿಂದ ದುರ್ಬಲ ತಂತ್ರಗಾರಿಕೆ: ‘ಬಿಜೆಪಿ ಗೊಂದಲದ ಗೂಡಾಗಿದೆ. ಸದಾನಂದ ಗೌಡ, ನಳಿನ್ ಕುಮಾರ್ ಕಟೀಲ್, ಪ್ರತಾಪ್ ಸಿಂಹ ಸೇರಿದಂತೆ ನಮ್ಮ ವಿರುದ್ಧ ಹೋರಾಟ ಮಾಡಿದವರನ್ನು ಏಕಾಏಕಿ ಕೈಬಿಟ್ಟಿದ್ದಾರೆ. 40 ವರ್ಷ ರಾಜಕಾರಣ ಮಾಡಿಕೊಂಡು ಬಂದವರನ್ನು ಈ ರೀತಿ ಕೈಬಿಟ್ಟರೆ ಹೇಗೆ? ಬಿಜೆಪಿ ಇಂತಹ ದುರ್ಬಲ ತಂತ್ರಗಾರಿಕೆ ಮಾಡಿದೆ. ನಮ್ಮ ಪಕ್ಷ ಭವಿಷ್ಯದಲ್ಲಿ 30-40 ವರ್ಷಗಳ ಕಾಲ ರಾಜಕಾರಣ ಮಾಡಬಲ್ಲ ಯುವಕರಿಗೆ ಟಿಕೆಟ್ ನೀಡಿದೆ. ಇವರು ಪಕ್ಷಕ್ಕೆ ಅಡಿಪಾಯ ಆಗಲಿದ್ದಾರೆ’ ಎಂದರು.

ಕಾರ್ಯಕರ್ತರು ಒಂದಾಗುತ್ತಿಲ್ಲ: ಚನ್ನಪಟ್ಟಣದಿಂದ ಅಮಿತ್ ಶಾ ರೋಡ್ ಶೋ ನಡೆಸುತ್ತಿರುವ ಬಗ್ಗೆ ಕೇಳಿದಾಗ, ‘ಅಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಒಂದಾಗಿದ್ದು, ಕಾರ್ಯಕರ್ತರು ಒಂದಾಗುತ್ತಿಲ್ಲ. ಜೆಡಿಎಸ್ ಕಾರ್ಯಕರ್ತರು ಅತಂತ್ರ ಸ್ಥಿತಿ ತಲುಪಿದ್ದಾರೆ. ಅಲ್ಲಿನ ಜನಕ್ಕೆ ಡಿ.ಕೆ. ಸುರೇಶ್ ಏನು ಎಂಬುದು ಗೊತ್ತಿದೆ. ಶಾ ಬಂದರೆ ಬಲ ಬರಬಹುದು ಎಂದು ಮಾಡುತ್ತಿದ್ದಾರೆ. ಇಬ್ಬರೂ ಸೇರಿ ಕಾರ್ಯಕರ್ತರ ಸಭೆ ಯಾಕೆ ಮಾಡಲಿಲ್ಲ? ಇವರಿಬ್ಬರೂ ಒಂದಾದ ತಕ್ಷಣ ಕಾರ್ಯಕರ್ತರು ಒಂದಾಗುತ್ತಾರಾ’ ಎಂದು ಪ್ರಶ್ನಿಸಿದರು.

ಅಪವಾದ ಬೇಡ: ನಿಶಾ ಯೋಗೇಶ್ವರ್ ಅವರ ಕಾಂಗ್ರೆಸ್ ಸೇರ್ಪಡೆ ಬಗ್ಗೆ ಕೇಳಿದಾಗ, ‘ಆಕೆ ಕಾಂಗ್ರೆಸ್ ಪಕ್ಷ ಸೇರುವ ಬಗ್ಗೆ ಇಂಗಿತ ವ್ಯಕ್ತಪಡಿಸಿದರು. ನಾನು ನನ್ನ ಸಹೋದರ ಈ ವಿಚಾರವಾಗಿ ಆಲೋಚನೆ ಮಾಡುತ್ತಿದ್ದೇವೆ. ಕಾಂಗ್ರೆಸ್ ಪಕ್ಷದಲ್ಲೇ ಕೆಲಸ ಮಾಡುತ್ತೇನೆ ಎಂದು ಆಕೆ ತೀರ್ಮಾನಿಸಿದರೆ ಹೊರದಬ್ಬಲು ಆಗುವುದಿಲ್ಲ. ಸ್ಥಳೀಯ ನಾಯಕರ ಜೊತೆ ಚರ್ಚಿಸುತ್ತೇವೆ’ ಎಂದರು.

‘ಕೈ’ ಹಿಡಿದ ಮಾಜಿ ಶಾಸಕ ಬಚ್ಚೇಗೌಡ

ಚಿಕ್ಕಬಳ್ಳಾಪುರ: ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡ ಹಾಗೂ ಮಾಜಿ ಶಾಸಕ ಕೆ.ಪಿ. ಬಚ್ಚೇಗೌಡ ಭಾನುವಾರ ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮುಖದಲ್ಲಿ ಕಾಂಗ್ರೆಸ್ ಸೇರಿದರು.

ಅವರ ಜೊತೆಗೆ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಮುನೇಗೌಡ, ಜಿ.ಪಂ ಮಾಜಿ ಸದಸ್ಯ ಕೆ.ಸಿ.ರಾಜಾಕಾಂತ್, ಅಂಗರೇಖನಹಳ್ಳಿ ರವಿಕುಮಾರ್ ಮತ್ತಿತರರು ಸಹ ಕಾಂಗ್ರೆಸ್ ಸೇರ್ಪಡೆಯಾದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಸಚಿವ ಬೈರತಿ ಸುರೇಶ್, ಶಾಸಕ ಪ್ರದೀಪ್ ಈಶ್ವರ್, ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಕ್ಷಾ ರಾಮಯ್ಯ, ಎಂ.ಆರ್. ಸೀತಾರಾಮ್ ಈ ವೇಳೆ ಹಾಜರಿದ್ದರು.

2008ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಬಚ್ಚೇಗೌಡ ಅವರು ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದರು. 2013, 2018 ಮತ್ತು 2023ರ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಕಣಕ್ಕೆ ಇಳಿದು ಸೋಲು ಅನುಭವಿಸಿದ್ದರು. 2023ರ ವಿಧಾನಸಭೆ ಚುನಾವಣೆಯಲ್ಲಿ 19 ಸಾವಿರ ಮತಗಳನ್ನು ಪಡೆದಿದ್ದರು.

ಬಚ್ಚೇಗೌಡ ವಿಧಾನ ಪರಿಷತ್ ಮಾಜಿ ಸದಸ್ಯ ಕೆ.ಬಿ. ಪಿಳ್ಳಪ್ಪ ಅವರ ಪುತ್ರ. ಪಿಳ್ಳಪ್ಪ ಅವರು ದೇವೇಗೌಡರ ಆಪ್ತರು. ದಶಕಗಳಿಂದಲೂ ಈ ಕುಟುಂಬ ದೇವೇಗೌಡರ ಕುಟುಂಬಕ್ಕೆ ಆಪ್ತವಾಗಿತ್ತು. ಜನತಾದಳದಲ್ಲಿಯೇ ರಾಜಕೀಯ ನೆಲೆ ಕಂಡುಕೊಂಡಿತ್ತು. ಬಚ್ಚೇಗೌಡ ಅವರು ಈಗ ಕಾಂಗ್ರೆಸ್ ಸೇರುವ ಮೂಲಕ ಹಲವು ದಶಕಗಳ ಜೆಡಿಎಸ್ ಸಖ್ಯವನ್ನು ಕಡಿದುಕೊಂಡಿದ್ದಾರೆ.

ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಕೆ.ಸುಧಾಕರ್ ಅವರು ಬಚ್ಚೇಗೌಡ ಅವರ ಎದುರಾಳಿ ಆಗಿದ್ದಾರೆ. ಮೂರು ಚುನಾವಣೆಗಳಲ್ಲಿ ಈ ಇಬ್ಬರು ಮುಖಾಮುಖಿ ಆಗಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಅಭ್ಯರ್ಥಿಯಾಗಿ ಸುಧಾಕರ್ ಸ್ಪರ್ಧೆ ಮಾಡಿದರೆ ತಾವು ಜೆಡಿಎಸ್ ತೊರೆಯುವುದಾಗಿ ಹೇಳುತ್ತಿದ್ದರು. ಸುಧಾಕರ್ ಅಭ್ಯರ್ಥಿಯಾಗುವುದನ್ನು ವಿರೋಧಿಸುತ್ತಿದ್ದರು.

ಲೋಕಸಭಾ ಚುನಾವಣೆಗಾಗಿ ಮತದಾನ ಜಾಗೃತಿ

ವಿಂಟೇಜ್ ಕಾರು, ಬೈಕ್ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಮತದಾನದ ಜಾಗೃತಿಗಾಗಿ ಭಾನುವಾರ ನಡೆದ ವಿಂಟೇಜ್ ಕಾರ್ ಮತ್ತು ಬೈಕ್‌ಗಳ ರ‍್ಯಾಲಿಯಲ್ಲಿ ಡೊಳ್ಳುಕುಣಿತ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ

ಬೆಂಗಳೂರು: ಮತದಾನದ ಜಾಗೃತಿಗಾಗಿ ಭಾನುವಾರ ವಿಂಟೇಜ್ ಕಾರು ಮತ್ತು ಬೈಕ್‌ಗಳ ರ‍್ಯಾಲಿ ನಡೆಯಿತು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ರ‍್ಯಾಲಿಗೆ ಚಾಲನೆ ನೀಡಿ ಮಾತನಾಡಿ, ‘ಲೋಕಸಭಾ ಚುನಾವಣೆಯ ಮತದಾನವು ಇದೇ ಏಪ್ರಿಲ್ 26 ರಂದು ನಡೆಯಲಿದ್ದು, ವಿವಿಧ ಯೋಜನೆಗಳನ್ನು ರೂಪಿಸಿಕೊಂಡು ಜನರಲ್ಲಿ ಅರಿವು ಮೂಡಿಸುವ ಕೆಲಸ ಮಾಡಲಾಗುತ್ತಿದೆ’ ಎಂದು ಹೇಳಿದರು.

ನಗರ ವ್ಯಾಪ್ತಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮತದಾನ ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಮತದಾನದ ಪ್ರಮಾಣವನ್ನು ಹೆಚ್ಚಿಸಲು ತಳಮಟ್ಟದಲ್ಲಿ ಯೋಜನೆಗಳನ್ನು ರೂಪಿಸಿಕೊಂಡು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

ರ‍್ಯಾಲಿಯಲ್ಲಿ ಭಾಗವಹಿಸಿದವರಿಗೆ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ರ‍್ಯಾಲಿಯು ವಿಧಾನಸೌಧ ಗ್ರ್ಯಾಂಡ್ ಸ್ಟೆಪ್ಸ್‌ನಿಂದ ಪ್ರಾರಂಭವಾಗಿ ಇನ್‌ಫೆಂಟ್ರಿ ರಸ್ತೆ, ಎಂ.ಜಿ ರಸ್ತೆ (ಎಂ. ಚಿನ್ನಸ್ವಾಮಿ ಕ್ರೀಡಾಂಗಣದ ಮೂಲಕ), ಟ್ರಿನಿಟಿ ವೃತ್ತ, ರೆಸಿಡೆನ್ಸಿ ರಸ್ತೆ ಮೂಲಕ ಕಂಠೀರವ ಕ್ರೀಡಾಂಗಣಕ್ಕೆ ತಲುಪಿ ಮುಕ್ತಾಯಗೊಂಡಿತು.

ಚುನಾವಣಾ ವಿಭಾಗದ ವಿಶೇಷ ಆಯುಕ್ತ ಸೆಲ್ವಮಣಿ, ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷ ಕಾಂತರಾಜು, ಸ್ವೀಪ್ ನೋಡಲ್ ಅಧಿಕಾರಿ ಪ್ರತಿಭಾ ಉಪಸ್ಥಿತರಿದ್ದರು.

JINDAL Aluminium

Highest Ever Production

Our three state-of-the-art extrusion plants, with a total of 16 presses, can produce up to 160,000 tons of extrusions annually, meeting nearly 30% of India's total demand. Our superior quality comes from top-notch raw materials, stringent quality controls, and advanced technology. Despite the higher cost, customers willingly buy our top-quality products.

During 2023-24
About 1,15,920 tonnes Extrusions

The reasons for this humble achievement despite 14% higher prices are :
- Dedication of our manufacturing, quality and marketing teams.
- Consuming high quality inputs and not cheap scrap.
- Thoughtful decision of our customers, dealers, and end consumers for preferring quality products.

They all deserve appreciation and thanks.

Plus
About 49,461 tonnes Rolled Products

We can produce wider and large-diameter profiles in special alloys for use in defence, aerospace, industrial, structural and other applications.

Know More
+91 9900-072-169
Hello@JindalAluminium.com
Iconic Brands of India, 2023 | Edge | ISO 9001:2015 | ISO 45001:2018 | PED by HSB Global Standards, UK | AS 9100D Certified
We use 100% our own renewable energy for manufacturing @ Bengaluru and Dabaspet units

ಸೌಹಾರ್ದಯುತ ಭೇಟಿ • 3ರಂದು ಮಂಡ್ಯದಲ್ಲಿಯೇ ತೀರ್ಮಾನ ಪ್ರಕಟ – ಸಂಸದೆ ಪುನರುಚ್ಚಾರ

ಸುಮಲತಾ ಬೆಂಬಲ ಕೋರಿದ ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರನ್ನು ಭಾನುವಾರ ಭೇಟಿ ಮಾಡಿದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಮಂಡ್ಯ ಕ್ಷೇತ್ರದ ಅಭ್ಯರ್ಥಿ ಎಚ್‌.ಡಿ. ಕುಮಾರಸ್ವಾಮಿ, ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡಿದರು.

2019ರ ಲೋಕಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿದ್ದ ಸುಮಲತಾ ಅವರು ಜೆಡಿಎಸ್–ಕಾಂಗ್ರೆಸ್ ಮೈತ್ರಿಕೂಟದ ಅಭ್ಯರ್ಥಿಯಾಗಿದ್ದ ಕುಮಾರಸ್ವಾಮಿ ಅವರ ಮಗ ನಿಖಿಲ್ ಕುಮಾರಸ್ವಾಮಿ ಅವರನ್ನು ಸೋಲಿಸಿದ್ದರು. ಐದು ವರ್ಷಗಳಿಂದ ಸುಮಲತಾ ಮತ್ತು ಕುಮಾರಸ್ವಾಮಿ ಮಧ್ಯೆ ಮಾತುಕತೆ ಇರಲಿಲ್ಲ. ರಾಜಕೀಯವಾಗಿ ಶತಾಯಗತಾಯ ವಿರೋಧಿಸುವ ಹಂತಕ್ಕೆ ತಲುಪಿದ್ದರು.

ಸುಮಲತಾ ಮಂಡ್ಯದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ತಯಾರಿ ನಡೆಸಿದ್ದರು. ಎನ್‌ಡಿಎ ಮೈತ್ರಿಕೂಟ ಕ್ಷೇತ್ರವನ್ನು ಜೆಡಿಎಸ್ ಪಕ್ಷಕ್ಕೆ ಬಿಟ್ಟುಕೊಟ್ಟ ಬಳಿಕ ಮುಂದಿನ ರಾಜಕೀಯ ನಡೆ ಕುರಿತು ನಿರ್ಧಾರ ಪ್ರಕಟಿಸಿಲ್ಲ. ಜೆ.ಪಿ. ನಗರದಲ್ಲಿರುವ ಸುಮಲತಾ ಮನೆಗೆ ಭಾನುವಾರ ಸಂಜೆ ಭೇಟಿ ನೀಡಿದ್ದ ಕುಮಾರಸ್ವಾಮಿ, ಕೆಲಕಾಲ ಮಾತುಕತೆ ನಡೆಸಿದರು. ಅಭಿಷೇಕ್ ಅಂಬರೀಷ್ ಅವರೂ ಜತೆಗಿದ್ದರು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕುಮಾರಸ್ವಾಮಿ, 'ಅತ್ಯಂತ ಸೌಹಾರ್ದಯುತವಾಗಿ ಭೇಟಿಯಾಗಿದ್ದೇನೆ. ಅಂಬರೀಷ್ ಅಣ್ಣನ ಮನೆ ನನಗೆ ಹೊಸತಲ್ಲ. ನಾನು, ಅಂಬರೀಷ್ ಒಟ್ಟಿಗೆ ಉಂಡು ಬೆಳೆದವರು. ಮಂಡ್ಯದಲ್ಲಿ ಬೆಂಬಲ ನೀಡುವಂತೆ ಕೇಳಿದ್ದೇನೆ. ಬುಧವಾರ (ಏಪ್ರಿಲ್ 3) ಮಂಡ್ಯದಲ್ಲಿ ಬೆಂಬಲಿಗರ ಸಭೆ ಕರೆದಿದ್ದು, ಅಲ್ಲಿ ಚರ್ಚಿಸಿ ನಿರ್ಧಾರ ಮಾಡುವುದಾಗಿ ತಿಳಿಸಿದ್ದಾರೆ' ಎಂದರು.

'ಏ.4ರಂದು ನಾಮಪತ್ರ ಸಲ್ಲಿಸುತ್ತಿದ್ದೇನೆ. ನಾಮಪತ್ರ ಸಲ್ಲಿಕೆ ದಿನ ಅಕ್ಕ ಅವರ ಸಹಕಾರ ಕೇಳಿದ್ದೇನೆ. ಬಿಜೆಪಿ ವರಿಷ್ಠರು ಮತ್ತು ಬಿ.ಎಸ್. ಯಡಿಯೂರಪ್ಪ ಕೂಡ ಅವರ ಜತೆ ಚರ್ಚಿಸಿದ್ದಾರೆ' ಎಂದರು.

ಸಭೆ ಬಳಿಕ ನಿರ್ಧಾರ: 'ಮಂಡ್ಯದಲ್ಲಿ ಬುಧವಾರ ಸಭೆ ಕರೆದಿದ್ದೇನೆ. ದರ್ಶನ್ ಮತ್ತು ಅಭಿಷೇಕ್ ಕೂಡ ಇರುತ್ತಾರೆ. ಬೆಂಬಲಿಗರ ಅಭಿಪ್ರಾಯ ಆಲಿಸಿದ ಬಳಿಕ ತೀರ್ಮಾನ ಪ್ರಕಟಿಸುವುದಾಗಿ ತಿಳಿಸಿದ್ದೇನೆ. ಬುಧವಾರ ಮಂಡ್ಯದಲ್ಲೇ ನನ್ನ ನಿರ್ಧಾರ ಪ್ರಕಟಿಸುತ್ತೇನೆ' ಎಂದು ಸುಮಲತಾ ತಿಳಿಸಿದರು.

ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರನ್ನು ಬೆಂಗಳೂರಿನ ಜೆ.ಪಿ.ನಗರದಲ್ಲಿರುವ ಅವರ ಮನೆಯಲ್ಲಿ ಭಾನುವಾರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್‌.ಡಿ.ಕುಮಾರಸ್ವಾಮಿ ಭೇಟಿ ಮಾಡಿದರು. ಅಭಿಷೇಕ್ ಅಂಬರೀಷ್ ಜತೆಗಿದ್ದರು

> **ಕುಮಾರಸ್ವಾಮಿ ಅವರು ಸುಮಲತಾ ಅವರನ್ನು ಭೇಟಿ ಆಗಿದ್ದರಲ್ಲಿ ತಪ್ಪೇನಿಲ್ಲ. ಅಂಬರೀಷ್ ಅಂತ್ಯಕ್ರಿಯೆಯನ್ನು ಕುಮಾರಸ್ವಾಮಿ ಗೌರವಯುತವಾಗಿ ನಡೆಸಿದ್ದರು**
> **ಎಚ್‌.ಡಿ. ದೇವೇಗೌಡ**
> ಜೆಡಿಎಸ್ ವರಿಷ್ಠ

'ಡಿ.ಕೆ.ಶಿವಕುಮಾರ್ ನನ್ನ ದೊಡ್ಡ ಹಿತೈಷಿ'

'ಡಿ.ಕೆ.ಶಿವಕುಮಾರ್ ಅವರು ನನ್ನ ದೊಡ್ಡ ಹಿತೈಷಿಗಳು. ಅವರಂತಹ ಹಿತೈಷಿಗಳು ನನಗೆ ಯಾರೂ ಇಲ್ಲ' ಎಂದು ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ ಹೇಳಿದರು.

ಸುಮಲತಾ ಭೇಟಿ ಕುರಿತು ಶಿವಕುಮಾರ್ ಟೀಕೆಗೆ ಉತ್ತರಿಸಿದ ಅವರು, 'ಅವರು ಪಾಪ; ಅವರೇನೂ ವೈರಿ ಯಲ್ಲ ನನಗೆ. ಶಿವಕುಮಾರ್ ರೀತಿಯ ಹಿತೈಷಿಗಳೇ ಇಲ್ಲ' ಎಂದರು.

ಸುಮಲತಾ ತೀರ್ಮಾನಿಸಲಿ: ಡಿಕೆಶಿ

'ಸಂಸದೆ ಸುಮಲತಾ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ನಿರ್ಧಾರವನ್ನು ಸ್ಥಳೀಯ ನಾಯಕರಿಗೆ ಬಿಡುತ್ತೇವೆ. ಸ್ಥಳೀಯ ಮಟ್ಟದಲ್ಲಿ ಎಲ್ಲರೂ ಒಪ್ಪಿದಾಗ ಹೈಕಮಾಂಡ್ ಯಾರನ್ನೂ ಕೈ ಬಿಡುವುದಿಲ್ಲ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸುಮಲತಾ ಅವರು ಬಿಜೆಪಿ ಜತೆ ಗುರುತಿಸಿಕೊಂಡಿದ್ದಾರೆ. ಕಳೆದ ಚುನಾವಣೆಯಲ್ಲಿ ಜೆಡಿಎಸ್ ನಾಯಕರು ಮತ್ತು ಅವರ ಮಧ್ಯೆ ನಡೆದ ಮಾತಿನ ಕಾಳಗ ಹಾಗೂ ಸ್ವಾಭಿಮಾನದ ಹೆಸರಲ್ಲಿ ಅವರು ಮತಯಾಚನೆ ಮಾಡಿದ್ದಕ್ಕೆ ಬದ್ಧರಿದ್ದರೆ ಪಕ್ಷಕ್ಕೆ ಕರೆತರುವ ಬಗ್ಗೆ ಆಲೋಚನೆ ಮಾಡಬಹುದು. ಅವರ ಬದ್ಧತೆ ಬದಲಾಗದಿದ್ದರೆ ನಾವು ಏನೂ ಮಾಡಲು ಸಾಧ್ಯವಿಲ್ಲ' ಎಂದರು. 'ಕಾಂಗ್ರೆಸ್‌ನಿಂದ ಆಹ್ವಾನವಿದೆ. ನಾನು ಇನ್ನೂ ತೀರ್ಮಾನ ಮಾಡಿಲ್ಲ' ಎಂಬ ಸುಮಲತಾ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಅವರಿಗೆ ಸಹಾಯ ಮಾಡಿದವರ ಉಪಕಾರ ತೀರಿಸಬೇಕು ಎಂದಿದ್ದರೆ ಅವರು ತೀರ್ಮಾನ ಮಾಡಲಿ' ಎಂದರು.

'ಕೈ' ಪ್ರಚಾರಕರ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಗಾಗಿ ಕಾಂಗ್ರೆಸ್, 'ಸ್ಟಾರ್' ಪ್ರಚಾರಕರ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆಯಿಂದ ಹಿಡಿದು ರಾಜ್ಯದ ನಾಯಕರು ಸೇರಿ 40 ಮಂದಿಯ ಹೆಸರಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಪ್ರಿಯಾಂಕಾ ಗಾಂಧಿ, ರಣದೀಪ್ ಸಿಂಗ್ ಸುರ್ಜೇವಾಲ, ಕೆ.ಸಿ. ವೇಣುಗೋಪಾಲ್, ವೀರಪ್ಪ ಮೊಯಿಲಿ, ಬಿ.ವಿ.ಶ್ರೀನಿವಾಸ್, ಲಕ್ಷ್ಮಣ ಸವದಿ, ಈಶ್ವರ್ ಖಂಡ್ರೆ, ವಿನಯಕುಮಾರ್ ಸೊರಕೆ, ಬಿ.ಕೆ. ಹರಿಪ್ರಸಾದ್, ಆರ್‌.ವಿ.ದೇಶಪಾಂಡೆ, ಡಾ.ಜಿ. ಪರಮೇಶ್ವರ, ಎಚ್‌.ಕೆ.ಪಾಟೀಲ, ಎಂ.ಬಿ. ಪಾಟೀಲ ಹೆಸರುಗಳು ಪಟ್ಟಿಯಲ್ಲಿವೆ. ಇನ್ನು, ದಿನೇಶ್ ಗುಂಡೂರಾವ್, ಕೃಷ್ಣ ಬೈರೇಗೌಡ, ಎಚ್‌.ಎಂ.ರೇವಣ್ಣ, ಪಿ.ಜಿ. ಆರ್‌.ಸಿಂಧ್ಯಾ, ಬಿ.ಸೋಮಶೇಖರ್, ಎಲ್‌. ಹನುಮಂತಯ್ಯ, ಜಿ.ಸಿ. ಚಂದ್ರಶೇಖರ್, ಸೈಯದ್ ನಾಸಿರ್ ಹುಸೇನ್, ಅಭಿಷೇಕ್ ದತ್, ಜಮೀರ್ ಅಹಮದ್ ಖಾನ್, ಮಧು ಬಂಗಾರಪ್ಪ, ಪಿ.ಟಿ. ಪರಮೇಶ್ವರ್ ನಾಯಕ್, ವಿ.ಎಸ್. ಉಗ್ರಪ್ಪ, ಸತೀಶ ಜಾರಕಿಹೊಳಿ, ತನ್ವೀರ್ ಸೇಠ್, ಪುಷ್ಪಾ ಅಮರನಾಥ್, ಉಮಾಶ್ರೀ ಕೂಡಾ ಸ್ಟಾರ್ ಪ್ರಚಾರಕರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಜಿ.ಸಿಗೆ 3 ಕ್ಷೇತ್ರ ಗೆಲ್ಲಿಸುವ ಹೊಣೆ

ಜಿದ್ದಾಜಿದ್ದಿನ ಪೈಪೋಟಿ ನಿರೀಕ್ಷೆಯ ಹಾಸನ, ಮಂಡ್ಯ, ಬೆಂಗಳೂರು ಗ್ರಾಮಾಂತರ ಕ್ಷೇತ್ರಗಳ ಚುನಾವಣೆ 'ಉಸ್ತುವಾರಿ'ಯನ್ನು ರಾಜ್ಯಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್ ಅವರಿಗೆ ಕಾಂಗ್ರೆಸ್ ವರಿಷ್ಠರು ವಹಿಸಿದ್ದಾರೆ. ಹೈಕಮಾಂಡ್ ಮಟ್ಟದಲ್ಲಿ ಹಿಡಿತ ಹೊಂದಿರುವ ಚಂದ್ರಶೇಖರ್, ವಿಧಾನಸಭೆಯಿಂದ ಎರಡನೇ ಬಾರಿಗೆ ರಾಜ್ಯಸಭೆಗೆ ಪ್ರವೇಶಿಸಿದ್ದಾರೆ. ಅದಕ್ಕೆ ಪ್ರತಿಯಾಗಿ ಮೂರು ಕ್ಷೇತ್ರಗಳಲ್ಲಿ ಪಕ್ಷದ ವಿಜಯ ಪತಾಕೆ ಹಾರಿಸಬೇಕೆಂಬ ಹೊಣೆಯನ್ನು ವರಿಷ್ಠರು ಹೊರಿಸಿದ್ದಾರೆ. '2023ರ ವಿಧಾನಸಭೆ ಚುನಾವಣೆಯಲ್ಲಿ ತುಮಕೂರು, ಮಂಡ್ಯ ಜಿಲ್ಲೆಗಳ ಕ್ಷೇತ್ರಗಳ ಹೊಣೆ ವಹಿಸಿಕೊಂಡಿದ್ದ ಚಂದ್ರಶೇಖರ್, ಎರಡೂ ಜಿಲ್ಲೆಗಳಲ್ಲಿ ಪಕ್ಷದ ತಲಾ ಏಳು ಶಾಸಕರನ್ನು ಗೆಲ್ಲಿಸುವಲ್ಲಿ ಯಶಸ್ವಿಯಾಗಿದ್ದರು' ಎಂದು ಪಕ್ಷದ ಮೂಲಗಳು ಹೇಳಿವೆ.

ಕಾನೂನು ಪ್ರಕೋಷ್ಠ ಕಾರ್ಯಾಗಾರದಲ್ಲಿ ಬಿ.ವೈ.ವಿಜಯೇಂದ್ರ ಹೇಳಿಕೆ

'ಸುಳ್ಳು ಪ್ರಚಾರಗಳಿಂದ ಭ್ರಮನಿರಸನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇವಲ ಸುಳ್ಳುಗಳ ಪ್ರಚಾರದಿಂದ ಪ್ರಯೋಜನ ಆಗದು ಎಂದು ಕಾಂಗ್ರೆಸ್‌ಗೆ ಜ್ಞಾನೋದಯವಾಗಿದೆ. 9 ತಿಂಗಳಲ್ಲೇ ಅತಿ ಕೆಟ್ಟ ಸರ್ಕಾರ ಎಂಬ ಹೆಸರು ಪಡೆದಿದೆ. ಜನ ಹತಾಶರಾಗಿದ್ದಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಕೇಂದ್ರದ ಬಿಜೆಪಿ ಸರ್ಕಾರದ ಜನಪ್ರಿಯತೆ ಬಳಸಿಕೊಂಡು ಹೆಚ್ಚು ಸ್ಥಾನಗಳನ್ನು ಗೆಲ್ಲಬೇಕು' ಎಂದು ಬಿಜೆಪಿ ರಾಜ್ಯ ಚುನಾವಣಾ ವಿಭಾಗ ಮತ್ತು ಕಾನೂನು ವಿಭಾಗದ ರಾಜ್ಯ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ತಿಳಿಸಿದರು.

'ಕಾಂಗ್ರೆಸ್ ಸರ್ಕಾರ ಇಲ್ಲಿಯವರೆಗೆ ಸುಳ್ಳುಗಳ ಮೂಲಕ ಜನರನ್ನು ನಂಬಿಸಿದೆ. ಜನರಿಗೆ ಅದು ಮನವರಿಕೆ ಆಗಿದೆ. ಕಾಂಗ್ರೆಸ್ ಸರ್ಕಾರ ಭ್ರಮೆಯಲ್ಲಿ ತೇಲುತ್ತಿತ್ತು. ಮುಖ್ಯಮಂತ್ರಿಯವರಿಗೂ ಸತ್ಯ ಸಂಗತಿಗಳು ಮನವರಿಕೆ ಆಗುತ್ತಿವೆ' ಎಂದು ಹೇಳಿದರು.

'10–15 ಜನ ಸಚಿವರನ್ನು ಅಭ್ಯರ್ಥಿ ಗಳನ್ನಾಗಿ ಮಾಡುವುದಾಗಿ ಮುಖ್ಯಮಂತ್ರಿ ಘೋಷಣೆ ಮಾಡಿದ್ದರು. ಆದರೆ, ಮೋದಿಯವರ ಜನಪ್ರಿಯತೆ ಕಾರಣ ತಾವು ಗೆಲ್ಲದೇ ಹೋದರೆ ಮತ್ತು ಜನರಿಂದ ತಿರಸ್ಕೃತರಾದರೆ ಎಂಬ ಭಯದಿಂದ ಸಚಿವರು ಸ್ಪರ್ಧಿಸಲು ತಯಾರಾಗಲಿಲ್ಲ' ಎಂದರು.

ಬಿ.ವೈ. ವಿಜಯೇಂದ್ರ

'ಮೋದಿ ಯವರ ಜನಪ್ರಿಯತೆಯನ್ನು ಮತವಾಗಿ ಪರಿವರ್ತಿಸುವ ಸವಾಲು ನಮ್ಮ ಕಾರ್ಯಕರ್ತರು ಸ್ವೀಕರಿಸಿ ಅದರಲ್ಲಿ ಯಶಸ್ಸು ಕಾಣಬೇಕಿದೆ' ಎಂದು ವಿಜಯೇಂದ್ರ ಹೇಳಿದರು.

'ಪಕ್ಷದ ಕಾನೂನು ಘಟಕ ಚುನಾವಣೆ ವೇಳೆ ಕಾಂಗ್ರೆಸ್ ವಿರುದ್ಧ ಕೇಸು ದಾಖಲಿಸುವುದು ಒಂದು ಸಹಜ ಪ್ರಕ್ರಿಯೆ. ಎದುರಾಳಿಗಳನ್ನು ಹದ್ದುಬಸ್ತಿನಲ್ಲಿ ಇಡುವ ಕೆಲಸ ಆಗಲೇಬೇಕು. ಇಲ್ಲವಾದರೆ, ಎಲುಬಿಲ್ಲದ ನಾಲಿಗೆ ಏನು ಬೇಕಾದರೂ ಮಾತನಾಡುತ್ತದೆ' ಎಂದರು.

ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ವಸಂತಕುಮಾರ್ ಅವರು, 12 ದಿನಗಳಲ್ಲಿ ಸುಮಾರು 25 ದೂರುಗಳನ್ನು ಆಯೋಗಕ್ಕೆ ಸಲ್ಲಿಸಲಾಗಿದೆ. ಪ್ರಧಾನಿಯವರ ವಿರುದ್ಧ ಮಾತನಾಡಿದ ಶಿವರಾಜ ತಂಗಡಗಿ ವಿರುದ್ಧ ಕಾರಟಗಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅಮಿತ್ ಶಾ ವಿರುದ್ಧ ಆಕ್ಷೇಪಾರ್ಹವಾಗಿ ಮಾತನಾಡಿದ ಯತೀಂದ್ರ ಸಿದ್ದರಾಮಯ್ಯ ವಿರುದ್ಧವೂ ದೂರು ದಾಖಲಿಸಲಾಗಿದೆ ಎಂದರು.

ತಪ್ಪು ಒಪ್ಪಿಕೊಳ್ಳದ ಕಾಂಗ್ರೆಸ್: ಜೋಶಿ

ಹುಬ್ಬಳ್ಳಿ: 'ಕಾಂಗ್ರೆಸ್ಸಿಗರು ಎಂದಿಗೂ ತಮ್ಮ ತಪ್ಪನ್ನು ಒಪ್ಪಿಕೊಳ್ಳುವುದಿಲ್ಲ. ದೇಶದಲ್ಲಿ 60 ವರ್ಷಗಳ ಅವರ ಆಡಳಿತ ವೈಖರಿ ನೋಡಿದರೆ ನಗು ಬರುತ್ತದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವ್ಯಂಗ್ಯವಾಡಿದರು.

ಆದಾಯ ತೆರಿಗೆ (ಐ.ಟಿ) ಇಲಾಖೆ ಕಾಂಗ್ರೆಸ್‌ಗೆ ಹೊಸದಾಗಿ ನೋಟಿಸ್ ನೀಡಿರುವ ಕುರಿತು ನಗರದಲ್ಲಿ ಭಾನುವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಕಾಂಗ್ರೆಸ್‌ನವರು ನಿಯಮ ಉಲ್ಲಂಘಿಸಿ ನಗದು ರೂಪದಲ್ಲಿ ಕೋಟ್ಯಂತರ ಹಣ ಸಂಗ್ರಹಿಸಿದ್ದಾರೆ. ಹೀಗಾಗಿ ಐ.ಟಿ ಅಧಿಕಾರಿಗಳು ನೋಟಿಸ್ ಕೊಟ್ಟಿದ್ದಾರೆ' ಎಂದು ಹೇಳಿದರು.

'ತೆರಿಗೆ ಮರುಮೌಲ್ಯಮಾಪನ ಕುರಿತು ಐ.ಟಿ ಅಧಿಕಾರಿಗಳು ಆರಂಭಿಸಿದ್ದ ಪ್ರಕ್ರಿಯೆ ವಿರುದ್ಧ ಕಾಂಗ್ರೆಸ್ ಸಲ್ಲಿಸಿದ್ದ ಮೇಲ್ಮನವಿಯನ್ನು ದೆಹಲಿ ಹೈಕೋರ್ಟ್ ವಜಾ ಮಾಡಿದೆ. ಇದರಿಂದ ಪ್ರಕರಣದಲ್ಲಿ ಸತ್ಯ ಇದೆ ಎಂಬುದು ಗೊತ್ತಾಗುತ್ತದೆ. ಇದನ್ನು ಅರ್ಥ ಮಾಡಿಕೊಂಡು ಅವರು ತನಿಖೆಗೆ ಸಹಕರಿಸಬೇಕು. ನೋಟಿಸ್ ಕೊಟ್ಟಿದ್ದನ್ನೇ ದೊಡ್ಡ ವಿಷಯ ಮಾಡುವುದು ಸರಿಯಲ್ಲ' ಎಂದರು.

ಸುದ್ದಿ 2 ನಿಮಿಷ

ಸರ್ಕಾರಿ ಕಚೇರಿಯಲ್ಲಿ ರಾಜಕೀಯ ಆಯೋಗಕ್ಕೆ ಬಿಜೆಪಿ ದೂರು

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯದ ಸಚಿವರು ಮತ್ತು ಕಾಂಗ್ರೆಸ್ ಶಾಸಕರು ಸರ್ಕಾರಿ ಕಚೇರಿಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಜೆಪಿಯು ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದೆ.

ಶಾಸಕ ಎಸ್‌.ಸುರೇಶ್ ಕುಮಾರ್ ನೇತೃತ್ವದ ಬಿಜೆಪಿ ನಿಯೋಗ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರನ್ನು ಭಾನುವಾರ ಭೇಟಿಮಾಡಿ ದೂರು ಸಲ್ಲಿಸಿತು. ಸರ್ಕಾರಿ ಕಚೇರಿಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿರುವವರು ಮತ್ತು ಅದನ್ನು ತಡೆಯಲು ವಿಫಲವಾಗಿರುವ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಜೆಪಿ ಒತ್ತಾಯಿಸಿದೆ.

'ನಜ್ಮಾ ನಜೀರ್ ಎಂಬುವವರನ್ನು ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಳ್ಳಲು ಶಿವಕುಮಾರ್ ಅವರು ಸರ್ಕಾರಿ ಕಚೇರಿ ಬಳಸಿಕೊಂಡಿದ್ದಾರೆ. ಸಚಿವ ಕೃಷ್ಣ ಬೈರೇಗೌಡ ಅವರು ಮಾರ್ಚ್ 25ರಂದು ವಿಕಾಸಸೌಧದ ಕಚೇರಿಯಲ್ಲಿ ಪತ್ರಿಕಾಗೋಷ್ಠಿ ನಡೆಸಿ ಕೇಂದ್ರ ಸರ್ಕಾರದ ವಿರುದ್ಧ ಆರೋಪ ಮಾಡಿದ್ದಾರೆ. ಇವೆಲ್ಲವೂ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ವ್ಯಾಪ್ತಿಗೆ ಬರುತ್ತವೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ವಿಧಾನಸೌಧದಲ್ಲಿನ ಸಚಿವರ ಕಚೇರಿಗಳನ್ನು ಆಯೋಗವು ಕೂಡಲೇ ಮುಚ್ಚಿಸಬೇಕು. ಸರ್ಕಾರಿ ಕಚೇರಿಗಳನ್ನು ರಾಜಕೀಯ ಚಟುವಟಿಕೆಗಳಿಗೆ ಬಳಸದಂತೆ ಸಚಿವರು ಮತ್ತು ಶಾಸಕರಿಗೆ ನಿರ್ಬಂಧ ಹೇರಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಮತ್ತು ಶಾಸಕ ಸಿ.ಕೆ. ರಾಮಮೂರ್ತಿ, ಪಕ್ಷದ ಮುಖ್ಯ ವಕ್ತಾರ ಅಶ್ವತ್ಥ ನಾರಾಯಣ, ವಕ್ತಾರರಾದ ಪ್ರಕಾಶ್ ಶೇಷರಾಘವಾಚಾರ್, ಎಚ್‌.ಎನ್‌.ಚಂದ್ರಶೇಖರ್, ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ವಕ್ತಾರ ಟಿ.ಎಸ್. ಸಂಕೀರ್ತ್ ನಿಯೋಗದಲ್ಲಿದ್ದರು.

ಮುಖ್ಯಮಂತ್ರಿ ಕಾರು ತಪಾಸಣೆ

ಕೋಲಾರ: ಕೋಲಾರ ಗಡಿ ಭಾಗದ ರಾಮಸಂದ್ರ ಚೆಕ್ ಪೋಸ್ಟ್‌ನಲ್ಲಿ ಭಾನುವಾರ ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿದ್ದ ಕಾರು ಹಾಗೂ ಬೆಂಗಾವಲು ವಾಹನಗಳನ್ನು ಚುನಾವಣಾ ಸಿಬ್ಬಂದಿ ತಪಾಸಣೆ ನಡೆಸಿದರು.

ಶಾಸಕ ಕೆ.ವೈ.ನಂಜೇಗೌಡ ಅವರ ತಮ್ಮನ ಪುತ್ರಿ ಮದುವೆಯಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಹಾಗೂ ಸಚಿವ ಬೈರತಿ ಸುರೇಶ್ ಕೋಲಾರಕ್ಕೆ ಭೇಟಿ ನೀಡಿದ್ದರು.

ಶಿವಕುಮಾರ ಸ್ವಾಮೀಜಿ ಜಯಂತಿ ಇಂದು

ತುಮಕೂರು: ನಗರದ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ 117ನೇ ಜಯಂತಿ ಹಾಗೂ ಗುರುವಂದನಾ ಮಹೋತ್ಸವ ಸೋಮವಾರ (ಏ.1) ಮಠದಲ್ಲಿ ನಡೆಯಲಿದೆ.

ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ನೇತೃತ್ವದಲ್ಲಿ ನಡೆಯುವ ಕಾರ್ಯಕ್ರಮವನ್ನು ಹರಿದ್ವಾರದ ಪತಂಜಲಿ ಯೋಗಪೀಠದ ಬಾಬಾ ರಾಮದೇವ್ ಉದ್ಘಾಟಿಸಲಿದ್ದಾರೆ. ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ.

₹ 81 ಕೋಟಿ ದುರ್ಬಳಕೆ ಎಫ್‌ಐಆರ್ ದಾಖಲು

ಕಲಬುರಗಿ: ಇಲ್ಲಿನ ಹೈದರಾಬಾದ್ ಶಿಕ್ಷಣ ಸಂಸ್ಥೆಯ ಮಹಾದೇವಪ್ಪ ರಾಂಪೂರೆ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ₹ 81.21 ಕೋಟಿ ಸ್ಟೈಫಂಡ್ ದುರ್ಬಳಕೆ ಮಾಡಿಕೊಂಡ ಆರೋಪದಡಿ ಸಂಸ್ಥೆಯ ಮಾಜಿ ಅಧ್ಯಕ್ಷ ಸೇರಿ ನಾಲ್ವರ ವಿರುದ್ಧ ಭಾನುವಾರ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿಗಳು ಹಾಗೂ ವಕೀಲ ವಿನೋದಕುಮಾರ್ ಜೆನೇವರಿ ನೀಡಿದ ದೂರಿನ ಅನ್ವಯ, ಸೈಬರ್ ಠಾಣೆಯಲ್ಲಿ ಸಂಸ್ಥೆಯ ಮಾಜಿ ಅಧ್ಯಕ್ಷ ಭೀಮಾಶಂಕರ ಬಿಲಗುಂದಿ, ಪ್ರಾಂಶುಪಾಲ ಡಾ.ಎಸ್.ಎಂ. ಪಾಟೀಲ, ಅಕೌಂಟೆಂಟ್ ಸುಭಾಷ ಜಗನ್ನಾಥ ಮತ್ತು ಕೆನರಾ ಬ್ಯಾಂಕ್ ಎಂಆರ್‌ಎಂಸಿ ಶಾಖೆಯ ವ್ಯವಸ್ಥಾಪಕರ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರಶಸ್ತಿ ಪ್ರದಾನ

ಅಖಿಲ ಹವ್ಯಕ ಮಹಾಸಭೆ ಬೆಂಗಳೂರಿನಲ್ಲಿ ಭಾನುವಾರ ಹಮ್ಮಿಕೊಂಡ ಸಂಸ್ಥಾಪನೋತ್ಸವ ಹಾಗೂ ವಿಶೇಷ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಮಂಗಳ ಬಾಲಚಂದ್ರ ಅವರಿಗೆ 'ಹವ್ಯಕ ಶ್ರೀ', ಗೋಪಾಲಕೃಷ್ಣ ದೇಲಂಪಾಡಿ, ಶಿವಾನಂದ ಕಳವೆ ಅವರಿಗೆ 'ಹವ್ಯಕ ವಿಭೂಷಣ', ಎಚ್‌.ಎಂ.ತಿಮ್ಮಪ್ಪ ಕಲಸಿ ಅವರಿಗೆ 'ಹವ್ಯಕ ವಿಭೂಷಣ', ಗಣೇಶ್ ಎಲ್. ಭಟ್ ಅವರಿಗೆ 'ಹವ್ಯಕ ಭೂಷಣ', ಗಣೇಶ್ ದೇಸಾಯಿ, ಗಿರಿಧರ್ ದಿವಾನ್ ಅವರಿಗೆ 'ಹವ್ಯಕ ಶ್ರೀ', ಶ್ರೀಕಾಂತ ಹೆಗಡೆ ಅಂತ್ರವಳ್ಳಿ ಅವರಿಗೆ 'ಹವ್ಯಕ ಸೇವಾಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ. ಗಿರಿಧರ ಕಜೆ, ವಿದ್ವಾಂಸ ಮತ್ತು ಭಾಷಾ ತಜ್ಞ ಪಾದೇಕಲ್ಲು ವಿಷ್ಣು ಭಟ್ಟ, ಪೊಲೀಸ್ ಸೂಪರಿಟೆಂಡೆಂಟ್ ರಾಘವೇಂದ್ರ ಹೆಗಡೆ ಹಾಗೂ ಮಹಾಸಭಾದ ಪದಾಧಿಕಾರಿಗಳು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

'ಕೆಪಿಎಸ್‌ಸಿ ನೇಮಕಾತಿಯಲ್ಲಿ ದೊಡ್ಡ ಅಕ್ರಮ'

ಬೆಂಗಳೂರು: 'ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಕೆಪಿಎಸ್‌ಸಿ ನೇಮಕಾತಿಯಲ್ಲಿ ಬಹುದೊಡ್ಡ ಅಕ್ರಮ ನಡೆಸಿದೆ. ನೇಮಕಾತಿ ಪಟ್ಟಿಯೇ ನಾಪತ್ತೆ ಆಗಿರುವುದೇ ಇದಕ್ಕೆ ಸಾಕ್ಷಿ' ಎಂದು ಬಿಜೆಪಿ 'ಎಕ್ಸ್' ಮೂಲಕ ಹರಿಹಾಯ್ದಿದೆ.

'ಕಲೆಕ್ಷನ್, ಕಮಿಷನ್, ಟ್ರಾನ್ಸ್‌ಫರ್ ದಂಧೆ ನಡೆಸುತ್ತಿರುವ ಮಜಾವಾದಿ ಸಿದ್ದರಾಮಯ್ಯ ಸರ್ಕಾರ, ಇದೀಗ ಕೆಪಿಎಸ್‌ಸಿ ನೇಮಕಾತಿಯಲ್ಲೂ ಅಕ್ರಮ ನಡೆಸಿದೆ. ಅಕ್ರಮ ಬಯಲಿಗೆ ಬರಬಾರದು ಎಂದು ನೇಮಕಾತಿ ಪಟ್ಟಿಯನ್ನೇ ಕಳ್ಳತನ ಮಾಡಿ ನಾಪತ್ತೆ ಆಗಿದೆ ಎಂದು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದೆ' ಎಂದು ಬಿಜೆಪಿ ಹೇಳಿದೆ.

'ಮಜಾವಾದಿ ಸರ್ಕಾರ ಅಧಿಕಾರದಲ್ಲಿದ್ದಾಗ ಸರ್ಕಾರಿ ಕಡತಗಳು ಸುಟ್ಟು ಹೋಗುವುದು, ನಾಪತ್ತೆ ಆಗುವುದು ಸಾಮಾನ್ಯವಾಗಿದೆ. ಕಡತವೇ ಇಲ್ಲ ಎಂದರೆ, ಕಳ್ಳರು ರಾಜಾರೋಷವಾಗಿ ಓಡಾಡಬಹುದು ಎನ್ನುವುದೇ 'ಸ್ಲೀಪಿಂಗ್' ಸರ್ಕಾರದ ಮೂಲಮಂತ್ರ' ಎಂದು ಲೇವಡಿ ಮಾಡಿದೆ.

ಖಾಸಗಿ ವಿಮಾನಗಳ ಮೇಲೆ ನಿಗಾ

ದೇವನಹಳ್ಳಿ: ಮಾದರಿ ನೀತಿ ಸಂಹಿತೆ ಸಮರ್ಪಕವಾಗಿ ಜಾರಿ ಮತ್ತು ಚುನಾವಣಾ ಅಕ್ರಮ ತಡೆಯುವ ನಿಟ್ಟಿನಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎಫ್‌ಎಸ್‌ಟಿ (ನಿಗಾ ತಂಡ) ನಿಯೋಜಿಸಲು ಚುನಾವಣಾ ಆಯೋಗ ನಿರ್ದೇಶಿಸಿದೆ.

ಚುನಾವಣಾ ಆಯೋಗದ ಮಾರ್ಗಸೂಚಿ ಅನ್ವಯ ವಿಮಾನ ನಿಲ್ದಾಣದಲ್ಲಿ ಖಾಸಗಿ ವಿಮಾನಗಳ ಚಲನವಲನಗಳ ಮೇಲೆ ನಿಗಾ ವಹಿಸಿ, ವ್ಯಕ್ತಿಗಳ ತಪಾಸಣೆ ಮಾಡಲಾಗುತ್ತದೆ. ಪ್ರತಿದಿನ ಇಲ್ಲಿ ನಡೆಯುವ ತಪಾಸಣಾ ವರದಿಯನ್ನು ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ.

₹7.72 ಕೋಟಿ ಮೌಲ್ಯದ ದಿನಸಿ ವಶ

ಶಿವಮೊಗ್ಗ: ಮತದಾರರಿಗೆ ಹಂಚಲು ಸಂಗ್ರಹಿಸಿ ಇಟ್ಟಿರುವ ಅನುಮಾನದ ಮೇಲೆ ಶಿವಮೊಗ್ಗದಲ್ಲಿ ಎರಡು ಪ್ರತ್ಯೇಕ ಪ್ರಕರಣದಲ್ಲಿ ಪೊಲೀಸರು ₹7.72 ಕೋಟಿ ಮೌಲ್ಯದ ದಿನಸಿ ಸಾಮಗ್ರಿ ಹಾಗೂ ಅಕ್ಕಿ ವಶಪಡಿಸಿಕೊಂಡಿದ್ದಾರೆ.

ಅಲ್ಲದೆ, ಜಿಲ್ಲೆಯ ವಿವಿಧೆಡೆ ದಾಖಲೆರಹಿತವಾಗಿ ಸಂಗ್ರಹಿಸಲಾಗಿದ್ದ ₹ 46.50 ಲಕ್ಷ ಮೌಲ್ಯದ ಬಟ್ಟೆ ಮತ್ತಿತರ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

'ಶಿವಮೊಗ್ಗದ ಹೊನ್ನಾಳಿ ರಸ್ತೆಯ ರಾಗಿಗುಡ್ಡದ ಫ್ಲೈಓವರ್ ಪಕ್ಕದ ರೈಸ್‌ಮಿಲ್‌ನಲ್ಲಿ ಸಂಗ್ರಹಿಸಿ ಇಟ್ಟಿದ್ದ ₹ 4.62 ಕೋಟಿ ಮೊತ್ತದ ದಿನಸಿ ಸಾಮಗ್ರಿ ವಶಪಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್ ತಿಳಿಸಿದರು.

₹ 46.50 ಲಕ್ಷ ಮೌಲ್ಯದ ಬಟ್ಟೆ ವಶ: ಜಿಲ್ಲೆಯ ಸಾಗರದಲ್ಲಿ ₹ 31.50 ಲಕ್ಷ ಹಾಗೂ ಶಿವಮೊಗ್ಗದ ದೊಡ್ಡಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ₹ 15 ಲಕ್ಷ ಮೌಲ್ಯದ ಬಟ್ಟೆ, ಪ್ಲಾಸ್ಟಿಕ್ ಹಾಗೂ ಇತರೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಎಂದು ಪೊಲೀಸರು ತಿಳಿಸಿದ್ದಾರೆ.

ಬಿರುಗಾಳಿ: ಪಶ್ಚಿಮ ಬಂಗಾಳದಲ್ಲಿ ನಾಲ್ವರ ಸಾವು

ಒಂದನೇ ಪುಟದಿಂದ...

ಕೆಲ ಕಾಲ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಅಧಿಕಾರಿಗಳು, 6 ವಿಮಾನಗಳ ಮಾರ್ಗ ಬದಲಾಯಿಸಿದ್ದರು.

ಜಲಪೈಗುರಿ ನಗರ ಹಾಗೂ ಪಕ್ಕದ ಮೈನಗುರಿ ಜಿಲ್ಲೆಯಲ್ಲಿ ಹಲವು ಮನೆಗಳು ಕುಸಿದಿವೆ. ಹಲವಾರು ಮರಗಳು ಹಾಗೂ ವಿದ್ಯುತ್ ಕಂಬಗಳು ಬುಡಮೇಲಾಗಿವೆ. ಜಲಪೈಗುರಿ ಜಿಲ್ಲೆಯ ರಾಜರ್‌ಹಾಟ್, ಬರ್ನಿಷ್, ಬಾಕಲಿ, ಜೋರ್‌ಪಕಡಿ, ಮಾಧಬ್‌ಡಾಂಗಾ, ಸಪ್ತಿಬಾರಿ ಪ್ರದೇಶಗಳಲ್ಲಿ ಹೆಚ್ಚು ಹಾನಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ರಕ್ಷಣಾ ಕಾರ್ಯಕ್ಕಾಗಿ ಸಿಬ್ಬಂದಿ ನಿಯೋಜಿಸಲಾಗಿದೆ. ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗುವುದು' ಎಂದು ಸಿ.ಎಂ ಮಮತಾ ಬ್ಯಾನರ್ಜಿ ಹೇಳಿದ್ದಾರೆ.

'ಗುವಾಹಟ ವಿಮಾನ ನಿಲ್ದಾಣ ಬಳಿ ಆಯಿಲ್ ಇಂಡಿಯಾ ಸಂಸ್ಥೆಯ ಘಟಕ ಸಮೀಪದ ದೊಡ್ಡ ಮರವೊಂದು ಬಿದ್ದ ಪರಿಣಾಮ ರಸ್ತೆ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು' ಎಂದು ಮುಖ್ಯ ವಿಮಾನನಿಲ್ದಾಣ ಅಧಿಕಾರಿ (ಸಿಎಒ) ಉತ್ಪಲ್ ಬರುವಾ ಹೇಳಿದ್ದಾರೆ.

'ಸಂಸ್ಥೆಯ ಕಟ್ಟಡ ಬಹಳ ಹಳೆಯದು. ಈ ಅವಘಡದಲ್ಲಿ ಯಾರಿಗೂ ಗಾಯಗಳಾಗಿಲ್ಲ' ಎಂದು ಹೇಳಿದ್ದಾರೆ. ಆಯಿಲ್ ಇಂಡಿಯಾ ಘಟಕದ ಚಾವಣಿ ಬೀಳುತ್ತಿದೆ ಹಾಗೂ ಕಟ್ಟಡದ ಒಳಗೆ ನೀರು ನುಗ್ಗುತ್ತಿದೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಗುವಾಹಟಿಯಿಂದ ಕಾರ್ಯಾಚರಿಸುವ ಇಂಡಿಗೊ, ಏರ್ ಇಂಡಿಯಾ ಹಾಗೂ ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಗಳ ಮಾರ್ಗ ಬದಲಾಯಿಸಿ, ಅಗರ್ತಲಾ ಮತ್ತು ಕೋಲ್ಕತ್ತಕ್ಕೆ ಕಳುಹಿಸಲಾಯಿತು' ಎಂದೂ ಹೇಳಿದ್ದಾರೆ.

ಬಾವಿಗೆ ಬಿದ್ದ ಕರಿ ಚಿರತೆ ರಕ್ಷಣೆ

ಬಜಪೆ (ದಕ್ಷಿಣ ಕನ್ನಡ): ಅಪರೂಪದ ಕರಿ ಚಿರತೆಯೊಂದು ಬಾವಿಗೆ ಬಿದ್ದ ಘಟನೆ ಮಂಗಳೂರು ತಾಲ್ಲೂಕಿನ ಎಡಪದವಿನ ಗೋಸ್ಪೆಲ್ ಸನಿಲ ಎಂಬಲ್ಲಿ ಭಾನುವಾರ ನಡೆದಿದೆ.

ಶಕುಂತಳಾ ಆಚಾರ್ಯ ಅವರ ಮನೆಯ ತೆರೆದ ಬಾವಿಯಲ್ಲಿ ಕರಿ ಚಿರತೆ ಬಿದ್ದಿತ್ತು. ಚಿರತೆಯನ್ನು ಮೇಲೆತ್ತಲು ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸ್ಥಳೀಯರು ಬೆಳಗ್ಗಿನಿಂದಲೇ ಕಾರ್ಯಾಚರಣೆ ಆರಂಭಿಸಿದ್ದರು. ಮಧ್ಯಾಹ್ನದ ವೇಳೆಗೆ ಚಿರತೆಯನ್ನು ರಕ್ಷಿಸಿ ಸೆರೆ ಹಿಡಿದರು.

ಬೋನಿಗೆ ಬಿದ್ದ ಕರಿಚಿರತೆ

ಪಾದಯಾತ್ರಿ ಸಾವು

ಮಾನ್ವಿ (ರಾಯಚೂರು): ಶ್ರೀಶೈಲಕ್ಕೆ ಪಾದಯಾತ್ರೆ ಮೂಲಕ ತೆರಳುತ್ತಿದ್ದ ಯುವಕ ಸಾವಿಗೀಡಾದ ಘಟನೆ ತಾಲ್ಲೂಕಿನ ಚಿಕ್ಕ ಕೊಟ್ನೆಕಲ್ ಬಳಿ ಶನಿವಾರ ನಡೆದಿದೆ.

ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ತಾಲ್ಲೂಕಿನ ಚಿಮ್ಮಡ ಗ್ರಾಮದ ಶ್ರೀಶೈಲ ಮಲ್ಲಪ್ಪ (21) ಮೃತ ಯುವಕ.

'ಹಿಂದು ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಕೃತಿ ಬಿಡುಗಡೆ

'ಆರ್‌ಎಸ್‌ಎಸ್ ಆಸ್ತಿ ಹೆಚ್ಚಿಸಿದ ವಿಶ್ವಗುರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕುಟುಂಬವಿಲ್ಲ, ಮನೆಯಿಲ್ಲ. ಹಾಗಾಗಿ ಅವರು ದುಡ್ಡು ಮಾಡಲ್ಲ ಎಂದೆಲ್ಲ 'ವಿಶ್ವಗುರು' ಬಗ್ಗೆ ನಿರೂಪಣೆಗಳನ್ನು ತುಂಬಲಾಗಿದೆ. ಅವರು ಆರ್‌ಎಸ್‌ಎಸ್‌ಗೆ ಸುರಿದಿದ್ದಾರೆ. ಹಾಗಾಗಿ ಅದರ ಆಸ್ತಿ ನೂರು ಪಟ್ಟು ಹೆಚ್ಚಾಗಿದೆ' ಎಂದು ಲೇಖಕಿ ಆರ್. ಸುನಂದಮ್ಮ ಆರೋಪಿಸಿದರು.

ಲತಾಮಾಲ ಅವರ 'ಹಿಂದು ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಕೃತಿಯನ್ನು ಭಾನುವಾರ ಬಿಡುಗಡೆ ಮಾಡಿ ಅವರು ಮಾತನಾಡಿದರು.

'2ಜಿ ಸ್ಪೆಕ್ಟ್ರಂ ಹಗರಣ ನಡೆದಿದೆ ಎಂದು ಬಹಳಷ್ಟು ಹೋರಾಟಗಳು ನಡೆದವು. ಕೋರ್ಟ್‌ನಲ್ಲಿ ಪ್ರಕರಣವೇ ಬಿದ್ದು ಹೋಯಿತು. ಊಹಾಪೋಹದ ಅಂಕಿಅಂಶಗಳನ್ನು ಆಧರಿಸಿ ನಡೆದ ಹೋರಾಟ ಸರ್ಕಾರವೇ ಬದಲಾಗುವಷ್ಟು ದೊಡ್ಡ ಪರಿಣಾಮ ಬೀರಿತು. ಆದರೆ, ಈಗ ಲಕ್ಷ, ಕೋಟಿ ರೂಪಾಯಿಗಳಲ್ಲಿ ಕಿಕ್ ಬ್ಯಾಕ್ ಪಡೆಯುತ್ತಿರುವ ಭ್ರಷ್ಟಾಚಾರಗಳ ವಿರುದ್ಧ ಹೋರಾಟ ನಡೆಯುತ್ತಿಲ್ಲ' ಎಂದು ವಿಷಾದಿಸಿದರು.

'ಹಿಂದು ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು' ಕೃತಿಯನ್ನು ಬಿಡುಗಡೆ ಮಾಡಿದ ಲೇಖಕಿ ಆರ್‌.ಸುನಂದಮ್ಮ ಅವರು ಕೃತಿಕರ್ತಿ ಲತಾಮಾಲ (ಬಲಬದಿ) ಅವರಿಗೆ ಪುಸ್ತಕ ಹಸ್ತಾಂತರಿಸಿದರು. ಲೇಖಕ ಜಿ.ರಾಮಕೃಷ್ಣ, ಲೇಖಕಿಯರಾದ ಕೆ.ಶರೀಫಾ, ಎ.ಆರ್‌.ವಾಸವಿ ಉಪಸ್ಥಿತರಿದ್ದರು.–ಪ್ರಜಾವಾಣಿ ಚಿತ್ರ

ನಿಖರ ಅಂಕಿ ಅಂಶಗಳು ವಸ್ತುಸ್ಥಿತಿಯನ್ನು ತಿಳಿಸುತ್ತವೆ. ಈಗ ಅಂಕಿಅಂಶಗಳನ್ನು ತಿದ್ದುವ ಕೆಲಸ ಮಾಡುತ್ತಿದ್ದಾರೆ. ತಿದ್ದಲು ಒಪ್ಪದ ಅಧಿಕಾರಿಗಳ ಮೇಲೆ ದೂರು, ಕಿರುಕುಳ ನೀಡಲಾಗುತ್ತದೆ. ಜೈಲಿಗೆ ಕಳುಹಿಸಲಾಗುತ್ತದೆ. ಇಂಥ ಅನೇಕ ಮಾಹಿತಿಗಳು ಈ ಕೃತಿಯಲ್ಲಿವೆ. ಯುವಜನರಿಗಷ್ಟೇ ಅಲ್ಲ, ಕಾಂಗ್ರೆಸಿಗರಾಗಿದ್ದು, ಮೋದಿ ಮೋಡಿಗೆ ಒಳಗಾಗಿ ಬಿಜೆಪಿಗರಾಗಿರುವ 60 ವರ್ಷ ದಾಟಿದವರಿಗೂ ಈ ಕೃತಿಯನ್ನು ಓದಿಸಬೇಕು ಎಂದು ಸಲಹೆ ನೀಡಿದರು.

ಲೇಖಕಿ ಕೆ.ಷರೀಫಾ ಮಾತನಾಡಿ, 'ಆರ್‌ಎಸ್‌ಎಸ್‌ನಿಂದ ಹೊರಬಂದು ಅದರ ಅನುಭವವನ್ನು ಬರೆದ ಮೊದಲ ಮಹಿಳೆ ಲತಾಮಾಲ ಅವರು ಈ ಕೃತಿಯಲ್ಲಿ ಐದು ಭಾಗಗಳಾಗಿ ವಿವರ ನೀಡಿದ್ದಾರೆ. ಆರ್‌ಎಸ್‌ಎಸ್ ಭ್ರಮೆಯಿಂದ ಹೊರಬಂದಿರುವುದು ಮೊದಲ ಭಾಗದಲ್ಲಿದೆ. ಆರ್‌ಎಸ್‌ಎಸ್–ಹಿಂದುತ್ವದ ವಿಚಾರಗಳು ಎರಡನೇ ಭಾಗದಲ್ಲಿದೆ. ಹಿಂದುತ್ವ ಮಾಡುತ್ತಿರುವ ಅನ್ಯಾಯ, ಜಿಹಾದ್ ಸಹಿತ ಹಿಂದುತ್ವದ ನಿರೂಪಣೆ ಮೂರನೇ ಭಾಗದಲ್ಲಿದೆ. ಪ್ರಭುತ್ವವು ಜನರಿಗೆ ಹಿಂದುತ್ವದ ನಶೆ ಏರಿಸಿ ಸಾರ್ವಜನಿಕ ಸಂಸ್ಥೆಗಳನ್ನು ಹೇಗೆ ಮಾರುತ್ತಿದೆ ಎಂಬುದನ್ನು ನಾಲ್ಕನೇ ಭಾಗದಲ್ಲಿ ನೀಡಿದ್ದಾರೆ. ಇದಕ್ಕೆ ಪರಿಹಾರವೇನು ಎಂಬುದನ್ನು ಕೊನೆಯ ಭಾಗದಲ್ಲಿ ನೀಡಿದ್ದಾರೆ' ಎಂದರು.

ಬರಹಗಾರ ಜಿ.ರಾಮಕೃಷ್ಣ ಅಧ್ಯಕ್ಷತೆ ವಹಿಸಿದ್ದರು. ಲೇಖಕಿ ಎ.ಆರ್‌.ವಾಸವಿ, ಗ್ರಾಮೀಣಾಭಿವೃದ್ಧಿ ತಜ್ಞ ಕೆ.ಪಿ.ಸುರೇಶ್, ಅಂಕಣಕಾರ ಶಿವಸುಂದರ, ಕೃತಿಕರ್ತೃ ಲತಾಮಾಲ, ಪ್ರಕಾಶಕ ಅಭಿರುಚಿ ಗಣೇಶ್ ಮಾತನಾಡಿದರು.

ಪುಸ್ತಕ ಪರಿಚಯ

ಕೃತಿ: ಹಿಂದು ರಾಷ್ಟ್ರದೆಡೆಗೆ ಹಿಂಸೆಯ ಹೆಜ್ಜೆಗಳು
ಲೇಖಕಿ: ಲತಾಮಾಲ
ಪ್ರಕಾಶನ: ಅಭಿರುಚಿ, ಮೈಸೂರು
ಪುಟ: 252
ದರ: ₹ 250

'ಧರ್ಮಾಧಾರಿತ ಕಾಯ್ದೆಗಳು ರದ್ದಾಗಲಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ವಕ್ಫ್ ನಿಯಮ, ಹಿಂದೂ ದೇವಾಲಯಗಳ ನಿಯಂತ್ರಣ ಕಾಯ್ದೆ ಒಳಗೊಂಡಂತೆ ದೇಶದಲ್ಲಿ ಜಾರಿಯಲ್ಲಿರುವ ಧರ್ಮಾಧಾರಿತ ನಿಯಮಗಳೆಲ್ಲವನ್ನೂ ರದ್ದು ಮಾಡಿದ ನಂತರವಷ್ಟೇ ಸಿಎಎ ರದ್ದುಪಡಿಸಿದರೆ ಸಾಕು' ಎಂದು ಅಖಿಲ ಭಾರತ ಸಂತ ಸಮಿತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಿತೇಂದ್ರಾನಂದ ಸರಸ್ವತಿ ಅಭಿಪ್ರಾಯಪಟ್ಟರು.

ಅಖಿಲ ಭಾರತೀಯ ಸಂತ ಸಮಿತಿಯ ಸಹಯೋಗದಲ್ಲಿ ನಗರದ ಓಂ ಶ್ರೀಮಠ ಭಾನುವಾರ ಶ್ರೀಚಕ್ರ ಮಹಾಯಾಗದ ಅಂಗವಾಗಿ ಆಯೋಜಿಸಿದ್ದ ಸಂತ ಸಮಾವೇಶದಲ್ಲಿ ಅವರು ಮಾತನಾಡಿದರು. 'ಅಲ್ಪಸಂಖ್ಯಾತರು ಮತ್ತು ಬಹುಸಂಖ್ಯಾತರು ಎಂಬ ನೆಲೆಯ ಕಾನೂನುಗಳು ದೇಶಕ್ಕೆ ಮಾರಕ' ಎಂದರು.

'ಕರ್ನಾಟಕದಲ್ಲಿ 49 ಸಾವಿರ ದೇವಸ್ಥಾನಗಳನ್ನು ಸರ್ಕಾರ ನಡೆಸುತ್ತಿದೆ. ಸಂವಿಧಾನದಲ್ಲಿ ಜಾತ್ಯತೀತ ಮತ್ತು ಸಮಾಜವಾದ ಎಂಬ ಪದಗಳನ್ನು ತೆಗೆದು ಹಾಕಿ, ಹಿಂದೂ ರಾಷ್ಟ್ರ ಎಂದು ಘೋಷಿಸಿದ ನಂತರ ದೇವಾಲಯಗಳ ಮೇಲೆ ಕಣ್ಣಿಟ್ಟರೆ ಅರ್ಥಪೂರ್ಣ. ದೇವಸ್ಥಾನದ ಕಾಣಿಕೆ ಹುಂಡಿಯಿಂದ ಹಣ ತಿಂದು ಸನಾತನ ಧರ್ಮವನ್ನು ಒಪ್ಪುವುದಿಲ್ಲ ಎಂದರೆ ಹೇಗೆ' ಎಂದು ಪ್ರಶ್ನಿಸಿದರು.

ಸಂವಿಧಾನ, ಷರಿಯತ್ ಜೊತೆಗೆ ಬೇಡ: ಮುಖ್ಯ ಭಾಷಣ ಮಾಡಿದ ಅಯೋಧ್ಯೆಯ ನಿತ್ಯಗೋಪಾಲ ದಾಸ್‌ಜಿ ಆಶ್ರಮದ ಕಮಲನಯನ ದಾಸ, 'ದೇಶದಲ್ಲಿ ಸಂವಿಧಾನ ಜಾರಿಯಲ್ಲಿರುವಾಗ ಪ್ರತ್ಯೇಕವಾಗಿ ಮುಸ್ಲಿಂ ವೈಯಕ್ತಿಕ ಕಾನೂನುಗಳನ್ನೂ ಜಾರಿ ಮಾಡಲಾಗಿದೆ. ಈ ಪರಿಸ್ಥಿತಿಯಿಂದ ದೇಶವನ್ನು ರಕ್ಷಿಸಲು ವೇದಿಕೆ ಸಜ್ಜಾಗಿದ್ದು, ಹಿಂದೂಗಳು ಪ್ರಜ್ಞಾವಂತಿಕೆ ಮೆರೆಯದೇ ಇದ್ದರೆ ಭವಿಷ್ಯದಲ್ಲಿ ಅಪಾಯವಿದೆ' ಎಂದರು.

ಅಖಿಲ ಭಾರತ ಸಂತ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಅವಿಚಲ್ ದಾಸ್, ದಕ್ಷಿಣ ಭಾರತ ಪ್ರಮುಖ ಪ್ರಭಾಕರಾನಂದ ಸ್ವಾಮೀಜಿ, ಕರ್ನಾಟಕದ ಮುಖ್ಯಸ್ಥ ವಿದ್ಯಾನಂದ ಸರಸ್ವತಿ ಸ್ವಾಮೀಜಿ, ಕಾರ್ಯದರ್ಶಿ ಪರಮಾತ್ಮಜಿ, ಕೊಡಗು ಜಿಲ್ಲಾ ಮುಖ್ಯಸ್ಥ ರಾಜನಾಥ್ ಗುರು, ಸನ್ಯಾಸಿಗಳಾದ ಕೀರ್ತೇಂದ್ರಾನಂದ, ಶ್ಯಾಮಲಾ ಶೋಭಾನಂದ ಸರಸ್ವತಿ, ಸುಲೋಚನಾನಂದ ಸರಸ್ವತಿ, ವಿಷ್ಣುಪ್ರಿಯಾನಂದ ಸರಸ್ವತಿ, ಪದ್ಮನಾಭಾನಂದ ಸರಸ್ವತಿ, ವಿಶ್ವ ಹಿಂದೂ ಪರಿಷತ್‌ನ ಶರಣ್ ಪಂಪುವೆಲ್, ಎಂ.ಬಿ.ಪುರಾಣಿಕ್, ಆರ್‌ಎಸ್‌ಎಸ್ ಮುಖಂಡ ವಾಮನ್ ಶೆಣೈ ಇದ್ದರು.

ಅಖಿಲ ಭಾರತೀಯ ಸಂತ ಸಮಿತಿ ಮಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ಸಂತ ಸಮಾವೇಶದಲ್ಲಿ ಸಮಿತಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜಿತೇಂದ್ರಾನಂದ ಸರಸ್ವತಿ (ಮೊದಲ ಸಾಲು, ಬಲದಿಂದ ಎರಡನೆಯವರು), ಅಯೋಧ್ಯೆಯ ನಿತ್ಯಗೋಪಾಲ ದಾಸ್‌ಜಿ ಆಶ್ರಮದ ಕಮಲನಯನ ದಾಸ (ಬಲದಿಂದ ಮೂರನೆಯವರು), ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಅವಿಚಲ್ ದಾಸ್ (ಎಡದಿಂದ ಎರಡನೆಯವರು) ಮತ್ತಿತರರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ರಾಜ್ಯದಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ವಂಚನೆ ಪ್ರಕರಣ

ಸೈಬರ್: ₹465 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸೈಬರ್ ಅಪರಾಧ ಪ್ರಕರಣಗಳು ಹೆಚ್ಚಿದಂತೆ ವರ್ಷದಿಂದ ವರ್ಷಕ್ಕೆ ವಂಚನೆ ಪ್ರಮಾಣವೂ ಏರಿಕೆ ಕಂಡಿದೆ.

2023ರಲ್ಲಿ ರಾಜ್ಯದ ಜನರು ₹465 ಕೋಟಿ ಕಳೆದುಕೊಂಡಿದ್ದಾರೆ. ಒಂದು ದಿನದಲ್ಲಿ ಸರಾಸರಿ ₹ 1.27 ಕೋಟಿ ವಂಚನೆಯಾಗಿದೆ ಎಂದು ಸಿಐಡಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

2021ಕ್ಕೆ ಹೋಲಿಸಿದರೆ, 2023ರಲ್ಲಿ ವಂಚನೆ ಪ್ರಕರಣಗಳ ಸಂಖ್ಯೆ ಶೇ 400 ರಷ್ಟು ಏರಿಕೆ ಕಂಡಿದೆ. 2021ರಲ್ಲಿ ₹84 ಕೋಟಿ ಹಾಗೂ 2022ರಲ್ಲಿ ₹185 ಕೋಟಿ ವಂಚನೆ ನಡೆದಿತ್ತು.

ರಾಜ್ಯದ ವಿವಿಧ ಸೈಬರ್ ಪೊಲೀಸ್ ಠಾಣೆಗಳಲ್ಲಿ ಕಳೆದ ವರ್ಷ 21,868 ಪ್ರಕರಣಗಳು ದಾಖಲಾಗಿದ್ದರೆ, ಬೆಂಗಳೂರು ನಗರ-ವೊಂದರಲ್ಲೇ 17,623 ಪ್ರಕರಣಗಳು ದಾಖಲಾಗಿದ್ದವು. ರಾಜ್ಯದ ಇತರೆ ಜಿಲ್ಲೆಗಳಲ್ಲಿ 4 ಸಾವಿರ ಪ್ರಕರಣಗಳು ದಾಖಲಾಗಿವೆ.

ಸೈಬರ್ ವಂಚಕರು ಹೊಸ ಹೊಸ ವಿಧಾನಗಳ ಮೂಲಕ ಹಣ ಲಪಟಾ-ಯಿಸುತ್ತಿದ್ದು, ಆರೋಪಿಗಳ ಪತ್ತೆಯೂ ಸವಾಲಿನಿಂದ ಕೂಡಿದೆ.

‘ಹೂಡಿಕೆ, ಫಿಶಿಂಗ್ (ಗಾಳ), ಕೊರಿಯರ್ ಸೇವೆ ಹೆಸರಿನಲ್ಲಿ ಹೆಚ್ಚು ವಂಚನೆ ಪ್ರಕರಣಗಳು ನಡೆಯುತ್ತಿವೆ’ ಎಂದು ಸಿಐಡಿ ಮುಖ್ಯಸ್ಥ ಎಂ.ಎ.ಸಲೀಂ ಮಾಹಿತಿ ನೀಡಿದರು.

‘ಕಳೆದ ವರ್ಷದ ಆರಂಭದಲ್ಲಿ ಒಟಿಪಿ ಪಡೆದು ಹಣ ವಂಚಿಸುತ್ತಿದ್ದರು. ಆರು ತಿಂಗಳ ನಂತರ ಮುಂಬೈ ಸೇರಿದಂತೆ ದೇಶ ಇತರೆ ಮಹಾನಗರಗಳಿಂದ ಸೈಬರ್ ವಂಚಕರು ಪೊಲೀಸರ ಸೋಗಿನಲ್ಲಿ ಕರೆ ಮಾಡಿ ವಂಚನೆ ಮಾಡುತ್ತಿದ್ದರು’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

70 ವರ್ಷದ ಪತ್ರಕರ್ತೆಯೊಬ್ಬರಿಗೆ ‘ಫೆಡೆಕ್ಸ್ ಕೊರಿಯರ್’ ಹೆಸರಿನಲ್ಲಿ ₹1.1 ಕೋಟಿ ವಂಚಿಸಲಾಗಿತ್ತು. ಅವರನ್ನು ಡಿಜಿಟಲ್ ದಿಗ್ಬಂಧನಕ್ಕೂ ಸಹ ಒಳಪಡಿಸಿದ್ದ ಸೈಬರ್ ವಂಚಕರು ಹಣ ಪಡೆದುಕೊಂಡಿದ್ದರು.

₹2.57 ಕೋಟಿ ಹಣದ ಜೊತೆಗೆ ನೌಕರ ಪರಾರಿ

ಬೆಂಗಳೂರು: ಖಾಸಗಿ ಕಂಪನಿ ನೌಕರನೊಬ್ಬ ಬ್ಯಾಂಕ್‌ಗೆ ಹಣ ಪಾವತಿಸುವ ನೆಪದಲ್ಲಿ ಸುಳ್ಳು ಕಥೆ ಕಟ್ಟಿ ₹2.57 ಕೋಟಿ ಹಣದೊಂದಿಗೆ ಪರಾರಿಯಾಗಿದ್ದು, ಈ ಸಂಬಂಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಮನ್ ಎಂಬಾತ ಹಣದ ಜೊತೆಗೆ ಪರಾರಿ ಆಗಿರುವ ಆರೋಪಿ. ‘ಸುಮನ್, ಗ್ರಾಹಕರಿಂದ ಸಂಗ್ರಹಿಸಿದ್ದ ಹಣವನ್ನು ನಿಗದಿತ ಬ್ಯಾಂಕ್‌ಗಳಿಗೆ ಪಾವತಿಸುವ ಕೆಲಸ ಮಾಡುತ್ತಿದ್ದ. ಈತನ ವಿರುದ್ಧ ‘ಹಿಟಾಚಿ ಕ್ಯಾಶ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್’ ಕಂಪನಿ ಮಾಲೀಕ ಮಲ್ಲಿಕಾರ್ಜುನ್ ದೂರು ನೀಡಿದ್ದು ಆರೋಪಿ ಪತ್ತೆಗೆ ಶೋಧ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಮಲ್ಲಿಕಾರ್ಜುನ್ ಅವರು ಕಂಪನಿ ಹೊಂದಿದ್ದು ಈ ಕಂಪನಿ ಜತೆಗೆ ನೋಂದಣಿ ಮಾಡಿಕೊಂಡ ಗ್ರಾಹಕರಿಂದ ಹಣವನ್ನು ಸ್ವೀಕರಿಸಿ ನಿಗದಿತ ಬ್ಯಾಂಕ್‌ಗಳಿಗೆ ಪಾವತಿಸುವ ಕೆಲಸ ಮಾಡುತ್ತಿದ್ದಾರೆ. ಇದಕ್ಕೆ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅನುಮತಿ ಪಡೆದಿದ್ದಾರೆ.

ನಗರದ ಮಾರ್ಗ ಸಂಖ್ಯೆ ಬಿಎಲ್‌ಆರ್ 15ರಲ್ಲಿ ಗ್ರಾಹಕರಿಂದ ಹಣ ಸಂಗ್ರಹಿಸಲು ಕಂಪನಿ ನೌಕರ ಸುಮನ್ ಎಂಬಾತನನ್ನು ಕಸ್ಟೋಡಿಯನ್, ಬೋಲನಾಥದಾಸ್‌ನ-ನ್ನು ಗಾರ್ಡ್ ಹಾಗೂ ಫಜಲ್ ಹುಸೇನ್ ಎಂಬಾತನನ್ನು ಚಾಲಕನಾಗಿ ನೇಮಕ ಮಾಡಿಕೊಂಡಿದ್ದರು’

‘ಗ್ರಾಹಕರಿಂದ ₹ 2.84 ಕೋಟಿ ಹಣವನ್ನು ಆರೋಪಿ ಸಂಗ್ರಹಿಸಿದ್ದ. ಆ ಪೈಕಿ ₹23.10 ಲಕ್ಷ ಹಣವನ್ನು ರಿಚ್‌ಮಂಡ್ ವೃತ್ತದ ಬಳಿಯ ಎಚ್‌ಡಿಎಫ್‌ಸಿ ಬ್ಯಾಂಕ್ ಖಾತೆಗೆ ಜಮೆ ಮಾಡಿದ್ದ. ದೊಮ್ಮಲೂರಿನ ಕಚೇರಿಗೆ ₹4.35 ಲಕ್ಷ ಜಮೆ ಮಾಡಿದ್ದ.

ಉಳಿದ ₹ 2.57 ಕೋಟಿ ಹಣವನ್ನು ಸೇಂಟ್ ಮಾರ್ಕ್ಸ್ ರಸ್ತೆಯ ಫೆಡರಲ್ ಬ್ಯಾಂಕ್‌ಗೆ ಜಮೆ ಮಾಡಬೇಕಿತ್ತು. ಆದರೆ, ಆ ಬ್ಯಾಂಕ್‌ಗೆ ಹಣ ಜಮೆ ಮಾಡದೇ ಸುಳ್ಳು ಹೇಳಿ ಪರಾರಿಯಾಗಿದ್ದಾನೆ’ ಎಂದು ಮೂಲಗಳು ಹೇಳಿವೆ.

ಕಥೆ ಕಟ್ಟಿದ ಆರೋಪಿ: ‘ಹಣದೊಂದಿಗೆ ಬ್ಯಾಂಕ್ ಬಳಿಗೆ ಬಂದಿದ್ದ ಆರೋಪಿ, ಸಿಬ್ಬಂದಿಗಳಾದ ಬೋಲನಾಥದಾಸ್ ಹಾಗೂ ಚಾಲಕ ಫಜಲ್ ಹುಸೇನ್ ಅವರನ್ನು ಹೊರಗೆ ನಿಲ್ಲಿಸಿ ಬ್ಯಾಂಕ್ ಪ್ರವೇಶಿಸಿದ್ದ. ಸ್ವಲ್ಪ ಸಮಯದ ನಂತರ ಬೋಲನಾಥ್‌ಗೆ ಕರೆ ಮಾಡಿ, ‘ನನ್ನ ಕುಟುಂಬದ ಸದಸ್ಯರೊಬ್ಬರು ಮೃಪಟ್ಟಿದ್ದಾರೆ. ನಾನು ಬ್ಯಾಂಕ್‌ಗೆ ಹಣ ಪಾವತಿಸಿ ಮನೆಗೆ ತೆರಳುತ್ತೇನೆ. ಕಂಪನಿಗೆ ಕರೆ ಮಾಡಿ ಮಾಹಿತಿ ನೀಡಿರುವೆ. ನೀವು ವಾಹನ ತೆಗೆದುಕೊಂಡು ಕಂಪನಿಗೆ ತೆರಳಿ’ ಎಂದು ತಿಳಿಸಿದ್ದ. ಇದನ್ನು ನಂಬಿದ್ದ ಇಬ್ಬರು ತೆರಳಿದ್ದರು. ಕಚೇರಿಯಲ್ಲಿ ವಿಚಾರಿಸಿದಾಗ ಸುಮನ್ ಸುಳ್ಳು ಹೇಳಿ ಪರಾರಿ ಆಗಿರುವುದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಪುಸ್ತಕ ಬಿಡುಗಡೆ

ನಗರದ ಬಿ.ಪಿ. ವಾಡಿಯಾ ಸಭಾಂಗಣದಲ್ಲಿ ಅಮೃತ ಪ್ರಕಾಶನ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜ್ಯೋತಿ ಎಸ್ ಅವರ ‘ಜರ್ನಿ ಆಫ್ ಜ್ಯೋತಿ’ ಪುಸ್ತಕವನ್ನು ಭಾನುವಾರ ಬಿಡುಗಡೆ ಮಾಡಲಾಯಿತು. (ಎಡದಿಂದ) ಪತ್ರಕರ್ತೆ ಶ್ರೀದೇವಿ ಕಳಸದ, ವಿಜಯಾ ಕಳ್ಳಿಮಠ, ಲೇಖಕ ಚಂದ್ರಶೇಖರ ಆಲೂರು, ಪ್ರಾಧ್ಯಾಪಕ ವಿ.ಎಸ್. ನಾಯಕ ಬಳಕೂರು ಭಾಗವಹಿಸಿದ್ದರು

–ಪ್ರಜಾವಾಣಿ ಚಿತ್ರ

ಟೆಕಿಗೆ ₹12 ಲಕ್ಷ ವಂಚನೆ

ತುಮಕೂರು: ಟ್ರೇಡ್ ಮಾರ್ಕೆಟಿಂಗ್‌ನಲ್ಲಿ ಹಣ ಹೂಡಿಕೆ ಮಾಡಿ ಹೆಚ್ಚಿನ ಲಾಭ ಗಳಿಸಬಹುದು ಎಂದು ನಂಬಿಸಿ ಸ್ವಾತಿ ಡಿ.ಬರಗೂರು ಎಂಬುವರಿಗೆ ₹12 ಲಕ್ಷ ವಂಚಿಸಲಾಗಿದೆ.

ನಗರದ ಬಟವಾಡಿಯ ನಿವಾಸಿಯಾದ ಸ್ವಾತಿ ಸಾಫ್ಟ್‌ವೇರ್ ಎಂಜಿನಿಯರ್. ವಾಟ್ಸ್ ಆ್ಯಪ್ ಮುಖಾಂತರ ಮೆಸೇಜ್ ಮಾಡಿದ ಸೈಬರ್ ಕಳ್ಳರು ಟ್ರೇಡ್ ಮಾರ್ಕೆಟಿಂಗ್‌ನ ಲಿಂಕ್ ಕಳುಹಿಸಿದ್ದಾರೆ. ಪ್ರತ್ಯೇಕ ವಾಟ್ಸ್ ಆ್ಯಪ್ ಗ್ರೂಪ್‌ಗೆ ಸ್ವಾತಿ ಅವರನ್ನು ಸೇರಿಸಿದ್ದಾರೆ. ನಂತರ ಮಾರ್ಕೆಟಿಂಗ್‌ನಲ್ಲಿ ಹೂಡಿಕೆ ಮಾಡಲು ಪ್ರೇರೇಪಿಸಿದ್ದಾರೆ.

ಸ್ವಾತಿ ಗೂಗಲ್ ಪೇ ಮುಖಾಂತರ ಒಟ್ಟು ₹12,05,500 ಹಣ ಹೂಡಿಕೆ ಮಾಡಿದ್ದಾರೆ. ಆದರೆ ಅವರಿಗೆ ಲಾಭ ಅಥವಾ ಹೂಡಿಕೆ ಮಾಡಿದ ಹಣ ವಾಪಸ್ ಹಾಕಿಲ್ಲ.

ಮದುವೆಗೆ ನಿರಾಕರಿಸಿದ್ದಕ್ಕೆ ಪ್ರೇಯಸಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ 5ನೇ ಬ್ಲಾಕ್‌ನ ಚಂದ್ರಗುಪ್ತ ಆಟದ ಮೈದಾನದ ಬಳಿ ಮಹಿಳೆಯೊಬ್ಬರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ಪಶ್ಚಿಮ ಬಂಗಾಳದ ಕೋಲ್ಕತ್ತದ ನಿವಾಸಿ ಫರೀದಾ ಖಾತೂನ್(42) ಕೊಲೆಯಾದ ಮಹಿಳೆ. ಆರೋಪಿ ಎನ್.ಎಲ್.ಗಿರೀಶ್ ಅಲಿಯಾಸ್ ರೆಹಾನ್ ಅಹಮದ್ (35) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಫರೀದಾ ಖಾತೂನ್ ಅವರ ಪತಿ ಕೆಲವು ವರ್ಷಗಳ ಹಿಂದೆ ನಿಧನರಾಗಿ-ದ್ದಾರೆ. ಈಕೆಗೆ ಇಬ್ಬರು ಮಕ್ಕಳಿದ್ದಾರೆ. 2022ರಲ್ಲಿ ಕೋಲ್ಕತ್ತದಿಂದ ನಗರಕ್ಕೆ ಬಂದು ನೆಲೆಸಿದ್ದರು. ನಗರದಲ್ಲಿ ಗಿರೀಶ್ ಪರಿಚಯವಾದ ಮೇಲೆ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಹಿಂದೂ ಧರ್ಮದಿಂದ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡಿದ್ದ ಗಿರೀಶ್, ತನ್ನ ಹೆಸರನ್ನು ರೆಹಾನ್ ಅಹಮದ್ ಎಂದು ಬದಲಿಸಿಕೊಂಡು ನಗರದಲ್ಲಿ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಫರೀದಾ ಖಾತೂನ್ ಜಯನಗರದ ಸ್ಪಾದಲ್ಲಿ ಕೆಲಸ ಮಾಡುತ್ತಿದ್ದಳು’ ಎಂದು ಪೊಲೀಸರು ಹೇಳಿದರು.

‘ಮಾರ್ಚ್ 3ರಂದು ಕಾರ್ಯನಿಮಿತ್ತ ಕೋಲ್ಕತ್ತಗೆ ತೆರಳಿದ್ದ ಫರೀದಾ, ಮಾರ್ಚ್ 29ರಂದು ವಾಪಸ್ ಬಂದಿದ್ದರು. ಅದೇ ದಿನ ಗಿರೀಶ್‌ನ ಹುಟ್ಟುಹಬ್ಬದ ನಿಮಿತ್ತ ಜಯನಗರದಲ್ಲಿ ಓಯೋ ರೂಂ ಪಡೆದುಕೊಂಡು ವಾಸ್ತವ್ಯ ಮಾಡಿದ್ದರು. ಮರುದಿವಸ ನಗರದ ಹಲವು ಸ್ಥಳಕ್ಕೆ ಭೇಟಿ ನೀಡಿದ್ದರು. ಅದೇ ವೇಳೆ ಆರೋಪಿ ಫರೀದಾಳನ್ನು ಮದುವೆ ಆಗುವಂತೆ ಒತ್ತಾಯಿಸಿದ್ದ. ಅದನ್ನು ಆಕೆ ನಿರಾಕರಿಸಿದ್ದಳು. ಆಕೆಯನ್ನು ಅಲ್ಲಿಯೇ ಬಿಟ್ಟು ಮನೆಗೆ ತೆರಳಿದ್ದ.’

‘ಶನಿವಾರ ವಾಪಸ್ ರೂಂಗೆ ಬಂದು ಆಕೆಯನ್ನು ಹೋಟೆಲ್‌ಗೆ ಕರೆದೊಯ್ದು ಬೆಳಿಗ್ಗೆ ಇಬ್ಬರೂ ತಿಂಡಿ ಮಾಡಿದ್ದರು. ಮಧ್ಯಾಹ್ನವೂ ಹೋಟೆಲ್‌ನಲ್ಲಿ ಊಟ ಮಾಡಿ, ಜಯನಗರ, ಜೆ.ಪಿ.ನಗರದ ಉದ್ಯಾನಗಳಲ್ಲಿ ಸುತ್ತಾಡಿದ್ದರು. ಸಂಜೆ 7 ಗಂಟೆ ಸುಮಾರಿಗೆ ಜಯನಗರದ ಚಂದ್ರಗುಪ್ತ ಉದ್ಯಾನದ ಬಳಿ ಬಂದಾಗ ಮತ್ತೆ ಮದುವೆ ಆಗುವಂತೆ ಒತ್ತಾಯಿಸಿದ್ದ. ಆಗಲೂ ನಿರಾಕರಣೆ ಮಾಡಿದ್ದಕ್ಕೆ ಚಾಕುವಿನಿಂದ ಆಕೆಯ ಕತ್ತು ಕೊಯ್ದು ಕೊಲೆ ಮಾಡಿದ್ದಾನೆ. ಬಳಿಕ ಆತನೇ ಚಾಕು ಸಮೇತ ಠಾಣೆಗೆ ಬಂದು ಶರಣಾಗಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಪ್ಪಲಿ ಸ್ಟ್ಯಾಂಡ್ ವಿಚಾರಕ್ಕೆ ಗಲಾಟೆ

ಅಪರಾಧ ಸುದ್ದಿ

ಬೆಂಗಳೂರು: ಮನೆ ಎದುರು ಚಪ್ಪಲಿ ಸ್ಟ್ಯಾಂಡ್ ಇರಿಸುವ ವಿಚಾರಕ್ಕೆ ಅಕ್ಕಪಕ್ಕದ ಮನೆಯವರ ನಡುವೆ ಆರಂಭವಾದ ಗಲಾಟೆ ಪೊಲೀಸ್ ಠಾಣಾ ಮೆಟ್ಟಿಲೇರಿದೆ.

ಪ್ರಣಬ್ ಜ್ಯೋತಿ ಸಿಂಗ್ ಹಾಗೂ ನೇಹಾ ದಂಪತಿ ವಿರುದ್ಧ ಮಂಜುನಾಥ್ ಹಾಗೂ ಸರಿತಾ ದಂಪತಿ ಬೊಮ್ಮನಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ದೂರು ಸ್ವೀಕರಿಸಿರುವ ಪೊಲೀಸರು ಎನ್‌ಸಿಆರ್ ದಾಖಲಿಸಿದ್ದಾರೆ.

‘ಮನೆಯ ಎದುರು ಪ್ರಣಬ್ ಹಾಗೂ ನೇಹಾ ದಂಪತಿ ನೆಲೆಸಿದ್ದು ನಮ್ಮನ್ನು ಮನೆ ಬಿಟ್ಟು ಓಡಿಸುವ ಸಲುವಾಗಿ ಬೆದರಿಕೆ ಹಾಕುತ್ತಿದ್ದಾರೆ. ಅಲ್ಲದೇ ಮಾನಸಿಕ ಹಿಂಸೆ ನೀಡುತ್ತಿದ್ದಾರೆ’ ಎಂದು ಕೋಡಿಚಿಕ್ಕನಹಳ್ಳಿ ಚೈತನ್ಯ ಪ್ಯಾರಡೈಸ್ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿರುವ ಎನ್.ಬಿ.ಮಂಜುನಾಥ್ ಅವರು ನೀಡಿರುವ ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಇದೇ ವಿಚಾರವಾಗಿ ಠಾಣೆಗೆ ಎರಡು ಬಾರಿ ದೂರು ನೀಡಿದ್ದೇನೆ. ಮಾರ್ಚ್ 27ರಂದು ರಾತ್ರಿ 9 ಗಂಟೆ ಸುಮಾರಿಗೆ ಮನೆ ಎದುರು ಹಾಕಲಾಗಿದ್ದ ರಂಗೋಲಿಯನ್ನು ಅಳಿಸಿ ಹಾಕಿದ್ದಾರೆ. ಚಪ್ಪಲಿ ಸ್ಟ್ಯಾಂಡ್ ಅನ್ನು ಕಾಲಿನಿಂದ ಒದ್ದು ಬೀಳಿಸಿದ್ದಾರೆ. ಆದರೂ ನಾವು ಸುಮ್ಮನಿದ್ದೆವು. ಪದೇ ಪದೇ ನಮಗೆ ತೊಂದರೆ ನೀಡುತ್ತಿದ್ದಾರೆ’ ಎಂದು ದೂರಿನಲ್ಲಿ ಹೇಳಿದ್ದಾರೆ.

ಎಎಸ್‌ಐಗೆ ಬಾಟಲಿಯಿಂದ ಚುಚ್ಚಿದ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆಸ್ತಿ ವಿವಾದದ ಪ್ರಕರಣದಲ್ಲಿ ಪೊಲೀಸರು ತನಗೆ ಸಹಾಯ ಮಾಡಲಿಲ್ಲ’ ಎಂದು ಆರೋಪಿಸಿ, ಮಹಿಳೆಯೊಬ್ಬರು ಕರ್ತವ್ಯ-ನಿರತ ಎಎಸ್ಐ ಒಬ್ಬರಿಗೆ ಬಾಟಲಿಯಿಂದ ಚುಚ್ಚಿ ಗಾಯಗೊಳಿಸಿದ್ದಾರೆ.

ಗಂಗಮ್ಮನಗುಡಿ ಪೊಲೀಸ್ ಠಾಣೆಯ ಎಎಸ್ಐ ನಾಗರಾಜು ಗಾಯಗೊಂಡಿದ್ದಾರೆ. ನಾಗರಾಜು ಅವರ ಬಲಗೈಗೆ ಗಾಯವಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ಹಲ್ಲೆ ನಡೆಸಿದ ಅಬ್ಬಿಗೆರೆ ನಿವಾಸಿ ಅಶ್ವಿನಿ ಎಂಬಾಕೆಯನ್ನು ಪೊಲೀಸರು ವಶಕ್ಕೆ ಪಡೆದುಕೊಂಡು ವಿಚಾರಣೆ ನಡೆಸಿದರು.

‘ಅಶ್ವಿನಿ ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದು ಅವರನ್ನು ಚಿಕಿತ್ಸೆಗಾಗಿ ನಿಮ್ಹಾನ್ಸ್‌ಗೆ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಅಶ್ವಿನಿ ಪತಿಯಿಂದ ಪ್ರತ್ಯೇಕವಾಗಿ ವಾಸವಿದ್ದಾರೆ. ಸಹೋದರನ ಜತೆಗೆ ಆಸ್ತಿ ವಿವಾದ ಇದೆ. ಹತ್ತು ವರ್ಷಗಳಿಂದ ಆಕೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆಸ್ತಿ ವಿವಾದದ ಸಂಬಂಧ ದೂರು ನೀಡಲು ಶನಿವಾರ ಬೆಳಿಗ್ಗೆ ಪೊಲೀಸ್ ಠಾಣೆಗೆ ಬಂದಿದ್ದರು. ಆಗ ದೂರು ಆಲಿಸಿದ ಪೊಲೀಸರು ಪರಿಶೀಲಿಸುವುದಾಗಿ ಹೇಳಿದರು. ಆಗ ಕುಪಿತಗೊಂಡು ಅಶ್ವಿನಿ, ತನ್ನ ಬಳಿಯಿದ್ದ ಗಾಜಿನ ಬಾಟಲಿಯನ್ನು ಒಡೆದು ಎಎಸ್ಐ ಅವರ ಬಲಗೈಗೆ ಚುಚ್ಚಿದ್ದಾರೆ. ಅಷ್ಟರಲ್ಲಿ ಠಾಣಾ ಸಿಬ್ಬಂದಿ ಆಕೆಯನ್ನು ಹಿಡಿದು-ಕೊಂಡಿದ್ದಾರೆ. ಗಾಯಗೊಂಡಿದ್ದ ಎಎಸ್ಐ ನಾಗರಾಜು ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು’ ಎಂದು ಮೂಲಗಳು ಹೇಳಿವೆ.

ವ್ಹೀಲಿ ಪುಂಡರಿಗೆ ಪೊಲೀಸ್ ಬಿಸಿ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಬಿಡದಿಯ ಬೆಂಗಳೂರು–ಮೈಸೂರು ಹಳೆ ಹೆದ್ದಾರಿಯಲ್ಲಿ ಮಧ್ಯರಾತ್ರಿ ಮತ್ತು ನಸುಕಿನಲ್ಲಿ ಸ್ಕೂಟರ್ ವ್ಹೀಲಿ ಮಾಡುತ್ತಿದ್ದ ನಾಲ್ವರು ಪುಂಡರಿಗೆ ಬಿಸಿ ಮುಟ್ಟಿಸಿರುವ ಬಿಡದಿ ಠಾಣೆ ಪೊಲೀಸರು, ಒಬ್ಬೊಬ್ಬರ ವಿರುದ್ಧವೂ ಪ್ರತ್ಯೇಕವಾಗಿ ಪ್ರಕರಣ ದಾಖಲಿಸಿದ್ದಾರೆ.

ಬೆಂಗಳೂರಿನ ಗವಿಪುರಂ ಗುಟ್ಟಹಳ್ಳಿಯ ತರುಣ್‌ಕುಮಾರ್, ಹನು-ಮಂತನಗರದ ವರುಣ್‌ಕುಮಾರ್, ಶ್ರೀನಿವಾಸನಗರದ ಧನುಷ್ ಹಾಗೂ ತ್ಯಾಗರಾಜನಗರದ ಪವನ್‌ಕುಮಾರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಮಾರ್ಚ್ 28ರಂದು ರಾತ್ರಿ 1 ಗಂಟೆಯಿಂದ 2.45ರ ಅವಧಿಯಲ್ಲಿ ಬಿಡದಿಯ ಬೆಂಗಳೂರು–ಮೈಸೂರು ಹಳೆ ಹೆದ್ದಾರಿಯಲ್ಲಿ ಸ್ಕೂಟರ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದರು. ಇದನ್ನು ಗಮನಿಸಿದ ರಾತ್ರಿ ಗಸ್ತು ಸಿಬ್ಬಂದಿ ಯುವಕರನ್ನು ಹಿಂಬಾಲಿಸಿ ನಾಲ್ವರನ್ನು ಸ್ಕೂಟರ್ ಸಮೇತ ವಶಕ್ಕೆ ಪಡೆದಿದ್ದಾರೆ.

ಚಾಲನಾ ಪರವಾನಗಿ ಹೊಂದಿಲ್ಲದ ಯುವಕರು, ಹೆಲ್ಮೆಟ್ ಧರಿಸದೆ ಅಜಾಗ – ರೂಕತೆಯಿಂದ ಸವಾರಿ ಮಾಡುವ ಜೊತೆಗೆ ವ್ಹೀಲಿಂಗ್ ಮಾಡುತ್ತಿದ್ದರು. ಸ್ನೇಹಿತರಾಗಿರುವ ಅವರನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು ಸ್ಕೂಟರ್‌ಗಳನ್ನು ಜಪ್ತಿ ಮಾಡಲಾಗಿದೆ. ಸಣ್ಣಪುಟ್ಟ ಕೆಲಸ ಮಾಡುತ್ತಿರುವ ಯುವಕರು ಮೋಜಿಗಾಗಿ ವ್ಹೀಲಿಂಗ್ ಮಾಡುತ್ತಿದ್ದಾಗಿ ಹೇಳಿದ್ದಾರೆ ಎಂದು ಬಿಡದಿ ಠಾಣೆ ಪೊಲೀಸರು ತಿಳಿಸಿದರು.

ಬೆಂಕಿ ಆಕಸ್ಮಿಕ: ಹುಲ್ಲುಗಾವಲು ಭಸ್ಮ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವೈಟ್‌ಫೀಲ್ಡ್ ಸಮೀಪದ ಕಾಡುಗೋಡಿ ಮೀಸಲು ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಕಾನ್ ಕಾರ್ಡ್ ಸಂಸ್ಥೆಯ ಜಾಗದಲ್ಲಿ ಭಾನುವಾರ ಬೆಂಕಿ ಆಕಸ್ಮಿಕ ಸಂಭವಿಸಿ, ಹುಲ್ಲುಗಾವಲು ಬೆಂಕಿಗೆ ಆಹುತಿಯಾಗಿದೆ.

ಮಧ್ಯಾಹ್ನದ ವೇಳೆಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಬಿಸಿಲು ಹಾಗೂ ಗಾಳಿಯ ರಭಸಕ್ಕೆ ಬೆಂಕಿ ವ್ಯಾಪಿಸು-ತ್ತಿತ್ತು. ಅಷ್ಟರಲ್ಲಿ ಮಾಹಿತಿ ತಿಳಿದು ಸ್ಥಳಕ್ಕೆ ಬಂದ ಅಗ್ನಿ ಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಲು ಯಶಸ್ವಿಯಾದರು. ಯಾವುದೇ ಅಪಾಯ ಸಂಭವಿಸಿಲ್ಲ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಒಂದು ಎಕರೆಯಷ್ಟು ಹುಲ್ಲುಗಾವಲು ಹಾಗೂ ಸಣ್ಣಪುಟ್ಟ ಮರಗಳು ಸುಟ್ಟಿವೆ. ಬೆಂಕಿಯು ಅರಣ್ಯ ಪ್ರದೇಶಕ್ಕೆ ಆವರಿಸದಂತೆ ಅರಣ್ಯ ಸಿಬ್ಬಂದಿ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಎಚ್ಚರಿಕೆ ವಹಿಸಿ ಹತೋಟಿಗೆ ತಂದರು. ಕಾರ್ಯಾ-ಚರಣೆಯಲ್ಲಿ ಅಗ್ನಿಶಾಮಕ ದಳದ ಎರಡು ವಾಹನಗಳು ಭಾಗವಹಿಸಿದ್ದವು ಎಂದು ವಲಯ ಅರಣ್ಯಾಧಿಕಾರಿ ರಘು ತಿಳಿಸಿದ್ದಾರೆ.

‘ಸಂಸ್ಥೆ ಆವರಣದಲ್ಲಿ ತ್ಯಾಜ್ಯ ಸುರಿಯಲಾಗಿತ್ತು. ಅದನ್ನು ಸುಡಲು ಹಾಕಿದ್ದ ಬೆಂಕಿ ಹುಲ್ಲುಗಾವಲಿಗೆ ತಗುಲಿರುವ ಶಂಕೆ ವ್ಯಕ್ತವಾಗಿದೆ. ದಟ್ಟ ಹೊಗೆ ಆವರಿಸಿದ್ದ ಕಾರಣಕ್ಕೆ ಆತಂಕ ಸೃಷ್ಟಿಯಾಗಿತ್ತು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಕಿ ಅವಘಡದಿಂದ ಆವರಿಸಿದ್ದ ದಟ್ಟ ಹೊಗೆ.

ದೇಣಿಗೆ ಪತ್ತೆಗೆ ಬಾಂಡ್ ಸಹಕಾರಿ

ತಮಿಳು ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಪ್ರಧಾನಿ ಮೋದಿ ಅಭಿಮತ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ರಾಜಕೀಯ ಪಕ್ಷಗಳಿಗೆ ನೀಡುವ ದೇಣಿಗೆಗಳ ಮೂಲ ಪತ್ತೆ ಹಚ್ಚುವುದಕ್ಕೆ ಚುನಾವಣಾ ಬಾಂಡ್‌ಗಳು ನೆರವಾಗುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಪ್ರತಿಪಾದಿಸಿದ್ದಾರೆ.

ತಮಿಳು ಸುದ್ದಿವಾಹಿನಿ 'ತಂತಿ ಟಿವಿ'ಗೆ ನೀಡಿರುವ ಸಂದರ್ಶನದಲ್ಲಿ ಚುನಾವಣಾ ಬಾಂಡ್ ವಿಷಯ ಕುರಿತು ಇದೇ ಮೊದಲ ಬಾರಿಗೆ ಮಾತನಾಡಿದ್ದಾರೆ.

'ಚುನಾವಣಾ ಬಾಂಡ್ ಯೋಜನೆಯನ್ನು ಸುಪ್ರಿಂ ಕೋರ್ಟ್ ರದ್ದುಗೊಳಿಸಿರುವ ವಿಚಾರ ನನ್ನ ಸರ್ಕಾರಕ್ಕಾದ ಹಿನ್ನಡೆಯಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, 'ಯಾವ ವ್ಯವಸ್ಥೆಯೂ ಪರಿಪೂರ್ಣವಲ್ಲ. ಕೆಲವು ನ್ಯೂನತೆಗಳು ಇರಬಹುದು. ಆದರೆ, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಇದೆ' ಎಂದು ಪ್ರತಿಪಾದಿಸಿದರು.

'ಈ ಯೋಜನೆಗೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳು ನನ್ನ ಸರ್ಕಾರಕ್ಕಾದ ಹಿನ್ನಡೆ ಎಂದು ಭಾವಿಸಲು ನಾವು ಮಾಡಿದ್ದಾದರೂ ಏನು ಹೇಳಿ' ಎಂದ ಅವರು, 'ಚುನಾವಣಾ ಬಾಂಡ್‌ಗಳ ವಿವರಗಳು ಬಹಿರಂಗೊಂಡ ನಂತರ 'ಕುಣಿಯುತ್ತಿರುವವರು' ಹಾಗೂ ಬೀಗುತ್ತಿರುವವರು ಪಶ್ಚಾತ್ತಾಪ ಪಡಲಿದ್ದಾರೆ' ಎಂದರು.

ಚುನಾವಣಾ ಬಾಂಡ್ ಯೋಜನೆ ಜಾರಿಗೊಳಿಸಿದ್ದನ್ನು ಸಮರ್ಥಿಸಿಕೊಂಡ ಮೋದಿ, '2014ಕ್ಕೂ ಮುಂಚೆ ರಾಜಕೀಯ ಪಕ್ಷಗಳಿಗೆ ನೀಡಲಾಗುತ್ತಿದ್ದ ದೇಣಿಗೆಯ ಮೂಲ ಗೊತ್ತಾಗುತ್ತಿರಲಿಲ್ಲ. ಚುನಾವಣಾ ಬಾಂಡ್‌ಗಳಿಂದ ಇದು ಈಗ ಸಾಧ್ಯವಾಗಿದೆ' ಎಂದರು.

'2014ಕ್ಕೂ ಮುಂಚೆ ರಾಜಕೀಯ ಪಕ್ಷಗಳಿಗೆ ನೀಡಲಾಗುತ್ತಿದ್ದ ದೇಣಿಗೆಗಳ ಮೂಲಗಳ ಬಗ್ಗೆ ಯಾವುದಾದರೂ ಸಂಸ್ಥೆ ಮಾಹಿತಿ ನೀಡಲು ಸಾಧ್ಯವೇ' ಎಂದು ಅವರು ಪ್ರಶ್ನಿಸಿದರು.

'ಬಿಜೆಪಿ ಸಖ್ಯ ತೊರೆದಿದ್ದಕ್ಕೆ ಎಐಎಡಿಎಂಕೆ ವಿಷಾದಿಸಬೇಕು'

'ಎನ್‌ಡಿಎ ಮೈತ್ರಿಕೂಟದಿಂದ ಹೊರನಡೆದಿದ್ದಕ್ಕೆ ಎಐಎಡಿಎಂಕೆ ವಿಷಾದ ವ್ಯಕ್ತಪಡಿಸಬೇಕೇ ಹೊರತು ಬಿಜೆಪಿ ಅಲ್ಲ' ಎಂದು ಮೋದಿ ಹೇಳಿದರು.

'ಬಿಜೆಪಿ ಜತೆಗಿನ ಸಖ್ಯ ತೊರೆದಿದ್ದಕ್ಕಾಗಿ, ದಿವಂಗತ ಜೆ.ಜಯಲಲಿತಾ ಅವರ ಕನಸುಗಳನ್ನು ನುಚ್ಚುನೂರು ಮಾಡಿದವರು ಚಿಂತಿತರಾಗಬೇಕು' ಎಂದು ಎಐಎಡಿಎಂಕೆ ವಿರುದ್ಧ ಟೀಕಾಪ್ರಹಾರ ನಡೆಸಿದರು.

'ನಗರ ಸ್ಥಳೀಯ ಸಂಸ್ಥೆಯಲ್ಲಿ ಒಂದೇ ಒಂದು ಸ್ಥಾನ ಹೊಂದಿರದಿದ್ದರೂ, ತಮಿಳುನಾಡಿನ ಅಭಿವೃದ್ಧಿಗಾಗಿ ಬಿಜೆಪಿ ಶ್ರಮಿಸಿದೆ. ಈ ನಿಟ್ಟಿನಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಉತ್ತಮ ಕೆಲಸ ಮಾಡುತ್ತಿದ್ದು, ಯುವ ಜನರು ಅವರತ್ತ ಆಕರ್ಷಿತರಾಗುತ್ತಿದ್ದಾರೆ' ಎಂದರು.

'ಅಣ್ಣಾಮಲೈ ಕುರಿತು ಯುವ ಜನತೆಗೆ ಸದಭಿಪ್ರಾಯ ಇದೆ. ಹಣ ಗಳಿಕೆ ಮತ್ತು ಭ್ರಷ್ಟಾಚಾರವೇ ಅಣ್ಣಾಮಲೈಗೆ ಮುಖ್ಯವಾಗಿದ್ದರೆ ಅವರು ಡಿಎಂಕೆ ಸೇರುತ್ತಿದ್ದರು ಎಂಬ ಅನಿಸಿಕೆಯನ್ನು ಜನರು ವ್ಯಕ್ತಪಡಿಸುತ್ತಿದ್ದಾರೆ. ವೈಯಕ್ತಿಕ ಲಾಭಕ್ಕಾಗಿ ಅವರು ಬಿಜೆಪಿ ಸೇರಿಲ್ಲ. ರಾಷ್ಟ್ರೀಯ ಹಿತಾಸಕ್ತಿ ಹಾಗೂ ತಮಿಳುನಾಡು ಅಭಿವೃದ್ಧಿಯೇ ಅವರಿಗೆ ಮುಖ್ಯ' ಎಂದು ಹೇಳಿದರು.

'ತಮಿಳು ಭಾಷೆ ವಿಚಾರವನ್ನು ರಾಜಕೀಯಗೊಳಿಸುವುದು ತಮಿಳುನಾಡಿಗೆ ಮಾತ್ರವಲ್ಲ, ದೇಶಕ್ಕೆ ಅಪಾಯಕಾರಿ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಒಡಿಸ್ಸಿ ನೃತ್ಯ

'ಅನ್ ಬಾಕ್ಸಿಂಗ್ ಬೆಂಗಳೂರು ಹಬ್ಬ'ದ ಭಾಗವಾಗಿ ನ್ಯಾಷನಲ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್ (ಎನ್‌ಸಿಪಿಎ) ಹಾಗೂ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ) ಸಹಯೋಗದಲ್ಲಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ರತಿಕಾಂತ್ ಮಹಾಪಾತ್ರ ತಂಡದವರು ಒಡಿಸ್ಸಿ ನೃತ್ಯ ಪ್ರದರ್ಶಿಸಿದರು

-ಪ್ರಜಾವಾಣಿ ಚಿತ್ರ

ಅನುದಾನಕ್ಕಾಗಿ ಪರದಾಟ: ಸಂಸದ

ವಿಜಯಪುರ (ದೇವನಹಳ್ಳಿ): 'ಬಿಜೆಪಿ ಸಂಸದನಾಗಿದ್ದರೂ ಕೇಂದ್ರದಿಂದ ಕ್ಷೇತ್ರಕ್ಕೆ ಅನುದಾನ ತರಲು 5 ವರ್ಷದಲ್ಲಿ ತುಂಬಾ ಕಷ್ಟಪಡಬೇಕಾಯಿತು. ಪರಿಶ್ರಮದಿಂದ ಅನುದಾನ ತಂದು ಕ್ಷೇತ್ರದಲ್ಲಿ ಕೆಲಸ ಮಾಡಬೇಕಾಯಿತು' ಎಂದು ಹಿರಿಯ ರಾಜಕಾರಣಿ ಬಿ.ಎನ್.ಬಚ್ಚೇಗೌಡ ಹೇಳಿದ್ದಾರೆ.

ಪಟ್ಟಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಮತ್ತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚಾಗಿದ್ದು, ಇದೇ ಪರಿಸ್ಥಿತಿ ಮುಂದುವರಿದರೆ ಯುವಕರ ಸ್ಥಿತಿ ಏನಾಗಲಿದೆ ಎನ್ನುವ ಆತಂಕ ಕಾಡುತ್ತಿದೆ. 62 ಸ್ಥಾನಗಳಿಗೆ ಅರ್ಜಿ ಆಹ್ವಾನಿಸಿದರೆ 70 ಸಾವಿರ ಅರ್ಜಿ ಬರುತ್ತವೆ ಎಂದು ಕಳವಳ ವ್ಯಕ್ತಪಡಿಸಿದರು.

'ಕಾಂಗ್ರೆಸ್‌ಗೆ ಗಂಡಸರು ಸಿಗಲಿಲ್ಲವೇ?'

ಜೆಡಿಎಸ್–ಬಿಜೆಪಿ ಸಮನ್ವಯ ಸಮಿತಿ ಸಭೆಯಲ್ಲಿ ಸಮೃದ್ಧಿ ಮಂಜುನಾಥ್ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಸಿದ್ದರಾಮಯ್ಯಗೆ ತಕ್ಕ ಉತ್ತರ ನೀಡಿ: ಮುನಿಸ್ವಾಮಿ
- ಸ್ಥಳೀಯ ಅಭ್ಯರ್ಥಿ ಬೇಕಾ? ಬೆಂಗಳೂರಿನವರು ಬೇಕಾ ಎಂದು ಪ್ರಶ್ನೆ
- ಕಾಂಗ್ರೆಸ್ ಸರಿ ಇದ್ದರೆ ಜೆಡಿಎಸ್, ಬಿಜೆಪಿ ಬೇಕಿರಲಿಲ್ಲ: ಛಲವಾದಿ

ಕೋಲಾರ: 'ಕಾಂಗ್ರೆಸ್ ಪಕ್ಷದವರು ಕೋಲಾರ ಮೀಸಲು ಕ್ಷೇತ್ರಕ್ಕೆ ಬೆಂಗಳೂರಿನಿಂದ ಅಭ್ಯರ್ಥಿ ಕರೆ ತಂದಿದ್ದಾರೆ. ಆ ಪಕ್ಷದವರಿಗೆ ಕ್ಷೇತ್ರದಲ್ಲಿ ಯಾರೂ ಗಂಡಸರು ಸಿಗಲಿಲ್ಲವೇ' ಎಂದು ಜೆಡಿಎಸ್ ಶಾಸಕ ಸಮೃದ್ಧಿ ಮಂಜುನಾಥ್ ಪ್ರಶ್ನಿಸಿದರು.

ನಗರದಲ್ಲಿ ಭಾನುವಾರ ನಡೆದ ಜೆಡಿಎಸ್-ಬಿಜೆಪಿ ಸಮನ್ವಯ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

'ಕ್ಷೇತ್ರದಲ್ಲಿ ಜೆಡಿಎಸ್‌ಗೆ ನಾನು, ಮಲ್ಲೇಶ್ ಬಾಬು ಹಾಗೂ ನಿಸರ್ಗ ನಾರಾಯಣಸ್ವಾಮಿ ಸೇರಿದಂತೆ ಮೂವರು ಅಭ್ಯರ್ಥಿಗಳು ಇದ್ದೆವು. ಆದರೆ, ಕಾಂಗ್ರೆಸ್‌ನವರು ಅಭ್ಯರ್ಥಿ ಹುಡುಕಲು ಪರದಾಡಿದರು. ತಿಂಗಳಿನಿಂದ ಜಗಳ ಮಾಡಿಕೊಂಡು ರಾಷ್ಟ್ರಮಟ್ಟದಲ್ಲಿ ಕೋಲಾರದ ಮರ್ಯಾದೆ ತೆಗೆದರು. ಕೊನೆಗೂ ಅವರಿಗೆ ಸ್ಥಳೀಯ ಅಭ್ಯರ್ಥಿ ಸಿಗಲೇ ಇಲ್ಲ' ಎಂದು ಲೇವಡಿ ಮಾಡಿದರು.

'ಸ್ಥಳೀಯ ಅಭ್ಯರ್ಥಿ ಮಲ್ಲೇಶ್ ಬಾಬು ಬೇಕಾ? ಬೆಂಗಳೂರಿನಿಂದ ಬಂದಿರುವ ಗೌತಮ್ ಬೇಕಾ' ಎಂದು ಪ್ರಶ್ನಿಸಿದ ಅವರು, 'ಕಾಂಗ್ರೆಸ್ ಅಭ್ಯರ್ಥಿ ಬೆಂಬಲಿಸಿದರೆ ವ್ಯರ್ಥವಾಗುತ್ತದೆ. ದೇಶಕ್ಕೆ ಮೋದಿ ಬೇಕು, ರಾಜ್ಯಕ್ಕೆ ಕುಮಾರಸ್ವಾಮಿ ಬೇಕು' ಎಂದು ನುಡಿದರು.

ಸಂಸದ ಎಸ್.ಮುನಿಸ್ವಾಮಿ ಮಾತನಾಡಿ, 'ರಾಜ್ಯದಲ್ಲಿ ಜೆಡಿಎಸ್ ಎಲ್ಲಿದೆ ಎಂದು ಪ್ರಶ್ನಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮತದಾರರು ತಕ್ಕ ಉತ್ತರ ನೀಡಬೇಕು. ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಇಲ್ಲದಿದ್ದರೆ ಸಿದ್ದರಾಮಯ್ಯ ಯಾರೆಂಬುದೇ ಗೊತ್ತಾಗುತ್ತಿರಲಿಲ್ಲ' ಎಂದು ಲೇವಡಿ ಮಾಡಿದರು.

'ನಾನು ಈ ಬಾರಿ ಅಭ್ಯರ್ಥಿ ಅಲ್ಲದಿದ್ದರೂ ಜೊತೆಗಿರುತ್ತೇನೆ. ವರ್ತೂರು ಪ್ರಕಾಶ್ ಕೂಡ ಕ್ಷೇತ್ರದಲ್ಲಿ ಇದ್ದು ಕೆಲಸ ಮಾಡಬೇಕು. ನನ್ನನ್ನು ಗೆಲ್ಲಿಸಿದ್ದಕ್ಕೆ ಋಣ ತೀರಿಸಲು ಬಾಕಿ ಇದೆ. ಮೋದಿ ಅವರನ್ನು ಮೂರನೇ ಬಾರಿ ಪ್ರಧಾನಿಯಾಗಿಸಬೇಕು. ರಾಜ್ಯದಲ್ಲಿ ಭ್ರಷ್ಟ ಕಾಂಗ್ರೆಸ್ ತೊಲಗಿಸಬೇಕು' ಎಂದರು.

ಕೋಲಾರದಲ್ಲಿ ಭಾನುವಾರ ಜೆಡಿಎಸ್–ಬಿಜೆಪಿ ಸಮನ್ವಯ ಸಮಿತಿ ಸಭೆಯಲ್ಲಿ ಶಾಸಕ ಸಮೃದ್ಧಿ ಮಂಜುನಾಥ್ ಮಾತನಾಡಿದರು

ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, '65 ವರ್ಷ ದೇಶ ಆಳಿದ್ದು ಕಾಂಗ್ರೆಸ್. ಸಂವಿಧಾನವನ್ನು ಸರಿಯಾಗಿ ಜಾರಿಗೆ ತಂದಿದ್ದರೆ, ಗೌರವ ಕೊಟ್ಟಿದ್ದರೆ ಈ ದೇಶಕ್ಕೆ ಬಿಜೆಪಿ, ಜೆಡಿಎಸ್ ಬೇಕಿರಲಿಲ್ಲ. ಆದರೆ, ಭ್ರಷ್ಟಾಚಾರದಲ್ಲಿ ತೊಡಗಿಸಿಕೊಂಡರು. ಮೋದಿ ಕಳೆದ 10 ವರ್ಷಗಳಿಂದ ಭ್ರಷ್ಟಾಚಾರ ರಹಿತವಾಗಿ ಆಡಳಿತ ನಡೆಸಿದ ಕಾರಣ ಮತ್ತೆ ಅಧಿಕಾರಕ್ಕೆ ಬರಬೇಕೆಂದು ಜನ ಬಯಸಿದ್ದಾರೆ' ಎಂದರು.

'ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಿದ್ದರೆ ದೇಶ ಒಡೆದು ಹೋಗುತ್ತಿತ್ತು. ನೆರೆಯ ರಾಷ್ಟ್ರಗಳಿಗೆ ಬಂದ ಪರಿಸ್ಥಿತಿ ಉಂಟಾಗುತಿತ್ತು. ಮೋದಿ ಇರುವ ಕಾರಣ ದೇಶ ಸುಭಿಕ್ಷವಾಗಿದೆ. ಈ ಬಾರಿ ಸಿದ್ದರಾಮಯ್ಯ ಅವರ ಗರ್ವಭಂಗ ಮಾಡಬೇಕೆಂದು ದೇವೇಗೌಡರು ಹೇಳಿದ್ದಾರೆ. ಅದಕ್ಕೆ ನಾವೆಲ್ಲಾ ಸಜ್ಜಾಗೋಣ' ಎಂದು ತಿಳಿಸಿದರು.

ಬೆಂಗಳೂರಿನ ಮಲ್ಲೇಶ್ವರಂನ ಸೇವಾ ಸದನದಲ್ಲಿ ಭಾನುವಾರ ಇಂಟರ್‌ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಷನ್ ಆಯೋಜಿಸಿದ್ದ 5ನೇ ಆವೃತ್ತಿಯ 'ಟ್ರಾನ್ಸ್‌ಜೆಂಡರ್ ಆರ್ಟ್ಸ್ ಫೆಸ್ಟಿವಲ್'ನಲ್ಲಿ ಕಲಾವಿದರು ನೃತ್ಯ ಪ್ರದರ್ಶನ ನೀಡಿದರು

–ಪ್ರಜಾವಾಣಿ ಚಿತ್ರ

'ಶಾಸಕರು, ಪರಾಜಿತರಿಗೆ 'ಕೇಂದ್ರ' ಕ್ಷೇತ್ರದ ಹೊಣೆ'

ಬೆಂಗಳೂರು: 'ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ಪಕ್ಷದ ಅಭ್ಯರ್ಥಿ ಮನ್ಸೂರ್ ಅಲಿ ಖಾನ್ ಪರ, ಈ ವ್ಯಾಪ್ತಿಯ ವಿಧಾನಸಭಾ ಕ್ಷೇತ್ರಗಳ ಶಾಸಕರು, ಪರಾಜಿತ ಅಭ್ಯರ್ಥಿಗಳೇ ಹೊಣೆಗಾರಿಕೆ ವಹಿಸಿಕೊಂಡು ಕೆಲಸ ಮಾಡಬೇಕು' ಎಂದು ಈ ಕ್ಷೇತ್ರದ ಕಾಂಗ್ರೆಸ್ ಚುನಾವಣಾ ಉಸ್ತುವಾರಿ ಜಮೀರ್ ಅಹಮದ್ ಖಾನ್ ಹೇಳಿದರು.

ಚುನಾವಣೆ ಹೊಣೆಗಾರಿಕೆ ಕುರಿತಂತೆ ಕ್ಷೇತ್ರ ವ್ಯಾಪ್ತಿಯ ಶಾಸಕರು ಮತ್ತು ಪರಾಜಿತ ಅಭ್ಯರ್ಥಿಗಳ ಸಭೆ ನಡೆಸಿದ ಅವರು, 'ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ನಂತರ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪೂರ್ಣ ಪ್ರಮಾಣದಲ್ಲಿ ಆಗಿದೆ. ಲೋಕಸಭೆ ಚುನಾವಣೆಯಲ್ಲಿ ಇದರಿಂದ ಪಕ್ಷಕ್ಕೆ ಸಹಾಯ ಆಗಲಿದೆ. ಈ ಬಗ್ಗೆ ಜನರ ವಿಶ್ವಾಸ ಗಳಿಸುವ ಕೆಲಸ ಮಾಡಬೇಕು' ಎಂದು ಸಲಹೆ ನೀಡಿದರು.

'ಈ ಬಾರಿ ಮನ್ಸೂರ್ ಅಲಿ ಖಾನ್ ಗೆಲ್ಲುವ ಅವಕಾಶ ಇದೆ. ಕಾಂಗ್ರೆಸ್ ಬಗ್ಗೆ ಮತದಾರರಲ್ಲಿ ವಿಶ್ವಾಸವೂ ಇದೆ. ಶಾಸಕರು ಪ್ರತಿ ಕ್ಷೇತ್ರದಲ್ಲಿ ಎಲ್ಲರನ್ನೂ ಜತೆಗೂಡಿಸಿಕೊಂಡು ಕೆಲಸ ಮಾಡಬೇಕು. ಪ್ರತಿ ಕ್ಷೇತ್ರದಲ್ಲಿಯೂ ಲೀಡ್ ಸಿಗುವಂತೆ ಕಾರ್ಯನಿರ್ವಹಿಸಬೇಕು' ಎಂದರು.

ಸಭೆಯಲ್ಲಿ ಮನ್ಸೂರ್ ಅಲಿ ಖಾನ್, ಸಚಿವ ದಿನೇಶ್ ಗುಂಡೂರಾವ್, ಶಾಸಕರಾದ ಎನ್.ಎ. ಹ್ಯಾರಿಸ್, ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ, ಮಾಜಿ ಸಚಿವ ನಾಗೇಶ್, ಆನಂದ ಬಾಬು ಇದ್ದರು.

ತಲಘಟ್ಟಪುರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ

ಟ್ಯಾಂಕ್‌ಗಳಿಗೆ ನೀರು ತುಂಬಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಘಟ್ಟಪುರ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಜನರು ನೀರಿಗಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಒಂದು ತಿಂಗಳ ಹಿಂದೆ ತಲಘಟ್ಟಪುರದಲ್ಲಿ ಬೆಂಗಳೂರು ಜಲಮಂಡಳಿಯವರು ಅಲ್ಲಲ್ಲಿ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಜೋಡಿಸಿದ್ದಾರೆ. ಆದರೆ, ಆ ಟ್ಯಾಂಕ್‌ಗಳಿಗೆ ನೀರು ತುಂಬಿಸುವ ಕೆಲಸ ಮಾತ್ರ ಮಾಡಿಲ್ಲ. ಇದರಿಂದ ನೀರಿನ ಸಮಸ್ಯೆಗಾಗಿ ಜನರು ಪರದಾಡುವಂತಾಗಿದೆ.

'ತಲಘಟ್ಟಪುರದಲ್ಲಿ ಸುಮಾರು 3 ಸಾವಿರದಿಂದ 4 ಸಾವಿರದವರೆಗೆ ಜನಸಂಖ್ಯೆ ಇದೆ. ಈ ಭಾಗಕ್ಕೆ ಕಾವೇರಿ ನೀರಿನ ಪೂರೈಕೆ ಇಲ್ಲ. ಇಲ್ಲಿನ ನಿವಾಸಿಗಳು ಕುಡಿಯುವ ನೀರಿಗಾಗಿ ಕೊಳವೆ ಬಾವಿಗಳನ್ನೇ ಆಶ್ರಯಿಸಿದ್ದಾರೆ. ತಲಘಟ್ಟಪುರ ಕೆರೆಯೂ ಬತ್ತಿ ಹೋಗುತ್ತಿದ್ದು, ಈ ಭಾಗದ ಕೊಳವೆಬಾವಿಗಳು ಬತ್ತಿ ಹೋಗುವ ಆತಂಕ ಎದುರಾಗಿದೆ' ಎಂದು ಸ್ಥಳೀಯ ನಿವಾಸಿಗಳು ಹೇಳಿದರು.

ತಲಘಟ್ಟಪುರದಲ್ಲಿ ಜಲಮಂಡಳಿ ಇಟ್ಟಿರುವ ಸಿಂಟೆಕ್ಸ್ ಟ್ಯಾಂಕ್

'ನಾಲ್ಕು ಸಾವಿರ ಜನಸಂಖ್ಯೆ ಹೊಂದಿರುವ ತಲಘಟ್ಟಪುರದಲ್ಲಿ ಎರಡು ಸಿಂಟೆಕ್ಸ್ ಟ್ಯಾಂಕ್‌ಗಳನ್ನಷ್ಟೇ ಇಟ್ಟಿದ್ದಾರೆ. ಇರುವ ಟ್ಯಾಂಕ್‌ಗಳಿಗೆ ನೀರನ್ನು ತುಂಬಿಸುತ್ತಿಲ್ಲ. ಕೇವಲ ಪ್ರಚಾರಕ್ಕಾಗಿ ಇರಿಸಿದ್ದಾರೆನೋ ಎಂಬ ಅನುಮಾನ ಮೂಡುತ್ತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ನೀರಿನ ಸಮಸ್ಯೆ ಹೆಚ್ಚಾಗಿದೆ. ಜಲಮಂಡಳಿಯವರು ಇಲ್ಲಿನ ಸಿಂಟೆಕ್ಸ್ ಟ್ಯಾಂಕ್‌ಗಳಿಗೆ ಪ್ರತಿನಿತ್ಯ ನೀರು ತುಂಬಿಸಿ ಜನ–ಜಾನವಾರುಗಳ ಜೀವ ಉಳಿಸಬೇಕು' ಎಂದು ತಲಘಟ್ಟಪುರದ ನಿವಾಸಿ ರಾ. ಜಯಸಿಂಹ ಆಗ್ರಹಿಸಿದರು.

ಶಿಕ್ಷಣ

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ
ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ
www.exammastermind.comಗೆ ಭೇಟಿ ಕೊಡಿ

ವಿದ್ಯಾರ್ಥಿಗಳೇಕೆ ದಿನಪತ್ರಿಕೆ ಓದಬೇಕು?

ರಶ್ಮಿ ಎಸ್

ಸುದ್ದಿಯನ್ನು ಓದಲಷ್ಟೇ ಅಲ್ಲ.. ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಪತ್ರಿಕೆಗಳ ಓದು ಅವಶ್ಯವಾಗಿದೆ. ಇದೇ ಕಾರಣಕ್ಕೆ ಹಲವಾರು ಅಭಿವೃದ್ಧಿಪರ ದೇಶಗಳಲ್ಲಿ ವಿದ್ಯಾರ್ಥಿಗಳಿಗೆ ದಿನಪತ್ರಿಕೆಗಳ ಓದನ್ನು ಕಡ್ಡಾಯಗೊಳಿಸಿದ್ದಾರೆ. ಮಕ್ಕಳು ಭಾವಿ ಪ್ರಜೆಗಳಾಗುವುದಷ್ಟೆ ಅಲ್ಲ, ಉತ್ತಮ ನಾಗರಿಕರಾಗಲು, ಮಾನವ ಸಂಪನ್ಮೂಲವಾಗಲು ಪತ್ರಿಕೆಗಳ ಓದು ಸಹಾಯಕವಾಗುತ್ತದೆ ಎನ್ನುವುದು ಹಲವಾರು ಶಾಲೆಗಳ ಪ್ರಾಂಶುಪಾಲರೂ ಅಭಿಪ್ರಾಯ ಪಟ್ಟಿದ್ದಾರೆ.

ಇದೇ ಕಾರಣಕ್ಕೆ ಪ್ರಜಾವಾಣಿ ಬಳಗದಿಂದ 'ಡಿಎಚ್‌ಐಇ' ಯೋಜನೆಯು ಚಾಲ್ತಿಯಲ್ಲಿದೆ. ದಿನಪತ್ರಿಕೆಯ ಓದು ವಿದ್ಯಾರ್ಥಿಗಳಲ್ಲಿ ಮತ್ತು ಓದುಗರಲ್ಲಿ ಸಕಾರಾತ್ಮಕ ಬದಲಾವಣೆ ತರುತ್ತದೆ. ಇಲ್ಲಿ ದಿನಪತ್ರಿಕೆಗಳ ಓದಿನಿಂದ ವಿದ್ಯಾರ್ಥಿಗಳಲ್ಲಿ ಕಂಡು ಬಂದಿರುವ ಬದಲಾವಣೆಗಳ ಕುರಿತು ವಿವರಿಸಲಾಗಿದೆ.

ಪ್ರಚಲಿತ ವಿದ್ಯಮಾನಗಳ ಅರಿವು: ಹದಿಹರೆಯದ ವಿದ್ಯಾರ್ಥಿಗಳಲ್ಲಿ ತಮ್ಮ ಸುತ್ತಲಿನ ಜಗತ್ತಿನಲ್ಲಿ ಏನು ನಡೆದಿದೆ ಎಂಬ ಸ್ಪಷ್ಟ ತಿಳಿವು ಮೂಡುತ್ತದೆ. ಸುಳ್ಳು ಸುದ್ದಿಗಳ ಪತ್ತೆ ಮಾಡುವುದು, ನಂಬ ಬಹುದಾದ ಸುದ್ದಿಯೇ ಎಂಬ ವಿವೇಚನೆಯೂ ಮೂಡುತ್ತದೆ. ದಿನಪತ್ರಿಕೆ ಓದುವ ಮಕ್ಕಳು, ವಾಟ್ಸ್ ಆ್ಯಪ್‌ಗಳಲ್ಲಿ ಫಾರ್ವರ್ಡ್ ಆಗುವ ಸುದ್ದಿಗಳನ್ನು ಸುಲಭವಾಗಿ ನಂಬುವುದಿಲ್ಲ.

ಅಂತರರಾಷ್ಟ್ರೀಯ ವಿದ್ಯಮಾನಗಳ ಪರಿಚಯ: ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಹೊರತಾಗಿ ನೀಡುವ ಪ್ರೊಜೆಕ್ಟ್‌ಗಳಿಗೆ ದಿನಪತ್ರಿಕೆಗಳನ್ನೇ ಮಾಹಿತಿಯ ಆಕರ ಮಾಡಿಕೊಳ್ಳುತ್ತಾರೆ. ಅಂತರರಾಷ್ಟ್ರೀಯ ವಿದ್ಯಮಾನಗಳ ಕುರಿತು ಅವರಿಗೆ ಸೂಕ್ತ ಮಾಹಿತಿ ಇರುತ್ತದೆ. ಯಾವ ದೇಶದ ರಾಜಧಾನಿ ಯಾವುದು, ನಾಯಕರು ಯಾರು ಎಂಬ ಸ್ಪಷ್ಟ ಮಾಹಿತಿ ಇದ್ದು, ಆಯಾ ದೇಶಗಳ ಆಗುಹೋಗುಗಳ ಪರಿಚಯ ಇರುತ್ತದೆ.

ಆಡಾಡುತ್ತ ಪದಸಿರಿ: ಬಹುತೇಕ ಮಕ್ಕಳು ಪದಬಂಧ ಬಿಡಿಸುವಲ್ಲಿ ಹೆಚ್ಚು ಆಸಕ್ತರಾಗಿರುತ್ತಾರೆ. ಭಾಷಾ ಅವಧಿಯಲ್ಲಿ ಪದಬಂಧಗಳ ಕುರಿತು ಕೆಲವೊಮ್ಮೆ ಚರ್ಚೆ ಏರ್ಪಡಿಸಿದಾಗ, ಸುಳಿವುಗಳನ್ನಾಧರಿಸಿ ಪದ ಹುಡುಕುವಾಗ ಅವರಲ್ಲಿ ವಿಶ್ಲೇಷಣಾತ್ಮಕ ಕೌಶಲ ಹೆಚ್ಚುತ್ತದೆ. ಜೊತೆಗೆ ಹೊಸ ಹೊಸ ಪದಗಳನ್ನು ಕಲಿಯುತ್ತಾರೆ. ಒಂದು ಪದದ ಸಮನಾರ್ಥಕ ಪದ, ನಾನಾ ಅರ್ಥಗಳು, ವಿರುದ್ಧಪದ, ಬಹುವಚನ ಹೀಗೆ ಪ್ರಯೋಗಗಳನ್ನು ಮಾಡುತ್ತ ಭಾಷೆಯ ಮೇಲೆ ಹಿಡಿತ ಸಾಧಿಸುತ್ತಾರೆ.

ಹೆಚ್ಚುವ ಏಕಾಗ್ರತೆ: ಪ್ರತಿದಿನವೂ ಸುಡೊಕು ಆಡುವುದರಿಂದ ಮಕ್ಕಳಲ್ಲಿ ಏಕಾಗ್ರತೆ ಹೆಚ್ಚುತ್ತದೆ. ಜೊತೆಗೆ ವಿಶ್ಲೇಷಣಾತ್ಮಕವಾಗಿ ಹಾಗೂ ನಿರ್ಣಯಾತ್ಮಕವಾಗಿ ಯೋಚಿಸುವುದು ಸಾಧ್ಯವಾಗುತ್ತದೆ. ಇದರೊಂದಿಗೆ ಓದುವ ಅವಧಿ ಹೆಚ್ಚಾಗುತ್ತ ಹೋಗುತ್ತದೆ.

ಅಭಿವ್ಯಕ್ತಿ ಕೌಶಲ: ಮಕ್ಕಳು ಪ್ರತಿದಿನವೂ ಪತ್ರಿಕೆಯನ್ನು ಓದುತ್ತ, ಓದುತ್ತ ತಮ್ಮದೇ ಆದ ಶೈಲಿಯನ್ನು ಬರವಣಿಗೆಯಲ್ಲಿ ರೂಢಿಸಿಕೊಳ್ಳುತ್ತಾರೆ. ತಮಗೆ ಅನಿಸಿದ್ದನ್ನು ಸ್ಪಷ್ಟವಾಗಿ ಹೇಳುವಲ್ಲಿ, ಬರವಣಿಗೆಯಲ್ಲಿ ದಾಖಲಿಸುವಲ್ಲಿ ಸಶಕ್ತರಾಗುತ್ತಾರೆ.

ವಿಮರ್ಶಾತ್ಮಕ ನೋಟ: ಪ್ರತಿಯೊಂದಕ್ಕೂ ತಮ್ಮದೇ ಆದ ಅಭಿಪ್ರಾಯ ರೂಪಿಸಿಕೊಳ್ಳಲು ಮಕ್ಕಳು ಶಕ್ತರಾಗುತ್ತಾರೆ. ಪ್ರತಿಯೊಂದು ಆಗು ಹೋಗುಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಲು ಸಾಧ್ಯವಾಗುತ್ತದೆ.

ಕಾಮನ್ ಸೆನ್ಸ್ ಮೀಡಿಯಾ ಎಂಬ ಸಂಸ್ಥೆಯು ಕೈಗೊಂಡಿರುವ ಸಮೀಕ್ಷೆಯ ಪ್ರಕಾರ, ದಿನಪತ್ರಿಕೆಗಳ ಓದನ್ನು ಆರಂಭಿಸಿದ ಮಕ್ಕಳಲ್ಲಿ, ಪ್ರತಿವಾರವೂ ಸ್ಕ್ರೀನ್ ಸಮಯ ಕಡಿತವಾಗುತ್ತ ಹೋಗಿದೆ. ಮತ್ತು ಹೊಸಹೊಸ ಪುಸ್ತಕಗಳನ್ನು ಓದುವತ್ತಲೂ ಒಲವು ತೋರಿದರು ಎಂದು ತಿಳಿಸಿದೆ. ಮಕ್ಕಳ ವ್ಯಕ್ತಿತ್ವ ವಿಕಸನದಲ್ಲಿ ಹೆತ್ತವರು, ಶಿಕ್ಷಕರು ಮತ್ತು ಸ್ನೇಹಿತರಷ್ಟೇ ಸಕಾರಾತ್ಮಕ ಪರಿಣಾಮವನ್ನು ದಿನಪತ್ರಿಕೆಗಳು ಮಾಡುತ್ತವೆ. ನಿಮ್ಮ ಮನೆಯಲ್ಲಿಯೂ ಶಾಲೆಗೆ ಹೋಗುವ ಮಗುವಿದ್ದಲ್ಲಿ, ದಿನಪತ್ರಿಕೆ ಓದಿಸುವ ಅಭ್ಯಾಸ ಆಗುವಂತೆ ಮಾಡಿ. ❖

ಯಾವ ಶಾಲೆಗಳಲ್ಲಿ ಏನೇನು ಬದಲಾವಣೆ ಆಗಿವೆ?

ಬೆಂಗಳೂರಿನ ಎನ್‌ಪಿಎಸ್ (ಇಂದಿರಾನಗರ, ರಾಜಾಜಿನಗರ, ಯಶ್ವಂತಪುರ, ಜಾಲಹಳ್ಳಿ), ಸಿಲಿಕಾನ್ ಸಿಟಿ ಅಕಾಡೆಮಿ ಆಫ್ ಸೆಕೆಂಡರಿ ಎಜುಕೇಷನ್, ಸೇಂಟ್ ಜೋಸೆಫ್ ಬಾಲಕರ ಪ್ರೌಢಶಾಲೆ ಬಿಷಪ್ ಕಾಟನ್ ಬಾಲಕಿಯರ ಪ್ರೌಢ ಶಾಲೆ, ಮೈಸೂರಿನ ಎಕ್ಸೆಲ್ ಪಬ್ಲಿಕ್ ಶಾಲೆ, ದಾವಣಗೆರೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ, ಹಾಸನದ ಹಾಸನ್ ಪಬ್ಲಿಕ್ ಸ್ಕೂಲ್, ದಕ್ಷಿಣ ಕನ್ನಡದ ಜ್ಞಾನಗಂಗಾ ಪಬ್ಲಿಕ್ ಶಾಲೆ, ಅಮೃತಾ ವಿದ್ಯಾಲಯ ಮಂಗಳೂರು, ನಿಟ್ಟೂರು ಸೆಂಟ್ರಲ್ ಕಾಲೇಜು ರಾಣೆಬೆನ್ನೂರು ಮುಂತಾದ ಶಾಲೆಗಳ ಪ್ರಾಂಶುಪಾಲರು ಹಾಗೂ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ಕಂಡುಕೊಂಡ ಬದಲಾವಣೆಗಳನ್ನು ಈ ರೀತಿಯಾಗಿ ಪಟ್ಟಿ ಮಾಡಿದ್ದಾರೆ.

- ಆತ್ಮವಿಶ್ವಾಸ ಹೆಚ್ಚಿದೆ
- ಭಾಷೆಯ ಮೇಲೆ ಹಿಡಿತ ಇದೆ
- ಓದುವ ವೇಗ ಹೆಚ್ಚಿದೆ
- ಸಾಮುದಾಯಿಕ ಮತ್ತು ಸಾಮಾಜಿಕ ಪ್ರಜ್ಞೆ ಹೆಚ್ಚಿದೆ
- ಸ್ಪರ್ಧಾತ್ಮಕ ಜಗತ್ತಿನಲ್ಲಿ ಆತ್ಮವಿಶ್ವಾಸದಿಂದ ತಮ್ಮ ಗುರುತು ಮೂಡಿಸಲು ಸಾಧ್ಯವಾಗಿದೆ
- ರಸಪ್ರಶ್ನೆ, ಪ್ರಬಂಧ, ಭಾಷಣ ಹಾಗೂ ಚರ್ಚಾ ಸ್ಪರ್ಧೆಗಳಲ್ಲಿ ದಿನಪತ್ರಿಕೆ ಓದುವ ಮಕ್ಕಳು ಸದಾ ಬಹುಮಾನ ಪಡೆಯುತ್ತಿದ್ದಾರೆ.

"ಅಸೀಮ ಜ್ಞಾನದ ಬೆಳಕನ್ನು ಪಡೆಯುವಲ್ಲಿ ದಿನ ಪತ್ರಿಕೆಗಳ ಓದು, ಮೊದಲ ಬೆಳಕಿನ ಕುಡಿಯಾಗುತ್ತದೆ

ಶಂಭುಲಿಂಗ ದಿಗ್ಗಾವಿ
ಪ್ರಾಂಶುಪಾಲರು, ಎಸ್‌ಬಿಆರ್ ಪಬ್ಲಿಕ್ ಶಾಲೆ ಕಲಬುರ್ಗಿ

ದಿನ ಪತ್ರಿಕೆಗಳ ಓದಿನಿಂದ, ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆದಿದೆ. ಜ್ಞಾನವನ್ನು ಹೆಚ್ಚಿಸಿಕೊಳ್ಳುವ, ಅರಿವಿನ ಹರವನ್ನು ವಿಸ್ತಾರಗೊಳಿಸುವ ಕ್ರಮ ಇದಾಗಿದೆ.

ಡಾ. ಸುಮಾಲಿನಿ ಬಿ ಸ್ವಾಮಿ
ನಿರ್ದೇಶಕರು ಮತ್ತು ಪ್ರಾಂಶುಪಾಲರು ಸಿಲಿಕಾನ್ ಸಿಟಿ ಅಕಾಡೆಮಿ ಸೆಕೆಂಡ್ರಿ ಎಜುಕೇಶನ್, ಬೆಂಗಳೂರು

ದಿನಪತ್ರಿಕೆಗಳು, ಪ್ರತಿಯೊಬ್ಬರ ಸಾಮಾಜಿಕ ಚಿಂತನೆಗೆ ಪೂರಕ ಇಂಧನ. ಅದರಲ್ಲೂ, ವಿದ್ಯಾರ್ಥಿಗಳಲ್ಲಿ ಭಾಷಾ ಕೌಶಲ್ಯವನ್ನು ಹೆಚ್ಚಿಸುತ್ತಾ, ಜಾಗತಿಕ ವಿದ್ಯಮಾನಗಳನ್ನು ಅರಿಯಲು, ದಿನ ಪತ್ರಿಕೆಗಳ ಓದು ಬಹಳ ಮುಖ್ಯ.

ಫಾದರ್ ಸುನಿಲ್ ಫೆರ್ನಾಂಡಿಸ್,
ಪ್ರಾಂಶುಪಾಲರು ಸಂತ ಜೋಸೆಫ್ ಬಾಲಕರ ಪ್ರೌಢಶಾಲೆ, ಬೆಂಗಳೂರು

ಯಾವ ಎಂಜಿನಿಯರಿಂಗ್ ಕೋರ್ಸ್‌ಗೆ ಉತ್ತಮ ಅವಕಾಶ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

1. ನಾನು ಪಿಯುಸಿ ಮುಗಿಸಿ, ಸಿಇಟಿಗೆ ತಯಾರಿ ನಡೆಸುತ್ತಿದ್ದೇನೆ. ಯಾವ ಎಂಜಿನಿಯರಿಂಗ್ ಕೋರ್ಸಿಗೆ ಉತ್ತಮ ಉದ್ಯೋಗಾವಕಾಶಗಳಿವೆ?

ಹೆಸರು, ಊರು ತಿಳಿಸಿಲ್ಲ.

ಈಗ ಕಂಪ್ಯೂಟರ್ ಸೈನ್ಸ್, ಐಟಿ, ರೊಬಾಟಿಕ್ಸ್, ಆರ್ಟಿಫಿಷಿಯಲ್ ಇಂಟಲಿಜೆನ್ಸ್, ಮೆಷಿನ್ ಲರ್ನಿಂಗ್, ಡೇಟಾ ಸೈನ್ಸ್, ಸೈಬರ್ ಸೆಕ್ಯೂರಿಟಿ ಕೋರ್ಸ್‌ಗ ಳಿಗೆ ಹೆಚ್ಚಿನ ಬೇಡಿಕೆ ಇದೆ. ಜೊತೆಗೆ, ಸಾಂಪ್ರದಾಯಿಕ ವಿಭಾಗಗಳಾದ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್, ಎಲೆಕ್ಟ್ರಿಕಲ್ ಅಂಡ್ ಎಲೆಕ್ಟ್ರಾನಿಕ್ಸ್, ಬಯೋಮೆಡಿಕಲ್, ಬಯೋಟೆಕ್, ಏರೋನಾಟಿಕಲ್, ಮೆಕ್ಯಾನಿಕಲ್, ಮೆಕಾಟ್ರಾನಿಕ್ಸ್ ಇತ್ಯಾದಿ ವಿಭಾಗಗಳಿಗೂ ಸಾಧಾರಣವಾದ ಬೇಡಿಕೆಯಿದೆ. ಎಂಜಿನಿಯರಿಂಗ್‌ನಲ್ಲಿ ಐವತ್ತಕ್ಕೂ ಹೆಚ್ಚಿನ ವಿಭಾಗಗಳಿದ್ದು, ಕೋರ್ಸ್ ಫಲಿತಾಂಶ ಉತ್ಕೃಷ್ಟವಾಗಿದ್ದರೆ, ಉಜ್ವಲವಾದ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಎಂಜಿನಿಯರಿಂಗ್ ವೃತ್ತಿಗೆ ಗಣಿತದಲ್ಲಿ ತಜ್ಞತೆ, ವಿಶ್ಲೇಷಾತ್ಮಕ ಕೌಶಲ, ಯೋಜನೆಯ ನಿರ್ವಹಣೆ, ತಾಂತ್ರಿಕ ಕೌಶಲ ಅಗತ್ಯವಾಗುತ್ತದೆ. ಹಾಗೂ, ಆಯಾ ವಿಭಾಗಗಳ ವಿಷಯಗಳಲ್ಲಿ ಆಸಕ್ತಿ ಮತ್ತು ಸ್ವಾಭಾವಿಕ ಪ್ರತಿಭೆ ಇರಬೇಕು.

ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://youtu.be/AwlDno1YduQ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಲಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಕ್ಕೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಭೂಮಿ ಫೆಲೋಶಿಪ್ ಪ್ರೋಗ್ರಾಂ ಇನ್ ಇಂಡಿಯಾ 2024-26

- **ವಿವರ:** ಶಿಕ್ಷಣದಲ್ಲಿ ಭವಿಷ್ಯದ ನಾಯಕರನ್ನು ರೂಪಿಸಲು ವಿನ್ಯಾಸಗೊಳಿಸಲಾದ ಎರಡು ವರ್ಷದ , ಪೂರ್ಣ ಸಮಯದ ಪಾವತಿಸಹಿತ ಕಾರ್ಯಕ್ರಮ.
- **ಅರ್ಹತೆ:** ಎರಡು ವರ್ಷಗಳ ಪೂರ್ಣ ಸಮಯದ ಫೆಲೋಶಿಪ್‌ಗೆ ಬದ್ಧರಾಗಲು ಸಿದ್ಧರಿರುವ, ಸೋಷಿಯಲ್ ವರ್ಕ್, ಎಜುಕೇಶನ್ ಅಥವಾ ಎಂಜಿನಿಯರಿಂಗ್‌ನಲ್ಲಿ ಪದವಿಯನ್ನು ಹೊಂದಿರುವ 20-30ರೊಳಗಿನ ವಯಸ್ಸಿನ ವ್ಯಕ್ತಿಗಳಿಗೆ ಮುಕ್ತವಾಗಿದೆ.
- **ಆರ್ಥಿಕ ಸಹಾಯ:** ಮಾಸಿಕ ₹ 25,500
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-05-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:** Short Url: www.b4s.in/praja/THBF5

ಯುನಿವರ್ಸಿಟಿ ಆಫ್ ಬಾತ್ ಗ್ರೇಟ್ ಸ್ಕಾಲರ್‌ಶಿಪ್, ಇಂಡಿಯಾ 2024

- **ವಿವರ:** ಬ್ರಿಟಿಷ್ ಕೌನ್ಸಿಲ್‌ನ ಸ್ಟಡಿ ಯುಕೆ ಅಭಿಯಾನದ ಸಹಯೋಗದೊಂದಿಗೆ ಬಾತ್ ವಿಶ್ವವಿದ್ಯಾಲಯವು ನೀಡುವ ಅವಕಾಶವಾಗಿದೆ. ಭಾರತ ಸೇರಿ 15 ದೇಶಗಳ ವಿದ್ಯಾರ್ಥಿಗಳಿಗೆ ಯುಕೆಯಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಮುಂದುವರಿಸಲು ಹಣಕಾಸಿನ ನೆರವು ನೀಡಲಾಗುತ್ತದೆ.
- **ಅರ್ಹತೆ:** ಬಾತ್ ವಿಶ್ವವಿದ್ಯಾಲಯದಲ್ಲಿ ಪೂರ್ಣ ಸಮಯದ, ಸ್ನಾತಕೋತ್ತರ ಕಲಿಕೆಯ ಮಾಸ್ಟರ್ಸ್ ಕೋರ್ಸ್‌ಗೆ ಅವಕಾಶ ಮತ್ತು ಮಾನ್ಯವಾದ ಪಾಸ್‌ಪೋರ್ಟ್ ಹೊಂದಿರುವ ಭಾರತೀಯ ನಾಗರಿಕರಿಗೆ ಮುಕ್ತವಾಗಿದೆ. ಬೋಧನಾ ಶುಲ್ಕದ ಉದ್ದೇಶಗಳಿಗಾಗಿ ಅಭ್ಯರ್ಥಿಗಳು ಅಂತರರಾಷ್ಟ್ರೀಯ ವಿದ್ಯಾರ್ಥಿಗಳೆಂದು ವರ್ಗೀಕರಿಸಲಾಗಿರಬೇಕು ಮತ್ತು ಅತ್ಯುತ್ತಮ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿರಬೇಕು.
- **ಆರ್ಥಿಕ ಸಹಾಯ:** ವರ್ಷದ ಅಧ್ಯಯನಕ್ಕಾಗಿ £10,000 ಭಾಗಶಃ ಬೋಧನಾ ಶುಲ್ಕ
- **ಅರ್ಜಿ ಸಲ್ಲಿಸಲು ಕೊನೆ ದಿನ:** 20-05-2024
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/praja/UBG01

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) $\tan\theta$ ಮತ್ತು $\cot\theta$ ಗಳ ಗುಣಲಬ್ಧವು

(A) 0　(B) 1
(C) $\sin\theta$　(D) –1

Ans : $\tan\theta \times \cot\theta$

$$= \tan\theta \times \frac{1}{\tan\theta} = 1$$

$\therefore$ (B) 1

2) ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{5}{6}$. ಆದರೆ ಸೋಲುವ ಸಂಭವನೀಯತೆ

(A) $-\frac{5}{6}$　(B) $\frac{5}{6}$
(C) $-\frac{1}{6}$　(D) $\frac{1}{6}$

ಉತ್ತರ: (D)

3) (2, 3) ಮತ್ತು (4, 7) ಬಿಂದುಗಳನ್ನು ಸೇರಿಸುವ ರೇಖಾಖಂಡದ ಮಧ್ಯ ಬಿಂದುವಿನ ನಿರ್ದೇಶಾಂಕಗಳು

(A) (3, 5)　(B) (7, 3)
(C) (3, 4)　(D) (8, 3)

ಉತ್ತರ: (A) (3, 5)

4) ಚಿತ್ರದಲ್ಲಿ ತೋರಿಸಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು



(A) $x + y = 1$ ಮತ್ತು $2x - y = 1$
(B) $2x + y = 2$ ಮತ್ತು $x + y = 2$
(C) $2x - y = 2$ ಮತ್ತು $4x - y = 4$
(D) $y - x = 0$ ಮತ್ತು $x - y = 1$

ಉತ್ತರ:-(ಸಿ) $2x-y=2$ ಮತ್ತು $4x-y=4$

5) (3, -2) ಮತ್ತು (4, 5) ಬಿಂದುಗಳನ್ನು ಸೇರಿಸುವ ರೇಖೆಯ ಇಳಿಜಾರು

(A) 3　(B) 5
(C) 7　(D) 8

ಉತ್ತರ : (C) 7

6) ಕೊಟ್ಟಿರುವ ಚಿತ್ರದಲ್ಲಿ $\sin\theta$ ದ ಬೆಲೆಯು..........



(A) $\frac{1}{2}$　(B) $\frac{\sqrt{3}}{2}$
(C) $\sqrt{3}$　(D) $\frac{2}{\sqrt{3}}$

ಉತ್ತರ:- (ಎ) ½

7) ಈ ಕೆಳಗಿನ ದತ್ತಾಂಶಗಳ ಸರಾಸರಿಯು...............

ಅಂಕಗಳು	1	3	5	7

(A) 16　(B) 5
(C) 1.6　(D) 4

ಉತ್ತರ:- (ಡಿ)4

4) ΔABC ನಲ್ಲಿ, AB= $6\sqrt{3}$cm, AC= 12cm ಮತ್ತು BC=6 cm. ಆದರೆ B ಯು...............

(A) 120°　(B) 60°
(C) 90°　(D) 45°

ಉತ್ತರ:- (ಸಿ) 90°

ಪರಿಹಾರ:- ΔABCದಲ್ಲಿ, AB = $6\sqrt{3}$ cm, AC = 12cm ಮತ್ತು BC = 6 cm. (ದತ್ತ)



$AB^2 = 108$
$AC^2 = 144$
ಮತ್ತು $BC^2 = 36$
$AB^2 + BC^2 = AC^2$

ಕೊಟ್ಟಿರುವ ತ್ರಿಭುಜ ΔABC ಪೈಥಾಗೋರಸ್ ಪ್ರಮೇಯದ ಲಕ್ಷಣಗಳನ್ನು ಹೊಂದಿದೆ, ಹೀಗಾಗಿ ಇದೊಂದು ಲಂಬಕೋನ ತ್ರಿಭುಜವಾಗಿದೆ. ಹೀಗಾಗಿ $\angle B$ವು ಲಂಬಕೋನವಾಗಿದೆ.

$\therefore \angle B = 90°$

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC BIOLOGY

24) Injection of an antidote against a snakebite is an example of
a) auto immunity
b) innate immunity
c) active immunity
d) passive immunity

Ans: (d)

Expln:- The ability of the body to fight against the pathogen is called immunity.

The immunity which is developed after the direct exposure to the pathogen or antigen is called active immunity. In this immunity, a person's own cells produce antibodies in response to infection.

The immunity gained by an organism through vaccines or antidotes is known as passive immunity. In this type of immunity, there will be no exposure to the pathogen directly. Ready-made antibodies are directly injected into a person to protect the body against foreign agents such as the snake poison. Thus, injection of an antidote of a snake is an example of passive immunity.

When the immune system recognizes the body cells as a foreign substance and attacks one's own healthy body cells, such immunity is known as autoimmunity. The immunity that is present since the time of birth is called innate immunity. This type of immunity is inherited from the parents and protects the individual throughout his life.

25) Fossils are generally found in
a) Sedimentary rocks　b) Igneous rocks
c) Metamorphic rocks　d) Any type of rock

Ans:- a

26) For the MN-blood group system, the frequencies of M and N alleles are 0.7 and 0.3, respectively. The expected frequency of MN-blood group bearing organisms is likely to be
a) 42%　b) 49%
c) 9%　d) 58%

Ans:- a

27) Which type of selection is industrial melanism observed in moth, Biston bitularia –
a) stabilising　b) directional
c) disruptive　d) Artificial

Ans:- b

28) Certain tumours are called malignant, because
a) they are not neoplastic
b) they are confined to specific locations
c) they invade and damage surrounding tissues
d) they show contact inhibition

Ans: (c)

Expln:- The uncontrolled growth of cells is called tumour or neoplasm. Tumours are considered to be either malignant or benign. Those tumours that are stagnant at one part of the body and do not spread are called benign tumours. But certain tumours invade and damage the surrounding tissues. Such tumours are known as malignant tumours. Only malignant tumours are properly designated as cancerous. Normal cells show a property called contact inhibition. Due to this property, when they are in contact with other cells the cell proliferation ceases. Cancer cells do not show the property of contact inhibition. A phenomenon in which the cancerous cells spread to distant sites in the body is called metastasis.

29) The most accepted line of descent in human evolution is-
a) Australopithecus → Ramapithecus → Homo sapiens → homohabilis
b) Homo erectus→ homohabilis → Homo sapiens
c) Ramapithecus→homohabilis→Homo erectus → Homo sapiens
d) Australopithecus → Ramapithecus → Homo erectus → homohabilis → Homo sapiens

Ans:- c

30) Which of the following is an example for link species –
a) Lobe fish　b) Dodo bird
c) Sea weed　d) Tyrannosaurus rex

Ans:- a

31) Variations during mutations of meiotic recombinations are -
a) random and directionless
b) random and directional　c) random and small
d) random, small and directional

Ans:- a

32) The term 'Health' is defined in many ways. The most accurate definition of the health would be –
a) health is the state of the body and mind in a balanced condition
b) health is the reflection of a smiling face
c) health is a state of complete physical, mental and social well-being
d) health is the symbol of economic prosperity

Ans:- c

33) The chemical test that is used for the diagnosis of typhoid is –
a) ELISA – test　b) ESR – test
c) PCR – test　d) Widal - test

Ans:- d

ಅಭಿಮತ

❦ ಸುಭಾಷಿತ ❦
ಇತರರು ಹೇಳುವ ಮಾತುಗಳನ್ನು ಆಸಕ್ತಿಯಿಂದ ಆಲಿಸಿ, ಬಳಿಕ ಆ ಬಗ್ಗೆ ಚರ್ಚಿಸಿ, ವಿಚಾರ ಮಾಡಿ, ಎಲ್ಲ ಆಯಾಮಗಳಿಂದಲೂ ಪರಿಗಣಿಸಿ. -ಜಿಮ್ ರೌನ್

ಮಹಿಳೆಯರ ಬಗ್ಗೆ ಹಗುರ ಮಾತು ಪಾಠ ಕಲಿಸುವ ಕೆಲಸ ಆಗಬೇಕು

ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯಗಳು ಶುರುವಾಗಿವೆ. ಮಾತಿನ ಅಬ್ಬರ ಹೆಚ್ಚಾಗಿದೆ. ಅದರ ಜೊತೆಯಲ್ಲೇ ಮಾತು ಹೆಚ್ಚೆಚ್ಚು ಹೃದಯಹೀನವಾಗುತ್ತಿದೆ. ಎರಡು ರಾಷ್ಟ್ರೀಯ ಪಕ್ಷಗಳ ಪ್ರತಿನಿಧಿಗಳು ಮಹಿಳೆಯರ ಬಗ್ಗೆ ಆಡಿದ ನಿಂದನಾತ್ಮಕ ಮಾತುಗಳು ರಾಷ್ಟ್ರದ ಗಮನ ಸೆಳೆದಿವೆ. ಅಲ್ಲದೆ, ಈ ಮಾತುಗಳ ಬಗ್ಗೆ ಕೇಂದ್ರ ಚುನಾವಣಾ ಆಯೋಗವು ತನ್ನ ಅಸಮಾಧಾನವನ್ನು ಸೂಚಿಸಿದೆ. ಎರಡೂ ಹೇಳಿಕೆಗಳು ತೀರಾ ಕೆಳಮಟ್ಟದವು. ನಟಿ ಹಾಗೂ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಅವರನ್ನು ಉದ್ದೇಶಿಸಿ ಆಡಿದ ಒರಟು ಮಾತೊಂದು ಕಾಂಗ್ರೆಸ್ಸಿನ ರಾಷ್ಟ್ರೀಯ ವಕ್ತಾರೆ ಹಾಗೂ ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೇತ್ ಅವರ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಕಾಣಿಸಿಕೊಂಡಿತ್ತು. ಬಿಜೆಪಿಯ ಮುಖಂಡ ದಿಲೀಪ್ ಘೋಷ್ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಉದ್ದೇಶಿಸಿ ತೀರಾ ಆಕ್ಷೇಪಾರ್ಹವಾದ ಮಾತುಗಳನ್ನು ಆಡಿದರು. ಇಬ್ಬರೂ ಮುಖಂಡರು ಆಡಿದ ಮಾತುಗಳು 'ಘನತೆ ಇಲ್ಲದವು ಹಾಗೂ ಕೆಟ್ಟ ಅಭಿರುಚಿಯವು' ಎಂದು ಚುನಾವಣಾ ಆಯೋಗವು ಹೇಳಿದೆ. ಅವರಿಗೆ ನೋಟಿಸ್ ಜಾರಿಗೊಳಿಸಿದೆ. ಈ ಮಾತುಗಳು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ ಮಾತ್ರವೇ ಅಲ್ಲ; ಖಾಸಗಿಯಾಗಿ ಮಾತನಾಡುವಾಗ ಕೂಡ ಎದುರಿಗೆ ಇರುವ ವ್ಯಕ್ತಿಗೆ ಕೊಡಬೇಕಾದ ಗೌರವ, ಸೌಜನ್ಯವು ಆ ಮಾತುಗಳಲ್ಲಿ ಇರಲಿಲ್ಲ.

ಮಹಿಳೆಯರ ಘನತೆಗೆ ಕುಂದು ತರುವಂತೆ ಮಾತನಾಡುವವರ ವಿರುದ್ಧ ಕ್ರಮ ಕೈಗೊಳ್ಳಲು ಪಕ್ಷಗಳು ವಿಫಲವಾದರೆ, ಅಂಥವರಿಗೆ ಪಾಠ ಕಲಿಸುವ ಕೆಲಸವನ್ನು ಮತದಾರರು ಮಾಡಬೇಕು

ದೇಶದಲ್ಲಿ ಈಚಿನ ವರ್ಷಗಳಲ್ಲಿ ಸಾರ್ವಜನಿಕ ಚರ್ಚೆಯ ಮಟ್ಟವು ಕುಗ್ಗುತ್ತಾ ಬಂದಿದೆ. ರಾಜಕಾರಣಿಗಳು, ಅವರ ಹಿಂಬಾಲಕರು ಹಾಗೂ ಇತರರು ವೈಯಕ್ತಿಕ ಮಟ್ಟದ ನಿಂದನೆಯ ಮಾತುಗಳನ್ನು ಯಾವ ಹಿಂಜರಿಕೆಯೂ ಇಲ್ಲದೆ ಆಡುತ್ತಿದ್ದಾರೆ. ಇಂತಹ ವಾಗ್ದಾಳಿಗಳಿಗೆ ಮಹಿಳೆಯರು ಬಹಳ ಸುಲಭದ ತುತ್ತಾಗುತ್ತಿದ್ದಾರೆ. ಮಾತುಗಳು ವಿವಾದಕ್ಕೆ ತಿರುಗಿದಾಗ ಅಥವಾ ಅವುಗಳಿಗೆ ಪ್ರತಿರೋಧ ಎದುರಾದಾಗ ಹೊಣೆಯಿಂದ ನುಣುಚಿಕೊಳ್ಳಲು ಯತ್ನಿಸುವುದು, ತಪ್ಪಿಸಿಕೊಳ್ಳಲಿಕ್ಕೆ ನೆಪಗಳನ್ನು ಹುಡುಕುವುದು ಅಥವಾ ವಿಷಯಾಂತರ ತಂತ್ರದ ಮೊರೆ ಹೋಗುವುದಿದೆ. ತಮ್ಮ ಖಾತೆಯನ್ನು ಬಳಸುವ ಬೇರೊಬ್ಬರು ನಿಂದನಾತ್ಮಕ ಮಾತುಗಳನ್ನು ಆಡಿದ್ದಾರೆ ಎಂದು ಸುಪ್ರಿಯಾ ಅವರು ಹೇಳಿದ್ದಾರೆ. ಒಬ್ಬರು ಆಡಿದಂತಹ ನಿಂದನೆಯ ಮಾತುಗಳನ್ನು ಇನ್ನೊಬ್ಬರು ಕೂಡ ಆಡಿದ್ದಾರೆ ಎನ್ನುವುದು ಅಥವಾ ಅದಕ್ಕಿಂತ ಹೆಚ್ಚು ನಿಂದನೆಯ ಮಾತನ್ನು ಬೇರೊಬ್ಬರು ಆಡಿದ್ದಾರೆ ಎನ್ನುವುದು ಸಮರ್ಥನೆ ಆಗಲಾರದು. ಕೆಟ್ಟ ಪೂರ್ವನಿದರ್ಶನಗಳು ಮುಂದೆ ಅಂಥವು ಮರುಕಳಿಸದಂತೆ ನೋಡಿಕೊಳ್ಳುವುದಕ್ಕೆ ಎಲ್ಲರಿಗೂ ಪ್ರಚೋದನೆಯಾಗಬೇಕು. ಅಸಭ್ಯವಾಗಿ ಮಾತನಾಡಿದ ನಿದರ್ಶನಗಳನ್ನು ರಾಜಕೀಯ ಪಕ್ಷಗಳು ಗಂಭೀರವಾಗಿ ಪರಿಗಣಿಸಿ, ಅಂತಹ ಮಾತುಗಳಿಂದ ಅಂತರ ಕಾಯ್ದುಕೊಳ್ಳಬೇಕು ಹಾಗೂ ಅಂತಹ ಮಾತು ಆಡಿದವರ ವಿರುದ್ಧ ಕ್ರಮ ಜರುಗಿಸಬೇಕು. ಸುಪ್ರಿಯಾ ಅವರಿಗೆ ಕಾಂಗ್ರೆಸ್ ಚುನಾವಣೆಯಲ್ಲಿ ಸೀಟು ನಿರಾಕರಿಸಿದೆ ಎಂದು ವರದಿಗಳು ಹೇಳುತ್ತವೆ. ಇದು ನಿಜವಾಗಿದ್ದಲ್ಲಿ ಪಕ್ಷದ ಕ್ರಮ ಸ್ವಾಗತಾರ್ಹ. ಮಮತಾ ಅಥವಾ ಕಂಗನಾ ಅವರಂತಹ ಸೆಲೆಬ್ರಿಟಿಗಳನ್ನು ಗುರಿಯಾಗಿಸಿ ಆಡಿದ ಮಾತುಗಳು ಹಲವು ಸಂದರ್ಭಗಳಲ್ಲಿ ಜನರ ಗಮನ ಸೆಳೆಯುತ್ತವೆ. ಹಾಗೆಯೇ, ಮಹಿಳೆಯರನ್ನು ಗುರಿಯಾಗಿಸಿಕೊಂಡು ಎಷ್ಟೇ ನಿಂದನಾತ್ಮಕ ಮಾತುಗಳನ್ನು ಆಡಿದ್ದರೂ ಕೆಲವರು ಉತ್ತರದಾಯಿತ್ವದಿಂದ ತಪ್ಪಿಸಿಕೊಳ್ಳುತ್ತಾರೆ.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ನಾಯಕರು ಹಿಂದೆ ಇಂತಹ ಮಾತುಗಳನ್ನು ಆಡಿದ್ದಿದೆ. ಸಮಾಜದಲ್ಲಿ ಇರುವ ಪುರುಷಪ್ರಧಾನ ಮನಃಸ್ಥಿತಿ ಇಂತಹ ಮಾತುಗಳಿಗೆ ಕಾರಣ. 2019ರ ಚುನಾವಣೆಯಲ್ಲಿ ಆಡಿದ ಸ್ತ್ರೀದ್ವೇಷದ ಮಾತುಗಳ ಕುರಿತ ಒಂದು ಅಧ್ಯಯನವು, ಇಂತಹ ಮಾತುಗಳು ಜಗತ್ತಿನಾದ್ಯಂತ ಇರುವ ಸ್ತ್ರೀದ್ವೇಷದ ಮಾದರಿಗೆ ಅನುಗುಣವಾಗಿ ಇವೆ, ಮಹಿಳಾ ರಾಜಕಾರಣಿಗಳನ್ನು ಉದ್ದೇಶಿಸಿ ಹಿಂದಿನಿಂದಲೂ ಆಡಿಕೊಂಡು ಬಂದಿರುವ ವ್ಯಂಗ್ಯದ ಮಾತುಗಳಲ್ಲಿ ಇವುಗಳ ಮೂಲ ಇದೆ ಎಂಬುದನ್ನು ಕಂಡುಕೊಂಡಿದೆ. ಇಂತಹ ಮಾತುಗಳು ರಾಜಕಾರಣದಲ್ಲಿ ಮಹಿಳೆಯರ ಪ್ರಾತಿನಿಧ್ಯವನ್ನು ಅಗೌರವದಿಂದ ಕಾಣಲು ಯತ್ನಿಸುತ್ತವೆ. ಮಹಿಳಾ ಮತದಾರರ ಸಂಖ್ಯೆಯು ಹೆಚ್ಚಾಗುತ್ತಿರುವ ಹೊತ್ತಿನಲ್ಲಿ ಈ ರೀತಿ ಆಗುತ್ತಿದೆ. ಮಹಿಳಾ ಮತದಾರರ ಸಂಖ್ಯೆಯು ಪುರುಷ ಮತದಾರರ ಸಂಖ್ಯೆಗಿಂತ ಹೆಚ್ಚಿರುವ 100ಕ್ಕೂ ಹೆಚ್ಚು ಲೋಕಸಭಾ ಕ್ಷೇತ್ರಗಳಿವೆ. ಮಹಿಳೆಯರ ಘನತೆಗೆ ಕುಂದು ಬಾರದಂತೆ ನೋಡಿಕೊಳ್ಳುವ ಕೆಲಸವು ರಾಜಕಾರಣದಲ್ಲಿ ಆಗಬೇಕು. ಮರ್ಯಾದೆ ಕೊಡದವರ ವಿರುದ್ಧ ಕ್ರಮ ಕೈಗೊಳ್ಳಲು ಪಕ್ಷಗಳು ವಿಫಲವಾದರೆ, ಅಂಥವರಿಗೆ ಪಾಠ ಕಲಿಸುವ ಕೆಲಸವನ್ನು ಮತದಾರರು ಮಾಡಬೇಕು.

ದಿನದ ಟ್ವೀಟ್

ತಲೆಯೆತ್ತಿ ನಿಲ್ಲಲು...

40° ಬಿಸಲಾಗ ತಣ್ಣಗೆ ಕುಳಿತ ಓದಾಕತ್ತಿನಿ! ಓದು ಕೂಡ ಒಂದು ಧ್ಯಾನ. ತಲೆ ತಗ್ಗಿಸಿ ಓದಿದಷ್ಟೂ ತಲೆಯೆತ್ತಿ ಈ ಪ್ರಪಂಚವನ್ನ ನೋಡಬಹುದು. ಓದುವ ಹವ್ಯಾಸ ಬೆಳಸಿಕೊಳ್ಳಿ.

ಶಿವಾನಂದ್ ಗುಂಡನವರ್, ಎಂಜಿನಿಯರ್

ಕಿಡಿನುಡಿ

ಹೃದಯ ಶಸ್ತ್ರಚಿಕಿತ್ಸೆ ಬಗ್ಗೆ ತಿಳಿದುಕೊಳ್ಳಬೇಕಾದರೆ 13 ವರ್ಷ ವೈದ್ಯಕೀಯಶಾಸ್ತ್ರ ಓದಬೇಕು. ಇದು ಆಧುನಿಕ ತಂತ್ರಜ್ಞಾನದ ಶಸ್ತ್ರಚಿಕಿತ್ಸೆ. ಸಾಮಾನ್ಯ ವೈದ್ಯರಿಗೂ ಇದರ ಬಗ್ಗೆ ಅಷ್ಟಾಗಿ ಮಾಹಿತಿ ಇರುವುದಿಲ್ಲ. ಇನ್ನು ಸಾಮಾನ್ಯ ಜನರಿಗೆ ಹೇಗೆ ಗೊತ್ತಾಗಬೇಕು? ಜ್ಞಾನಿಗಳು ಜ್ಞಾನಿಗಳಾಗಿಯೇ ಇರಬೇಕು. ಮತ್ತೊಂದು ಆಗಬಾರದು.

('ಚುನಾವಣೆ ಬಂದರೆ ಸಾಕು ಆಸ್ಪತ್ರೆ ಸೇರುತ್ತಾರೆ' ಎಂದು ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ಅವರ ವಿರುದ್ಧ ಶ್ರೀರಂಗಪಟ್ಟಣ ಶಾಸಕ ರಮೇಶ್ ಬಂಡಿಸಿದ್ಧೇಗೌಡ ಅವರು ಮಾಡಿರುವ ಟೀಕೆಗೆ ತಿರುಗೇಟು)

ಡಾ. ಸಿ.ಎನ್.ಮಂಜುನಾಥ್, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

25 ವರ್ಷಗಳ ಹಿಂದೆ

ಗುರುವಾರ, 1-4-1999

● **ಪಂಚಾಯಿತಿ ಚುನಾವಣೆಗೆ ಸುಪ್ರೀಂ ಕೋರ್ಟ್ ತಡೆ**

ನವದೆಹಲಿ, ಮಾರ್ಚ್ 31– ಕರ್ನಾಟಕ ಗ್ರಾಮ ಪಂಚಾಯಿತಿಗಳಿಗೆ ಆರು ವಾರಗಳೊಳಗೆ ಚುನಾವಣೆ ನಡೆಸಬೇಕೆಂದು ಹೈಕೋರ್ಟ್ ನೀಡಿದ್ದ ಆಜ್ಞೆಗೆ ಸುಪ್ರೀಂಕೋರ್ಟ್ ಇಂದು ತಡೆ ನೀಡಿತು.

ಸುಪ್ರೀಂ ಕೋರ್ಟ್‌ನ ಈ ಮಧ್ಯಂತರ ಆದೇಶದಿಂದ ನಾಳೆಯಿಂದ ನಡೆಯಬೇಕಾಗಿದ್ದ ಚುನಾವಣೆ ಪ್ರಕ್ರಿಯೆಗೆ ತಡೆ ನೀಡಿದಂತಾಗಿದೆ. ನ್ಯಾಯಮೂರ್ತಿಗಳಾದ ಎಸ್.ಪಿ.ಬರೂಚ ಮತ್ತು ಆರ್.ಸಿ. ಲಹೋಟಿ ಅವರಿದ್ದ ನ್ಯಾಯಪೀಠವು ರಾಜ್ಯ ಸರ್ಕಾರದ ಮೇಲ್ಮನವಿಯನ್ನು ವಿಚಾರಣೆಗೆ ಎತ್ತಿಕೊಂಡು ಈ ಆದೇಶ ನೀಡಿತು.

● **ಉಪ ಸಭಾಪತಿ ಅವಿರೋಧ ಆಯ್ಕೆ ಖಚಿತ**

ಬೆಂಗಳೂರು, ಮಾರ್ಚ್ 31– ವಿಧಾನ ಪರಿಷತ್ತಿನ ಉಪಸಭಾಪತಿ ಸ್ಥಾನಕ್ಕೆ ನಾಳೆ ಚುನಾವಣೆ ನಡೆಯಲಿದ್ದು, ವಿರೋಧ ಪಕ್ಷಗಳು ಜನತಾದಳದ ಅಭ್ಯರ್ಥಿಯನ್ನು ಬೆಂಬಲಿಸಿರುವುದರಿಂದ ಅಭ್ಯರ್ಥಿ ಡೇವಿಡ್ ಸಿಮೆಯೋನ್ ಅವರು ಈ ಸ್ಥಾನಕ್ಕೆ ಆಯ್ಕೆಯಾಗುವುದು ಖಚಿತವಾಗಿದೆ. ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ಪರಿಷತ್ತಿನ ವಿರೋಧ ಪಕ್ಷಗಳ ಮುಖಂಡರ ಜೊತೆ ಚರ್ಚಿಸಿದ ಪರಿಣಾ ಮವಾಗಿ ಸರ್ವಸಮ್ಮತ ಅಭ್ಯರ್ಥಿ ಆಯ್ಕೆಗೆ ಅವರೆಲ್ಲರೂ ಒಲವು ತೋರಿರುವುದರಿಂದ ಸಿಮೆಯೋನ್ ಗೆಲುವಿಗೆ ಹಾದಿ ಸುಗಮವಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 1-4-1974

● **ದೊಡ್ಡ ನಗರಗಳಲ್ಲಷ್ಟೇ ಸರ್ಕಾರಿ ಆಹಾರ ವಿತರಣೆ; ಸಲಹೆ ಬಗ್ಗೆ ಪರಿಶೀಲನೆ**

ನವದೆಹಲಿ, ಮಾರ್ಚ್ 31– ಸರ್ಕಾರದಿಂದಲೇ ಆಹಾರಧಾನ್ಯಗಳ ಹಂಚಿಕೆ ವ್ಯವಸ್ಥೆಯನ್ನು ಕೈಗಾರಿಕಾ ಪ್ರದೇಶಗಳು ಮತ್ತು ಒಂದು ನಿರ್ದಿಷ್ಟ ಪ್ರಮಾಣದ ಜನಸಂಖ್ಯೆ ಇರುವ ಕೆಲವು ನಗರಗಳಿಗಷ್ಟೇ ಸೀಮಿತಗೊಳಿಸಿ ಉಳಿದೆಲ್ಲಾ ಪ್ರದೇಶಗಳನ್ನೂ ಎಂದಿನ ವ್ಯಾಪಾರ ವ್ಯವಸ್ಥೆಗೆ ಒಳಪಡಿಸುವ ಸಲಹೆಗಳನ್ನು ಸರ್ಕಾರ ಈಗ ಪರಿಶೀಲಿಸುತ್ತಿರುವುದೆಂದು ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲಿ ಅಹ್ಮದ್ ಅವರು ತಿಳಿಸಿದರು.

ಹೊಸ ಗೋಧಿ ನೀತಿ ಕುರಿತು ಇಂದು ರಾತ್ರಿ ರೇಡಿಯೊ ಸಂದರ್ಶನದಲ್ಲಿ ವಿವರಣೆ ನೀಡಿದ ಅಹ್ಮದ್ ಅವರು, ಇಡೀ ಜನಸಂಖ್ಯೆಯಲ್ಲಿ ದುರ್ಬಲವರ್ಗದ ಅಗತ್ಯ ಪೂರೈಕೆಯೇ ಹೊಸ ನೀತಿಯ ಮುಖ್ಯ ಉದ್ದೇಶವಾಗಿರುವುದೆಂದು ಹೇಳಿದರು.

● **ಪ್ರಜಾಸತ್ತೆಗೆ ವಿನಾಶಕಾಲ: ಜೆ.ಪಿ.**

ಪುಣೆ, ಮಾರ್ಚ್ 31– "ಪ್ರಸಕ್ತ ಪರಿಸ್ಥಿತಿಯಲ್ಲಿ ಭಾರತದ ಪ್ರಜಾಸತ್ತೆ ವಿನಾಶದ ಅಂಚಿನತ್ತ ಸಾಗುತ್ತಿದೆ. ಗೊಂದಲಮಯ ಪರಿಸ್ಥಿತಿ, ಉದ್ದೇಶರಹಿತ ಕಾರ್ಯಕ್ರಮಗಳು, ಸೂಕ್ತ ಮಾರ್ಗದರ್ಶನದ ಕೊರತೆ, ಸರ್ಕಾರದ ಮತ್ತು ರಾಜಕೀಯ ರಂಗದ ಎಲ್ಲ ಹಂತಗಳಲ್ಲೂ ಭ್ರಷ್ಟಾಚಾರ- ಇವೆಲ್ಲ ಪ್ರಧಾನಿ ಇಂದಿರಾ ಗಾಂಧಿಯವರ ನಾಯಕತ್ವದ ಲಕ್ಷಣಗಳಿರಬಹುದು. ಆದರೆ ಇವೆಲ್ಲ ಕಾಂಗ್ರೆಸ್ಸನ್ನು, ಪ್ರಜಾಸತ್ತೆಯನ್ನೂ ವಿನಾಶದ ಅಂಚಿಗೆ ದೂಡುತ್ತಿವೆ".

ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣ್ ಅವರು.

ಒಳ್ಳೆಯ ಕಾನೂನು ಮುಂದಿನ ತಲೆಮಾರುಗಳಿಗೆ ಒಳ್ಳೆಯ ಭವಿಷ್ಯ ಕಟ್ಟಿಕೊಡುತ್ತದೆ

2024ರ ಚುನಾವಣೆಗೆ 2014ರ ಕಥೆ

ವಿಶ್ಲೇಷಣೆ

ರೋಹಿಣಿ ನಿಲೇಕಣಿ

ಸರಿಯಾಗಿ ಹತ್ತು ವರ್ಷಗಳ ಹಿಂದೆ ನಾವು ನನ್ನ ಪತಿ ನಂದನ್ ನಿಲೇಕಣಿ ಅವರಿಗಾಗಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರಕ್ಕೆ ಇಳಿದಿದ್ದೆವು. ಆ ಕಥೆ ಕೊನೆಗೊಂಡಿದ್ದು ಹೇಗೆ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಅಂದು ನಾವು ಕಲಿತಿದ್ದು ಈಗ ದೇಶದಾದ್ಯಂತ ಕಾಣುತ್ತಿರುವ ಆ ಕಥೆಯ ಮುಂದುವರಿದ ಭಾಗಕ್ಕೆ ಬಹಳ ಸಂಗತವಾಗಿದೆ.

ರಾಜಕಾರಣವು ವಿಶ್ವದ ಅತ್ಯಂತ ಕಷ್ಟದ ಕೆಲಸವಾಗಿರಬಹುದು ಎಂಬುದು ಸಮಸ್ತ ಮತದಾರರು ಒಪ್ಪಿಕೊಳ್ಳಬಹುದಾದ ಮೊದಲ ಸಂಗತಿ. ರಾಜಕಾರಣಿಯು ವರ್ಷದ ಅಷ್ಟೂ ದಿನ, ಹಗಲು-ರಾತ್ರಿ ಹೇಗೆ ಕೆಲಸ ಮಾಡುತ್ತಾನೆ ಎಂಬುದನ್ನು ನಾವು ಖುದ್ದಾಗಿ ಕಂಡೆವು. ಹಲವು ಬಾರಿ ಯಾವ ಪ್ರತಿಫಲವೂ ಇಲ್ಲದೆ, ಮತದಾರರ ಬೇಡಿಕೆಗಳಿಗೆ ಸ್ಪಂದಿಸಲು ಅವರು ಕೆಲಸ ಮಾಡುತ್ತಾರೆ. ಹೀಗಾಗಿ, ನಾವು ಹತ್ತಾರು ಪಕ್ಷಗಳ ಸಹಸ್ರಾರು ಅಭ್ಯರ್ಥಿಗಳಿಗೆ, ಅವರಲ್ಲಿ ಗೆಲ್ಲುವವರ ಸಂಖ್ಯೆ 543 ಮಾತ್ರ, ಒಮ್ಮೆ ಮೆಚ್ಚುಗೆ ಸೂಚಿಸೋಣವೇ?

ಎರಡನೆಯ ಸಂಗತಿ, ಬಹಳಷ್ಟು ಮತದಾರರು, ಅದರಲ್ಲೂ ಮುಖ್ಯವಾಗಿ ನಗರಗಳ ಸ್ಥಿತಿವಂತ ವರ್ಗದವರು, ಚುನಾವಣೆಗಳನ್ನು ಬಹಳ ಹಗುರವಾಗಿ ತೆಗೆದುಕೊಳ್ಳುತ್ತಾರೆ ಎಂಬುದು. 21 ದೇಶಗಳಲ್ಲಿ ಇರುವಂತೆ ಭಾರತದಲ್ಲಿ ಮತದಾನ ಕಡ್ಡಾಯವಲ್ಲ. ಇಲ್ಲಿ ಮತದಾನವೆಂದರೆ ಹಕ್ಕನ್ನು ಸಂಭ್ರಮದಿಂದ ಚಲಾಯಿಸುವುದು. ಆದರೆ, ಚುನಾವಣೆಗಳಲ್ಲಿ ಭಾಗಿಯಾಗದೆ ಇದ್ದಾಗ ನಮ್ಮನ್ನು ನಾವೇ ನಿರಾಸೆಗೊಳಿಸಿಕೊಂಡಂತಾಗುತ್ತದೆ. ಚುನಾವಣೆಗಳು ಅಮೂಲ್ಯವಾದ ಬೇಸಿಗೆ ರಜೆಯ ಸಂದರ್ಭದಲ್ಲಿ ಬರುತ್ತವೆ, ನಮ್ಮಲ್ಲಿ ಕೆಲವರ ಹೆಸರು ಮತದಾರರ ಪಟ್ಟಿಯಿಂದ ಬಿಟ್ಟುಹೋಗಿರುತ್ತದೆ ಎಂಬುದು ನಿಜ. ಆದರೆ, ಮತದಾನ ಮಾಡುವುದು ಸಮಯ ವ್ಯರ್ಥ ಮಾಡುವ ಕೆಲಸ ಎಂದು ದೇಶದ ಬಹುಜನರು ಆಲೋಚಿಸಿದರೆ ಏನಾಗಬಹುದು ಎಂಬುದನ್ನು ಯೋಚಿಸಿ.

ಮೂರನೆಯ ಸಂಗತಿಯೆಂದರೆ, ತಮ್ಮ ಅಭ್ಯರ್ಥಿಗಳಿಂದ ಜನ ಏನನ್ನು ನಿರೀಕ್ಷಿಸಬೇಕು ಎಂಬುದು. ನಾವು ಆಯ್ಕೆ ಮಾಡುವವರ ಮುಖ್ಯ ಕೆಲಸವು ಒಳ್ಳೆಯ ಶಾಸನ ರಚಿಸುವವರಾಗಿ ಸಂಸತ್ತಿಗೆ ನೆರವಾಗಬೇಕಿರುವುದು ಎಂಬುದು ಬಹುತೇಕ ಮತದಾರರಿಗೆ ಅರ್ಥವಾಗದೇ ಇರಬಹುದು. ಇದನ್ನು ಮಾಧ್ಯಮಗಳು ಮುಖ್ಯವಾಗಿ ತೋರಿಸುವುದಿಲ್ಲ. ರಾಜಕಾರಣಿಗಳು ಈ ಬಗ್ಗೆ ಮಾತನಾಡುವುದು ಬಹಳ ಕಡಿಮೆ.

ಸಂಸದರು ತಮ್ಮ ಕ್ಷೇತ್ರದ ಜನರನ್ನು ಪ್ರತಿನಿಧಿಸುವ, ಸರ್ಕಾರದ ವೆಚ್ಚಗಳಿಗೆ ಅಂಗೀಕಾರ ನೀಡುವ, ಕಾರ್ಯಾಂಗದ ಕೆಲಸಗಳ ಮೇಲೆ ಒಂದಿಷ್ಟು ನಿಗಾ ಇರಿಸುವ ಹೊಣೆ ಹೊಂದಿದ್ದಾರೆ. ಆದರೆ ಅವರ ಮುಖ್ಯ ಕೆಲಸ ಶಾಸನಗಳನ್ನು ಅರ್ಥಮಾಡಿಕೊಂಡು, ಅವುಗಳ ಬಗ್ಗೆ ಚರ್ಚಿಸಿ, ಅವುಗಳ ಅಂಗೀಕಾರಕ್ಕೆ ನೆರವಾಗುವುದು. ಈ ಶಾಸನಗಳು ದೇಶದಲ್ಲಿ ಕೆಲಸಗಳು ಸುಗಮವಾಗಿ, ನ್ಯಾಯ ಸಮ್ಮತವಾಗಿ ನಡೆಯಲು ನೆರವಾಗುತ್ತವೆ. ಆದರೆ 2014ರ ನಮ್ಮ ಅನುಭವದ ಆಧಾರದಲ್ಲಿ ಹೇಳುವುದಾದರೆ, ಮತದಾರರು ಬಯಸುವುದು ಅಥವಾ ಅವರು ಅರ್ಥ ಮಾಡಿಕೊಂಡಿರುವುದು ಇದನ್ನಲ್ಲ.

ಹಲವು ಕೊಳೆಗೇರಿಗಳಲ್ಲಿ, ಮಧ್ಯಮ ವರ್ಗದವರ ಬಡಾವಣೆಗಳಲ್ಲಿ ಹಾಗೂ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ನಾವು ಜನರ ಮಾತಿಗೆ ಇಡೀ ದಿನ ಕಿವಿಯಾಗುತ್ತಿದ್ದೆವು. ಬಹಳ ಸೆಕೆ ಇದ್ದ ಒಂದು ದಿನ ಒಂದು ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ, ನಂದನ್ ಅವರು ಚುನಾಯಿತರಾದರೆ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಹೇಗೆ ಕೆಲಸ ಮಾಡಲಿದ್ದಾರೆ ಎಂಬ ಬಗ್ಗೆ ನನ್ನ ಭಾವುಕ ಮಾತುಗಳನ್ನು ಆಲಿಸಿದ ನಂತರ ವ್ಯಕ್ತಿಯೊಬ್ಬರು 'ಬಹಳ ಚೆನ್ನಾಗಿದೆ. ಆದರೆ ನನ್ನ ನೆರೆಯ ವ್ಯಕ್ತಿ ಮಧ್ಯರಾತ್ರಿ 1 ಗಂಟೆಯ ಹೊತ್ತಿನಲ್ಲಿ ನಾಯಿಗೆ ಆಹಾರ ಹಾಕುತ್ತಿರುತ್ತಾರೆ. ಅವರ ವಿಚಾರವಾಗಿ ಏನು ಮಾಡುತ್ತಾರೆ' ಎಂದು ಪ್ರಶ್ನಿಸಿದ್ದರು! ಮಧ್ಯಮ ವರ್ಗದವರ ಬಡಾವಣೆಯಲ್ಲಿ ಜನ ಬೀದಿ ದೀಪಗಳ ಬಗ್ಗೆ, ಉದ್ಯಾನವನ್ನು ಹಸಿರಾಗಿ ಇರಿಸುವ ಬಗ್ಗೆ ಏನು ಮಾಡುತ್ತೀರಿ ಎಂದು ಪ್ರಶ್ನಿಸಿದ್ದರು. 'ನನ್ನ ಮತ ಉಚಿತವಾಗಿ ಬೇಕಾ? ನೀವು ನನಗೇನು ಕೊಡುತ್ತೀರಿ' ಎಂದು ಮಹಿಳೆಯೊಬ್ಬರು ಪ್ರಶ್ನಿಸಿದ್ದರು. ಕಷ್ಟಪಟ್ಟು ಕೆಲಸ ಮಾಡುವ, ನೈತಿಕವಾಗಿ ಉತ್ತಮನಾಗಿರುವ ಅಭ್ಯರ್ಥಿ ಎಂದು ನಾನು ಏನೋ ಹೇಳಲು ಮುಂದಾದಾಗ, ಆಕೆಗೆ ಅದು ತಮಾಷೆಯಂತೆ ಅನ್ನಿಸಿತು.

ಕೊಳೆಗೇರಿಗಳಲ್ಲಿ ಜನರು 'ಬರೀ ನೀರು ಕೊಡಿ ಸಾಕು' ಎಂದಿದ್ದರು. ಇತರ ಕೆಲವರು ವಿದ್ಯುತ್ ಸಂಪರ್ಕ, ಸಾರಿಗೆ ಮತ್ತು ಆಸ್ಪತ್ರೆಗಳ ಬಗ್ಗೆ ಮಾತನಾಡಿದ್ದರು. ತಮ್ಮಲ್ಲಿನ ಹತಾಶೆಗಳನ್ನು ಅಭ್ಯರ್ಥಿಗಳ ಹಾಗೂ ಅವರ ಜೊತೆಗಾರರ ಎದುರು ಹೇಳಿಕೊಳ್ಳಲು ಅದು ಜನರಿಗೆ ಸಿಕ್ಕ ಒಂದು ಅವಕಾಶವಾಗಿತ್ತು. ಬೆಂಗಳೂರಿನಂತಹ ಸುಶಿಕ್ಷಿತ ನಗರಗಳಲ್ಲಿ ಕೂಡ ಜನರಿಗೆ ತಮ್ಮ ಸಂಸದರಿಂದ ಬೇಕಾಗಿರುವುದು ತಾವು ಒಗ್ಗೂಡಿ ಪಡೆದುಕೊಳ್ಳಬೇಕಿರುವ ಅಥವಾ ತಮ್ಮ ಕಾರ್ಪೊರೇಟರ್‌ಗಳು, ಸ್ಥಳೀಯ ಅಧಿಕಾರಿಗಳು, ಶಾಸಕರಿಂದ ಪಡೆದುಕೊಳ್ಳಬೇಕಿರುವ ಸಂಗತಿಗಳು ಎಂಬುದು ನಮಗೆ ನಿಧಾನವಾಗಿ ಗೊತ್ತಾಯಿತು. ಸ್ಥಳೀಯ ಮಟ್ಟದಲ್ಲಿ ಎದುರಾಗುವ ಸಮಸ್ಯೆಗಳಿಗೆ ಜನರು ನೇರ ಪರಿಹಾರವನ್ನು ಬಯಸುತ್ತಾರೆ.

ಇವುಗಳಿಗೆ ಕಾರಣವಿಲ್ಲ ಎನ್ನಲಾಗದು. ಮೂಲಭೂತ ಸೇವೆಗಳು ಸೇರಿದಂತೆ ಹಲವು ಸೇವೆಗಳನ್ನು ಒದಗಿಸಬೇಕಿರುವುದು ತೀರಾ ಮಹತ್ವದ್ದು. ಆದರೆ ಪ್ರಶ್ನೆ ಇರುವುದು ಅವುಗಳನ್ನು ಒದಗಿಸಬೇಕಿರುವವರು ಯಾರು ಎಂಬುದು. ಇದನ್ನು ಬಹಳ ಸಣ್ಣ ಮೊತ್ತದ ಎಂಪಿಲ್ಯಾಡ್ ಅನುದಾನ ಹೊರತುಪಡಿಸಿ ಬೇರೆ ಯಾವುದೇ ಶಾಸನಾತ್ಮಕ ಸಂಪನ್ಮೂಲ ಅಥವಾ ಅಧಿಕಾರ ಇಲ್ಲದ ಸಂಸದರಿಂದ ಒದಗಿಸುವುದು ಆಗದ ಕೆಲಸ.

ಇನ್ನಷ್ಟು ಹೆಚ್ಚು ಸಂಕೀರ್ಣವಾದ ಸಮಸ್ಯೆಗಳನ್ನು ಪರಿಹರಿಸಲು ಸಮರ್ಥ ಅಧಿಕಾರಿಗಳ ಜೊತೆ ಕೆಲಸ ಮಾಡುವ ಅರಿವಿರುವ ರಾಜಕಾರಣಿಗಳು ಆಧುನಿಕ ಪ್ರಜಾತಂತ್ರ ವ್ಯವಸ್ಥೆಗೆ ಬೇಕು. ಬಹಳ ಸಂದರ್ಭಗಳಲ್ಲಿ ನಮ್ಮ ನೀತಿಗಳು, ಕಾನೂನುಗಳು ಚರ್ಚೆಗಳಿಲ್ಲದೆ ಜಾರಿಗೆ ಬಂದಿರುತ್ತವೆ. ಬಹುತೇಕ ಸಂದರ್ಭಗಳಲ್ಲಿ ಅವು ನಮ್ಮ ದಿನನಿತ್ಯದ ಬದುಕಿನ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎಂಬುದನ್ನು ತಿಳಿಯಲು ಆಗುವುದಿಲ್ಲ.

ಉದಾಹರಣೆಗೆ ಹೇಳುವುದಾದರೆ, 'ದೂರಸಂಪರ್ಕ ಕಾಯ್ದೆ- 2023' ಇಂಟರ್ನೆಟ್ ಸೇವೆಗಳನ್ನು ಅಮಾನತಿನಲ್ಲಿ ಇರಿಸಲು ಸರ್ಕಾರಕ್ಕೆ ಮತ್ತಷ್ಟು ಬಲ ನೀಡುತ್ತದೆ. ಕೆಲವು ಗಂಟೆಗಳಿಗಿಂತ ಹೆಚ್ಚು ಹೊತ್ತಿನವರೆಗೆ ಇಂಟರ್ನೆಟ್ ಇಲ್ಲದೆ ಬದುಕುವುದು ಹೇಗೆಂಬುದು ನಗರವಾಸಿ ಮತದಾರರಿಗೆ ಗೊತ್ತಿಲ್ಲ. ನಮ್ಮ ಸಂಸದರು ಇಲ್ಲಿ ಮಧ್ಯಪ್ರವೇಶಿಸಿ, ಅತ್ಯಂತ ಅಪರೂಪದ ಸಂದರ್ಭಗಳನ್ನು ಹೊರತುಪಡಿಸಿ ಬೇರೆ ಸಂದರ್ಭಗಳಲ್ಲಿ ಇಂಟರ್ನೆಟ್ ಸೇವೆ ಸ್ಥಗಿತಗೊಳಿಸದಂತೆ ನೋಡಿಕೊಳ್ಳಬೇಕು ಅಲ್ಲವೇ? ಕೆಲಸದ ಭವಿಷ್ಯದ ಸ್ವರೂಪಕ್ಕೆ ಸಂಬಂಧಿಸಿದ ನೀತಿಗಳು ಹೊಸ, ಯುವ ಮತದಾರರ ಪಾಲಿಗೆ ಅತ್ಯಂತ ಮಹತ್ವದವು. ಹಾಗೆಯೇ, ಮಹಿಳೆಯರ ಪಾಲಿಗೆ ಸುರಕ್ಷತೆ, ಆರೋಗ್ಯ, ಸಮಾನತೆಗೆ ಸಂಬಂಧಿಸಿದ ಕಾನೂನುಗಳು ತಕ್ಷಣದ ಯಾವುದೇ ಸೌಲಭ್ಯಗಳಿಗಿಂತ ಹೆಚ್ಚು ಮಹತ್ವದ್ದಾಗುತ್ತವೆ. 17ನೇ ಲೋಕಸಭಾ ಚುನಾವಣೆಯಲ್ಲಿ ಮತದಾರರಾಗಿ ನಮಗೆ ಹಳೆಯ ಮಾದರಿಗಳನ್ನು ಪಕ್ಕಕ್ಕೆ ಇರಿಸಲು ಒಂದು ಅವಕಾಶ ಇದೆ. ಹೊಸ ಕಾನೂನುಗಳನ್ನು ರೂಪಿಸುವಾಗ ಅಥವಾ ಹಳೆಯ ಕಾನೂನುಗಳಿಗೆ ತಿದ್ದುಪಡಿ ತರುವಾಗ ನಮ್ಮ ಸ್ವಾತಂತ್ರ್ಯದ ಪರವಾಗಿ ಮಾತನಾಡುವವರನ್ನು ನಾವು ಚುನಾಯಿಸಬಹುದು.

ಒಳ್ಳೆಯ ಸಂಸದೀಯ ಪಟುಗಳು ಒಳ್ಳೆಯ ಶಾಸನಗಳನ್ನು ರೂಪಿಸುತ್ತಾರೆ. ಒಳ್ಳೆಯ ಶಾಸನಗಳು ಒಳ್ಳೆಯ ಸಮಾಜವನ್ನು ಕಟ್ಟುತ್ತವೆ. ಒಳ್ಳೆಯ ಶಾಸನಗಳನ್ನು ಚೆನ್ನಾಗಿ ಅನುಷ್ಠಾನಕ್ಕೆ ತಂದಾಗ ಪ್ರಜಾತಂತ್ರ ವ್ಯವಸ್ಥೆಯು ಸಮಾನತೆ, ನ್ಯಾಯ, ಹಕ್ಕುಗಳಿಂದ ಕೂಡಿ ಹೆಚ್ಚು ಶ್ರೀಮಂತವಾಗುತ್ತದೆ. ಇಂದು ರೂಪುಗೊಳ್ಳುವ ಒಳ್ಳೆಯ ಕಾನೂನುಗಳು ಮುಂದೆ ಅಸಂಖ್ಯ ತಲೆಮಾರುಗಳಿಗೆ ಒಳ್ಳೆಯ ಭವಿಷ್ಯವನ್ನು ಕಟ್ಟಿಕೊಡುತ್ತವೆ.

ಸ್ಥಳೀಯ ಸಮಸ್ಯೆಗಳು ನಮ್ಮ ಸಂಸದರನ್ನು ತಮ್ಮತ್ತ ಸೆಳೆಯಬೇಕಿಲ್ಲ; ಆ ವಿಷಯಗಳಿಗೆ ನಾವು ಸ್ಥಳೀಯ ಸರ್ಕಾರವನ್ನು ಹೊಣೆಗಾರ ಆಗಿಸಬೇಕು. 543 ಮಂದಿ ನಾಯಕರನ್ನು ಸದ್ಯದ ಅಗತ್ಯಗಳಿಗಿಂತ ಹೆಚ್ಚಿನ ಮಹತ್ವದ ವಿಷಯಗಳ ಬಗ್ಗೆ ಗಮನಹರಿಸುವ ಕೆಲಸಕ್ಕೆ ಬಿಡಬಹುದು. ನಮ್ಮೆಲ್ಲರನ್ನು ಚೆನ್ನಾಗಿ ಪೊರೆಯಲು ಬೇಕಿರುವ ಒಳ್ಳೆಯ ಶಾಸನಗಳನ್ನು ರೂಪಿಸುವ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೂಲಕ ಭಾರತದ ಸಮಾಜವು ಭಾರತದ ಪ್ರಜಾತಂತ್ರವನ್ನು ಇನ್ನಷ್ಟು ಗಟ್ಟಿಗೊಳಿಸಬಹುದು.

ಲೇಖಕಿ: 'ರೋಹಿಣಿ ನಿಲೇಕಣಿ ಫಿಲಾಂಥ್ರೊಪೀಸ್'ನ ಅಧ್ಯಕ್ಷೆ
(ಲೇಖನವು ಈ ಮೊದಲು 'ದಿ ಇಂಡಿಯನ್ ಎಕ್ಸ್‌ಪ್ರೆಸ್'ನಲ್ಲಿ ಪ್ರಕಟವಾಗಿತ್ತು)

ಚುರುಮುರಿ

ಸೋಲೋ ಶೋ...

● ನಾರಾಯಣ ರಾಯಚೂರ್

'ಸೋಲೇ ಗೆಲುವಿನ ಸೋಪಾನ'- ಇವೊತ್ತಿನ ದಿನದ ಸೂಕ್ತಿ ನೋಡ್ರಿ. ಜೀವನದಲ್ಲಿ 'ಸೋಲು ಬೇಕು' ಅಂತ ಯಾರು ಬಯಸ್ತಾರೆ?!, ಯಶಸ್ಸು, ಗೆಲುವೇ ಇರಬೇಕು ಅನ್ನೋವ್ರೆ ಎಲ್ಲರೂ'.

'ಹಾಗೇನಿಲ್ಲ. ಇಲ್ಲಿ ನೋಡು, ತಮಿಳ್ನಾಡಿನಲ್ಲೊಬ್ಬರು ಲೋಕಸಭಾ ಅಭ್ಯರ್ಥಿ ಒಂದಲ್ಲ ಎರಡಲ್ಲ 283 ಬಾರಿ ಛಲ ಬಿಡದ ತ್ರಿವಿಕ್ರಮನಂತೆ ಎಲ್ಲ ಚುನಾವಣೆಗಳಲ್ಲೂ ಸ್ಪರ್ಧೆ ಮಾಡ್ತಾ ಬಂದಿದ್ದಾರಂತೆ!'

'ಇದ್ರೆ ಇರಬೇಕ್ರಿ ಅವರಂತಹ ಆಶಾವಾದಿ... ಮೆಚ್ಚಬೇಕವರ ತಾಳ್ಮೆಯನ್ನ' ನಮ್ಮಲ್ಲೂ ಒಬ್ಬರು ಹೊಟ್ಟೆ ಪಕ್ಷದ ರಂಗಸ್ವಾಮಿ ಅಂತ ಇದ್ದರಲ್ರಿ, ಅವರೂ ಗ್ರಾಮ ಪಂಚಾಯಿತಿಯಿಂದ ಹಿಡಿದು ರಾಷ್ಟ್ರಪತಿ ಚುನಾವಣೆವರೆಗೂ ಯಾವುದೇ ಚುನಾವಣೆ ಬಂದ್ರೂ 'ನಾ ರೆಡಿ' ಅಂತ ಅಖಾಡಕ್ಕೆ ಇಳಿದೇಬಿಡತಿದ್ರು!'

'ಇಲ್ಲಿ ಕೇಳು... ಮೆಟ್ಟೂರಲ್ಲಿ ಒಂದು ಪಂಕ್ಚರ್ ಶಾಪ್ ಇಟ್ಕೊಂಡಿರೊ ಪದ್ಮರಾಜನ್‌ಗೆ 'ಸೋಲಿನ ರುಚಿ'ಯೇ ಬಲು ರುಚಿ ಅಂತೆ. ಮೂವತ್ತೈದು ವರ್ಷಗಳಿಂದ ಅವರಿಗಂಟಿಕೊಂಡಿರುವ ಈ ಚುನಾವಣಾ ಸೋಲಿನ ಚಕ್ರ, ಬಹಳಷ್ಟು ಪಂಕ್ಚರ್ ಹಾಕಿಕೊಂಡಿದ್ದರೂ ಹಾಗೇ ಉರುಳ್ತಾನೇ ಇದೆಯಂತೆ. ಈ ಬಾರಿನೂ ಅವರು ಸ್ಪರ್ಧೆಗೆ ಇಳಿದಿದಾರಂತೆ ಧರ್ಮಪುರಿಯಿಂದ'.

'ಧರ್ಮನಾದ್ರೂ ಅವರನ್ನ ಗೆಲ್ಲುತ್ತೇನೋ ನೋಡಬೇಕು. ಏನೇ ಹೇಳಿ, ಪರೀಕ್ಷೆ ಫೇಲಾಯ್ತು, ಉದ್ಯೋಗ ಸಿಗದೇಹೋಯ್ತು ಅಂತ ಕೊರಗಿ ಏನೇನೋ ಅನಾಹುತ ಮಾಡ್ಕೊಳ್ಳೋವ್ರು ಇವರಿಂದ ಪಾಠ ಕಲಿಬೇಕು'.

'ಅಷ್ಟೇ ಅಲ್ಲ... ಪದ್ಮರಾಜನ್‌ರ ಈ ಸೋಲಿನ ಸಾಧನೆ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್' ಅನ್ನೂ ಸೇರಿ ಪ್ರಸಿದ್ಧಿ ತಂದುಕೊಟ್ಟಿದೆಯಂತೆ'.

'ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋಭವ', ಅಂದರೆ, ಹಾಗೋ ಹೀಗೋ ಹ್ಯಾಗೋ ಒಟ್ಟಿನಲ್ಲಿ ಪ್ರಚಾರ, ಪ್ರಸಿದ್ಧಿ ಪಡೀತಿರಬೇಕು ಅಂತ'.

'ಮಾಡ್ಲಿ ಬಿಡು, ಅವನ ದುಡ್ಡು,ಅವನ ಇಚ್ಛೆ... ಎಷ್ಟೋ ಸೋಗಿನ ಪುಢಾರಿಗಳು, ಜನನಾಯಕ ವೇಷಧಾರಿಗಳು, ಯಾರದೋ ದುಡ್ಡಲ್ಲಿ ಏನೇನೋ ಮಾಡಬಾರದ್ದು ಮಾಡಿ 'ಷೋ ಮಾಡಿ' ಮೆರೀತಿರೋವಾಗ, ಇಂತಹ 'ಸೋಲೋ ಶೋ'ಗಳೂ ಗಮನಾರ್ಹವೇ!

ಸಂಗತ

ನಗೆ ಒಗ್ಗರಣೆ: ಹಾಕಿ ಮಣೆ

ಅರ್ಥಪರವಾದ ಹಾಸ್ಯ ಸರ್ವರಿಗೂ ಪ್ರಿಯವಾಗುವುದು

● ಬಿ.ಎಸ್.ಭಗವಾನ್

ಆ ಕನ್ನಡ ಸಿನಿಮಾಗಳು ಕಪ್ಪು ಬಿಳುಪಾದರೇನು? ಪ್ರೇಕ್ಷಕರಲ್ಲಿ ಅವು ಪುಟಿಸುತ್ತಿದ್ದ ಗೊಳ್ಳನೆಯ ನಗು ರಂಗುರಂಗಿನದು. ಸ್ವತಃ ಕೆಮ್ಮುತ್ತಲೇ ವೈದ್ಯ ತನ್ನ ಖಾಸಾ ರೋಗಿಯನ್ನು 'ಈಗ ಹೇಗಿದೆ ದೊರೆ ಕೆಮ್ಮು?' ಅಂತ ವಿಚಾರಿಸುವುದು, ಮನೆಯ ಸೇವಕ ಸುಣ್ಣ ಮಿಕ್ಕಿತೆಂದು ಕಾರಿಗೆ ಬಳಿಯುವುದು ಅಥವಾ 'ನಾಯಿ ಕಚ್ಚದು ತಾನೆ?' ಎನ್ನುವ ಅತಿಥಿಗೆ ಮನೆಯೊಡೆಯ 'ನೀವು ಒಳಗೆ ಬಂದ್ಮೇಲೆ ನೋಡ್ಬೇಕು' ಎಂದು ಸಮಜಾಯಿಷಿ ನೀಡುವುದು... ತೆರೆಯ ಮೇಲಿನ ಇಂತಹ ದೃಶ್ಯಗಳು ಇಂದಿಗೂ ಕಚಗುಳಿಯಿಡುತ್ತವೆ.

ಅದು ದಟ್ಟ ಅರಣ್ಯದಲ್ಲಿ ನಾಯಕ ಹಾಡುತ್ತ ಅಡ್ಡಾಡುವ ದೃಶ್ಯ. ಹಿಂದಿನ ಸಾಲಿನಲ್ಲಿ 'ಇವನೊಂದಿಗೆ ಹಾರ್ಮೋನಿಯಂ, ತಬಲ ಬಾರಿಸುವವರೂ ಕಾಡಿಗೆ ಬಂದ್ರಾ?' ಅಂತ ಪೋರನೊಬ್ಬ ತನ್ನ ಅಪ್ಪನನ್ನು ವಿಚಾರಿಸಿದ್ದ! ಟಾಕೀಸಿನ ಸೂರು ಹಾರುವಂತೆ ಪ್ರೇಕ್ಷಕರು ನಕ್ಕಿದ್ದು ಮರೆಯುವಂತಿಲ್ಲ. ಸ್ವತಃ ಟಾಕೀಸಿನ ಮಾಲೀಕನೇ ಬಂದು ಮಗುವಿನ ಕೆನ್ನೆ ಚಿವುಟಿ 'ಮರಿ, ಸಿನಿಮಾನೇ ಬೇರೆ, ಪ್ರಪಂಚವೇ ಬೇರೆ' ಅಂತ ಮುದ್ದಿಸಿದ್ದ. ಚಿತ್ರ ನಿರ್ಮಾಪಕರು ಮೊದಲು ನರಸಿಂಹರಾಜು ಅವರನ್ನು ಗೊತ್ತು ಮಾಡಿಕೊಂಡೇ ಮುಂದಿನ ಯೋಜನೆಗೆ ಸಿದ್ಧರಾಗುತ್ತಿದ್ದರು. ಅಂದಿನ ಕನ್ನಡ ಸಿನಿಮಾಗಳು ಗಂಭೀರ ಹಾಸ್ಯಕ್ಕೆ ಎಂತಹ ಆದ್ಯತೆ ನೀಡುತ್ತಿದ್ದವೆನ್ನಲು ಇದಕ್ಕೂ ಪುರಾವೆ ಬೇಕೆ?

ನಗಿಸುವ ಸಲುವಾಗಿಯೇ ಒಂದು ಸಂದರ್ಭವನ್ನು ಸೃಷ್ಟಿಸಿಕೊಳ್ಳುವುದು ನೀರಸವಾಗುತ್ತದೆ. ಸೋಗಿನ ನಗೆಪಟುತ್ವಕ್ಕೆ ಸಭೆಯಿಂದ ನೈಜ ಕರತಾಡನ ನಿರೀಕ್ಷಿಸುವುದು ತಾನೆ ಹೇಗೆ? ಅಂತೆಯೆ ನಗಿಸುವ ನಿಮಿತ್ತ ಸುಳ್ಳು ಹೇಳುವುದು ಅಥವಾ ಪ್ರಕರಣಗಳನ್ನು ತಿರುಚುವುದು ಸರಿಯಲ್ಲ. ಸಭಿಕರು 'ತೌಡು ಕುಟ್ಟುವ' ತಮಾಷೆಗಳನ್ನು ಸಮ್ಮತಿಸುವಷ್ಟು ಅಪ್ರಬುದ್ಧರಲ್ಲ. ನಾವು ಸಾದರಪಡಿಸುವ ವಿಡಂಬನೆ ನಮ್ಮ ವ್ಯಕ್ತಿತ್ವವನ್ನು ಬಿಂಬಿಸಬೇಕು. ಪರಿಹಾರಪರ, ಶಬ್ದಪರ ಮತ್ತು ಅರ್ಥಪರವಾದ ಹಾಸ್ಯ ಸರ್ವರಿಗೂ ಪ್ರಿಯವಾಗುತ್ತದೆ. ಪರರನ್ನು ಗುರಿಯಾಗಿಸಿಕೊಂಡ ಹಾಸ್ಯ ಸರ್ವತ್ರ ಕೂಡದು. ಮತ್ತೊಬ್ಬರನ್ನು ಹಂಗಿಸಿ ನಾವು ನಗಬೇಕಾದ್ದಿಲ್ಲ, ನಗಿಸಬೇಕಾದ್ದಿಲ್ಲ. ಎಚ್ಚರ ತಪ್ಪಿ ಆಡಿದ ಮಾತನ್ನು ಹಿಂಪಡೆಯಲಾಗದು.

ಜಾಗರೂಕತೆಯ ಜಾಣ ನುಡಿಯಾದ ಹಾಸ್ಯ ಒಂದು ಜಾದೂ ಅಲ್ಲ. ಅದು ಸಮಯಪ್ರಜ್ಞೆಯಿಂದ ಉದ್ಗರಿಸಿ ನಮ್ಮನ್ನು ವರ್ತಮಾನದಲ್ಲಿ ಇರಿಸುವ ಸಹಜ ಮಾರ್ಗ. ಮನೆಯಿಂದ ಹೊರಡುವಾಗ ಛತ್ರಿ ಮರೆತು ಬಂದಿರಲ್ಲ ಅಂತ ನಿಮ್ಮನ್ನು ಪರಿಚಿತರೊಬ್ಬರು ಪ್ರಶ್ನಿಸುತ್ತಾರೆನ್ನಿ. 'ಪರವಾಗಿಲ್ಲ ಬಿಡಿ, ನೀವಿದ್ದೀರಲ್ಲ' ಎಂಬ ನಿಮ್ಮ ಉತ್ತರ ನಿಸ್ಸಂದೇಹವಾಗಿ ಇಬ್ಬರನ್ನೂ ನಗಿಸಿರುತ್ತದೆ! ನಾವು ಉಲಿಯುವ ಮೊನಚು ನಮ್ಮ ಕಡು ವೈರಿಗಳ ನಡುವೆಯೂ ತತ್ಕಾಲಕ್ಕಾದರೂ ಒಂದು ತಡೆಗೋಡೆ ನಿರ್ಮಿಸಿರುತ್ತದೆ. ಅನೇಕರಿಗೆ ರಾಜಕೀಯಕ್ಕೆ ಸಂಬಂಧಿಸಿದ ವಿಡಂಬನೆ ಹಿಡಿಸದು. ಕಾರಣವೆಂದರೆ, ರಾಜಕಾರಣಿಗಳ ಪೈಕಿ ಕೆಲವರಾದರೂ ನಾಳೆ 'ಚುನಾಹಿತ'ರಾಗಿಬಿಡುತ್ತಾರೆ!

ಮಹಾಕವಿ ಕಾಳಿದಾಸ ತನ್ನ ನಾಟಕಗಳಲ್ಲಿ ಸೊಗಸಾಗಿ ವ್ಯಂಗ್ಯ, ವಿಡಂಬನೆಗಳನ್ನು ಬರಮಾಡಿಕೊಂಡಿದ್ದಾನೆ. 'ಅಭಿಜ್ಞಾನ ಶಾಕುಂತಲ' ನಾಟಕದಲ್ಲಿ ದುಷ್ಯಂತನಿಗೆ ತಾನು ಬಿಡಿಸಿದ ಶಕುಂತಲೆಯ ಚಿತ್ರ ಏಕೊ ಅಪೂರ್ಣ ಎನ್ನಿಸುತ್ತದೆ. ಇದನ್ನು ಗಮನಿಸುವ ವಿದೂಷಕ ಮೆಲುಧ್ವನಿಯಲ್ಲಿ 'ಚಿತ್ರಪಟದ ತುಂಬ ನೇತಾಡುವ ಗಡ್ಡಗಳುಳ್ಳ ಋಷಿಗಳು ಇರಬಹುದಿತ್ತೇನೊ?' ಎನ್ನುತ್ತಾನೆ. ಕವಿಯ ಹಾಸ್ಯಪ್ರಜ್ಞೆ ನಿಜಕ್ಕೂ ಅದೆಷ್ಟು ಪ್ರಖರ. ಕ್ಷೇಮೇಂದ್ರ 11ನೇ ಶತಮಾನದಲ್ಲಿದ್ದ, ಕಾಶ್ಮೀರದ ಕ್ರಾಂತಿಕಾರಿ ಸಂಸ್ಕೃತ ಕವಿ. ಆತ ತನ್ನ 'ದೇಶೋಪದೇಶ' ಕೃತಿಯಲ್ಲಿ 'ಅವನೋ ಕಲಹಪ್ರಿಯ ಹಾಗೂ ನಪುಂಸಕ ಲಿಂಗ ಮಾತ್ರ ಗೊತ್ತಿರುವ ವ್ಯಾಕರಣ ಪಂಡಿತ' ಎಂದು ಒಬ್ಬನನ್ನು ವಿಡಂಬಿಸುವುದು ಗಮನ ಸೆಳೆಯುತ್ತದೆ. ಹಾಸ್ಯ ಒಂದು 'ರಹಸ್ಯ ಒಗ್ಗರಣೆ'. ನಾವು ಎದುರುಗೊಳ್ಳುವ ಪ್ರತಿಯೊಂದು ಘಟನೆ ಮತ್ತು ಸಂಗತಿಯಲ್ಲೂ ಒಂದು ನಗು ಅಂತರ್ಗತವಾಗಿರುತ್ತದೆ. ಯಾವುದೇ ಪರಿಸ್ಥಿತಿ ತಮಾಷೆಗೆ ನಿಲುಕದಷ್ಟು ಗೋಜಲಲ್ಲ. 'ನಾಲ್ಕು ಚಕ್ರಗಳ ಹಾರುವ ಯಂತ್ರ' ಎಂದೊಡನೆ, ಇದ್ಯಾವುದಪ್ಪ ಹೊಸ ವಿಮಾನ ಎನ್ನಿಸುತ್ತದೆ. ಆದರೆ ಅದು ನೊಣಗಳ ಹಿಂಡು ಬೆನ್ನೇರಿದ ಕಸದ ಲಾರಿ!

ಹಾಸ್ಯಪ್ರಜ್ಞೆಗೆ ಪರ್ಯಾಯ ಹೆಸರೇ ಆಗಿದ್ದರು ಬ್ರಿಟನ್ನಿನ ಪ್ರಧಾನ ಮಂತ್ರಿಯಾಗಿದ್ದ ಮುತ್ಸದ್ದಿ ಸರ್ ವಿನ್‌ಸ್ಟನ್ ಚರ್ಚಿಲ್. ಆ ದಿಸೆಯಲ್ಲಿನ ಅವರ ಬಗೆಗಿನ ವೃತ್ತಾಂತಗಳಿಗೆ ಲೆಕ್ಕವಿಲ್ಲ. ಒಮ್ಮೆ ಚರ್ಚಿಲ್ಲರನ್ನು ಕಂಡ ಮಹಿಳೆಯೊಬ್ಬಳು 'ಸರ್, ನಾನು ನಿಮ್ಮ ಪತ್ನಿಯಾಗಿದ್ದರೆ ನಿಮಗೆ ವಿಷಪೂರಿತ ಚಹಾ ನೀಡುತ್ತಿದ್ದೆ' ಎಂದಳು. ಒಡನೆಯೆ ಚರ್ಚಿಲ್ ಹೇಳಿದರಂತೆ, 'ಮೇಡಂ, ನೀವು ನನ್ನ ಪತ್ನಿಯಾಗಿದ್ದರೆ ನಾನು ಆ ಚಹಾ ಕುಡಿಯುತ್ತಿದ್ದೆ!' ಸಾಧು ಸಂತರು, ವಿಜ್ಞಾನಿಗಳು, ದಾರ್ಶನಿಕರು, ಸಾಧಕರು ಹಾಸ್ಯಪ್ರಿಯತೆಯನ್ನು ಬದಿಗಿರಿಸಿದ ನಿದರ್ಶನಗಳೇ ಇಲ್ಲ. ವಿನೋದದಿಂದಲೇ ತಿಳಿಗೇಡಿತನದ ಅನಾವರಣ, ಅನಿಷ್ಟ ನಿವಾರಣ ಎನ್ನುವುದು ಅವರೆಲ್ಲರ ದೃಢ ನಿಲುವು.

ಮಹಾತ್ಮ ಗಾಂಧಿ 'ನನಗೆ ಹಾಸ್ಯ ಮನೋಭಾವ ಇರದಿದ್ದರೆ ನಾನು ಹುಚ್ಚನಾಗುತ್ತಿದ್ದೆ' ಎನ್ನುತ್ತಿದ್ದರು. 'ನಿಘಂಟು ಬ್ರಹ್ಮ' ಖ್ಯಾತಿಯ ಪ್ರೊ. ಜೀ.ವಿ. ಅವರನ್ನು ಸಂದರ್ಶಿಸಿದವರಿಗೆ ಅವರ ಮನೆಯ ಸ್ಮರಣಿಕೆಗಳ ಓರಣ ಕಣ್ತಪ್ಪುವುದುಂಟೇ? ಅಭಿಮಾನಿಗಳ ವಾರೆನೋಟಕ್ಕೆ ಪ್ರೊಫೆಸರರ ಪ್ರತಿಕ್ರಿಯೆ ನಿರಾಳವಾಗಿರುತ್ತಿತ್ತು: 'ನೋಡಿ, ಮೊದಲು ಯಾರೋ ಒಂದು ತಪ್ಪು ಮಾಡಿದರು. ಅದನ್ನೇ ಉಳಿದವರೂ ಹಿಂಬಾಲಿಸಿದರು'.

ವಾಚಕರ ವಾಣಿ

ಅನ್ಯದೇಶಗಳಿಗೇಕೆ ಭಾರತದ ಉಸಾಬರಿ?

ಜರ್ಮನಿ, ಅಮೆರಿಕ ದೇಶಗಳು ಭಾರತದ ರಾಜಕೀಯ, ನ್ಯಾಯಿಕ ಪ್ರಕ್ರಿಯೆಗಳ ಬಗ್ಗೆ ಅನಗತ್ಯವಾಗಿ ತಮ್ಮ ಹೇಳಿಕೆಗಳನ್ನು ದಾಖಲಿಸಿವೆ. ಭಾರತವು ಯಾವತ್ತೂ ಅನ್ಯದೇಶಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ, ವಿರುದ್ಧದ ಹೇಳಿಕೆಗಳನ್ನು ನೀಡುವುದಿಲ್ಲ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿದ್ದಕ್ಕೆ ಅಸಂಬದ್ಧವಾದ ಹೇಳಿಕೆ ನೀಡಿರುವುದು ಈ ದೇಶಗಳಿಗೆ ತಕ್ಕುದಲ್ಲ. ಭಾರತದ ಸಾರ್ವಭೌಮತ್ವವನ್ನು ಪ್ರಶ್ನಿಸುವ ಅಧಿಕಾರ ಇತರ ದೇಶಗಳಿಗೆ ಇಲ್ಲವೇ ಇಲ್ಲ. ಭಾರತ ತನ್ನ ನಿಲುವನ್ನು ಸ್ಪಷ್ಟಪಡಿಸಿ, ಕಠಿಣ ಪದಗಳಲ್ಲಿ ತನ್ನ ಆಕ್ಷೇಪವನ್ನು ವ್ಯಕ್ತಪಡಿಸಿರುವುದು ಸರಿಯಾಗಿಯೇ ಇದೆ.

ಚೆನ್ನು ಅ. ಹಿರೇಮಠ, ರಾಣೆಬೆನ್ನೂರು

ಒಮ್ಮುಖದ ನಿಲುವು ತರವಲ್ಲ

ಲೋಕಸಭಾ ಚುನಾವಣೆ, ರಾಜಕೀಯ ಸಂಗತಿಗಳು ಹಾಗೂ ರಾಜ್ಯದ ಅರ್ಥವ್ಯವಸ್ಥೆ ಕುರಿತು ಸಾಹಿತಿ ಎಸ್.ಎಲ್. ಭೈರಪ್ಪ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ (ಪ್ರ.ವಾ., ಮಾರ್ಚ್ 30). ರಾಜ್ಯ ಸರ್ಕಾರ ನೀಡುತ್ತಿರುವ ಕೆಲವು ಉಚಿತ ಸೌಲಭ್ಯಗಳಿಂದ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ವ್ಯತಿರಿಕ್ತವಾದ ಪರಿಣಾಮ ಆಗುತ್ತದೆ ಎಂದಿದ್ದಾರೆ. ಈ ಬಗ್ಗೆ ವಿಭಿನ್ನ ಅಭಿಪ್ರಾಯಗಳಿವೆ. ಸಮಾಜದ ತಳಸ್ತರದ ಜನರಿಗೆ ಉಚಿತ ಕೊಡುಗೆಗಳು ಸ್ವಲ್ಪಮಟ್ಟಿಗೆ ಆರ್ಥಿಕ ಬಲ ನೀಡಿದ್ದು ಸುಳ್ಳಲ್ಲ. ಕೇಂದ್ರ ಕೊಟ್ಟದ್ದನ್ನೆಲ್ಲಾ ರಾಜ್ಯ ಖರ್ಚು ಮಾಡಿ ಕೇಂದ್ರದ ಅರ್ಥ ಸಚಿವರನ್ನು ಬೈಯುತ್ತಿದೆ ಎಂದು ಅವರು ಹೇಳಿದ್ದಾರೆ. ಕೇಂದ್ರ ಬಿಡುಗಡೆ ಮಾಡಿದ ತೆರಿಗೆ ಪಾಲಾಗಲೀ ಅಥವಾ ರಾಜ್ಯ ಸಂಗ್ರಹಿಸಿದ ತೆರಿಗೆಯಾಗಲೀ ರಾಜ್ಯದ ಹಿತದೃಷ್ಟಿಯಿಂದ ವೆಚ್ಚ ಮಾಡಲಿಕ್ಕೇ ಇರುವುದು. ಈ ಕುರಿತು ರಾಜಕಾರಣಿಗಳ ಧಾಟಿಯಲ್ಲಿ ಮಾತನಾಡುವುದು ಸರಿಯಲ್ಲ. ಕೇಂದ್ರ ಮತ್ತು ಬಿಜೆಪಿಯು ಆಡಳಿತ ನಡೆಸುತ್ತಿರುವ ಇತರ ರಾಜ್ಯಗಳ ಸರ್ಕಾರಗಳು ಕೂಡ ಇಂತಹ ಕೆಲವು ಉಚಿತ ಕೊಡುಗೆಗಳನ್ನು ನೀಡುತ್ತಿರುವುದನ್ನು ಭೈರಪ್ಪನವರು ಗಮನಿಸಿರಲಿಕ್ಕೆ ಸಾಕು.

ಕೇಂದ್ರದ ತೆರಿಗೆಯಲ್ಲಿನ ರಾಜ್ಯದ ಪಾಲು 15ನೇ ಹಣಕಾಸು ಆಯೋಗದಿಂದಾಗಿ ಇಳಿದಿರುವುದು ಮತ್ತು ಪ್ರತಿವರ್ಷ ಅದರಿಂದಾಗಿ ಕರ್ನಾಟಕಕ್ಕೆ 10-12 ಸಾವಿರ ಕೋಟಿಯಷ್ಟು ಅನುದಾನ ನಷ್ಟವಾಗಿರುವುದು, ಹಣಕಾಸು ಆಯೋಗ ನಿಗದಿಪಡಿಸಿದ ಇತರ ಕೆಲವು ಅನುದಾನಗಳನ್ನು ಕೇಂದ್ರವು ರಾಜ್ಯಕ್ಕೆ ನೀಡದಿರುವುದು, ಕೇಂದ್ರ ಆಕರಿಸುವ ಸೆಸ್, ಕರ ಆದಾಯವನ್ನು ರಾಜ್ಯ ಸರ್ಕಾರಗಳೊಂದಿಗೆ ಹಂಚಿಕೊಳ್ಳುವುದನ್ನು ಸ್ಥಗಿತಗೊಳಿಸಿರುವುದು, ರಾಜ್ಯದಲ್ಲಿ ಈ ಹಿಂದೆ ಉಂಟಾದ ನೆರೆಹಾವಳಿ ಕಾಲದಲ್ಲಿ ಹಾಗೂ ಈ ವರ್ಷ ತೀವ್ರ ಬರದಿಂದ ತತ್ತರಿಸಿದರೂ ಕೇಂದ್ರವು ಯಾವುದೇ ರೀತಿ ಸ್ಪಂದಿಸದಿರುವುದು ಭೈರಪ್ಪನವರಿಗೆ ಗೋಚರಿಸದಿರುವುದು ಅಚ್ಚರಿಯ ಸಂಗತಿ. ಹಿರಿಯ ಸಾಹಿತಿಗಳು, ಲೇಖಕರು ಒಂದು ಪಕ್ಷದ ನೇತೃತ್ವದ ಸರ್ಕಾರದ ಕುರಿತು ಒಮ್ಮುಖದ ಒಲವು, ನಿಲುವು ತೋರುವ ಬದಲು ರಾಜ್ಯದ ಸಂಕಟಗಳಿಗೆ ಧ್ವನಿಯಾಗಿ, ವಸ್ತುನಿಷ್ಠ, ನಿಷ್ಠುರ, ನಿಷ್ಪಕ್ಷಪಾತ ನಿಲುವು ತಾಳಿದರೆ ಅವರ ಮಾತುಗಳಿಗೆ ಬೆಲೆ ಇರುತ್ತದೆ.

ವೆಂಕಟೇಶ ಮಾಚಕನೂರ, ಧಾರವಾಡ

ಮಕ್ಕಳ ಆಟಿಕೆ ಪರಿಸರಸ್ನೇಹಿ ಆಗಿರಲಿ

ಪ್ರಸ್ತುತ ರಾಜ್ಯದಾದ್ಯಂತ ವಿವಿಧ ತೇರು, ಜಾತ್ರೆಗಳು ವಿಜೃಂಭಣೆಯಿಂದ ಜರುಗುತ್ತಿವೆ. ಮಕ್ಕಳ ಆಟಿಕೆಗಳಿಗೆ ಎಲ್ಲಿಲ್ಲದ ಬೇಡಿಕೆ ಇದೆ. ತಂತ್ರಜ್ಞಾನದ ಮೂಲಕ ವಿವಿಧ ಆಟಿಕೆಗಳು ಮಾರುಕಟ್ಟೆ ಏರಿ ಇಂದು ಮಕ್ಕಳನ್ನು ಅಯಸ್ಕಾಂತದಂತೆ ಸೆಳೆಯುತ್ತಿವೆ ಜೊತೆಗೆ ಪೋಷಕರ ಜೇಬನ್ನೂ ಬರಿದಾಗಿಸುತ್ತಿವೆ. ಆದರೆ ಈ ತೆರನಾದ ಆಟಿಕೆಗಳು ಮಕ್ಕಳಿಗೆ ಮನರಂಜನೆ ಜೊತೆಗೆ ಅಪಾಯವನ್ನೂ ಉಂಟುಮಾಡುತ್ತಿವೆ. ಹೌದು, ಆಟಿಕೆಗಳ ತಯಾರಿಕೆಗೆ ಬಳಸಿರುವ ವಸ್ತುಗಳು, ಬಣ್ಣ, ಅವು ಹೊರಡಿಸುವ ಧ್ವನಿ ಮತ್ತು ಬೆಳಕು ಮಕ್ಕಳಿಗಷ್ಟೇ ಅಲ್ಲದೆ ಇತರರಿಗೂ ಅಪಾಯಕಾರಿ. ಉದಾಹರಣೆಗೆ, ಮಕ್ಕಳ ಕೈಗೆ ಸುಲಭವಾಗಿ ಸಿಗುತ್ತಿರುವ ಲೇಸರ್ ಲೈಟ್‌ಗಳು. ನೇರ ಬೆಳಕಿನ ಗಾಢ ಬಣ್ಣದ ಈ ಉಪಕರಣಗಳನ್ನು ಮಕ್ಕಳು ಗೋಡೆಗೆ, ಪಶು-ಪಕ್ಷಿಗಳಿಗೆ ಹಾಗೂ ಮನುಷ್ಯರ ಕಣ್ಣಿಗೂ ಬಿಟ್ಟು ಖುಷಿ ಪಡುತ್ತಿರುವುದನ್ನು ಕಾಣುತ್ತೇವೆ. 'ಈ ಬೆಳಕು ಕಣ್ಣಿಗೆ ಅಪಾಯಕಾರಿ ಹಾಗೂ ಮಕ್ಕಳ ಕೈಗೆ ನೀಡದಿರಿ' ಎಂದು ಅದರ ಮೇಲೆಯೇ ಸೂಚಿಸಲಾಗಿದೆ.

ಇದರಂತೆಯೇ ಅನೇಕ ಆಟಿಕೆಗಳು ಸಹ ಅಪಾಯಕಾರಿ ಹಾಗೂ ಮಾಲಿನ್ಯಕಾರಕಗಳಾಗಿವೆ. ಸಂಬಂಧಪಟ್ಟ ಇಲಾಖೆ ಅಥವಾ ವ್ಯವಸ್ಥೆ ಈ ಬಗ್ಗೆ ಗಮನಹರಿಸಬೇಕಿದೆ. ಆಟಿಕೆಗಳ ಉತ್ಪಾದನೆ, ದಾಸ್ತಾನು ಹಾಗೂ ಮಾರಾಟಕ್ಕೆ ಸೂಕ್ತ ನಿಯಮಾವಳಿಗಳನ್ನು ರೂಪಿಸಬೇಕಿದೆ. ಮರುಬಳಕೆಯ ವಸ್ತುಗಳಿಂದಾದ ಪರಿಸರಸ್ನೇಹಿ ಆಟಿಕೆಗಳನ್ನು ಖರೀದಿಸಲು ಪೋಷಕರು ಮುಂದಾಗಬೇಕಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಶಿಕ್ಷಣ ಕ್ಷೇತ್ರ: ಬದಲಾಗಬೇಕಿದೆ ಆಡಳಿತ ವ್ಯವಸ್ಥೆ

'ಶಾಲಾ ಶಿಕ್ಷಣ: ವಾಸ್ತವಿಕ ಸವಾಲು' ಎಂಬ ಅರವಿಂದ ಚೊಕ್ಕಾಡಿ ಅವರ ಲೇಖನ (ಪ್ರ.ವಾ., ಮಾರ್ಚ್ 21) ಇಂದಿನ ಶಾಲಾ ಶಿಕ್ಷಣದ ಮೇಲೆ ಕ್ಷ ಕಿರಣ ಬೀರಿದೆ. ಶಿಕ್ಷಣ ಕ್ಷೇತ್ರವು ಭಾರತದಲ್ಲಿ ಅತ್ಯಂತ ಪ್ರಮುಖ ರಂಗ. ಏಕೆಂದರೆ ಶತಶತಮಾನಗಳಿಂದಲೂ ಶಿಕ್ಷಣದಿಂದ ವಂಚಿತವಾದ ಜನಸಮುದಾಯಗಳು ಇಂದಿಗೂ ಆ ಪರಿಸ್ಥಿತಿಯಿಂದ ಹೊರಬಂದಿಲ್ಲ. ಸಾಮಾಜೀಕರಣ ಪ್ರಕ್ರಿಯೆಗೆ ಒಳಪಡದ ಹಲವಾರು ಸಮುದಾಯಗಳು ದೇಶದಲ್ಲಿವೆ. ಶಿಕ್ಷಣಕ್ಕಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆಯಾದರೂ ಗುಣಮಟ್ಟ ಪಾತಾಳ ತಲುಪಿದೆ. ಭಾಷೆಯ ಮೇಲೂ ವಿದ್ಯಾರ್ಥಿಗಳಿಗೆ ಹಿಡಿತ ಇಲ್ಲದಂತೆ ಆಗಿದೆ. ಹೀಗಿದ್ದಾಗ ಮುಖ್ಯ ವಿಷಯಗಳು ಅವರಿಗೆ ಅರ್ಥ ಆಗುವುದೇ ಇಲ್ಲ. ಇತ್ತ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ, ಆಸಕ್ತಿಯಿಂದ ಕಲಿಯುತ್ತಿಲ್ಲ ಮತ್ತು ಸ್ವ ಇಚ್ಛೆಯಿಂದ ಕಲಿಸುವ ಶಿಕ್ಷಕರ ಪ್ರಮಾಣವೂ ಕಡಿಮೆಯಾಗಿದೆ. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಪ್ರಭಾವ ಮಕ್ಕಳನ್ನು ಹೆಚ್ಚು ಆಕರ್ಷಿಸುತ್ತಿದೆ. ಇದರಿಂದಾಗಿ ಕಲಿಕೆಯ ಕಡೆಗೆ ಅವರ ಆಸಕ್ತಿ ಕಡಿಮೆಯಾಗುತ್ತಿದೆ ಎನ್ನಲೇಬೇಕು.

ಲೇಖಕರು ಪ್ರತಿಪಾದಿಸಿದ ಹಾಗೆ, ಆಡಳಿತ ವ್ಯವಸ್ಥೆಯಲ್ಲಿಯೂ ಮಾರ್ಪಾಡು ಆಗಬೇಕಾದ ಅವಶ್ಯಕತೆ ಇದೆ. ಶಿಕ್ಷಕರ ಹೆಚ್ಚುವರಿ ಜವಾಬ್ದಾರಿಗಳನ್ನು ಕಡಿಮೆ ಮಾಡಬೇಕಾಗಿದೆ. ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸುವಂತೆ ಅವರನ್ನು ಉತ್ತೇಜಿಸಬೇಕಾಗಿದೆ. ಅಂಕಗಳ ಸಾಧನೆಗಿಂತ ಜೀವನದಲ್ಲಿ ಯಶಸ್ಸು ಕಾಣುವ ಶಿಕ್ಷಣ ಇಂದಿನ ಅಗತ್ಯ. ವಿದ್ಯಾರ್ಥಿಗೆ ಕಲಿಯಬೇಕೆನ್ನುವ ತುಡಿತ ಮತ್ತು ಶಿಕ್ಷಕರಿಗೆ ಕಲಿಸಬೇಕೆನ್ನುವ ತಹತಹ ಇದ್ದರೆ ಏನೆಲ್ಲಾ ಆಗಲು ಸಾಧ್ಯವಿದೆ. ಆಗ ಬೇರೆಲ್ಲಾ ಕ್ಷೇತ್ರಗಳು ಸಹ ತಮ್ಮಷ್ಟಕ್ಕೆ ತಾವು ಸಕಾರಾತ್ಮಕವಾಗಿ ಬದಲಾವಣೆ ಕಾಣುತ್ತವೆ.

ಬಿ.ಆರ್.ಅಣ್ಣಾಸಾಗರ, ಸೇಡಂ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾ ಮತ
ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ರಾಜಸ್ಥಾನ: ಬಿಜೆಪಿ ದಿಗ್ವಿಜಯ ಮತ್ತು 'ಇಂಡಿಯಾ' ಮೈತ್ರಿಕೂಟ

ಭೌಗೋಳಿಕ ವೈವಿಧ್ಯವೂ ಅಲ್ಲಿನ ಜಾತಿ ಸಮೀಕರಣ ಅಂಶಗಳೂ ರಾಜಮನೆತನವೂ ರಾಜಸ್ಥಾನದ ರಾಜಕೀಯವನ್ನು ಪ್ರಭಾವಿಸುತ್ತವೆ. ಕಾಂಗ್ರೆಸ್ ಮತ್ತು ಬಿಜೆಪಿ ಇವುಗಳ ಮಧ್ಯೆಯೇ ರಾಜಸ್ಥಾನದ ರಾಜಕೀಯವು ಗಿರಕಿ ಹೊಡೆಯುತ್ತಿತ್ತು. ಆದರೆ, 2014ರಿಂದ ಈಚೆಗೆ ಹುಟ್ಟಿಕೊಂಡ ಜಾತಿ ಆಧಾರಿತ ಸಣ್ಣ ಸಣ್ಣ ಪಕ್ಷಗಳು, ಪ್ರಾದೇಶಿಕವಾಗಿ ಬಿಗಿ ಹಿಡಿತ ಸಾಧಿಸಿರುವ ಪುಟ್ಟ ಪಕ್ಷಗಳು ರಾಜಸ್ಥಾನದ ರಾಜಕೀಯ ಚಿತ್ರಣವನ್ನು ಬದಲಾಯಿಸಿವೆ. ವರ್ಷದಿಂದ ವರ್ಷಕ್ಕೆ, ಚುನಾವಣೆಯಿಂದ ಚುನಾವಣೆಗೆ ಮತಪ್ರಮಾಣವನ್ನು ಹೆಚ್ಚಿಸಿಕೊಳ್ಳುತ್ತಿರುವ ಇವುಗಳು ಪ್ರಬಲ ಸ್ಪರ್ಧೆ ಒಡ್ಡುತ್ತಿವೆ. ಈ ಪಕ್ಷಗಳು ಬಿಜೆಪಿಗೆ ಹೊಡೆತ ಕೊಡುವುದಕ್ಕಿಂತ ಕಾಂಗ್ರೆಸ್ ಮತಗಳನ್ನು ಒಡೆಯುತ್ತಿವೆ. ಆದ್ದರಿಂದಲೇ ಕಾಂಗ್ರೆಸ್ ತನ್ನ ಮತಗಳನ್ನು, ರಾಜಕೀಯ ಪ್ರಭಾವವನ್ನು ಕಳೆದುಕೊಳ್ಳುತ್ತಿದೆ. ಬಿಜೆಪಿ ಶಕ್ತಿಶಾಲಿಯಾಗುತ್ತಲೇ ಇದೆ

ಪ್ರಜಾವಾಣಿ ವಾರ್ತೆ

ಹಿಂದೊಮ್ಮೆ ಕಾಂಗ್ರೆಸ್‌ನ ಬಿಗಿ ಹಿಡಿತದಲ್ಲಿದ್ದ ರಾಜಸ್ಥಾನವು ನಿಧಾನವಾಗಿ ಬಿಜೆಪಿ ಕಡೆಗೆ ವಾಲಿದೆ. ಮೇಲ್ವರ್ಗದವರ ಹಿಡಿತ ಪ್ರಬಲವಾಗಿರುವ ಇಲ್ಲಿ, ಬಿಜೆಪಿಯ ಧರ್ಮದ ರಾಜಕಾರಣಕ್ಕೆ ಮನ್ನಣೆ ಸಿಗುತ್ತಲೇ ಬಂದಿದೆ. ಹಾಗೆಯೇ ಕಾಂಗ್ರೆಸ್ ಕೂಡ ಅಧಿಕಾರ ನಡೆಸಿದೆ. 2018ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿತ್ತು. ಆದರೆ, ಐದು ವರ್ಷಗಳಲ್ಲಿ ಸರ್ಕಾರವು ಹಲವು ಸವಾಲುಗಳನ್ನೂ ಎದುರಿಸಿತು. ಸವಾಲುಗಳೊಂದಿಗೇ ಐದು ವರ್ಷ ಪೂರೈಸಿದ ಕಾಂಗ್ರೆಸ್ ಸರ್ಕಾರವು 2023ರ ಚುನಾವಣೆಯಲ್ಲಿ ಸೋಲುಂಡು, ಈಗ ಬಿಜೆಪಿ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಕಾಂಗ್ರೆಸ್‌ನ ಅಶೋಕ್ ಗೆಹಲೋತ್ ಸರ್ಕಾರವು ಹಲವು ಜನಪರ ಯೋಜನೆಗಳನ್ನು ಜಾರಿಗೆ ತಂದಿತ್ತು. ವಿಧಾನಸಭೆ ಚುನಾವಣೆಯಲ್ಲಿ ಜನರು ಈ ಯೋಜನೆಗಳ ಬಗ್ಗೆ ಉತ್ತಮ ಪ್ರತಿಕ್ರಿಯೆ ನೀಡಿದರಾದರೂ ಸರ್ಕಾರ ಮತ್ತೊಮ್ಮೆ ಆರಿಸಿ ಬರಲಿಲ್ಲ. ಒಮ್ಮೆ ಐದು ವರ್ಷದ ಅವಧಿ ಪೂರೈಸಿದ ಸರ್ಕಾರವನ್ನು ಜನರು ಮರುಆಯ್ಕೆ ಮಾಡುವುದಿಲ್ಲ ಎಂಬುದು ರಾಜ್ಯದ ಸಂಪ್ರದಾಯದಂತೆ ಮುಂದುವರಿಯುತ್ತಿದೆ. ಆದರೆ, ಲೋಕಸಭೆ ಚುನಾವಣೆ ವಿಷಯದಲ್ಲಿ ಈ ಸಂಪ್ರದಾಯವು ಪಾಲನೆ ಆಗಿಲ್ಲ. ಕಳೆದ ಎರಡು ಲೋಕಸಭಾ ಚುನಾವಣೆಯಿಂದ ಬಿಜೆಪಿಯು ರಾಜಸ್ಥಾನದಲ್ಲಿ ದಿಗ್ವಿಜಯ ಸಾಧಿಸಿದೆ. ತನ್ನ ಮತಪ್ರಮಾಣವನ್ನೂ ಹೆಚ್ಚಿಸಿಕೊಂಡಿದೆ. ಕಾಂಗ್ರೆಸ್ ಒಂದೂ ಸ್ಥಾನ ಗೆಲ್ಲಲಿಲ್ಲ. 2009ರಲ್ಲಿ ಕಾಂಗ್ರೆಸ್ 20 ಸ್ಥಾನಗಳನ್ನು ಗೆದ್ದಿತ್ತಾದರೂ 2014ರ ಚುನಾವಣೆಯಲ್ಲಿ ಅಷ್ಟೂ 25 ಸ್ಥಾನಗಳನ್ನು ಬಿಜೆಪಿ ಗೆದ್ದುಕೊಂಡಿತ್ತು.

ಯಾವ ಪಕ್ಷವು ಅಧಿಕಾರದಲ್ಲಿರುತ್ತದೊ ಅದೇ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲುತ್ತಿತ್ತು ಎಂಬುದನ್ನು 2009 ಮತ್ತು 2014ರ ಚುನಾವಣಾ ಫಲಿತಾಂಶಗಳು ತೋರಿಸುತ್ತವೆ. ಆದರೆ, ಈ ಸಂಪ್ರದಾಯವನ್ನು 2019ರ ಲೋಕಸಭೆ ಚುನಾವಣೆ ಮುರಿದು ಹಾಕಿತು. 2019ರಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಆದರೆ, ಆ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು 24 ಸ್ಥಾನಗಳನ್ನು ಗೆದ್ದುಕೊಂಡಿತಲ್ಲದೆ, ತನ್ನ ಮತಪ್ರಮಾಣವನ್ನೂ ಹೆಚ್ಚಿಸಿಕೊಂಡಿತು. ಶೇ 59.06 ಮತಗಳನ್ನು ಬಿಜೆಪಿ 2019ರಲ್ಲಿ ಪಡೆದುಕೊಂಡಿತ್ತು. 2024ರ ಚುನಾವಣೆಯಲ್ಲಿ ತನ್ನ ಮತಪ್ರಮಾಣವನ್ನು ಶೇ 60ಕ್ಕಿಂತ ಹೆಚ್ಚಿನ ಪ್ರಮಾಣಕ್ಕೆ ಏರಿಸಿಕೊಳ್ಳಬೇಕು ಎಂದು ಬಿಜೆಪಿ ಗುರಿಹಾಕಿಕೊಂಡಿದೆ. ಇದೇ ವೇಳೆಯೇ ಕಾಂಗ್ರೆಸ್ ಕೂಡ 2014ರ ಹೋಲಿಕೆಯಲ್ಲಿ 2019ರ ಚುನಾವಣೆಯಲ್ಲಿ ತನ್ನ ಮತಪ್ರಮಾಣವನ್ನು ಹೆಚ್ಚಿಸಿಕೊಂಡಿದೆ.

ವಿರೋಧಿ ಅಲೆ: ಕಳೆದ 10 ವರ್ಷಗಳಿಂದ ಸಂಸದರಾಗಿರುವ ಬಿಜೆಪಿ ನಾಯಕರ ವಿರುದ್ಧ ಈ ಬಾರಿ ವಿರೋಧಿ ಅಲೆ ಇದೆ ಎಂದು ರಾಜಕೀಯ ವಿಶ್ಲೇಷಕರು ಅಂದಾಜಿಸಿದ್ದಾರೆ. ಹಾಲಿ ಸಂಸದರನ್ನು ಬಿಟ್ಟು ಹೊಸ ಮುಖಗಳಿಗೆ ಬಿಜೆಪಿ ಈ ಬಾರಿ ಟಿಕೆಟ್ ನೀಡಿದೆ. ಆಡಳಿತ ವಿರೋಧಿ ಅಲೆಯ ಪ್ರಭಾವದಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಕಾಂಗ್ರೆಸ್‌ನ 25 ನಾಯಕರನ್ನು ಬಿಜೆಪಿ ತನ್ನತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ. ಇವರಲ್ಲಿ ಹಲವರು ಮಾಜಿ ಸಚಿವರು, ಮೂರು ನಾಲ್ಕು ಬಾರಿ ಶಾಸಕರಾದ ನಾಯಕರೂ ಸೇರಿದ್ದಾರೆ. 2023ರ ವಿಧಾನಸಭೆ ಚುನಾವಣೆಗೆ ತನ್ನ ಏಳು ಸಂಸದರನ್ನು ಬಿಜೆಪಿ ಕಣಕ್ಕೆ ಇಳಿಸಿತ್ತು. ಇವರಲ್ಲಿ ಮೂವರು ಸೋತಿದ್ದರು.

ಇನ್ನು ಕೆಲವು ಬಿಜೆಪಿ ನಾಯಕರು ಕಾಂಗ್ರೆಸ್ ಸೇರಿಕೊಂಡಿದ್ದಾರೆ. ಪ್ರಹ್ಲಾದ್ ಗುಂಜಲ್, ರಾಹುಲ್ ಕಾಸ್ವಾನ್, ಬ್ರಿಜೇಂದ್ರ ಸಿಂಗ್ ಸೇರಿದಂತೆ ಕೆಲವು ನಾಯಕರು ಬಿಜೆಪಿ ತೊರೆದಿದ್ದಾರೆ. ಇವರಲ್ಲಿ ಪ್ರಹ್ಲಾದ್ ಅವರು ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೇ ಅವರ ಆಪ್ತರಾಗಿದ್ದವರು. ಇವರಿಗೆ ಈಗ ಲೋಕಸಭಾ ಸ್ಪೀಕರ್ ಆಗಿದ್ದ ಓಂ ಬಿರ್ಲಾ ಅವರ ವಿರುದ್ಧ ಸ್ಪರ್ಧಿಸಲು ಟಿಕೆಟ್ ನೀಡಲಾಗಿದೆ. ರಾಹುಲ್ ಅವರಿಗೆ ಚುರು ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಅನ್ನು ನಿರಾಕರಿಸಿತು. ಇದರಿಂದ ಸಿಟ್ಟಿಗೆದ್ದ ರಾಹುಲ್ ಅವರು ಕಾಂಗ್ರೆಸ್ ಸೇರಿ, ಇದೇ ಕ್ಷೇತ್ರದಿಂದ ಟಿಕೆಟ್ ಅನ್ನೂ ಗಿಟ್ಟಿಸಿಕೊಂಡಿದ್ದಾರೆ.

ಟಿಕೆಟ್ ಹಂಚಿಕೆ ತಂತ್ರ: ಒಂದೆಡೆ, ಬಿಜೆಪಿ ಸಂಸದರಿಗೆ ಆಡಳಿತ ವಿರೋಧಿ ಅಲೆ ಇದೆ. ಇದಕ್ಕಾಗಿ ಬಿಜೆಪಿ ಹೊಸ ಮುಖಗಳಿಗೆ ಮಣೆ ಹಾಕಿದ್ದರೆ, ಕಾಂಗ್ರೆಸ್ ಬಹಳ ಯೋಚಿಸಿ, ಜಾತಿ ಸಮೀಕರಣವನ್ನು ಲೆಕ್ಕಾಚಾರ ಮಾಡಿ ಈ ಬಾರಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ ಎನ್ನುತ್ತಾರೆ ವಿಶ್ಲೇಷಕರು. ಸಿ.ಪಿ. ಜೋಷಿ ಅವರನ್ನು ಅಭ್ಯರ್ಥಿಯಾಗಿಸಿದ್ದು ಕೂಡ ಕಾಂಗ್ರೆಸ್‌ನ ಉತ್ತಮ ನಡೆ ಎನ್ನಲಾಗುತ್ತಿದೆ. ಹಿಂದೆಲ್ಲಾ ಕಾಂಗ್ರೆಸ್ ಸ್ವತಂತ್ರವಾಗಿಯೇ ಚುನಾವಣೆಯಲ್ಲಿ ಸ್ಪರ್ಧಿಸಿತ್ತು. ಆದರೆ ಈ ಬಾರಿ 'ಇಂಡಿಯಾ' ಮೈತ್ರಿಕೂಟದಿಂದ ಸ್ಪರ್ಧೆ ನಡೆಸುತ್ತಿದೆ. 25 ಕ್ಷೇತ್ರಗಳಲ್ಲಿ 23 ಕ್ಷೇತ್ರಗಳನ್ನು ಕಾಂಗ್ರೆಸ್ ತನ್ನೊಂದಿಗೆ ಇರಿಸಿಕೊಂಡಿದೆ. ಒಂದು ಕ್ಷೇತ್ರವನ್ನು ಆರ್‌ಎಲ್‌ಪಿಗೆ ಹಾಗೂ ಮತ್ತೊಂದು ಕ್ಷೇತ್ರವನ್ನು ಸಿಪಿಎಂಗೆ ನೀಡಲಾಗಿದೆ. ರಾಜಸ್ಥಾನದ ಮಟ್ಟಿಗೆ 'ಇಂಡಿಯಾ' ಮೈತ್ರಿಕೂಟದಲ್ಲಿ ಕಾಂಗ್ರೆಸ್ಸಿಗೆ ಹೆಚ್ಚಿನ ಮತಗಳು ಬೀಳುತ್ತವೆ. ಆದರೆ, ಈ ಬಾರಿ ಮೈತ್ರಿ ಮಾಡಿಕೊಂಡ ಕಾರಣಕ್ಕಾಗಿ ಮೈತ್ರಿಕೂಟ ಇತರ ಪಕ್ಷಗಳ ಮತಗಳೂ ಕಾಂಗ್ರೆಸ್ಸಿಗೇ ಬೀಳುವ ಕಾರಣಕ್ಕಾಗಿ ರಾಜಕೀಯ ಲೆಕ್ಕಾಚಾರಗಳು ಬದಲಾಗುವ ನಿರೀಕ್ಷೆ ಇದೆ ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

ಹಿಂದಿನ ಚುನಾವಣಾ ಫಲಿತಾಂಶ: ಹೆಚ್ಚಿದ ಬಿಜೆಪಿ ಪ್ರಾಬಲ್ಯ



ಹಲವೆಡೆ ತ್ರಿಕೋನ ಸ್ಪರ್ಧೆಯ ಸಾಧ್ಯತೆ

ತೀರಾ ಇತ್ತೀಚಿನವರೆಗೂ ರಾಜಸ್ಥಾನ ರಾಜಕಾರಣದಲ್ಲಿ ಎರಡು ಮುಖ್ಯ ಪಕ್ಷಗಳಷ್ಟೇ ಇದ್ದವು. ಅಲ್ಲಿನ ಚುನಾವಣೆಗಳಲ್ಲಿ ಸ್ಪರ್ಧೆ ಇದ್ದದ್ದು ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಮಾತ್ರ. ಆದರೆ ಈ ಬಾರಿ ಹಲವು ಕ್ಷೇತ್ರಗಳಲ್ಲಿ ಸ್ಪರ್ಧೆ ತ್ರಿಕೋನವಾಗಿರಲಿದೆ ಎಂದು ರಾಜಕೀಯ ಪಂಡಿತರು ಅಂದಾಜಿಸಿದ್ದಾರೆ. ಏಕೆಂದರೆ ಈ ಬಾರಿ ಹಲವು ಸಣ್ಣ ಪಕ್ಷಗಳು ಕಣದಲ್ಲಿದ್ದು, ಪ್ರಬಲ ಪೈಪೋಟಿ ನೀಡಲಿವೆ ಎಂದು ನಿರೀಕ್ಷಿಸಲಾಗಿದೆ.

ಭಾರತೀಯ ಆದಿವಾಸಿ ಪಾರ್ಟಿ, ಆರ್‌ಎಲ್‌ಪಿ, ಆರ್‌ಎಲ್‌ಡಿ, ಬಿಎಸ್‌ಪಿ, ಎಡಪಕ್ಷಗಳ ಅಭ್ಯರ್ಥಿಗಳು 2023ರ ವಿಧಾನಸಭಾ ಚುನಾವಣೆಯಲ್ಲಿ ಸುಮಾರು ಶೇ 10ರಷ್ಟು ಮತಗಳನ್ನು ಪಡೆದಿದ್ದವು. 30ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಅಭ್ಯರ್ಥಿಗಳ ಗೆಲುವು–ಸೋಲಿನ ಅಂತರಕ್ಕಿಂತ ಹೆಚ್ಚಿನ ಮತಗಳನ್ನು ಈ ಪಕ್ಷಗಳ ಅಭ್ಯರ್ಥಿಗಳು ಪಡೆದಿದ್ದರು.

ಹೀಗಿದ್ದೂ ಬಿಜೆಪಿ ಸಂಪೂರ್ಣ ಸ್ವತಂತ್ರವಾಗಿ ಕಣಕ್ಕೆ ಇಳಿದಿದೆ. ಆದರೆ ಕಾಂಗ್ರೆಸ್ ತನ್ನ ತಂತ್ರವನ್ನು ಬದಲಿಸಿದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಈ ಸಣ್ಣ–ಪುಟ್ಟ ಪಕ್ಷಗಳೇ ಸ್ವತಃ ಎಡತಾಕಿದರೂ ಕಾಂಗ್ರೆಸ್ ಮೈತ್ರಿಗೆ ಒಪ್ಪಿರಲಿಲ್ಲ. ಅದರಿಂದ ಕಾಂಗ್ರೆಸ್‌ಗೆ ಭಾರಿ ಹಿನ್ನಡೆಯಾಗಿದ್ದಲ್ಲದೇ, ಅದರಿಂದ ಪಾಠವನ್ನೂ ಕಲಿತಂತಿದೆ. ಲೋಕಸಭಾ ಚುನಾವಣೆಗೆ ಆರ್‌ಎಲ್‌ಪಿ ಮತ್ತು ಎಡಪಕ್ಷಗಳ ಜತೆಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ.

ಆದರೆ ರಾಜ್ಯದ ದಕ್ಷಿಣ ಭಾಗದಲ್ಲಿ ಬುಡಕಟ್ಟು ಸಮುದಾಯಗಳೇ ನಿರ್ಣಾಯಕ. ಈ ಭಾಗದಲ್ಲಿ ಭಾರತೀಯ ಆದಿವಾಸಿ ಪಕ್ಷ (ಬಿಎಪಿ) ಕಳೆದ ವಿಧಾನಸಭಾ ಚುನಾವಣೆಯಲ್ಲಿ ಮೂರು ಕ್ಷೇತ್ರಗಳನ್ನು ಗೆದ್ದುಕೊಂಡಿತ್ತು. ಮತ್ತು 10 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಸೋಲಿನ ಅಂತರಕ್ಕಿಂತ ಹೆಚ್ಚಿನ ಮತಗಳನ್ನು ಈ ಪಕ್ಷದ ಅಭ್ಯರ್ಥಿಗಳು ಪಡೆದುಕೊಂಡಿದ್ದರು. ಬಿಎಪಿ ಜತೆಗೆ ಕಾಂಗ್ರೆಸ್ ಮೈತ್ರಿ ಮಾತುಕತೆ ನಡೆಸಿತ್ತಾದರೂ, ಅದು ಫಲಪ್ರದವಾಗಲಿಲ್ಲ. ಬಿಎಪಿ ಎಲ್ಲಾ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಯುವುದಿಲ್ಲವಾದರೂ, ಸ್ಪರ್ಧೆಗೆ ಇಳಿಯಲಿರುವ ಕೆಲವೇ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗೆ ಪ್ರಬಲ ಪೈಪೋಟಿ ನೀಡುವ ನಿರೀಕ್ಷೆ ಇದೆ.

ಹೀಗಿದ್ದೂ ಕಾಂಗ್ರೆಸ್ ತನ್ನ ಮಿತ್ರಪಕ್ಷಗಳಿಗೆ ಬಿಟ್ಟುಕೊಟ್ಟಿದ್ದು ಎರಡು ಕ್ಷೇತ್ರಗಳನ್ನು ಮಾತ್ರ.

25 ಒಟ್ಟು ಲೋಕಸಭಾ ಕ್ಷೇತ್ರಗಳು

12 ಏಪ್ರಿಲ್ 19ರ ಮೊದಲ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಸಂಖ್ಯೆ

13 ಏಪ್ರಿಲ್ 26ರ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಸಂಖ್ಯೆ

ಜಾಟರ ಮತಗಳಿಗೆ ಗಾಳ

ಕಾಂಗ್ರೆಸ್ ಮತ್ತು ಬಿಜೆಪಿ ಈ ಬಾರಿಯ ಜಾಟರ ಮತಗಳತ್ತ ಹೆಚ್ಚು ಗಮನ ಕೇಂದ್ರೀಕರಿಸಿವೆ. ಜಾಟರು ನಿರ್ಣಾಯಕವಾಗಿರುವ ಕ್ಷೇತ್ರಗಳಲ್ಲಿ ಆರ್‌ಎಲ್‌ಪಿ ಪ್ರಬಲ ಪೈಪೋಟಿ ನೀಡುತ್ತದೆ. ಈ ಪಕ್ಷದ ಅಭ್ಯರ್ಥಿಗಳು ಚುನಾವಣೆಯಲ್ಲಿ ಗೆಲ್ಲುವುದಿಲ್ಲವಾದರೂ, ಫಲಿತಾಂಶವನ್ನು ಬದಲಿಸುವಷ್ಟು ಮತಗಳನ್ನು ಪಡೆಯುತ್ತಾರೆ. ಹೀಗಾಗಿ ಆರ್‌ಎಲ್‌ಪಿ ಜತೆಗೆ ಕಾಂಗ್ರೆಸ್ ಮೈತ್ರಿ ಮಾಡಿಕೊಂಡಿದೆ, ಒಂದು ಕ್ಷೇತ್ರವನ್ನು ಅದಕ್ಕೆ ಬಿಟ್ಟುಕೊಟ್ಟಿದೆ. ಈ ಮೂಲಕ ಇತರ ಕ್ಷೇತ್ರಗಳಲ್ಲಿ ಜಾಟರ ಮತಗಳು ವಿಭಜನೆಯಾಗದಂತೆ ತಂತ್ರ ರೂಪಿಸಿದೆ. ಇದು ಎಷ್ಟರಮಟ್ಟಿಗೆ ಫಲ ನೀಡಲಿದೆ ಎಂಬುದು ಫಲಿತಾಂಶದ ನಂತರವೇ ಗೊತ್ತಾಗಲಿದೆ.

ಇನ್ನೊಂದೆಡೆ ಬಿಜೆಪಿ ಸಹ ಜಾಟರ ಮತಗಳನ್ನು ಸೆಳೆಯಲು ತಂತ್ರ ರೂಪಿಸಿದೆ. ಆರ್‌ಎಲ್‌ಪಿ ಹೊರತಾದ ಜಾಟರ ಸಂಘಟನೆಗಳು ಮತ್ತು ಸಣ್ಣ–ಪುಟ್ಟ ರಾಜಕೀಯ ಪಕ್ಷಗಳನ್ನು ತನ್ನೊಳಗೆ ವಿಲೀನ ಮಾಡಿಕೊಂಡಿದೆ. ಸಣ್ಣ ಸಂಖ್ಯೆಯಲ್ಲಿ ವಿಭಜನೆಯಾಗುತ್ತಿದ್ದ ಜಾಟರ ಮತಗಳನ್ನು ಈ ಮೂಲಕ ತನ್ನತ್ತ ಸೆಳೆದುಕೊಳ್ಳಲು ಯತ್ನಿಸಿದೆ.

ಸಿನಿ ಬಿಟ್ಸ್

ರಿಷಿ, ಪ್ರಣೀತಾ

ಮೇ 10ಕ್ಕೆ 'ರಾಮನ ಅವತಾರ'

'ಆಪರೇಷನ್ ಅಲಮೇಲಮ್ಮ' ಖ್ಯಾತಿಯ ರಿಷಿ ನಾಯಕನಾಗಿ ನಟಿಸಿರುವ 'ರಾಮನ ಅವತಾರ' ಚಿತ್ರ ಬಿಡುಗಡೆಗೆ ಕೊನೆಗೂ ಮುಹೂರ್ತ ಕೂಡಿಬಂದಿದೆ. ಕಳೆದ ವರ್ಷ ಜೂನ್‌ನಲ್ಲಿಯೇ ತೆರೆಗೆ ಬರಲು ಸಿದ್ಧವಿದ್ದ ಚಿತ್ರ, ಮೇ 10ರಂದು ಬಿಡುಗಡೆಯಾಗುತ್ತಿದೆ.

ಹಾಸ್ಯಮಯ ಕಥಾ ಹಂದರ ಹೊಂದಿರುವ ಚಿತ್ರವನ್ನು ವಿಕಾಸ್ ಪಂಪಾಪತಿ ನಿರ್ದೇಶಿಸಿದ್ದಾರೆ. ಸ್ಟಾರ್ ಫ್ಯಾಬ್ ಪ್ರೊಡಕ್ಷನ್ ಅಡಿಯಲ್ಲಿ 'ಆಪರೇಷನ್ ಅಲಮೇಲಮ್ಮ' ಸಿನಿಮಾ ನಿರ್ಮಾಣ ಮಾಡಿದ್ದ ಅಮರೇಜ್ ಸೂರ್ಯವಂಶಿ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ರಿಷಿ ವಿಶೇಷ ವಿಡಿಯೊ ಮೂಲಕ ರಾಮನ ಅವತಾರ ಸಿನಿಮಾ ಬಿಡುಗಡೆ ದಿನಾಂಕವನ್ನು ಘೋಷಿಸಿದ್ದಾರೆ. 'ಮೇಬಿ ಅಲ್ಲ ಪಕ್ಕ ಮೇ 10ಕ್ಕೆ ಬರುತ್ತೇವೆ. ಎಲೆಕ್ಷನ್ ರಿಸಲ್ಟ್‌ಗೂ ಮೊದ್ಲೇ ನಮ್ಮ ಸಿನಿಮಾ ರಿಸಲ್ಟ್ ಬರಲಿದೆ' ಎಂದು ರಿಷಿ ತಿಳಿಸಿದ್ದಾರೆ.

ಪ್ರಣೀತಾ ಸುಭಾಷ್ ಹಾಗೂ ಶುಭ್ರ ಅಯ್ಯಪ್ಪ ನಾಯಕಿಯರಾಗಿ ನಟಿಸಿದ್ದು, ಅರುಣ್ ಸಾಗರ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ರೊಮ್ಯಾಂಟಿಕ್ ಕಾಮಿಡಿ ಜಾನರ್ ಸಿನಿಮಾಗೆ ವಿಷ್ಣುಪ್ರಸಾದ್ ಹಾಗೂ ಸಮೀರ್ ದೇಶಪಾಂಡೆ ಕ್ಯಾಮೆರಾ ಕೈಚಳಕವಿದ್ದು, ಜೂಡಾ ಸ್ಯಾಂಡಿ ಸಂಗೀತ ನೀಡಿದ್ದಾರೆ. ಅಮರನಾಥ್ ಸಂಕಲನವಿದೆ. ಉಡುಪಿ, ಬೆಂಗಳೂರು ಸುತ್ತುಮುತ್ತ ಚಿತ್ರೀಕರಣಗೊಂಡಿದೆ.

'ಮುಕ್ತ ಮನಸಿನ' ಪ್ರೇಮಿಗಳು

ಬಹುತೇಕ ಹೊಸಬರೇ ಸೇರಿಕೊಂಡು ನಿರ್ಮಿಸಿರುವ 'ಮುಕ್ತ ಮನಸು' ಚಿತ್ರದ ಹಾಡುಗಳು ಮತ್ತು ಟ್ರೇಲರ್ ಬಿಡುಗಡೆಗೊಂಡಿವೆ. ಆರ್. ಸಿ.ರಂಗಶೇಖರ್ ಬರೆದು, ನಿರ್ದೇಶಿಸಿರುವ ಚಿತ್ರಕ್ಕೆ ಮೈಸೂರು ಮೂಲದ ವೆಂಕಟೇಶ್ ಬಂಡವಾಳ ಹೂಡಿದ್ದಾರೆ.

'ನಾನು ರಂಗಭೂಮಿ ಕಲಾವಿದ. 25 ವರ್ಷಗಳ ಕಾಲ ರಂಗಾಯಣದಲ್ಲಿ ಕೆಲಸ ಮಾಡಿದ್ದೇನೆ. ಬಳಿಕ ಸಿನಿಮಾ ನಿರ್ದೇಶನ ತರಬೇತಿ ಮುಗಿಸಿರುವೆ. ಪ್ರೇಮಿಗಳು ಯಾರೇ ಆಗಿರಲಿ, ಯಾವುದೇ ರೀತಿಯ ಕಲ್ಮಶ ಇಲ್ಲದ ಪ್ರೀತಿಯು ಕೊನೆತನಕ ಉಳಿಯುತ್ತದೆ ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ' ಎಂದರು ನಿರ್ದೇಶಕರು.

ಖಾಸಗಿ ವಾಹಿನಿಯ ರಿಯಾಲಿಟಿ ಶೋನಲ್ಲಿ ಸ್ಪರ್ಧಿಯಾಗಿದ್ದ ಮೋಹನ್ ರಂಗನಾಥ್ ಚಿತ್ರದ ನಾಯಕ. ಕ್ಲಾಸಿಕಲ್ ಡ್ಯಾನ್ಸರ್ ಆಗಿರುವ ಮಾನ್ಯಗೆ ನಾಯಕಿಯಾಗಿ ಮೂರನೇ ಚಿತ್ರವಿದು. ಶೋಭರಾಜ್, ರಮೇಶ್ ಪಂಡಿತ್, ಅಪರ್ಣ ಮುಂತಾದವರು ಚಿತ್ರದಲ್ಲಿದ್ದಾರೆ. ಐದು ಹಾಡುಗಳಿಗೆ ವಿನುಮನಸು ಸಂಗೀತ ಸಂಯೋಜಿಸಿದ್ದಾರೆ. ರವಿ ಛಾಯಾಚಿತ್ರಗ್ರಹಣವಿದೆ. ಮೈಸೂರು, ಮಂಡ್ಯಗಳಲ್ಲಿ ಚಿತ್ರೀಕರಣಗೊಂಡಿರುವ ಚಿತ್ರ ಬಿಡುಗಡೆಗೆ ಸಿದ್ಧವಿದೆ.

ಮಾನ್ಯ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಸ್ಕೂಟರ್** ಒಂದರಲ್ಲಿ ಇಬ್ಬರು ವ್ಯಕ್ತಿಗಳು ಪರಾರಿಯಾಗಲು ಯತ್ನಿಸುತ್ತಿರುವ ಮತ್ತು ಪೊಲೀಸರು ಅವರನ್ನು ಬೈಕ್‌ನಲ್ಲಿ ಬೆನ್ನಟ್ಟುತ್ತಿರುವ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸ್ಕೂಟರ್‌ನಲ್ಲಿ ಪರಾರಿಯಾಗುತ್ತಿರುವವರಿಗೆ ಗುಂಡು ಹಾರಿಸಿ, ಅವರನ್ನು ಪೊಲೀಸರು ತಡೆದು ನಿಲ್ಲಿಸುವ ದೃಶ್ಯವೂ ಆ ವಿಡಿಯೊವಿನಲ್ಲಿ ಇದೆ. ಈ ವಿಡಿಯೊ ಜತೆಗೆ, 'ನೋಡಿ. ಇದು ಈಗಿನ ಉತ್ತರ ಪ್ರದೇಶದಲ್ಲಿನ ಪೊಲೀಸರ ಕಾರ್ಯವೈಖರಿ. ಪೊಲೀಸರು ಅಪರಾಧಿಗಳನ್ನು ಬೆನ್ನಟ್ಟಿ ಹಿಡಿಯುತ್ತಿದ್ದಾರೆ. ಪ್ರಬಲ ಸರ್ಕಾರವಿದ್ದರೆ ಇವೆಲ್ಲವೂ ಸಾಧ್ಯ' ಎಂಬ ಸಂದೇಶ ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ಸುಳ್ಳು.

✓ **ಈ ವಿಡಿಯೊ** ಉತ್ತರ ಪ್ರದೇಶದ್ದಲ್ಲ, ಅಲ್ಲಿರುವ ಪೊಲೀಸರೂ ಉತ್ತರ ಪ್ರದೇಶದವರಲ್ಲ. ಅಸಲಿಗೆ ಆ ವಿಡಿಯೊ ಭಾರತದ್ದೇ ಅಲ್ಲ. ಈ ದೃಶ್ಯಾವಳಿಯು ಇಂಡೊನೇಷ್ಯಾ ಪೊಲೀಸರ ಕಾರ್ಯಾಚರಣೆಯ ಲೈವ್ ರೆಕಾರ್ಡಿಂಗ್ ವಿಡಿಯೊದ ಭಾಗವಾಗಿದೆ. ಪೊಲೀಸರ ನಾಕಾಬಂದಿಯನ್ನು ಮೀರಿ ಪರಾರಿಯಾಗಲು ಯತ್ನಿಸಿದ ಸ್ಕೂಟರ್ ಸವಾರರನ್ನು ಬೆನ್ನಟ್ಟಿ ಹಿಡಿಯುವ ಕಾರ್ಯಾಚರಣೆಗೆ ಸಂಬಂಧಿಸಿದ ವಿಡಿಯೊ ಇದು. ಇದೇ ವಿಡಿಯೊವನ್ನು ಸುಳ್ಳು ಮಾಹಿತಿಯೊಂದಿಗೆ, ಉತ್ತರ ಪ್ರದೇಶದ್ದು ಎಂದು ಹಂಚಿಕೊಳ್ಳಲಾಗುತ್ತಿದೆ ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಗುರುತಿಸು ಒಳಿತಿರುವುದನು ಕೇಡುಗಳ ನಡುವೆ

ನುಡಿ ಬೆಳಗು


ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಗುರುತಿಸು ಒಳಿತಿರುವುದನು ಕೇಡುಗಳ ನಡುವೆ– ಇದು ಡಿವಿಜಿಯವರ ಮಂಕುತಿಮ್ಮನ ಕಗ್ಗದ ಒಂದು ಪ್ರಸಿದ್ಧ ಸಾಲು. ಇಂದು ನಮ್ಮ ಬದುಕಿನಲ್ಲಿ ಮೊಬೈಲ್ ಅನಿವಾರ್ಯವಾಗಿಬಿಟ್ಟಿದೆ. ಇದು ಬರಿ ಸಂಪರ್ಕಕ್ಕಷ್ಟೇ ಅಲ್ಲ, ವ್ಯವಹಾರ, ಮನರಂಜನೆ ಎಲ್ಲದಕ್ಕೂ ಅತ್ಯಗತ್ಯವಾಗಿ, ಅದನ್ನು ಬಿಟ್ಟು ಬದುಕಲಾರೆವು ಎಂಬ ವ್ಯಸನವಾಗಿ, ಅದು ನಮ್ಮ ಬದುಕನ್ನು ಆವರಿಸಿಕೊಂಡು ಬಿಟ್ಟಿದೆ. ಇದರಲ್ಲಿನ ವಾಟ್ಸ್‌ಆ್ಯಪ್ ಫೇಸ್‌ಬುಕ್‌ನಂತಹ ಸಾಮಾಜಿಕ ಜಾಲತಾಣಗಳು, ಬದುಕಿನ ಅನಿವಾರ್ಯವಾಗಿ ಬಿಟ್ಟಿವೆ. ದೂರ ದೂರದಲ್ಲಿರುವ ಬಂಧು ಮಿತ್ರರನ್ನು, ಸಮಾನ ಮನಸ್ಕರನ್ನು ಒಟ್ಟುಗೂಡಿಸಿ, ನೋವು ನಲಿವುಗಳನ್ನು ಹಂಚಿಕೊಳ್ಳಲು, ಕ್ಷಿಪ್ರವಾಗಿ ಸಂಪರ್ಕ ಸಾಧಿಸಲು ಈ ಸಾಮಾಜಿಕ ಜಾಲತಾಣಗಳು ಸೇತುವೆಯಂತೆ ಕೆಲಸ ಮಾಡುತ್ತಿವೆ. ಅದರ ಜೊತೆಗೇ ಇವು ಸುಳ್ಳು ಸುದ್ದಿಗಳನ್ನು ಹರಡುವ, ಅದನ್ನೇ ಸತ್ಯವೆಂದು ನಂಬುವ ದೊಡ್ಡ ಸಮೂಹವನ್ನೇ ಸೃಷ್ಟಿ ಮಾಡಿ, ಆಧುನಿಕ ಮೌಢ್ಯವನ್ನು ಬಿತ್ತುವ ಕೆಲಸವನ್ನೂ ಮಾಡುತ್ತಿವೆ.

ಇದರ ನಡುವೆಯೂ ಹಲವು ಒಳ್ಳೆಯ ಕೆಲಸಗಳೂ ಈ ಜಾಲತಾಣಗಳಿಂದ ಆಗಿರುವುದನ್ನೂ ನಾವು ಗುರುತಿಸಬೇಕು. ಮೂಡಿಗೆರೆ ಹತ್ತಿರದ ಬಣಕಲ್‌ನ ಸ್ನೇಹಿತರೊಬ್ಬರು ಇತ್ತೀಚೆಗೆ ಕಳಿಸಿದ ಸಂದೇಶ, ಈ ವಿಚಾರದ ಕುರಿತಾಗಿಯೇ ಇತ್ತು. ಪುಟ್ಟ ಮಲೆನಾಡ ಮಡಿಲಿನ ಈ ಊರ ಪ್ರೌಢಶಾಲೆಯಲ್ಲಿ ಸುಮಾರು 33 ವರ್ಷಗಳ ಹಿಂದೆ ಜೊತೆಯಾಗಿ ಹೈಸ್ಕೂಲ್‌ನಲ್ಲಿ ಅಭ್ಯಾಸ ಮಾಡಿದ ಸ್ನೇಹಿತರು, ಇತ್ತೀಚೆಗೆ ಒಂದು ವಾಟ್ಸ್‌ಆ್ಯಪ್ ಗುಂಪನ್ನು ಆರಂಭಿಸಿದರು. ಇದಕ್ಕೆ ಮೂಲ ಕಾರಣ ಈ ಬ್ಯಾಚಿನ ದೂರದ ಅಮೆರಿಕದಲ್ಲಿ ಬದುಕು ಕಟ್ಟಿಕೊಂಡಿರುವ ಒಬ್ಬ ಯಶಸ್ವಿ ವಿದ್ಯಾರ್ಥಿ. ರಜೆಯಲ್ಲಿ ಊರಿಗೆ ಬಂದಾಗ ತನ್ನ ಸ್ನೇಹಿತರನ್ನೆಲ್ಲ ಭೇಟಿಯಾದ ಇವರು, ತಮ್ಮ ತರಗತಿಯ ಎಲ್ಲೆಲ್ಲೋ ಹರಿದು ಹಂಚಿಹೋದ ಸ್ನೇಹಿತರನ್ನು ಸ್ಥಳೀಯ ಮಿತ್ರರ ಸಹಕಾರದೊಂದಿಗೆ ಜೊತೆಗೂಡಿಸುವ ಪ್ರಯತ್ನವನ್ನು ಮಾಡಿದರು.

ತಮ್ಮ ಕೆಲಸಗಳಲ್ಲಿ ಮುಳುಗಿ ಹೋದವರು, ಮದುವೆ ಸಂಸಾರ ಗಂಡ ಮಕ್ಕಳು ಎಂದು ಕಳೆದು ಹೋದವರು, ಎಲ್ಲರನ್ನೂ ಈ ವಾಟ್ಸ್‌ಆ್ಯಪ್ ಗುಂಪು ಒಟ್ಟಿಗೆ ಸೇರಿಸುವಲ್ಲಿ ಯಶಸ್ವಿಯಾಯಿತು. ಇದರಲ್ಲಿ ನಾವೀಗ ಹೇಗಿದ್ದೇವೆ ಎಲ್ಲಿದ್ದೇವೆ? ಮಕ್ಕಳು ಮರಿ ಸಂಸಾರ ಇತ್ಯಾದಿ ಉಭಯ ಕುಶಲೋಪರಿಗಳ ಜೊತೆಗೇ, ನಮ್ಮ ಸ್ನೇಹಿತರಲ್ಲಿ ತುಂಬಾ ಕಷ್ಟದಲ್ಲಿರುವವರು ಯಾರು ಎಂಬ ಚರ್ಚೆಯೂ ನಡೆಯಿತು. ಅದೇ ಊರಲ್ಲಿ ಸೊಂಟದ ಕೆಳಗಿನ ಸ್ವಾಧೀನ ಕಳೆದುಕೊಂಡು ತೀವ್ರ ದುಃಸ್ಥಿತಿಯಲ್ಲಿರುವ ತಮ್ಮ ಸಹಪಾಠಿ ಸ್ನೇಹಿತನ ಕುರಿತಾಗಿ ತಿಳಿದ ಈ ಮಿತ್ರರು ತಮ್ಮಲ್ಲಿಯೇ ತಮಗಾದಷ್ಟು ಧನ ಸಂಗ್ರಹಣೆ ಮಾಡಿ, ಒಳ್ಳೆಯ ಮೊತ್ತವೊಂದನ್ನು ಜೋಡಿಸಿ, ಆ ಸ್ನೇಹಿತನ ಕೈಯಲ್ಲಿಟ್ಟು ಸಾರ್ಥಕತೆ ಕಂಡರು.

ಈ ಘಟನೆ ಚಿಕ್ಕದಿರಬಹುದು ಹಾಗೂ ಹಲವಾರು ಕಡೆಗಳಲ್ಲಿ ನಡೆದದ್ದೂ ಆಗಿರಬಹುದು. ಆದರೆ ಇಂತಹ ಒಳ್ಳೆಯ ಕೆಲಸಗಳು ಬೆಳಕಿಗೆ ಬಂದರೆ ಖಂಡಿತವಾಗಿ ಬೇರೆಯವರಿಗೆ ಪ್ರೇರಣೆಯಾಗುತ್ತವೆ. ಈಗಿನ ಸಂಪೂರ್ಣ ವ್ಯಾವಹಾರಿಕ ಜಗತ್ತಿನಲ್ಲಿ ಮೊಬೈಲ್ ನಂತಹ ಡಿಜಿಟಲ್ ಸಾಧನಕ್ಕಿರುವ ಮಾನವೀಯ ಸಾಧ್ಯತೆಗಳನ್ನು ಇದು ಎತ್ತಿ ಹಿಡಿಯುತ್ತದೆ. ಪ್ರತಿಯೊಂದರಲ್ಲೂ ಒಳ್ಳೆಯದೂ ಇರುತ್ತದೆ, ಕೆಟ್ಟದ್ದೂ ಇರುತ್ತದೆ. ಅದನ್ನು ಸರಿಯಾಗಿ ಗುರುತಿಸಿ ಬಳಸಿಕೊಳ್ಳುವುದು ಮಾತ್ರ ನಮ್ಮ ಕೈಯಲ್ಲೇ ಇರುತ್ತದೆ ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ.

ದಿನ ಭವಿಷ್ಯ

ವಿದ್ವಾಂಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಏಪ್ರಿಲ್ 1, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ಸಪ್ತಮಿ ಗಂ. 21-10 ನಕ್ಷತ್ರ: ಮೂಲಾ ಗಂ. 23-12 ಯೋಗ: ವರಿಯಾನ್ ಗಂ. 20-30 ಕರಣ: ವಿಷ್ಟಿ ಗಂ. 09-26, ಮೀನ ಮಾಸದ 18 ನೇ ದಿನ,
ಮಳೆನಕ್ಷತ್ರ: ರೇವತಿ 1. ರಾಹುಕಾಲ : ಬೆಳಿಗ್ಗೆ 07-30 - 09-00
ಸೂರ್ಯೋದಯ : 06-30 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 21 ರಂಜಾನ್ ದಿನ ವಿಶೇಷ : ಷಹದತ್-ಎ-ಹಜರತ್ ಅಲಿ (ಮುಸ್ಲಿಂ)
ಅದೃಷ್ಟ ಸಂಖ್ಯೆ : 11, 3

ಮೇಷ: ಮಾಹಿತಿ ತಂತ್ರಜ್ಞಾನದಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಆದಾಯ ಕಾಣಲಿದೆ. ಈ ದಿನ ಯಾವುದೇ ರೀತಿಯ ವ್ಯಾವಹಾರಿಕ ಜವಬ್ದಾರಿಯನ್ನು ವಹಿಸಿ ಕೊಳ್ಳಬೇಡಿ. ಕುತೂಹಲಕಾರಿ ವಿಷಯಗಳನ್ನು ತಿಳಿದು ಅಚ್ಚರಿಗೊಳ್ಳುವಿರಿ.

ವೃಷಭ: ನೀವು ಯೋಚಿಸುವ ಪ್ರತಿಯೊಂದು ಕೆಲಸ-ಕಾರ್ಯಗಳು ವಿಳಂಬ ರೀತಿಯಲ್ಲಿ ನಡೆದರೂ ಮುಂದೆ ಯಶಸ್ಸು ನಿಮಗೆ ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ವಾಹನ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದ ಕಾರ್ಯ ಇರಲಿದೆ.

ಮಿಥುನ: ಮನೆಯಲ್ಲಿ ನಿಮಗೆ ಎದುರಾಗುವ ಅನಿವಾರ್ಯವಾದ ಹೊಂದಾಣಿಕೆಯನ್ನು ಸುಲಭವಾಗಿ ಮಾಡಿಕೊಳ್ಳುವಿರಿ. ನಿರುದ್ಯೋಗಿಗಳಿಗೆ ಈ ದಿನ ಸಾಮಾಜಿಕ ಬದುಕಿನಲ್ಲಿ ಒಂದು ಹೊಸ ತಿರುವು ಮೂಡುತ್ತದೆ.

ಕರ್ಕಾಟಕ: ಕೆಲವೊಂದು ಜವಬ್ದಾರಿಯುತವಾದ ಊರಿನ ಕಾರ್ಯಗಳು ನಿಮ್ಮ ಮುಂದಾಳತ್ವದಲ್ಲಿ ನಡೆಯಲಿದೆ. ಸೋದರ ಮಾವನ ಆರೋಗ್ಯ ಉತ್ತಮಗೊಳ್ಳುವುದು. ಸಂಗೀತಗಾರರಿಗೆ ಮತ್ತು ನರ್ತಕರಿಗೆ ಇಂದು ವಿಶೇಷ ದಿನ.

ಸಿಂಹ: ಕಾರ್ಯರಂಗದಲ್ಲಿ ಮುನ್ನಡೆಗೆ ಸಹೋದ್ಯೋಗಿಗಳ ನಿರ್ಧಾರಗಳಿಂದ ಸಮಸ್ಯೆ ಇರುತ್ತದೆ ಆದ್ದರಿಂದ ಸ್ವಂತ ನಿರ್ಧಾರ ತೆಗೆದುಕೊಳ್ಳುವುದರಿಂದ ಕೆಲಸ ಕಾರ್ಯಗಳು ಯಾವುದೇ ಅಡೆಚಣೆಗಳಿಲ್ಲದೆ ಸಾಗುವವು.

ಕನ್ಯಾ: ನಿಮ್ಮ ಸ್ವಯಂ ಸಾಮರ್ಥ್ಯದ ಬಗ್ಗೆ ಹೆಚ್ಚಿನ ವಿಶ್ವಾಸವಿರಲಿ. ಅದರಿಂದಾಗಿ ಮಾನಸಿಕ ವ್ಯಥೆಗಳು ನಿವಾರಣೆಯಾಗುತ್ತದೆ. ಸಮಾಜದಲ್ಲಿ ಮತ್ತು ವೈಯಕ್ತಿಕವಾಗಿ ನೀವು ಅಪೇಕ್ಷಿಸಿದ ಪ್ರಗತಿಯನ್ನು ಇಂದು ಸಾಧಿಸುವಿರಿ.

ತುಲಾ: ಸ್ವತಂತ್ರ ಮನೋಭಾವದಿಂದ ಹೊರಬಂದು ಆತ್ಮೀಯರ ಸಲಹೆಗಳಿಗೆ ಹೊಂದಿಕೊಳ್ಳುವಿರಿ. ಭೂಸಂಬಂಧ ವ್ಯವಹಾರದಲ್ಲಿ ಅಧಿಕ ಆದಾಯವು ಕಂಡುಬರುವುದು. ನವಗ್ರಹ ಪೂಜೆಯಿಂದ ಶುಭ ವಾರ್ತೆ ಪಡೆಯುವಿರಿ.

ವೃಶ್ಚಿಕ: ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಚಾಕಚಕ್ಯತೆಯನ್ನು ತೋರಿದರೆ ಯಶಸ್ಸು. ಸತತ ಪ್ರಯತ್ನದಿಂದ ಪರಸ್ಥಳದಲ್ಲಿ ವೃತ್ತಿಪರವಾಗಿ ಹೆಸರು, ಕೀರ್ತಿಯನ್ನು ಸಂಪಾದಿಸಬಹುದು. ಅವಿವಾಹಿತರಿಗೆ ಕಂಕಣ ಭಾಗ್ಯವಿದೆ.

ಧನು: ಓಂ ಗುರುಭ್ಯೋ ನಮಃ ಎಂದು ಹೇಳಿ ದಿನ ಪ್ರಾರಂಭಿಸಿದರೆ ಮನಸ್ಸಿಗೆ ನೆಮ್ಮದಿ ಜೊತೆಗೆ ಜಯಸಿಗುವುದು. ಹಣಕಾಸಿನ ಸಮಸ್ಯೆಗಳು ಹಂತ ಹಂತವಾಗಿ ಪರಿಹಾರ ಕಾಣಲಿದೆ. ಯೋಗಾಭ್ಯಾಸದಿಂದ ಆರೋಗ್ಯವೃದ್ಧಿ.

ಮಕರ: ಶನಿಯು ತಿರುಗಾಟವನ್ನು ಮಾಡಿಸುವುದರಿಂದ ಆರೋಗ್ಯದ ಬಗ್ಗೆ ಗಮನಹರಿಸುವುದು ಅನಿವಾರ್ಯವಾಗುತ್ತದೆ. ನಿಮ್ಮ ಬುದ್ಧಿವಂತಿಕೆ ಹಾಗೂ ಯೋಜನೆಗಳು ನಿಮ್ಮ ಸಂವಹನವನ್ನು ಸುಲಭಗೊಳಿಸುತ್ತದೆ.

ಕುಂಭ: ಇಂದು ನೀವು ಮಾಡುವ ಯಾವುದೇ ಬದಲಾವಣೆಯಾದರೂ ಅವು ಧನಾತ್ಮಕ ಫಲಿತಾಂಶಗಳನ್ನು ನೀಡುವುದಿಲ್ಲ. ಏನಕ್ಕೂ ಯೋಚಿಸಿ ನಿರ್ಧಾರಗಳನ್ನು ಕೈಗೊಳ್ಳಿ. ಶ್ರೀ ವಿಷ್ಣುವಿನ ಸಹಸ್ರನಾಮವನ್ನು ಪಠಿಸಿರಿ.

ಮೀನ: ನ್ಯಾಯಾಲಯದ ಕೆಲಸದಲ್ಲಿ ಕೆಲವು ಅಡೆತಡೆಗಳು ಎದುರಾದರೂ ಸತ್ಯಕ್ಕೆ ಜಯವಿದೆ ಎನ್ನುವುದರಿಂದ ನೀವೇನೂ ಚಿಂತಿಸಬೇಕಾದ ಅಗತ್ಯವಿಲ್ಲ. ವಿದ್ಯಾರ್ಥಿಗಳ ಹತ್ತಾರು ದಿನಗಳ ಪರಿಶ್ರಮ ಸಾರ್ಥಕವಾಗಲಿದೆ.

ಪದಬಂಧ 5638

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಹ ನೋಡಿದ್ದಕ್ಕೇ ಈ ಗುಮಾನಿ! (3)
4.ಒಳ್ಳೆಯ ಆಸೆ (4)
6.ಬಿಸಿಲುಕುದುರೆ ಇಲ್ಲಿ ಕಾಣುತ್ತಿದೆಯಲ್ಲಾ? (4)
8.ಉಚಿತ ಎಂದರೂ ಇದು ನಿಶ್ಚಿತವಾದದ್ದು! (3)
11.ಗುಲಾಬಿ ಹಿಡಿದಿರುವ ದಾಸ (3)
13.ಇದಿನ್ನೂ ಎಳೆಮಗು (4)
17.ವಿರಾಜಮಾನವಾಗಿರುವ ಚಕ್ರವರ್ತಿ (4)
18.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)

ಮೇಲಿಂದ ಕೆಳಕ್ಕೆ
1. 1.ಸದ್ಯದ ಪರಿಸ್ಥಿತಿಯಿದು (3)
2.ಸಖನ ನಗುಮುಖ (4)
3.ಇಣುಕುತ್ತಿರುವ ಅಳಿಲು (3)
5.ಸಂಯಮ ತೋರುತ್ತಿರುವ ನರಕಾಧಿಪತಿ (2)
7.ಬಾಯಿಗೆ ಮೊಸರು ಬೇಕಾದರೆ ಕೈ ಹೀಗೆ ರಾಡಿ (3)
9.ಈ ತರ ಬಿದ್ದಿರುವ ಒಣಗಿದ ವಸ್ತು (3)
10.ಅತಿಶಯವಾದ ಪ್ರೀತಿ (3)
12.ಜರೂರಾಗಿ ಮಾಡಿಮುಗಿಸಿರುವ ಪಂಚನಾಮೆ (4)
14.ಕೇಳಲು ಮಧುರವಾಗಿರುವುದು (3)
15.ಸುಗಮವಾಗಿ ಕಿತ್ತು ತಂದಿರುವ ಹೂ (2)
16.ಬಯ್ಯಲು ಸೂಕ್ತವೆನಿಸಿದ ವಿಸ್ತಾರ ಜಾಗ (3)



5637ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಸಹಾಯಸ್ಥಿತಿ 5.ದಿಗ್ಬಂಧನ
6.ಗದರು 8.ಪ್ರವೇಶ
11.ತುರಗ 13.ಶಬರ
14.ಕಲರವ 17.ಶರೀರದಂಡನೆ

ಮೇಲಿಂದ ಕೆಳಕ್ಕೆ:
1.ಅಜಗರ 2.ಯತ್ನ
3.ತಿದಿ 4.ವಾನಪ್ರಸ್ಥ
7.ರುಜುವಾತು 8.ಪ್ರಯೋಗ
9.ಶಬ್ದಕೋಶ 10.ಉಪಾಕರ್ಮ
12.ಅರಮನೆ 15.ವಶ
16.ಗರ

ಸುಡೊಕು 6023

	6			7		2	9	3
	8		5	2		1	6	
1		5					8	
4			2		5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6022 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಗುಸುಗುಸು

‘ಹೃದಯ’ಕ್ಕೆ ಅಡಿಗಡಿಗೂ ‘ಕಾಣದ ಕೈ’

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಮ್ಮ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರ ಅಳಿಯ ಹಣಾಹಣಿಗೆ ಬಿದ್ದಿರುವ ಗ್ರಾಮಾಂತರ ಕ್ಷೇತ್ರದಲ್ಲಿ ರಾಜಕೀಯ ತಂತ್ರಗಾರಿಕೆ ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆಯಂತೆ.

ಇದೇ ಮೊದಲ ಬಾರಿ ಚುನಾವಣಾ ಕಣಕ್ಕೆ ಇಳಿದಿರುವ ಬಿಜೆಪಿ ಅಭ್ಯರ್ಥಿ ಮಂಜುನಾಥ್ ಅವರು ಎದುರಾಳಿಗಳ ರಾಜಕೀಯ ಪಟ್ಟುಗಳನ್ನು ಕಂಡು ಬೆರಗಾಗುತ್ತಿದ್ದಾರಂತೆ. ತಮ್ಮದೇ ಹೆಸರಿನ ಮತ್ತೊಬ್ಬರು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿರುವುದು ನಿಮ್ಮ ಮತಗಳನ್ನು ಕಸಿಯಲು ಮಾಡುತ್ತಿರುವ ತಂತ್ರ ಎಂದು ಜತೆಗಿರುವವರು ಪದೇಪದೇ ಹೇಳುತ್ತಿರುವುದನ್ನು ಕೇಳಿ ಮಂಜುನಾಥ್ ರೋಸಿಹೋಗಿದ್ದಾರಂತೆ. ಕಾಂಗ್ರೆಸ್‌ನ ತಂತ್ರಗಾರಿಕೆ ಕಂಡ ಅವರು, ‘ಮಂತ್ರ, ಯಂತ್ರ, ತಂತ್ರ, ಕುತಂತ್ರ’ದ ಕುರಿತು ಮಾತುಗಳನ್ನು ಆಡಿದ್ದಂತೆ...


ಸಿ.ಎನ್. ಮಂಜುನಾಥ್

ಇಂತಹ ಸಮಯದಲ್ಲೇ ಅವರು ಪ್ರಚಾರಕ್ಕೆ ಹೋದ ಮೊದಲ ದಿನಗಳಲ್ಲಿ ಕೆಲವರು ಮನೆಗೆ ಕರೆದು ಸತ್ಕಾರ ಮಾಡುತ್ತಿದ್ದರಂತೆ. ತಮ್ಮ ಬೆಂಬಲಕ್ಕೆ ಇಷ್ಟೊಂದು ಜನ ನಿಂತಿದ್ದಾರಲ್ಲ ಎಂದು ಡಾಕ್ಟರು ನಗು ಅರಳಿಸುತ್ತಿದ್ದಂತೆಯೇ, ‘ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವ ಕುಟುಂಬದ ಸದಸ್ಯರನ್ನು ಸ್ವಲ್ಪ ನೋಡಿ ಹೋಗಿ, ಮಾತ್ರೆ, ಔಷಧ ಬರೆದುಕೊಡಿ’ ಎನ್ನಲು ಜನರು ಆರಂಭಿಸಿದ್ದಾರಂತೆ. ಆರಂಭದಲ್ಲಿ ಇದನ್ನು ಸಮಾಜ ಸೇವೆಯ ಒಂದು ಭಾಗವೆಂದೇ ಭಾವಿಸಿದ್ದ ಡಾಕ್ಟರಿಗೆ ಬರುಬರುತ್ತಾ ಒಂದೊಂದು ಊರಿನಲ್ಲಿ ನಿತ್ಯವೂ ಹೀಗೆ ಅನಾರೋಗ್ಯದ ನೆಪ ಹೇಳಿ ತಪಾಸಣೆ ಮಾಡಿಸಿಕೊಳ್ಳುವವರ ಸಂಖ್ಯೆ ಹೆಚ್ಚಾಗುತ್ತಿದ್ದುದನ್ನು ಕಂಡು ಅನುಮಾನವೂ ಬಂದಿದೆಯಂತೆ. ಹೀಗೆ ಮಾಡಿದರೆ ಕ್ಷೇತ್ರದ ಎಲ್ಲ ಜನರ ಬಳಿ ಹೋಗಿ ಮತ ಕೇಳಲು ಸಮಯ ಎಲ್ಲಿ ಸಿಗುತ್ತದೆ. ನನ್ನ ಹೆಸರಿನ ಅಭ್ಯರ್ಥಿ ಕಣಕ್ಕೆ ಇಳಿಸಿದಂತೆ, ನನ್ನ ಪ್ರಚಾರದ ವೇಗಕ್ಕೆ ತಡೆ ಹಾಕಲು ಯಾವುದೋ ‘ಕಾಣದ ಕೈ’ ಕೆಲಸ ಮಾಡುತ್ತಿರಬಹುದೇ ಎಂದು ‘ದೊಡ್ಡ ಗೌಡರ’ ಬಳಿ ಅವಲತ್ತುಕೊಂಡಿದ್ದಾರಂತೆ.

ಮತ ಆಮಿಷ: ಆಯೋಗದ ವಶ

₹23.19 ಕೋಟಿ ನಗದು

ಉಚಿತ ಉಡುಗೊರೆ	₹1.73 ಕೋಟಿ
ಮದ್ಯ	₹29.01 ಕೋಟಿ (9.06 ಲಕ್ಷ ಲೀ)
ಮಾದಕವಸ್ತು	₹1.63 ಕೋಟಿ (238.85 ಕೆ.ಜಿ.)
ಚಿನ್ನ	₹9.18 ಕೋಟಿ (15.38 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!

ಜಗದೀಶ ಶೆಟ್ಟರ್ ಆರು ಬಾರಿ ಹುಬ್ಬಳ್ಳಿಯಲ್ಲಿ ಶಾಸಕರಾಗಿದ್ದಾರೆ. ಈಗ ಬೆಳಗಾವಿಗೆ ಬಂದು, ‘ಇದು ನನ್ನ ಕರ್ಮಭೂಮಿ’ ಎಂದು ಹೇಳುತ್ತಿದ್ದಾರೆ. ಮೊದಲು ಬೆಳಗಾವಿಯಲ್ಲಿನ ಅವರ ಮನೆ ವಿಳಾಸ ಕೇಳಿ? ಪ್ರಧಾನಿ ನರೇಂದ್ರ ಮೋದಿ ಹೆಸರಿನಲ್ಲಿ ಗೆದ್ದುಬಂದ ಬೆಳಗಾವಿಯ ಹಾಲಿ ಸಂಸದೆ ಇಷ್ಟು ವರ್ಷಗಳಲ್ಲಿ ಏನು ಅಭಿವೃದ್ಧಿ ಮಾಡಿದ್ದಾರೆ? ಮೂಕ, ಕಿವುಡ ಮತ್ತು ಕುರುಡರಾಗಿರುವ ಇಂಥ ಸಂಸದರು ನಮಗೆ ಬೇಕೇ?

ಲಕ್ಷ್ಮಿ ಹೆಬ್ಬಾಳಕರ, ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕ್ಷೇತ್ರ ಮಹಾತ್ಮೆ

ಗಣಿ ಲೂಟಿಯಿಂದ ಭಾಗಶಃ ಬೆಂಗಾಡಾದ ಬಳ್ಳಾರಿ ಜಿಲ್ಲೆಯ ರಾಜಕಾರಣವೇ ವಿಚಿತ್ರ. ಒಂದು ಕಾಲದಲ್ಲಿ ಎಂ.ವೈ. ಘೋರ್ಪಡೆ, ಎಂ.ಪಿ. ಪ್ರಕಾಶ್, ಲಾಡ್ ಕುಟುಂಬಗಳ ಹಿಡಿತದಲ್ಲಿದ್ದ ಬಳ್ಳಾರಿ, ಗಣಿಗಾರಿಕೆ ಬೆಳೆಯುತ್ತಿದ್ದಂತೆ ‘ಗಾಲಿ ರೆಡ್ಡಿ’ಗಳ ಪಾಲಾಯಿತು. ಗಣಿಯ ಜತೆಗೆ ರಾಜಕೀಯವಾಗಿಯೂ ಬೆಳೆದ ರೆಡ್ಡಿ ಕುಟುಂಬದವರು ಎಲ್ಲ ಪಕ್ಷಗಳಿಗೂ ಪರ್ಯಾಯವಾದ ರಾಜಕಾರಣವನ್ನು ಬೆಳೆಸಿದರು. ಯಾರು ಸಂಸದರಾಗಬೇಕು, ಯಾರು ಶಾಸಕರಾಗಬೇಕು ಎಂಬುದನ್ನೂ ನಿರ್ಣಯಿಸುವ ಮಟ್ಟಕ್ಕೆ ಬೆಳೆದರು. ಹಿಂದೆ ರಾಜಕಾರಣ ಮಾಡುತ್ತಿದ್ದ ಸೂರ್ಯನಾರಾಯಣ ರೆಡ್ಡಿ, ದಿವಾಕರ ಬಾಬು ಕುಟುಂಬವೂ ಮರೆಗೆ ಸರಿದಿತ್ತು. ಜನಾರ್ದನ ರೆಡ್ಡಿ ಜೈಲಿಗೆ ಹೋದ ಬಳಿಕ ಪ್ರಭಾವ ಕಡಿಮೆಯಾಯಿತು. ಇಂತಿಪ್ಪ ಗಣಿ ನಾಡಿನಲ್ಲಿ, 2023ರಲ್ಲಿ ಮತ್ತೆ ತಮ್ಮ ಶಕ್ತಿ ತೋರಿಸಲು ರೆಡ್ಡಿ ಶುರುಮಾಡಿದರು. ಆದರೆ, ನೆಲೆ ಸಿಗಲಿಲ್ಲ. ಕೆಆರ್‌ಪಿಪಿ ಕಟ್ಟಿದ ರೆಡ್ಡಿ, ಶಾಸಕರಾಗಿ ಗೆದ್ದು, ಪಕ್ಷವನ್ನು ಬಿಜೆಪಿಯೊಳಗೆ ವಿಲೀನಗೊಳಿಸಿದ್ದಾರೆ. ರೆಡ್ಡಿ ಶಿಷ್ಯರಾದ ಶ್ರೀರಾಮುಲು ಮತ್ತು ಸಚಿವ ಸಂತೋಷ್ ಲಾಡ್ ಆಪ್ತರಾದ ತುಕಾರಾಂ ಈಗ ಮುಖಾಮುಖಿಯಾಗಿದ್ದಾರೆ. ಸಚಿವ ನಾಗೇಂದ್ರ ಕೂಡ ಒಂದು ಕಾಲದಲ್ಲಿ ರೆಡ್ಡಿ ಆಪ್ತ. ನಾರಾ ಭರತ್ ರೆಡ್ಡಿ ಈಗ ಕಾಂಗ್ರೆಸ್ ಶಾಸಕ. ರೆಡ್ಡಿ ಮೇಲುಗೈಯೋ ಸಚಿವ ಲಾಡ್‌ಗೆ ಲಾಡು ಸಿಗಲಿದೆಯೋ ಕಾದು ನೋಡಬೇಕಿದೆ.

ಮತ ‘ದಾಹ’ಕ್ಕೆ ನೀರಾವರಿ

• ರಾಜೇಶ್ ರೈ ಚಟ್ಲ

ಮತ ಮಂಥನ

ಬೆಂಗಳೂರು: ರಾಜ್ಯದ ಬೃಹತ್ ನೀರಾವರಿ ಯೋಜನೆಗಳಾದ ಮಹದಾಯಿ, ಭದ್ರಾ ಮೇಲ್ದಂಡೆ, ಕೃಷ್ಣಾ ಮೇಲ್ದಂಡೆ 3ನೇ ಹಂತ, ಮೇಕೆದಾಟು ಅಣೆಕಟ್ಟೆ ನಿರ್ಮಾಣ ನನೆಗುದಿಯಲ್ಲಿವೆ.

ಈ ಯೋಜನೆಗಳ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಧ್ಯೆ ವಾಗ್ವಾದಕ್ಕೆ ಅಂತ್ಯವೇ ಇಲ್ಲ ಎನ್ನುವಂತಾಗಿದೆ. ಚುನಾವಣೆ ಸಂದರ್ಭಗಳಲ್ಲಿ ಈ ಯೋಜನೆಗಳು ಪಕ್ಷಗಳ ಕಾರ್ಯಸೂಚಿಯಾಗಿ ಸದ್ದು ಮಾಡುತ್ತವೆ. ಈ ಬಾರಿಯೂ ಮತ ದಾಹ ತೀರಿಸಿಕೊಳ್ಳುವ ‘ಅಸ್ತ್ರ’ವಾಗಿ ಬಳಕೆಯಾಗುವುದು ಖಚಿತ. ಆರೋಪ–ಪ್ರತ್ಯಾರೋಪಗಳ ರಾಜಕೀಯ ನಿಶ್ಚಿತ.

ಯೋಜನೆಗಳ ಅನುಷ್ಠಾನ ವಿಚಾರ ಮುನ್ನೆಲೆಗೆ ಬರುತ್ತಿದ್ದಂತೆಯೇ ಪಕ್ಕದ ಗೋವಾ, ತಮಿಳುನಾಡು ತಗಾದೆ ತೆಗೆಯುತ್ತವೆ. ಒಂದಷ್ಟು ದಿನ ಸದ್ದು– ಗದ್ದಲ. ಮತ್ತೆ ರೈತ ಸಮುದಾಯ ಸಂಘರ್ಷಕ್ಕೆ ನಿಲ್ಲುತ್ತದೆ. ಯೋಜನೆ ಶೀಘ್ರ ಅನುಷ್ಠಾನ ಆಗ್ರಹಿಸಿ ರೈತರ ಅಳು– ಅಹವಾಲು ಯಥಾಸ್ಥಿತಿ.

ಈ ಬಾರಿ ‘ಲೋಕ’ ಸಮರ ಗೆದ್ದರೆ ಮೇಕೆದಾಟು ಯೋಜನೆ ಜಾರಿಗೆ ಅವಕಾಶ ನೀಡುವುದಿಲ್ಲವೆಂದು ತನ್ನ ಪ್ರಣಾಳಿಕೆಯಲ್ಲೇ ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಭರವಸೆ ಕೊಟ್ಟಿದೆ. ಕಾಂಗ್ರೆಸ್ ನೇತೃತ್ವದ ವಿರೋಧಪಕ್ಷಗಳ ಕೂಟ ‘ಇಂಡಿಯಾ’ದ ಸದಸ್ಯನ ಈ ನಿಲುವು ರಾಜ್ಯ ಬಿಜೆಪಿಗೆ ಚುನಾವಣಾ ಪ್ರಚಾರಕ್ಕೊಂದು ವಿಚಾರವಾಗಿ ಸಿಕ್ಕಿದೆ. ಆದರೆ, ಜಲಸಂಪನ್ಮೂಲ ಖಾತೆ ವಹಿಸಿಕೊಂಡಿರುವುದೇ ಈ ಯೋಜನೆ ಅನುಷ್ಠಾನಕ್ಕೆ ಎನ್ನುವ ಮೂಲಕ ಆರಂಭದಲ್ಲಿಯೇ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬಿಜೆಪಿಯ ಬಾಯಿ ಮುಚ್ಚಿಸಿದ್ದಾರೆ. ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರು, ‘ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಮೇಕೆದಾಟು ಯೋಜನೆಯನ್ನು ಪ್ರಕಟಿಸುತ್ತೇವೆ. ಇದೇ ರೀತಿ ಬಿಜೆಪಿ, ಕಾಂಗ್ರೆಸ್ ಕೂಡಾ ಈ ಯೋಜನೆ ಬೆಂಬಲಿಸುವ ನಿರ್ಧಾರವನ್ನು ಪ್ರಣಾಳಿಕೆಯಲ್ಲಿ ಪ್ರಕಟಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಕೇಂದ್ರ ಸರ್ಕಾರದ ತಿರಸ್ಕಾರ, ಅವಗಣನೆ, ಅನುಮತಿ, ಅನುದಾನ ನೀಡುವ ವಿಚಾರದಲ್ಲಿ ವಿಳಂಬ ಈ ಯೋಜನೆಗಳ ವಿಳಂಬಕ್ಕೆ ಪ್ರಮುಖ ಕಾರಣ ಎಂಬ ಕಾಂಗ್ರೆಸ್ ಆಪಾದನೆಯಲ್ಲಿ ಸತ್ಯಾಂಶವೂ ಇದೆ. ಅದೇ ವೇಳೆ, ರಾಜ್ಯದ ಸಂಸದರ, ಸರ್ಕಾರದ ಇಚ್ಛಾಶಕ್ತಿಯ ಕೊರತೆಯನ್ನೂ ಕಡೆಗಣಿಸುವಂತಿಲ್ಲ. ಇತ್ತೀಚಿನ ದಿನಗಳಲ್ಲಿ ಸಂದರ್ಭ ಸಿಕ್ಕಾಗಲೆಲ್ಲ ಈ ಯೋಜನೆಗಳನ್ನು ಪ್ರಸ್ತಾಪಿಸಿ, ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆಯೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕೆಂಡಕಾರುತ್ತಲೇ ಇದ್ದಾರೆ.

ರಾಷ್ಟ್ರೀಯ ಯೋಜನೆಯ ಮಾನ್ಯತೆಯೊಂದಿಗೆ ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ಅನುದಾನ ಒದಗಿಸುವ ಭರವಸೆ ಕೇಂದ್ರದ ಬಜೆಟ್ ಪುಸ್ತಕಕ್ಕೆ ಸೀಮಿತವಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ ರಾಷ್ಟ್ರೀಯ ಯೋಜನೆಯ ಮಾನ್ಯತೆ ನೀಡುವ ಭರವಸೆಯೂ ಹುಸಿಯಾಗಿದೆ. ಇನ್ನು ಹುಬ್ಬಳ್ಳಿ–ಧಾರವಾಡ, ಗದಗ, ನರಗುಂದ, ನವಲಗುಂದ ಸೇರಿದಂತೆ ಕಿತ್ತೂರು ಕರ್ನಾಟಕದ 13 ಪಟ್ಟಣ ಪ್ರದೇಶಗಳು ಮತ್ತು 100ಕ್ಕೂ ಹೆಚ್ಚು ಗ್ರಾಮಗಳ ಲಕ್ಷಾಂತರ ಕುಟುಂಬಗಳ ನೀರಿನ ಬವಣೆ ನೀಗಿಸಬಲ್ಲ ಮಹದಾಯಿ (ಕಳಸಾ–ಬಂಡೂರಿ ನಾಲಾ ತಿರುವು) ಯೋಜನೆ ಚುನಾವಣೆ ಸಂದರ್ಭದಲ್ಲಿ ರಾಜಕೀಯ ಕೆಸರೆರಚಾಟಕ್ಕೆ ವಸ್ತುವಾಗುತ್ತದೆಯೇ ವಿನಃ ಜಾರಿಯಾಗುವ ಲಕ್ಷಣವೇ ಇಲ್ಲ.

ಉತ್ತರ ಕರ್ನಾಟಕದ ಬಹುತೇಕ ಶುಷ್ಕ ಭಾಗಗಳಲ್ಲಿ ವಾಸಿಸುವ ಹಾಗೂ ಮಲಪ್ರಭಾ ನದಿಯನ್ನು ಅವಲಂಬಿಸಿರುವ ಸಾವಿರಾರು ರೈತರಿಗೆ ಈ ಯೋಜನೆಯು ಬಹಳ ಪ್ರಯೋಜನಕಾರಿಯಾಗಿದೆ. ಈ ಭಾಗ ಬಿಜೆಪಿಯ ಭದ್ರ ನೆಲೆ. 10 ವರ್ಷಗಳಿಂದ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರ್ಕಾರ ವಿರುದ್ಧ ಈ ಮಹದಾಯಿ ವಿಷಯವನ್ನೇ ದಾಳವಾಗಿ ಬಳಸಿಕೊಂಡು ಮತ ಫಸಲು ಪಡೆಯಲು ಕಾಂಗ್ರೆಸ್ ಮುಂದಾಗಿದೆ.

ಮೇಕೆದಾಟು ಯೋಜನೆಗಾಗಿ ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿ ಹಳೆ ಮೈಸೂರು ಭಾಗದಲ್ಲಿ ಪಾದಯಾತ್ರೆ ನಡೆಸಿದ್ದ ಕಾಂಗ್ರೆಸ್, ಮತ ಕೊಯ್ಲು ಮಾಡಿದ್ದು ಸುಳ್ಳಲ್ಲ. ಈ ಪಾದಯಾತ್ರೆ ಮೂಲಕ ಒಕ್ಕಲಿಗ ಪ್ರಾಬಲ್ಯದ ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಕೋಲಾರ, ಮಂಡ್ಯ, ಮೈಸೂರು, ಹಾಸನ, ತುಮಕೂರು ಹಾಗೂ ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನ ಮತ್ತು ಡಿ.ಕೆ. ಶಿವಕುಮಾರ್ ವರ್ಚಸ್ಸು ವೃದ್ಧಿಯಾಗಿತ್ತು. ‘ಮೇಕೆದಾಟು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡರ ಕನಸಿನ ಕೂಸು. ಗೌಡರು ಮುಖ್ಯಮಂತ್ರಿಯಾಗಿದ್ದಾಗಲೇ (1996ರಲ್ಲಿ) ಇದಕ್ಕೆ ನೀಲನಕ್ಷೆ ರೂಪಿಸಿದ್ದರು. ನಾನು ಸಿಎಂ ಆಗಿದ್ದಾಗ ಡಿಪಿಆರ್ ತಯಾರಿಸಲಾಗಿದ್ದು, ನಮ್ಮ ಶ್ರಮವನ್ನು ತಮ್ಮ ಕೊಡುಗೆ ಎಂದು ಕಾಂಗ್ರೆಸ್ ಬಿಂಬಿಸಿಕೊಂಡಿದೆ’ ಎಂದು ಎಚ್.ಡಿ. ಕುಮಾರಸ್ವಾಮಿ ಟೀಕಿಸಿದ್ದರು.

ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ–3) ಮೂರನೇ ಹಂತಕ್ಕೆ ಕೃಷ್ಣಾ ಜಲ ವಿವಾದ ನ್ಯಾಯಮಂಡಳಿ - 2 ತೀರ್ಪು ನೀಡಿ 13 ವರ್ಷ ಕಳೆದರೂ ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿಲ್ಲ. ಬಯಲುಸೀಮೆಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು ‘ರಾಷ್ಟ್ರೀಯ ಯೋಜನೆ’ ಎಂದು ಘೋಷಿಸದೆ ಕೇಂದ್ರ ವಿಳಂಬ ಧೋರಣೆ ಅನುಸರಿಸುತ್ತಿದೆ. ಚುನಾವಣಾ ಪೂರ್ವದಲ್ಲಿ ಪ್ರಚಾರ ಪಡೆದ, ಚುನಾವಣೆ ಮುಗಿದ ಬಳಿಕ ಮರೆತುಹೋದ ನತದೃಷ್ಟ ಯೋಜನೆಗಳಲ್ಲಿ ಇದೂ ಒಂದು. ಇಂದಲ್ಲ ನಾಳೆ ತಮ್ಮ ಹೊಲಗದ್ದೆಗಳಿಗೆ ನೀರು ಹರಿದೀತೆಂದು ಯೋಜನೆಯ ಅಚ್ಚುಕಟ್ಟು ಪ್ರದೇಶದ ಜನ ಸಮುದಾಯ ಕನವರಿಸುತ್ತ ತಾವು ಕಾಣುತ್ತಿರುವ ಕನಸು ಮೊಮ್ಮಕ್ಕಳ ಕಾಲಕ್ಕಾದರೂ ನನಸಾದೀತೆಂಬ ಆಸೆಯನ್ನು ಇಟ್ಟುಕೊಂಡಿದ್ದಕ್ಕೆ ಕಾರಣ ‘ರಾಜಕಾರಣ’ ನೀಡುತ್ತ ಬಂದ ಭರವಸೆ. ಅದೇ ಭರವಸೆ ನೀಡಿ ಮತಸೆಳೆಯಲು ಬಿಜೆಪಿ ಸಿದ್ಧವಾಗಿದೆ. ಆದರೆ, ಜನ ನಂಬುವ ಸ್ಥಿತಿಯಲ್ಲಿ ಇಲ್ಲ. ಇದು ಕಾಂಗ್ರೆಸ್ ಪಾಲಿಗೆ ನೆರವಾಗಬಹುದು. ನೀರಾವರಿ ವಿಚಾರಗಳಲ್ಲಿ ಕೇಂದ್ರ ಸರ್ಕಾರದ ವಿರುದ್ಧದ ಕಾಂಗ್ರೆಸ್ ಸಾರಿರುವ ಸಮರ, ಆ ಪಕ್ಷಕ್ಕೆ ಒಂದಷ್ಟು ಮತಗಳನ್ನು ಹೆಚ್ಚುವರಿಯಾಗಿ ತಂದುಕೊಡುವುದರಲ್ಲಿ ಅನುಮಾನ ಇಲ್ಲ.

ಭದ್ರಾ ಮೇಲ್ದಂಡೆ ಯೋಜನೆ

- ಮಧ್ಯ ಕರ್ನಾಟಕದ ಪ್ರಮುಖ ಏತ ನೀರಾವರಿ ಯೋಜನೆ
- 29.90 ಟಿಎಂಸಿ ಅಡಿ ನೀರು ಬಳಕೆ
- ಸೂಕ್ಷ್ಮ ನೀರಾವರಿ ಯೋಜನೆ ಮೂಲಕ 2,25,515 ಹೆಕ್ಟೇರ್ ಕೃಷಿ ಪ್ರದೇಶಕ್ಕೆ ನೀರಾವರಿ ಸೌಲಭ್ಯ
- ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಸಕ್ಷಮ ಪ್ರಾಧಿಕಾರಗಳ ಅನುಮತಿ ಸಿಕ್ಕರೂ, ಕೇಂದ್ರ ಸರ್ಕಾರದಿಂದ ವಿಳಂಬ
- 2023-24ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಈ ಯೋಜನೆಗೆ ₹5,300 ಕೋಟಿ ಘೋಷಣೆ
- ಕೇಂದ್ರದಿಂದ ಬಜೆಟ್ ಘೋಷಣೆಯ ಹಣ ಬಿಡುಗಡೆ ಆಗಿಲ್ಲ

ಮೇಕೆದಾಟು

- 5252.40 ಹೆಕ್ಟೇರ್ ಪ್ರದೇಶದಲ್ಲಿ ಜಲಾಶಯ ನಿರ್ಮಿಸಲು ಉದ್ದೇಶ
- 67.2 ಟಿಎಂಸಿ ಅಡಿ ನೀರು ಸಂಗ್ರಹಿಸುವ ಯೋಜನೆ
- ಬೆಂಗಳೂರು ಸೇರಿದಂತೆ ಹಳೆ ಮೈಸೂರಿನ ಮೂರು ಜಿಲ್ಲೆಗಳಿಗೆ ಲಾಭ
- 4.75 ಟಿಎಂಸಿ ಅಡಿ ಹೆಚ್ಚುವರಿ ನೀರು ಬೆಂಗಳೂರಿನ ಕುಡಿಯುವ ಅಗತ್ಯಕ್ಕೆ ಬಳಕೆ
- 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿ
- ಅಂದಾಜು ₹9 ಸಾವಿರ ಕೋಟಿ ವೆಚ್ಚ
- ಕೇಂದ್ರ ಪರಿಸರ ಇಲಾಖೆಯಿಂದ ಅನುಮೋದನೆ ಸಿಕ್ಕಿಲ್ಲ
- ಯೋಜನೆ ಜಾರಿಗೆ ತಮಿಳುನಾಡು ತಗಾದೆ

ಕೃಷ್ಣಾ ಮೇಲ್ದಂಡೆ ಯೋಜನೆ 3ನೇ ಹಂತ

- ಮೂರನೇ ಹಂತದಲ್ಲಿ ಕರ್ನಾಟಕ ರಾಜ್ಯಕ್ಕೆ 130 ಟಿಎಂಸಿ ಅಡಿ ನೀರು ಹಂಚಿಕೆ
- ಆಲಮಟ್ಟಿ ಜಲಾಶಯದ ಎತ್ತರವನ್ನು ಈಗಿರುವ 519.60 ಅಡಿಯಿಂದ 524.256 ಅಡಿಗೆ ಏರಿಸುವ ಯೋಜನೆ.
- ಮೂರನೇ ಹಂತದ ಅನುಷ್ಠಾನದಿಂದ ಬರಪೀಡಿತ ಉತ್ತರ ಕರ್ನಾಟಕದ 5.94 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಸಿಗಲಿದೆ.
- ಕೃಷ್ಣಾ ಜಲ ವಿವಾದ ನ್ಯಾಯಾಧಿಕರಣ - 2 ನೇ ಟ್ರಿಬ್ಯುನಲ್ ಬ್ರಿಜೇಶ್ ಕುಮಾರ್ ವರದಿ ಕೊಟ್ಟು 13 ವರ್ಷ ಕಳೆದಿದೆ
- ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಿಲ್ಲ



ಮಹದಾಯಿ (ಕಳಸಾ– ಬಂಡೂರಿ ನಾಲಾ) ಯೋಜನೆ

- ಹುಬ್ಬಳ್ಳಿ–ಧಾರವಾಡ, ಗದಗ, ನರಗುಂದ, ನವಲಗುಂದ ಸೇರಿದಂತೆ ಕಿತ್ತೂರು ಕರ್ನಾಟಕದ 13 ಪಟ್ಟಣ ಪ್ರದೇಶಗಳು ಮತ್ತು 100ಕ್ಕೂ ಹೆಚ್ಚು ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ ಯೋಜನೆ
- ಯೋಜನೆಗೆ 2002ರಲ್ಲಿಯೇ ಒಪ್ಪಿಗೆ
- ಮಹದಾಯಿ ಜಲಾನಯನ ಪ್ರದೇಶ (ಗೋವಾ, ಕರ್ನಾಟಕ, ಮಹಾರಾಷ್ಟ್ರದಲ್ಲಿ) ಒಟ್ಟು 2,032 ಚ. ಮೀಟರ್
- ಕರ್ನಾಟಕದಲ್ಲಿರುವ ಜಲಾನಯನ ಪ್ರದೇಶ 375 ಚ. ಮೀಟರ್
- ಮಹದಾಯಿ ಜಲ ವಿವಾದಗಳ ನ್ಯಾಯಮಂಡಳಿ ಕಳಸಾ–ಬಂಡೂರಿ ನಾಲಾ ಯೋಜನೆಗೆ 2018ರ ಆಗಸ್ಟ್ 14ರಂದು 3.90 ಟಿಎಂಸಿ ಅಡಿ ನೀರು ಹಂಚಿಕೆ
- ಕಳಸಾ ನಾಲಾ ತಿರುವು ಯೋಜನೆಗೆ 1.72, ಬಂಡೂರಿ ನಾಲಾ ತಿರುವು ಯೋಜನೆಗೆ 2.18 ಟಿಎಂಸಿ ಅಡಿ ನೀರು, ಮಹದಾಯಿ ಜಲ ವಿದ್ಯುತ್ ಯೋಜನೆಗೆ 8.02 ಟಿಎಂಸಿ ಅಡಿ, ನೀರಾವರಿ, ಕುಡಿಯುವ ಉದ್ದೇಶಕ್ಕೆ1.50 ಟಿಎಂಸಿ ಅಡಿ
- ಯೋಜನೆಯ ಪರಿಷ್ಕೃತ ಡಿಪಿಆರ್‌ಗೆ ಕೇಂದ್ರ ಜಲ ಆಯೋಗದಿಂದ 2022ರ ಡಿ. 29ರಂದು ಅನುಮೋದನೆ
- ಈ ಯೋಜನೆಗೆ ಅರಣ್ಯ ಮತ್ತು ಪರಿಸರ ಕಾಯ್ದೆಯಡಿ ಕೇಂದ್ರದಿಂದ ಅನುಮತಿ ಸಿಗಬೇಕಿದೆ

ಏ.2ರಂದು ಧಾರವಾಡದಲ್ಲಿ ಭಕ್ತರ ಸಭೆ ಬಳಿಕ ಮುಂದಿನ ನಿರ್ಧಾರ ಪ್ರಕಟ

‘ಜೋಶಿ ಸೋಲಿಸುವುದು ಅನಿವಾರ್ಯ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಧಾರವಾಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ಅವರನ್ನು ಬದಲಾಯಿಸಬೇಕೆಂಬ ಆಗ್ರಹಕ್ಕೆ ಆ ಪಕ್ಷದ ವರಿಷ್ಠರು ಮನ್ನಣೆ ನೀಡಿಲ್ಲ. ಇದೀಗ ಜೋಶಿ ಅವರನ್ನು ಸೋಲಿಸುವುದು ಅನಿವಾರ್ಯ’ ಎಂದು ಶಿರಹಟ್ಟಿಯ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಾರ್ಚ್ 31ರೊಳಗೆ ಅಭ್ಯರ್ಥಿ ಬದಲಾಯಿಸಬೇಕೆಂದು ಗಡುವು ನೀಡಲಾಗಿತ್ತು. ಬದಲಾಯಿಸದ ಕಾರಣ ಏಪ್ರಿಲ್ 2ರಂದು ಬೆಳಿಗ್ಗೆ 10.30ಕ್ಕೆ ಧಾರವಾಡದಲ್ಲಿ ಭಕ್ತರ ಸಭೆ ನಡೆಸಿ, ಮುಂದಿನ ನಿರ್ಧಾರ ಪ್ರಕಟಿಸಲಾಗುವುದು’ ಎಂದರು.

‘ಜೋಶಿ ಅವರ ದಮನಕಾರಿ ನೀತಿಯಿಂದ ನೊಂದ ಸಮುದಾಯಗಳಿಗೆ ಸಾಂತ್ವನ ಹೇಳುವುದು ನಮ್ಮ ಉದ್ದೇಶ. ಚುನಾವಣೆಗೆ ನಿಲ್ಲುವ, ಇತರ ಯಾರನ್ನೇ ಕಣಕ್ಕಿಳಿಸುವ ಯೋಚನೆ ಇಲ್ಲ’ ಎಂದು ಸ್ಪಷ್ಟಪಡಿಸಿದರು.

‘ಬಿಜೆಪಿಯ ಹಲವಾರು ನಾಯಕರು ದೂರವಾಣಿ ಮೂಲಕ ಹಾಗೂ ಪ್ರತ್ಯಕ್ಷವಾಗಿ ನನ್ನ ಮನವೊಲಿಸಲು ಯತ್ನಿಸಿದರು. ಮಾನಹಾನಿ, ಪ್ರಾಣಹಾನಿ, ಜೈಲಿಗೆ ಹಾಕುವ ಬೆದರಿಕೆಗಳೂ ಬಂದವು. ದೊಡ್ಡ ವ್ಯಕ್ತಿ, ಎಷ್ಟೇ ಒತ್ತಡ ಹೇರಿದರೂ ಒಂದು ಬಾರಿ ತೆಗೆದುಕೊಂಡ ತೀರ್ಮಾನವನ್ನು ಬದಲಾಯಿಸಲ್ಲ. ಮಾನ, ಪ್ರಾಣ ಹೋದರೂ ಮುಂದಿಟ್ಟ ಹೆಜ್ಜೆ ಹಿಂದೆ ಇಡುವುದಿಲ್ಲ. ಆಮಿಷ, ಬೆದರಿಕೆಗೆ ಬಗ್ಗುವ ಮನಃಸ್ಥಿತಿಯ, ಪರಿಸ್ಥಿತಿಯ ಸ್ವಾಮಿ ನಾನಲ್ಲ’ ಎಂದರು.

ಜೋಶಿಗೆ ಬುದ್ಧಿ ಕಲಿಸಲು ನಾನೊಬ್ಬ ಸಾಕು. ಸನ್ಯಾಸಿ ಮನಸ್ಸು ಮಾಡಿದರೆ ಏನು ಬೇಕಾದರೂ ಆಗಬಹುದು. ಯೋಗಬಲದ ಮುಂದೆ ಎಲ್ಲವೂ ನಾಶವಾಗುತ್ತದೆ

ಫಕೀರ ದಿಂಗಾಲೇಶ್ವರ ಸ್ವಾಮೀಜಿ, ಶಿರಹಟ್ಟಿ

‘ಬಿಜೆಪಿಗೆ ಜೋಶಿ ಅನಿವಾರ್ಯವಾದರೆ, ನಮಗೆ ಜನರ ಹಿತ, ನೆಮ್ಮದಿ ಅನಿವಾರ್ಯ. ನನ್ನ ಜೀವ ಇರುವವರೆಗೆ ಈ ಹೋರಾಟ ಮುಂದುವರಿಯಲಿದೆ’ ಎಂದು ಹೇಳಿದರು.

‘ನಮ್ಮೊಂದಿಗಿದ್ದ ಸ್ವಾಮೀಜಿಗಳ (ಮೂರುಸಾವಿರ ಮಠದ ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ಧಾರವಾಡ ಮುರುಘಾ ಮಠದ ಮಲ್ಲಿಕಾರ್ಜುನ ಸ್ವಾಮೀಜಿ) ಮೇಲೆ ಒತ್ತಡ ಹೇರಿ, ತಮ್ಮ ಪರವಾಗಿ ಹೇಳಿಕೆ ಕೊಡಿಸಿದ್ದಾರೆ. ತಾವೇ ಪತ್ರ ಸಿದ್ಧಮಾಡಿ, ಎಲ್ಲ ಮಠಕ್ಕೆ ಕಳಿಸಿದ್ದಾರೆ. ಪ್ರಜಾಸತ್ತೆ ಸತ್ತುಹೋಗಿದ್ದು, ರಾಜಸತ್ತೆ ಜೀವಂತವಾಗಿದೆ ಎಂಬುದು ಮತ್ತೆ ಸಾಬೀತಾಗಿದೆ’ ಎಂದು ಟೀಕಿಸಿದರು. ವೀರೇಶ ಸೊಬರದಮಠ, ವೀರಣ್ಣ ಕೆಳಲಿ ಇದ್ದರು.

‘ವ್ಯಕ್ತಿ ಪ್ರಜ್ಞೆಗಿಂತ ಸಮಷ್ಟಿ ಪ್ರಜ್ಞೆ ಮುಖ್ಯ’

‘ರಾಜ್ಯದ ಎಲ್ಲ ಮಠಾಧೀಶರು ಮಾನಸಿಕವಾಗಿ ನಮ್ಮೊಂದಿಗಿದ್ದಾರೆ. ಯಾರದೋ ಒತ್ತಡಕ್ಕೆ ಮಣಿದು ಮಾತನಾಡದೆ ಸುಮ್ಮನಿರಬಹುದು. ಸ್ವಾಮೀಜಿಗಳು ನಾಡಿನ ಹಿತಕ್ಕಾಗಿ ಚಿಂತನೆ ನಡೆಸಬೇಕು. ವ್ಯಕ್ತಿ ಪ್ರಜ್ಞೆಗಿಂತ ಸಮಷ್ಟಿ ಪ್ರಜ್ಞೆ ಮುಖ್ಯ. ಇನ್ಮುಂದೆ ಈ ವಿಚಾರದಲ್ಲಿ ಮಠಾಧಿಪತಿಗಳ ಸಭೆ ಕರೆಯಲ್ಲ. ಸ್ವ–ಇಚ್ಛೆಯಿಂದ ಅವರೇ ಬರಬಹುದು. ಲಿಂಗಾಯತ ಸಮಾಜ ಮಾತ್ರವಲ್ಲದೆ ನೊಂದ ಎಲ್ಲ ಸಮಾಜದವರು ಶೀಘ್ರದಲ್ಲೇ ಧ್ವನಿ ಎತ್ತಲಿದ್ದಾರೆ’ ಎಂದು ದಿಂಗಾಲೇಶ್ವರ ಶ್ರೀ ಹೇಳಿದರು.

‘ತಮ್ಮನ್ನು ಗೆಲ್ಲಿಸಿದ್ದು ಜನರೇ ಹೊರತು, ಜೋಶಿ ಅಲ್ಲವೆಂಬ ಸತ್ಯವನ್ನು ಲಿಂಗಾಯತ ಸಮುದಾಯದ ಶಾಸಕರು ಅರಿತುಕೊಳ್ಳಬೇಕು. ಜೋಶಿ ಎದುರು ಪಕ್ಷವೇ ಗೌಣವಾಗಿದೆ. ಬಿಜೆಪಿಯ ಹಲವು ನಾಯಕರನ್ನು ಅವರೇ ತುಳಿದಿದ್ದಾರೆ’ ಎಂದು ಟೀಕಿಸಿದರು.

ಬೆಳಗಾವಿಯಲ್ಲಿ ಬಿಜೆಪಿ ಅಭ್ಯರ್ಥಿ ಜಗದೀಶ ಶೆಟ್ಟರ್ ಅವರು ಪ್ರಭಾಕರ ಕೋರೆ ಅವರನ್ನು ಭಾನುವಾರ ಭೇಟಿಯಾಗಿ ಚರ್ಚಿಸಿದರು

ಕೋರೆ ಭೇಟಿಯಾದ ಶೆಟ್ಟರ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಅವರು, ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಮತ್ತು ಬಿಜೆಪಿ ನಾಯಕ ಪ್ರಭಾಕರ ಕೋರೆ ಅವರನ್ನು ಭಾನುವಾರ ಭೇಟಿಯಾಗಿ ಮಾತುಕತೆ ನಡೆಸಿದರು.

‘ಕೋರೆ ಅವರ ಮನೆಗೆ ಆಗಮಿಸಿದ್ದ ಶೆಟ್ಟರ್, ಚುನಾವಣೆ ರಣತಂತ್ರ, ವಿರೋಧ ಪಕ್ಷದವರನ್ನು ಎದುರಿಸುವುದು ಮತ್ತು ಪ್ರಚಾರದ ಕುರಿತು ಚರ್ಚಿಸಿದರು’ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ಲೋಕಸಭೆ ಟಿಕೆಟ್ ಹಂಚಿಕೆ ವೇಳೆ ಪ್ರಭಾಕರ ಕೋರೆ ಮುನಿಸಿಕೊಂಡಿದ್ದರು. ಬೆಳಗಾವಿ ಟಿಕೆಟ್‌ನಿಂದ ವಂಚಿತರಾಗಿದ್ದ ಆಕಾಂಕ್ಷಿಗಳು ಕೋರೆ ಅವರ ನಿವಾಸದಲ್ಲಿ ಸಭೆ ನಡೆಸಿ, ‘ಸ್ಥಳೀಯರಿಗೆ ಟಿಕೆಟ್ ಕೊಡುವಂತೆ ಪಕ್ಷದ ಹೈಕಮಾಂಡ್ ಮೇಲೆ ಒತ್ತಡ ಹೇರಬೇಕು’ ಎಂದು ಒತ್ತಾಯಿಸಿದ್ದರು. ಹಾಗಾಗಿ ಜಗದೀಶ ಶೆಟ್ಟರ್ ಅವರ ಭೇಟಿ ಮಹತ್ವ ಪಡೆದುಕೊಂಡಿದೆ. ಶೆಟ್ಟರ್ ಅವರೊಂದಿಗೆ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಅನಿಲ ಬೆನಕೆ ಮತ್ತಿತರರು ಇದ್ದರು.

ಕಣದತ್ತ ಕಿರುನೋಟ

ಬಾಗಲಕೋಟೆ

ಅಭ್ಯರ್ಥಿಗಳು

ಪಿ.ಸಿ. ಗದ್ದಿಗೌಡರ
ಬಿಜೆಪಿ

ಸಂಯುಕ್ತಾ ಪಾಟೀಲ
ಕಾಂಗ್ರೆಸ್

ಹೊರ, ಒಳಗಿನವರ ಹೋರಾಟ

ಬಾಗಲಕೋಟೆ ಲೋಕಸಭಾ ಕ್ಷೇತ್ರದಲ್ಲಿ 2004ರಿಂದ ಸತತ ನಾಲ್ಕು ಬಾರಿ ಸಂಸದರಾಗಿ ಆಯ್ಕೆಯಾಗಿರುವ ಪಿ.ಸಿ.ಗದ್ದಿಗೌಡರ ಮತ್ತು ಸಚಿವ ಶಿವಾನಂದ ಪಾಟೀಲ ಪುತ್ರಿ ಸಂಯುಕ್ತಾ ಪಾಟೀಲ ನಡುವೆ ನೇರ ಹಣಾಹಣಿಯಿದೆ. ಚುನಾವಣೆ ಎದುರಿಸುವುದನ್ನು ಗದ್ದಿಗೌಡರು 20 ವರ್ಷಗಳಿಂದ ಕರಗತ ಮಾಡಿಕೊಂಡಿದ್ದಾರೆ.

ಸರಳ, ಸೌಮ್ಯ ಸ್ವಭಾವದ ಗದ್ದಿಗೌಡರ ಸುಗಮ ಹಾದಿಗೆ ಬಿಜೆಪಿ ಸಂಘಟನೆ ನೆರವಾಗುವ ನಿರೀಕ್ಷೆಯಿದೆ. ಅವರ ವಿಷಯದಲ್ಲಿ ಭಿನ್ನಮತವೂ ಇಲ್ಲ. ಜನತಾ ಪರಿವಾರದ ಹಿನ್ನೆಲೆಯುಳ್ಳ ಅವರಿಗೆ ಜೆಡಿಎಸ್ ಜೊತೆ ಉತ್ತಮ ಸಂಬಂಧವಿದೆ

ಸಂಯುಕ್ತಾ ಪಾಟೀಲ ವಿಜಯಪುರ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ಗೆ ಅವಿರೋಧವಾಗಿ ಆಯ್ಕೆಯಾಗಿದ್ದು ಬಿಟ್ಟರೆ ರಾಜಕೀಯ ಅನುಭವವಿಲ್ಲ. 2019ರ ಲೋಕಸಭಾ ಚುನಾವಣೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಚುನಾವಣೆ ನಿರ್ವಹಿಸಿದ್ದು ಪುತ್ರಿ ಗೆಲುವಿಗೆ ನೆರವಾಗಬಹುದು ಎಂದು ಸಚಿವ ಶಿವಾನಂದ ಪಾಟೀಲ ನಂಬಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಸೋತಿದ್ದ ವೀಣಾ ಕಾಶಪ್ಪನವರ ಈ ಸಲ ಟಿಕೆಟ್ ಸಿಗದಿರುವುದಕ್ಕೆ ಮುನಿಸಿಕೊಂಡಿದ್ದಾರೆ. ಸಂಯುಕ್ತಾ ಪಾಟೀಲರಿಗೆ ಟಿಕೆಟ್ ನೀಡಿದ್ದಕ್ಕೆ ಕಾಂಗ್ರೆಸ್‌ನಲ್ಲೇ ಅಸಮಾಧಾನವಿದೆ. ಹೊರಗಿನವರು, ಒಳಗಿನವರು ಎಂಬ ವಿಷಯ ಮುನ್ನೆಲೆಗೆ ಬಂದು, ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ
6	3

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
8,83,993	8,97,306	96

ಒಟ್ಟು 17,81,395

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಪಿ.ಸಿ.ಗದ್ದಿಗೌಡರ	ಬಿಜೆಪಿ	6,64,638
ಸಮೀಪದ ಪ್ರತಿಸ್ಪರ್ಧಿ	ವೀಣಾ ಕಾಶಪ್ಪನವರ	ಕಾಂಗ್ರೆಸ್	4,96,451

ವಿಜಯಪುರ

ಅಭ್ಯರ್ಥಿಗಳು

ರಮೇಶ ಜಿಗಜಿಣಗಿ
ಬಿಜೆಪಿ

ರಾಜು ಆಲಗೂರ
ಕಾಂಗ್ರೆಸ್

ಎಡಗೈ – ಬಲಗೈ ಮುಖಾಮುಖಿ

ವಿಜಯಪುರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ರಮೇಶ ಜಿಗಜಿಣಗಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ರಾಜು ಆಲಗೂರ ನಡುವೆ ನೇರ ಹಣಾಹಣಿ ಇದೆ. ಪರಿಶಿಷ್ಟ ಜಾತಿ ಎಡಗೈ (ಮಾದಿಗ) ಸಮುದಾಯದ ಜಿಗಜಿಣಗಿ ಏಳನೇ ಬಾರಿಗೆ (ಚಿಕ್ಕೋಡಿ, ವಿಜಯಪುರದಿಂದ ತಲಾ ಮೂರು ಬಾರಿ) ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿದಿದ್ದಾರೆ.

ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತು ಬಿಜೆಪಿ ಅಭ್ಯರ್ಥಿ ರಮೇಶ ಜಿಗಜಿಣಗಿ ರಾಜಕೀಯ ವೈರಿಗಳು. ದೇವರಹಿಪ್ಪರಗಿ ಕ್ಷೇತ್ರದ ಜೆಡಿಎಸ್ ಶಾಸಕ ರಾಜುಗೌಡ ನಿಲುವು ನಿಗೂಢ. ಇವು ರಮೇಶ ಜಿಗಜಿಣಗಿ ಅವರ ಸುಗಮ ಗೆಲುವಿಗೆ ‘ಅಡ್ಡಗಲ್ಲು’ ಆದೀತೇ ಎಂಬ ಚರ್ಚೆ ನಡೆದಿದೆ.

ಪರಿಶಿಷ್ಟ ಜಾತಿ ಬಲಗೈ (ಚಲವಾದಿ) ಸಮುದಾಯಕ್ಕೆ ಸೇರಿದ ರಾಜು ಆಲಗೂರ ಮೊದಲ ಸಲ ಲೋಕಸಭೆ ಚುನಾವಣೆಗೆ ಸ್ಪರ್ಧಿಸಿದ್ದಾರೆ. ನಾಗಠಾಣ ಕ್ಷೇತ್ರದಿಂದ ಎರಡು ಬಾರಿ ಶಾಸಕ, ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿ, ಕೆಎಸ್‌ಡಿಎಲ್ ಅಧ್ಯಕ್ಷ ಮತ್ತು ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿ ಕೆಲಸ ಮಾಡಿದ ಅನುಭವವಿದೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ	ಜೆಡಿಎಸ್
6	1	1

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
9,76,073	9,42,757	218

ಒಟ್ಟು 19,19,048

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ರಮೇಶ ಜಿಗಜಿಣಗಿ	ಬಿಜೆಪಿ	6,35,867
ಸಮೀಪದ ಪ್ರತಿಸ್ಪರ್ಧಿ	ಸುನೀತಾ ಚವ್ಹಾಣ	ಜೆಡಿಎಸ್–ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ	3,77,829

ಕೊಪ್ಪಳ

ಅಭ್ಯರ್ಥಿಗಳು

ರಾಜಶೇಖರ ಹಿಟ್ನಾಳ
ಕಾಂಗ್ರೆಸ್

ಡಾ. ಬಸವರಾಜ ಕ್ಯಾವಟರ್
ಬಿಜೆಪಿ

ಹೊಸ ಅಭ್ಯರ್ಥಿಗೆ ಹಿಟ್ನಾಳ ಸವಾಲು

ಕೊಪ್ಪಳ: ಮೂರು ದಶಕಗಳಿಂದ ಜಿಲ್ಲೆಯ ರಾಜಕಾರಣದಲ್ಲಿ ಹಿಡಿತ ಹೊಂದಿರುವ ಕಾಂಗ್ರೆಸ್‌ನ ಹಿಟ್ನಾಳ ಕುಟುಂಬವನ್ನು ಎದುರಿಸುವ ಸವಾಲು ಬಿಜೆಪಿಯ ಹೊಸ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್ ಅವರ ಮುಂದಿದೆ.

ಕಾಂಗ್ರೆಸ್‌ನಿಂದ ರಾಜಶೇಖರ ಹಿಟ್ನಾಳ ಕೊಪ್ಪಳ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದು, ಹಿಂದಿನ ಚುನಾವಣೆಯಲ್ಲಿಯೂ ಸ್ಪರ್ಧಿಸಿದ್ದರು. ಕುರುಬ ಸಮುದಾಯದ ರಾಜಶೇಖರ ಅವರ ತಂದೆ ಬಸವರಾಜ ಹಿಟ್ನಾಳ 2004ರಲ್ಲಿ ಶಾಸಕರಾಗಿದ್ದರು. ಇದಕ್ಕೂ ಹತ್ತು ವರ್ಷಗಳ ಹಿಂದೆಯೂ ಚುನಾವಣೆ ಎದುರಿಸಿದ್ದರು. 2014ರ ಲೋಕಸಭಾ ಚುನಾವಣೆಗೂ ಸ್ಪರ್ಧಿಸಿ ಸೋತಿದ್ದರು.

ಇದಕ್ಕೆ ಸರಿಸಾಟಿ ಎನ್ನುವಂತೆ ಕರಡಿ ಕುಟುಂಬವೂ ಪ್ರಾಬಲ್ಯ ಸಾಧಿಸಿಕೊಂಡು ಬಂದಿತ್ತು. ಈ ಕುಟುಂಬದ ಸಂಗಣ್ಣ ಕರಡಿ ನಾಲ್ಕು ಬಾರಿ ಶಾಸಕರಾಗಿದ್ದರು; ಹಿಂದಿನ ಎರಡೂ ಬಾರಿ ಬಿಜೆಪಿಯಿಂದ ಸಂಸದರಾಗಿದ್ದಾರೆ. ಆದರೆ, ಈ ಬಾರಿ ಪಕ್ಷ ಸಂಗಣ್ಣ ಬದಲು ವೈದ್ಯ ಬಸವರಾಜ ಅವರಿಗೆ ಟಿಕೆಟ್ ನೀಡಿದೆ.

ಪಂಚಮಸಾಲಿ ಸಮುದಾಯದ ಬಸವರಾಜ ಕುಟುಂಬಕ್ಕೆ ರಾಜಕಾರಣ ಹೊಸದೇನಲ್ಲ. ಅವರ ತಂದೆ ಕೆ. ಶರಣಪ್ಪ ಕುಷ್ಟಗಿ ಕ್ಷೇತ್ರದಿಂದ ಶಾಸಕರಾಗಿದ್ದರು. ಇವರ ಸಹೋದರ ಜಿಲ್ಲಾ ಪಂಚಾಯಿತಿ ಸದಸ್ಯರಾಗಿದ್ದರು. ಆದರೆ, ಅವರು ನೇರವಾಗಿ ಎದುರಿಸುತ್ತಿರುವ ಮೊದಲ ಚುನಾವಣೆಯಿದು.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್	ಬಿಜೆಪಿ
6	2

ಮತದಾರರ ಸಂಖ್ಯೆ

ಪುರುಷರು	ಮಹಿಳೆಯರು	ಲಿಂಗತ್ವ ಅಲ್ಪಸಂಖ್ಯಾತರು
9,08,756	9,32,680	124

ಒಟ್ಟು 18,41,560

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಸಂಗಣ್ಣ ಕರಡಿ	ಬಿಜೆಪಿ	5,86,783
ಸಮೀಪದ ಪ್ರತಿಸ್ಪರ್ಧಿ	ಕೆ. ರಾಜಶೇಖರ ಹಿಟ್ನಾಳ	ಕಾಂಗ್ರೆಸ್	5,48,386

2014 ಹಾಗೂ 2019ರ ಲೋಕಸಭಾ ಚುನಾವಣೆಗಳಲ್ಲಿ ಜಾಟರು ಬಿಜೆಪಿಯ ಬೆನ್ನಿಗೆ ನಿಂತಿದ್ದರು. ಕೃಷಿ ಕಾಯ್ದೆ ವಿರೋಧಿಸಿ ಕೇಂದ್ರದ ವಿರುದ್ಧ ಸಿಡಿದೆದ್ದವರು ಇವರೇ. ಐದು ರಾಜ್ಯಗಳ ಸೋಲಿನ ಅಳುಕಿನಿಂದಾಗಿ ಕೇಂದ್ರ ಸರ್ಕಾರವು 2022ರಲ್ಲಿ ಕೃಷಿ ಕಾಯ್ದೆಯನ್ನು ರದ್ದುಗೊಳಿಸಿತ್ತು. ಜಾಟರ ಕೋಪ ತಾಪದಿಂದ ಉತ್ತರ ಪ್ರದೇಶದಲ್ಲಿ ಬಿಜೆಪಿಗೆ ಹಿನ್ನಡೆಯಾಗಬಹುದು ಎಂಬ ವಿಶ್ಲೇಷಣೆಗಳು ನಡೆದಿದ್ದವು. ಆದರೆ, ಜಾಟರು ನಿರ್ಣಾಯಕ ಸಂಖ್ಯೆಯಲ್ಲಿರುವ ಉತ್ತರ ಪ್ರದೇಶದ ಪಶ್ಚಿಮ ಭಾಗದ 126 ಕ್ಷೇತ್ರಗಳ ಪೈಕಿ 85 ಕ್ಷೇತ್ರಗಳನ್ನು ಬಿಜೆಪಿ ಗೆದ್ದುಕೊಂಡಿತ್ತು. ಲೋಕಸಭಾ ಚುನಾವಣೆಯ ಮೇಲೆ ರೈತರ ಹೋರಾಟವು ಪರಿಣಾಮ ಬೀರಬಹುದೇ ಎಂಬುದು ಕುತೂಹಲಕಾರಿ. ಅಸಂಘಟಿತರಾಗಿರುವ ರೈತರು ಸಂಘಟಿತರಾಗಿ ನಿಲುವು ತೆಗೆದುಕೊಂಡರೆ ಪ್ರಭುತ್ವಕ್ಕೆ ತೊಂದರೆ ಆಗಬಹುದು. ಆದರೆ, ಸಂಘಟಿತರಾಗುತ್ತಾರೆಯೇ ಎಂಬುದು ಸದ್ಯದ ಪ್ರಶ್ನೆ

ರೈತರ ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಜಾಟ್ ಸಮುದಾಯವನ್ನು ಒಲೈಸಲು ಬಿಜೆಪಿ ಪ್ರಯತ್ನ

ರೈತರ ಕಿಚ್ಚು: ಸುಡುವುದೇ ಪ್ರಭುತ್ವದ ಕೆಚ್ಚು?

• ಮಂಜುನಾಥ ಹೆಬ್ಬಾರ್

ನವದೆಹಲಿ: 'ನನ್ನನ್ನು ಖುಷಿಪಡಿಸುವುದರಿಂದ ನಿಮಗೇನು ಸಿಗುತ್ತದೆ? ರೈತರ ಚಳವಳಿ ವೇಳೆ ಮೃತಪಟ್ಟ 700 ರೈತರ ಕುಟುಂಬಗಳಿಗೆ ಬಿಜೆಪಿಯಿಂದ ಅನುಕೂಲವಾಗಿಲ್ಲ. ಕೋಮು ಉದ್ವಿಗ್ನತೆ ಸೃಷ್ಟಿಸಿ ಮತ ಪಡೆಯಲು ಬಿಜೆಪಿ ಪ್ರಯತ್ನಿಸುತ್ತಿದೆ. ಅವರೊಂದಿಗೆ ಯಾವುದೇ ಕಾರಣಕ್ಕೂ ಕೈಜೋಡಿಸುವುದಿಲ್ಲ'.

2022ರಲ್ಲಿ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆ ಕದ ಬಡಿದಿರುವ ಹೊತ್ತಿನಲ್ಲಿ ರಾಷ್ಟ್ರೀಯ ಲೋಕದಳ (ಆರ್‌ಎಲ್‌ಡಿ) ಪಕ್ಷದ ನಾಯಕ ಜಯಂತ್ ಸಿಂಗ್ ಚೌಧರಿ ಆಡಿದ್ದ ಮಾತುಗಳಿವು. ಬಿಜೆಪಿ ಜತೆಗೆ ಕೈಜೋಡಿಸುವಂತೆ ಚೌಧರಿ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಹ್ವಾನ ನೀಡಿದ್ದರು. ಅದಕ್ಕೆ ಚೌಧರಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದರು.

ಮೊನ್ನೆ ಮೊನ್ನೆ ಮಾಜಿ ಪ್ರಧಾನಿ ಚರಣ್ ಸಿಂಗ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಸೇವಾ ಪುರಸ್ಕಾರ 'ಭಾರತ ರತ್ನ' ನೀಡುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿತು. ಅದರಿಂದ ಭಾರಿ ಸಂತುಷ್ಟರಾದ ಮೊಮ್ಮಗ ಜಯಂತ್ ಸಿಂಗ್, 'ದಿಲ್ ಜೀತ್ ಲಿಯಾ' (ನೀವು ನಮ್ಮ ಹೃದಯವನ್ನು ಗೆದ್ದಿದ್ದೀರಿ)' ಎಂದು ಬಿಜೆಪಿ ಅಧಿನಾಯಕರನ್ನು ಹೊಗಳಿದರು. ಬಿಜೆಪಿಯ ಕಟು ಟೀಕಾಕಾರರಾಗಿದ್ದ ಅವರು ದಿನ ಬೆಳಗಾಗುವುದರಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಜಿಗಿದು ಬಿಟ್ಟರು. ಕನಿಷ್ಠ ಬೆಂಬಲ ಬೆಲೆ ಗ್ಯಾರಂಟಿಗೆ ಪಟ್ಟು ಹಿಡಿದು ರೈತರು ಪ್ರತಿಭಟನೆಗೆ ಇಳಿಯುವ ಮುನ್ನ ನಡೆದ ರಾಜಕೀಯ ವಿದ್ಯಮಾನವಿದು.

ಕೃಷಿಗೆ ಸಂಬಂಧಿಸಿ ಕೇಂದ್ರವು ಜಾರಿಗೆ ತಂದಿದ್ದ ಮೂರು ಕಾಯ್ದೆಗಳ ವಿರುದ್ಧ ರೈತರು ನಡೆಸಿದ ಭಾರಿ ಪ್ರತಿಭಟನೆಯ ಮುಂಚೂಣಿಯಲ್ಲಿ ಜಾಟ್ ಸಮುದಾಯವೇ ಇತ್ತು. ಉತ್ತರ ಪ್ರದೇಶ, ರಾಜಸ್ಥಾನ, ಪಂಜಾಬ್ ಹಾಗೂ ಹರಿಯಾಣದಲ್ಲಿ ಜಾಟ್ ಸಮುದಾಯದವರು ನಿರ್ಣಾಯಕ ಸಂಖ್ಯೆಯಲ್ಲಿದ್ದಾರೆ. ಚರಣ್ ಸಿಂಗ್ ಅವರಿಗೆ 'ಭಾರತ ರತ್ನ' ನೀಡುವ ಮೂಲಕ ಬಿಜೆಪಿಯು ಜಾಟರನ್ನು ಒಲೈಸುವ ಪ್ರಯತ್ನ ಮಾಡಿದೆ.

ಕೇಂದ್ರದ ಮೂರು 'ಕರಾಳ' ಕೃಷಿ ಕಾಯ್ದೆಗಳನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಕಾಯಕ ಜೀವಿಗಳು 2021ರಲ್ಲಿ ಸುಮಾರು 13 ತಿಂಗಳು ದೆಹಲಿಯ ಗಡಿಯಲ್ಲಿ ಪ್ರತಿಭಟನೆ ನಡೆಸಿದ್ದರು. ಕೊರೆವ ಚಳಿ, ಸುಡುವ ಬಿಸಿಲು, ಸುರಿದ ಮಳೆಗೆ ಅಳುಕದೆ ಪ್ರಭುತ್ವದ ವಿರುದ್ಧ ಸಿಡಿದೆದ್ದಿದ್ದರು. ರೈತರ ವಿರುದ್ಧ ಹಿಂಸಾಚಾರಕ್ಕೆ ಇಳಿಯುವಂತೆ ಹರಿಯಾಣದ ಆಗಿನ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಬಿಜೆಪಿ ಕಾರ್ಯಕರ್ತರನ್ನು ಎತ್ತಿಕಟ್ಟಿದ್ದರು. ಉತ್ತರ ಪ್ರದೇಶದ ಲಖೀಂಪುರ ಖೀರಿಯಲ್ಲಿ ಕೇಂದ್ರ ಸಚಿವರ ಪುತ್ರನ ನೇತೃತ್ವದಲ್ಲಿ ಕಾರುಗಳನ್ನು ರೈತರ ಮೇಲೆ ಹರಿಸಿ ಎಂಟು ಮಂದಿಯನ್ನು ಬಲಿ ಪಡೆಯಲಾಗಿತ್ತು. 2022ರಲ್ಲಿ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗೆ ಮುನ್ನ ರೈತರ ಬೃಹತ್ ಆಂದೋಲನಕ್ಕೆ ಕೇಂದ್ರ ಸರ್ಕಾರ ಶಿರ ಬಾಗಿತ್ತು.

ದೇಶದಲ್ಲಿ ಕೃಷಿ ಬಿಕ್ಕಟ್ಟು ಅಗಾಧವಾಗಿದೆ. ರೈತರ ಬದುಕು ಕತ್ತಲಲ್ಲಿದೆ.ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಗೆ ಆಗ್ರಹಿಸಿ ರೈತರು ಬೀದಿಗಿಳಿದರೂ ಸರ್ಕಾರ ಮಣಿದಿಲ್ಲ. ರಾಮಮಂದಿರದಂತಹ ಭಾವನಾತ್ಮಕ ವಿಷಯಗಳೇ ರೈತರ ಮಕ್ಕಳಿಗೆ ಹಿತಕಾರಿಯಾಗುತ್ತಿವೆ. ಇದರ ನಡುವೆಯೂ, ರೈತರ ಸಮಸ್ಯೆ ಹಾಗೂ ರೈತರ ಹೋರಾಟ ಕೂಡ ಲೋಕಸಭಾ ಚುನಾವಣೆಯ ವಿಷಯ. ಪಕ್ಷಗಳು ಇದನ್ನು ಹೇಗೆ ಮತವನ್ನಾಗಿ ಪರಿವರ್ತಿಸಿಕೊಳ್ಳುತ್ತವೆ ಎಂಬುದು ಕುತೂಹಲಕಾರಿ.

ಹರಿಯಾಣ: ಖಟ್ಟರ್‌ಗೆ ಕೊಕ್

ಲೋಕಸಭಾ ಚುನಾವಣೆ ವೇಳಾಪಟ್ಟಿ ಪ್ರಕಟಕ್ಕೆ ಕೆಲವೇ ದಿನಗಳು ಇರುವಾಗ ಖಟ್ಟರ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕಮಲ ಪಾಳಯ ಕೆಳಗಿಳಿಸಿದೆ. ರೈತರ ಪ್ರತಿಭಟನೆ ಕಾರಣದಿಂದ ಜಾಟರು ರಾಜ್ಯದಲ್ಲಿ ಬಿಜೆಪಿಗೆ ಕೈಕೊಡಬಹುದು ಎಂಬ ಆತಂಕ ಕಮಲ ಪಾಳಯದ ನಾಯಕರಿಗೆ ಇದ್ದೇ ಇದೆ. ಅದಕ್ಕಾಗಿ ಖಟ್ಟರ್ ಅವರನ್ನು ಕೆಳಗಿಳಿಸಿ ಒಬಿಸಿ ನಾಯಕ ನಾಯಬ್ ಸಿಂಗ್ ಸೈನಿ ಅವರನ್ನು ಮುಖ್ಯಮಂತ್ರಿ ಗದ್ದುಗೆಗೆ ಏರಿಸಿದೆ. ರಾಜ್ಯದಲ್ಲಿ ನವ ಜಾತಿ ಸಮೀಕರಣ ನಡೆಸಿ ಒಬಿಸಿ ಮತಗಳನ್ನು ತನ್ನತ್ತ ಸೆಳೆದುಕೊಳ್ಳುವ ತಂತ್ರ ಇದರ ಹಿಂದಿದೆ.

ಪಂಜಾಬ್: ಜಾಟರು ಯಾವ ದಿಕ್ಕಿಗೆ?

ಪಂಜಾಬ್‌ನಲ್ಲಿ ಬಿಜೆಪಿಗೆ ಹೇಳಿಕೊಳ್ಳುವ ನೆಲೆ ಇಲ್ಲ. ರೈತರ ಹೋರಾಟ ತೀವ್ರವಾಗಿದ್ದ ಸಮಯದಲ್ಲಿ ಶಿರೋಮಣಿ ಅಕಾಲಿ ದಳವು ಎನ್‌ಡಿಎ ಮೈತ್ರಿಕೂಟದಿಂದ ಹೊರನಡೆದಿತ್ತು. 2019ರ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಶೇ 37ರಷ್ಟು ಮತ ಪಡೆದು 4 ಸ್ಥಾನಗಳನ್ನು ಗೆದ್ದಿತ್ತು. ಈ ಸಲ ಬಿಜೆಪಿ ಏಕಾಂಗಿಯಾಗಿ ಸ್ಪರ್ಧಿಸುತ್ತಿದೆ. ಕಾಂಗ್ರೆಸ್, ಎಎಪಿ ಹಾಗೂ ಅಕಾಲಿ ದಳ ನಡುವೆ ಜಾಟರ ಮತ ವಿಭಜನೆಯಾದರೆ ಅದರ ಲಾಭ ಪಡೆಯುವ ಉದ್ದೇಶ ಕಮಲ ಪಾಳಯದ್ದು.

ಚುಟುಕು

ಬಿಜೆಪಿ ಕಾರ್ಯಕರ್ತರ ಹೊಡೆದಾಟ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್‌ನ ಅಮ್ರೇಲಿ ಲೋಕಸಭಾ ಕ್ಷೇತ್ರದ ಟಿಕೆಟ್ ಹಂಚಿಕೆ ವಿಚಾರದಲ್ಲಿ ಬಿಜೆಪಿಯಲ್ಲಿ ಅಸಮಾಧಾನ ಸ್ಫೋಟಗೊಂಡು ಎರಡು ಬಣಗಳ ಮಧ್ಯೆ ಶನಿವಾರ ರಾತ್ರಿ ಹೊಡೆದಾಟ ನಡೆದಿದೆ.

ಕಾರ್ಯಕರ್ತರ ಹೊಡೆದಾಟದ ಬಗ್ಗೆ ಪಕ್ಷದ ವಕ್ತಾರರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. 'ಪಕ್ಷದ ಕಾರ್ಯಕರ್ತರು ಶನಿವಾರ ರಾತ್ರಿ ಪರಸ್ಪರ ಹೊಡೆದಾಡಿಕೊಂಡಿರುವುದು ನಿಜ. ಆದರೆ ಟಿಕೆಟ್ ಹಂಚಿಕೆಗೂ ಹೊಡೆದಾಟಕ್ಕೂ ಸಂಬಂಧವಿಲ್ಲ. ಪಕ್ಷದ ಆಂತರಿಕ ವಿಚಾರಕ್ಕೆ ಸಂಬಂಧಿಸಿದಂತೆ ಗಲಾಟೆ ನಡೆದಿದೆ' ಎಂದು ಅಮ್ರೇಲಿ ಸಂಸದ ನಾರಣ್ ಕಛಾಡಿಯಾ 'ಪ್ರಜಾವಾಣಿ'ಗೆ ತಿಳಿಸಿದರು.

ಆದರೆ ಟಿಕೆಟ್ ಹಂಚಿಕೆ ವಿಚಾರವೇ ಜಗಳಕ್ಕೆ ಕಾರಣ ಎಂದು ಪಕ್ಷದ ಸ್ಥಳೀಯ ಮೂಲಗಳು ಹೇಳಿವೆ. ಬಿಜೆಪಿಯು ಅಮ್ರೇಲಿ ಕ್ಷೇತ್ರದಲ್ಲಿ ಭರತ್ ಸುತಾರಿಯಾ ಅವರನ್ನು ಕಣಕ್ಕಿಳಿಸಿದೆ. ಇಲ್ಲಿ ಮೂರು ಬಾರಿ ಸಂಸದರಾಗಿದ್ದ ನಾರಣ್ ಕಛಾಡಿಯಾ ಅವರಿಗೆ ಟಿಕೆಟ್ ಕೈತಪ್ಪಿದೆ.

ಪಕ್ಷದ ಹಿರಿಯ ನಾಯಕ ಭೂಪೇಂದ್ರ ಸಿನ್ಹ ಚುಡಾಸಮಾ ನೇತೃತ್ವದಲ್ಲಿ ಶನಿವಾರ ರಾತ್ರಿ ಕಾರ್ಯಕರ್ತರ ಸಭೆ ನಡೆದಿದೆ. ಅವರು ಸಭೆ ಮುಗಿಸಿ ಹೋದ ಬಳಿಕ ಎರಡು ಬಣಗಳ ಕಾರ್ಯಕರ್ತರು ಹೊಡೆದಾಡಿಕೊಂಡಿದ್ದಾರೆ. ಮಾತಿನ ಚಕಮಕಿ ಮತ್ತು ಹೊಡೆದಾಟದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಜಿಗಿ–ನೆಗೆದಾಟ

ಕಾಂಗ್ರೆಸ್ ಸೇರಿದ ಕಡಿಯಂ ಶ್ರೀಹರಿ

ಹೈದರಾಬಾದ್ (ಪಿಟಿಐ): ತೆಲಂಗಾಣದ ಶಾಸಕ ಹಾಗೂ ಮಾಜಿ ಸಚಿವ ಕಡಿಯಂ ಶ್ರೀಹರಿ ಹಾಗೂ ಅವರ ಪುತ್ರಿ ಕಡಿಯಂ ಕಾವ್ಯಾ ಅವರು ಬಿಆರ್‌ಎಸ್ ತೊರೆದು ಭಾನುವಾರ ಕಾಂಗ್ರೆಸ್ ಸೇರ್ಪಡೆಗೊಂಡರು.

ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅವರ ಸಮ್ಮುಖದಲ್ಲಿ ಇವರಿಬ್ಬರು ಪಕ್ಷಕ್ಕೆ ಸೇರಿದರು. 'ಹಲವು ಕಾರಣಗಳಿಂದ ಜನರು ಬಿಆರ್‌ಎಸ್‌ನಿಂದ ದೂರ ಉಳಿಯುತ್ತಿದ್ದಾರೆ. ಜನರ ಸೇವೆಗೆ ಮತ್ತು ಕ್ಷೇತ್ರದ ಅಭಿವೃದ್ಧಿಗಾಗಿ ಕಾಂಗ್ರೆಸ್ ಸೇರಿದ್ದೇವೆ' ಎಂದು ಶ್ರೀಹರಿ ತಿಳಿಸಿದರು. ಬಿಆರ್‌ಎಸ್ ಪಕ್ಷವು ಕಾವ್ಯಾ ಅವರನ್ನು ವಾರಂಗಲ್ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಈ ಹಿಂದೆ ಘೋಷಿಸಿತ್ತು.

ಎಂಥಾ ಮಾತು!

ಇಂದಿನ ಯುವಕರು ಸರ್ಕಾರಿ ಹುದ್ದೆಯ ಹಿಂದೆ ಓಡುತ್ತಿಲ್ಲ. ಅವರು ತಮ್ಮ ಪ್ರತಿಭೆಯನ್ನು ಬಳಸಿಕೊಂಡು ಉದ್ಯೋಗ ಸೃಷ್ಟಿಸುತ್ತಿದ್ದಾರೆ. ಹೊಸ ಪ್ರಯೋಗ ಮತ್ತು ಆವಿಷ್ಕಾರಗಳ ಮೂಲಕ ದೇಶವನ್ನು ಮುನ್ನಡೆಸುತ್ತಿದ್ದಾರೆ. ದೇಶದ ಆರ್ಥಿಕತೆಯನ್ನು ಬಲಪಡಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ 10 ವರ್ಷಗಳಲ್ಲಿ ದೃಢವಾದ ಹೆಜ್ಜೆಗಳನ್ನು ಮುಂದಿಟ್ಟಿದ್ದಾರೆ. ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ಆಡಳಿತ ನೀಡಲು ಪ್ರಯತ್ನಿಸಿದ್ದಾರೆ. 2047ರ ಹೊತ್ತಿಗೆ ಭಾರತವು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಲಿದೆ

ಪೀಯೂಷ್ ಗೋಯಲ್, ಕೇಂದ್ರ ಸಚಿವ

ಆಡಳಿತಾರೂಢ ಬಿಜೆಪಿಯು ದೇಶವನ್ನು ಹಲವು ತುಂಡುಗಳಾಗಿ ಒಡೆಯಲು ಪ್ರಯತ್ನಿಸುತ್ತಿದೆ. ಇದಕ್ಕಾಗಿ ಸಿಎಎಯನ್ನು ಜಾರಿಗೊಳಿಸಿದೆ. ಲೋಕಸಭಾ ಚುನಾವಣೆ ವೇಳೆ ಆ ಪಕ್ಷದ ಪೊಳ್ಳು ಭರವಸೆಗಳಿಗೆ ಜನರು ಮರುಳಾಗಬೇಡಿ. ಬಿಜೆಪಿಯು ವಿರೋಧಪಕ್ಷಗಳ ಒಗ್ಗಟ್ಟನ್ನು ಬಯಸುವುದಿಲ್ಲ. ಈ ದೇಶವು 140 ಕೋಟಿ ಜನರಿಗೆ ಸೇರಿದ್ದು, ಯಾವುದೋ ಒಂದು ಪಕ್ಷದ ಸೊತ್ತಲ್ಲ

ಭಗವಂತ ಮಾನ್, ಪಂಜಾಬ್ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ



ರಾಜಸ್ಥಾನದ ಅಲ್ವರ್ ಲೋಕಸಭಾ ಕ್ಷೇತ್ರವು ಬಿಜೆಪಿ ಮತ್ತು ಕಾಂಗ್ರೆಸ್‌ನ ಅಭ್ಯರ್ಥಿಗಳಿಗೆ ಹಲವು ಬಾರಿ ಒಲಿದಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯ ಮಹಾಂತ ಬಾಲಕನಾಥ್ ಅವರು 7,60,201 ಮತಗಳನ್ನು ಪಡೆದು ಜಯಭೇರಿ ಬಾರಿಸಿದ್ದರು. ಕಾಂಗ್ರೆಸ್‌ನ ಜಿತೇಂದ್ರ ಸಿಂಗ್ ಅವರು ಎರಡನೇ ಸ್ಥಾನ ಪಡೆದಿದ್ದರು. 2018ರಲ್ಲಿ ನಡೆದಿದ್ದ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಕರಣ್‌ಸಿಂಗ್ ಯಾದವ್ ಗೆದ್ದಿದ್ದರು. ಈ ಬಾರಿ ಬಿಜೆಪಿಯು ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರನ್ನು ಅಭ್ಯರ್ಥಿಯಾಗಿ ಘೋಷಿಸಿದೆ. ರಾಜ್ಯಸಭಾ ಸದಸ್ಯರಾಗಿ ಸಂಸತ್ ಪ್ರವೇಶಿಸಿರುವ ಇವರು ಈ ಬಾರಿ ಚುನಾವಣಾ ಕಣಕ್ಕಿಳಿಯಲು ಈ ಕ್ಷೇತ್ರ ಆಯ್ದುಕೊಂಡಿದ್ದಾರೆ. ಭೂಪೇಂದ್ರ ಅವರು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಹೌದು. ರಾಜ್ಯದಲ್ಲಿ ಪಕ್ಷದ ಬಲವರ್ಧನೆಗೆ ಶ್ರಮಿಸಿರುವ ಇವರನ್ನು ಮಣಿಸಲು ಕಾಂಗ್ರೆಸ್, ಸ್ಥಳೀಯವಾಗಿ ಹೆಚ್ಚು ಪ್ರಭಾವವಿರುವ ಯುವ ಮುಖಂಡ ಲಲಿತ್ ಯಾದವ್ ಅವರನ್ನು ಅಖಾಡಕ್ಕಿಳಿಸಿದೆ. ಲಲಿತ್ ಯಾದವ್ ಅವರು ವಿದ್ಯಾರ್ಥಿ ದೆಸೆಯಲ್ಲೇ ರಾಜಕೀಯಕ್ಕೆ ಧುಮುಕಿದವರು. 2018ರಲ್ಲಿ ಬಿಎಸ್‌ಪಿ ಟಿಕೆಟ್‌ನಿಂದ ಮುಂಡಾವರ್ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು. 2023ರ ವಿಧಾನಸಭಾ ಚುನಾವಣೆಗೂ ಮುನ್ನ ಕಾಂಗ್ರೆಸ್ ಸೇರಿದ್ದ ಅವರು ಮುಂಡಾವರ್ ಕ್ಷೇತ್ರದಿಂದಲೇ ಸ್ಪರ್ಧಿಸಿ ಶಾಸಕರಾಗಿದ್ದಾರೆ. ಕ್ಷೇತ್ರಕ್ಕೆ ಹೊರಗಿನವರಾದ ಭೂಪೇಂದ್ರ ಅವರನ್ನು ಎದುರಿಸಲು ಸ್ಥಳೀಯವಾಗಿ ಪ್ರಭಾವ ಹೊಂದಿರುವ ಲಲಿತ್ ಅವರನ್ನು ಆಯ್ಕೆ ಮಾಡುವ ಮೂಲಕ ಕಾಂಗ್ರೆಸ್ ಈ ಕ್ಷೇತ್ರದಲ್ಲಿ ಗೆಲ್ಲುವ ನಿರೀಕ್ಷೆಯಲ್ಲಿದೆ.

ಮುಖಾಮುಖಿ

ಬಾರಾಮತಿ (ಮಹಾರಾಷ್ಟ್ರ)

ಸುಪ್ರಿಯಾ ಸುಳೆ
(ಎನ್‌ಸಿಪಿ ಶರದ್ ಪವಾರ್ ಬಣ)

ಎನ್‌ಸಿಪಿ ಭದ್ರಕೋಟೆಯಾಗಿರುವ ಮಹಾರಾಷ್ಟ್ರದ ಬಾರಾಮತಿ ಲೋಕಸಭಾ ಕ್ಷೇತ್ರವು ಈ ಬಾರಿ ಶರದ್ ಪವಾರ್ ಕುಟುಂಬ ಸದಸ್ಯರ ನಡುವಣ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ. ಇಲ್ಲಿಂದ ಮೂರು ಬಾರಿ ಸಂಸತ್‌ಗೆ ಆಯ್ಕೆಯಾಗಿರುವ ಸುಪ್ರಿಯಾ ಸುಳೆ ಈ ಬಾರಿಯೂ ಕಣಕ್ಕಿಳಿದಿದ್ದಾರೆ. ಆದರೆ ಈ ಸಲ 'ಮಹಾವಿಕಾಸ್ ಆಘಾಡಿ' ಜೊತೆಗಿರುವ ಎನ್‌ಸಿಪಿ (ಶರದ್ ಪವಾರ್ ಬಣ) ಅಭ್ಯರ್ಥಿಯಾಗಿದ್ದಾರೆ. ಪಕ್ಷವು ಎರಡು ಬಣಗಳಾಗಿ ವಿಭಜನೆಯಾದ ಬಳಿಕ ನಡೆಯುತ್ತಿರುವ ಮೊದಲ ಲೋಕಸಭಾ ಚುನಾವಣೆ ಇದಾಗಿದೆ. ಎನ್‌ಸಿಪಿಯ ಸ್ಥಾಪಕರಲ್ಲೊಬ್ಬರಾದ ಶರದ್ ಪವಾರ್ ಅವರ ಪುತ್ರಿ 54 ವರ್ಷದ ಸುಪ್ರಿಯಾ ಅವರು ಈ ಕ್ಷೇತ್ರದಲ್ಲಿ ದೊಡ್ಡ ಮಟ್ಟದಲ್ಲಿ ಪ್ರಭಾವ ಹೊಂದಿರುವವರು. ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷೆಯಾಗಿ ಪಕ್ಷ ಸಂಘಟನೆಗೆ ದುಡಿದಿರುವ ಹಿರಿಮೆಯೂ ಅವರಿಗಿದೆ.

V/S

ಸುನೇತ್ರಾ ಪವಾರ್
(ಎನ್‌ಸಿಪಿ ಅಜಿತ್ ಪವಾರ್ ಬಣ)

ಮಹಾರಾಷ್ಟ್ರದ ಬಿಜೆಪಿ ನೇತೃತ್ವದ 'ಮಹಾಯುತಿ' ಮೈತ್ರಿಕೂಟವು ಬಾರಾಮತಿ ಕ್ಷೇತ್ರದಿಂದ ಎನ್‌ಸಿಪಿ ಅಜಿತ್ ಪವಾರ್ ಬಣದ ಅಭ್ಯರ್ಥಿಯಾಗಿ ಸುನೇತ್ರಾ ಪವಾರ್ ಅವರನ್ನು ಅಖಾಡಕ್ಕಿಳಿಸಿದೆ. 60 ವರ್ಷದ ಸುನೇತ್ರಾ ಅವರು, ಶರದ್ ಪವಾರ್ ಅವರ ಅಣ್ಣನ ಮಗ ಹಾಗೂ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿಯಾಗಿದ್ದಾರೆ. ಅಜಿತ್ ಪವಾರ್ ಅವರು ಮುಖ್ಯಮಂತ್ರಿ ಏಕನಾಥ ಶಿಂದೆ ಜೊತೆಗೆ ಕೈಜೋಡಿಸಿದ ಬಳಿಕ ಎನ್‌ಸಿಪಿಯು ಇಬ್ಭಾಗವಾಗಿತ್ತು. ಅಜಿತ್ ನೇತೃತ್ವದ ಬಣವೇ ನಿಜವಾದ ಎನ್‌ಸಿಪಿ ಎಂದು ಚುನಾವಣಾ ಆಯೋಗವು ಮಾನ್ಯ ಮಾಡಿತ್ತು. ಈ ಮೂಲಕ ಎನ್‌ಸಿಪಿಯ ಮೂಲಚಿಹ್ನೆ 'ಗೋಡೆ ಗಡಿಯಾರ'ವು ಅಜಿತ್ ಪವಾರ್ ನೇತೃತ್ವದ ಬಣದಲ್ಲಿಯೇ ಉಳಿದಿತ್ತು. ಸುನೇತ್ರಾ ಅವರು 'ಎನ್ವಿರಾನ್‌ಮೆಂಟಲ್ ಫೋರಂ ಆಫ್ ಇಂಡಿಯಾ' ಎನ್‌ಜಿಒದ ಸ್ಥಾಪಕರಾಗಿದ್ದಾರೆ.

'200 ಸ್ಥಾನ ಗೆದ್ದು ತೋರಿಸಿ'

ಕೃಷ್ಣನಗರ (ಪಶ್ಚಿಮ ಬಂಗಾಳ) (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ 400 ಸ್ಥಾನ ಗೆಲ್ಲುವ ಬಿಜೆಪಿಯ ಗುರಿಯನ್ನು ಅಣಕಿಸಿರುವ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಕನಿಷ್ಠ 200 ಸ್ಥಾನಗಳನ್ನು ಗೆದ್ದು ತೋರಿಸಿ ಎಂದು ಭಾನುವಾರ ಸವಾಲು ಎಸೆದಿದ್ದಾರೆ.

'2021ರ ವಿಧಾನಸಭಾ ಚುನಾವಣೆಯಲ್ಲಿ 200ಕ್ಕೂ ಹೆಚ್ಚು ಸ್ಥಾನ ಗೆಲ್ಲುವ ಗುರಿ ಇಟ್ಟುಕೊಂಡಿದ್ದ ಬಿಜೆಪಿ, 77 ಸ್ಥಾನಗಳನ್ನಷ್ಟೇ ಗೆದ್ದುಕೊಂಡಿತ್ತು' ಎಂದು ಅವರು ಹೇಳಿದರು.

ಕೃಷ್ಣನಗರ ಲೋಕಸಭಾ ಕ್ಷೇತ್ರದ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಅಭ್ಯರ್ಥಿ ಮಹುವಾ ಮೊಯಿತ್ರಾ ಪರವಾಗಿ ರ್‍ಯಾಲಿ ನಡೆಸಿದ ಅವರು, 'ಪಶ್ಚಿಮ ಬಂಗಾಳದಲ್ಲಿ ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿ ಇಲ್ಲ. ಮೈತ್ರಿಕೂಟ ರಚನೆಯ ಹಿಂದೆ ನಾನು ಪ್ರಮುಖ ಪಾತ್ರ ವಹಿಸಿದ್ದೆ. ಅದರೆ 'ಇಂಡಿಯಾ' ಕೂಟದಲ್ಲಿರುವ ಸಿಪಿಎಂ ಮತ್ತು ಕಾಂಗ್ರೆಸ್, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಜತೆ ಕೈಜೋಡಿಸಿವೆ' ಎಂದು ಆರೋಪಿಸಿದರು. ಬಿಜೆಪಿ ವಿರುದ್ಧ ಧ್ವನಿ ಎತ್ತುತ್ತಿದ್ದರಿಂದ ಮಹುವಾ ಮೊಯಿತ್ರಾ ಅವರ ವಿರುದ್ಧ ಜಿದ್ದು ಸಾಧಿಸಿ ಲೋಕಸಭೆಯಿಂದ ಹೊರಹಾಕಲಾಯಿತು ಎಂದು ದೂರಿದರು.

ಸಿಎಎ ಜಾರಿಗೆ ಬಿಡುವುದಿಲ್ಲ: ಪೌರತ್ವ ನೋಂದಣಿ ಕಾಯ್ದೆ (ಸಿಎಎ) ಬಗ್ಗೆ ಮಾತನಾಡಿದ ಮಮತಾ, 'ರಾಜ್ಯದಲ್ಲಿ ಸಿಎಎ ಜಾರಿಗೆ ಅವಕಾಶ ನೀಡುವುದಿಲ್ಲ' ಎಂಬುದನ್ನು ಪುನರುಚ್ಚರಿಸಿದರು.

'ಸಿಎಎಗೆ ಅರ್ಜಿ ಸಲ್ಲಿಸಿದರೆ ಅರ್ಜಿದಾರ ವಿದೇಶಿಗರಾಗುತ್ತಾರೆ. ಹಾಗಾಗಿ ಅದಕ್ಕೆ ಅರ್ಜಿ ಸಲ್ಲಿಸಬೇಡಿ' ಎಂದು ಅವರು ಎಚ್ಚರಿಕೆ ನೀಡಿದರು. 'ಸಿಎಎ. ದೇಶದ ಕಾನೂನುಬದ್ಧ ಪ್ರಜೆಗಳನ್ನು ವಿದೇಶಿಗರನ್ನಾಗಿ ಪರಿವರ್ತಿಸುವ ಬಲೆಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಸಿಎಎ ಆಗಲಿ, ಎನ್‌ಆರ್‌ಸಿ ಆಗಲಿ ಜಾರಿ ಮಾಡಲು ಬಿಡುವುದಿಲ್ಲ' ಎಂದು ಹೇಳಿದರು.

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಮತ್ತು ಸಿಪಿಎಂಗೆ ಮತ ಹಾಕಿದರೆ ಅದು ಬಿಜೆಪಿಗೆ ಮತ ಹಾಕಿದಂತೆ

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಮೀರತ್‌ನ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಹೇಳಿಕೆ

ಮೂರನೇ ಅವಧಿಗೆ ಸಿದ್ಧತೆ ಆರಂಭ

ಪ್ರಜಾವಾಣಿ ವಾರ್ತೆ/ಪಿಟಿಐ

ಮೀರತ್: 2024ರ ಲೋಕಸಭಾ ಚುನಾವಣೆ ಕೇವಲ ಸರ್ಕಾರ ರಚನೆ ಮಾಡಲು ಅಲ್ಲ, 'ವಿಕಸಿತ ಭಾರತ'ಕ್ಕಾಗಿ ನಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

'ಜನರು ಅಭಿವೃದ್ಧಿಯ 'ಟ್ರೇಲರ್' ಅನ್ನು ಮಾತ್ರ ನೋಡಿದ್ದು, ಮುಂದಿನ ಐದು ವರ್ಷಗಳ ನೀಲನಕ್ಷೆಯನ್ನು ತಮ್ಮ ಸರ್ಕಾರ ರೂಪಿಸುತ್ತಿದೆ' ಎಂದು ಉತ್ತರ ಪ್ರದೇಶದ ಮೀರತ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಪ್ರತಿಪಾದಿಸಿದರು.

ಲೋಕಸಭಾ ಚುನಾವಣೆ ಘೋಷಣೆ ಆದ ನಂತರ ತಮ್ಮ ಮೊದಲ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮೀರತ್ ಅನ್ನು ಚೌಧರಿ ಚರಣ್‌ಸಿಂಗ್‌ರಂಥವರನ್ನು ದೇಶಕ್ಕೆ ಕೊಡುಗೆಯಾಗಿ ನೀಡಿದ 'ಕ್ರಾಂತಿಯ ಮತ್ತು ಕ್ರಾಂತಿಕಾರಿಗಳ ನೆಲ' ಎಂದು ಕೊಂಡಾಡಿದರು.

'ನಮ್ಮ ಸರ್ಕಾರ ಮೂರನೇ ಅವಧಿಗಾಗಿ ಈಗಾಗಲೇ ತಯಾರಿ ಆರಂಭಿಸಿದೆ. ಆರಂಭದ 100 ದಿನಗಳಲ್ಲಿ ಯಾವ್ಯಾವ ನಿರ್ಧಾರ ಕೈಗೊಳ್ಳಬೇಕು ಎನ್ನುವ ಬಗ್ಗೆ ತ್ವರಿತ ಗತಿಯಲ್ಲಿ ಕೆಲಸ ಮಾಡುತ್ತಿದ್ದೇವೆ' ಎಂದು ಮತ್ತೊಮ್ಮೆ ಅಧಿಕಾರಕ್ಕೇರುವ ವಿಶ್ವಾಸ ವ್ಯಕ್ತಪಡಿಸಿದರು.

ತಾನು ಬಡತನ ಕಂಡಿರುವುದಾಗಿ ಹೇಳಿದ ಪ್ರಧಾನಿ, 'ಅದರಿಂದಾಗಿಯೇ ಮೋದಿಗೆ ಬಡವರ ದುಃಖ, ನೋವು, ಸಂಕಷ್ಟ ಚೆನ್ನಾಗಿ ಅರ್ಥವಾಗುತ್ತದೆ. ಹೀಗಾಗಿಯೇ ನಾವು ಬಡವರ ಪ್ರತಿಯೊಂದು ಸಮಸ್ಯೆಯ ಬಗೆಗೂ ಯೋಜನೆಗಳನ್ನು ರೂಪಿಸಿದೆವು. ನಾವು ಬಡವರನ್ನು ಸಬಲೀಕರಣಗೊಳಿಸಿದ್ದಷ್ಟೇ ಅಲ್ಲ, ಅವರಿಗೆ ಆತ್ಮಗೌರವವನ್ನು ಮರಳಿ ತಂದು ಕೊಟ್ಟೆವು' ಎಂದು ತಿಳಿಸಿದರು.

ಇತ್ತೀಚೆಗೆ ಬಿಜೆಪಿ ಸೇರ್ಪಡೆಯಾದ ರಾಷ್ಟ್ರೀಯ ಲೋಕ ದಳದ ಜಯಂತ್ ಚೌಧರಿ ಪ್ರಧಾನಿ ಜತೆ ವೇದಿಕೆ ಹಂಚಿಕೊಂಡರು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಹರಿಯಾಣ ಮುಖ್ಯಮಂತ್ರಿ ನಾಯಬ್ ಸಿಂಗ್ ಸೈನಿ, ಮೀರತ್ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾದ ನಟ ಅರುಣ್ ಗೋವಿಲ್ ರ‍್ಯಾಲಿಯಲ್ಲಿ ಭಾಗಿಯಾಗಿದ್ದರು.

ಮೀರತ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಪ್ರಧಾನಿ ಮೋದಿ ಅವರ ಮುಖವಾಡ ಧರಿಸಿ ಬಂದಿದ್ದ ಬೆಂಬಲಿಗರು –ಪಿಟಿಐ ಚಿತ್ರ

'ಬಾಲರಾಮ ಹೋಳಿ ಆಡಿದ'

ತಮ್ಮ ಭಾಷಣದಲ್ಲಿ ರಾಮ ಮಂದಿರದ ಪ್ರಸ್ತಾಪ ಮಾಡಿದ ಪ್ರಧಾನಿ ಮೋದಿ, 'ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಅಸಾಧ್ಯ ಎನ್ನುವ ಕಾಲವೊಂದಿತ್ತು. ಈ ವರ್ಷ ಮಂದಿರ ನಿರ್ಮಾಣವಾಗಿದ್ದಷ್ಟೇ ಅಲ್ಲ, ಬಾಲರಾಮ ಹೋಳಿ ಕೂಡ ಆಡಿದ' ಎಂದು ಹೇಳಿದರು.

ಮುಸ್ಲಿಂ ಮಹಿಳೆಯರ ಬೆಂಬಲ ಗಳಿಸುವ ಸಲುವಾಗಿ ತ್ರಿವಳಿ ತಲಾಖ್ ರದ್ದತಿಯ ಬಗ್ಗೆ ಪ್ರಸ್ತಾಪಿಸಿದ ಪ್ರಧಾನಿ, 'ಅದು ಸಾವಿರಾರು ಮುಸ್ಲಿಂ ಮಹಿಳೆಯರನ್ನು ರಕ್ಷಿಸಿತು' ಎಂದು ಹೇಳಿದರು.

ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಮಾಡಿರುವುದರ ಬಗ್ಗೆ ಮಾತನಾಡಿದ ಅವರು, 'ಈಗ ಜಮ್ಮು ಕಾಶ್ಮೀರವು ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ' ಎಂದು ಪ್ರತಿಪಾದಿಸಿದರು.

ಏಪ್ರಿಲ್ 5ರಂದು ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ

ನವದೆಹಲಿ (ಪಿಟಿಐ): ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಏಪ್ರಿಲ್ 5ರಂದು ಬಿಡುಗಡೆ ಮಾಡುವುದಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಭಾನುವಾರ ಪ್ರಕಟಿಸಿದರು.

ಕಾಂಗ್ರೆಸ್ ಪಕ್ಷವು 'ಪಂಚ ನ್ಯಾಯ', '25 ಗ್ಯಾರಂಟಿ'ಗಳನ್ನು ಈಗಾಗಲೇ ಘೋಷಿಸಿದೆ. 'ಮನೆ ಮನೆ ಗ್ಯಾರಂಟಿ' ಅಭಿಯಾನವು ಏಪ್ರಿಲ್ 3ರಿಂದ ಆರಂಭವಾಗಲಿದೆ ಎಂದು ತಿಳಿಸಿದರು.

ಬಿಜೆಪಿಯು ಕೊನೆಯ ಕ್ಷಣದಲ್ಲಿ ಪ್ರಣಾಳಿಕೆ ಸಮಿತಿಯನ್ನು ರಚಿಸಿದೆ. ಆ ಪಕ್ಷವು ಜನರನ್ನು ತಿರಸ್ಕಾರದಿಂದ ಕಾಣುತ್ತಿರುವುದಕ್ಕೆ ಇದು ಸಾಕ್ಷಿ ಎಂದು ಟೀಕಿಸಿದರು. ಚುನಾವಣಾ ಪ್ರಣಾಳಿಕೆ ತಯಾರಿಸಲು ರಕ್ಷಣಾ ಸಚಿವ ರಾಜನಾಥ ಸಿಂಗ್ ನೇತೃತ್ವದ ಸಮಿತಿಯನ್ನು ಬಿಜೆಪಿ ಶನಿವಾರ ರಚಿಸಿತ್ತು.

ಆಂಧ್ರ ಪ್ರದೇಶ: ಕಾಂಗ್ರೆಸ್ 9 'ಗ್ಯಾರಂಟಿ'

ಅಮರಾವತಿ (ಪಿಟಿಐ): ಕರ್ನಾಟಕ ಹಾಗೂ ತೆಲಂಗಾಣ ವಿಧಾನಸಭಾ ಚುನಾವಣೆಗಳಲ್ಲಿ ಗ್ಯಾರಂಟಿಗಳ ಮೂಲಕ ಮತದಾರರನ್ನು ಸೆಳೆಯಲು ಯಶಸ್ವಿಯಾಗಿರುವ ಕಾಂಗ್ರೆಸ್, ಈಗ ಆಂಧ್ರ ಪ್ರದೇಶದ ವಿಧಾನಸಭಾ ಚುನಾವಣೆಯಲ್ಲಿಯೂ ಅದೇ ತಂತ್ರ ಪ್ರಯೋಗಿಸುತ್ತಿದೆ.

ಶರ್ಮಿಳಾ

ಮೇ 13ರಂದು ನಡೆಯಲಿರುವ ಆಂಧ್ರ ಪ್ರದೇಶ ವಿಧಾನಸಭಾ ಚುನಾವಣೆಗಾಗಿ ಕಾಂಗ್ರೆಸ್ ಪಕ್ಷವು ಬಡ ಕುಟುಂಬಕ್ಕೆ ವಾರ್ಷಿಕ ₹1 ಲಕ್ಷ, ರೈತರ ₹2 ಲಕ್ಷ ಸಾಲ ಮನ್ನಾ ಸೇರಿದಂತೆ 9 'ಗ್ಯಾರಂಟಿ'ಗಳನ್ನು ಘೋಷಿಸಿದೆ.

ಚುನಾವಣಾ ಪ್ರಣಾಳಿಕೆಯನ್ನು ಶನಿವಾರ ಬಿಡುಗಡೆಗೊಳಿಸಿದ ಆಂಧ್ರ ಪ್ರದೇಶದ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ವೈ.ಎಸ್.ಶರ್ಮಿಳಾ, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಆಂಧ್ರ ಪ್ರದೇಶಕ್ಕೆ 10 ವರ್ಷ ವಿಶೇಷ ಸ್ಥಾನಮಾನ ನೀಡುವುದು ಪಕ್ಷದ ಪ್ರಥಮ ಗ್ಯಾರಂಟಿಯಾಗಿದೆ ಎಂದರು.

'ಸತತ ಚಿಂತನೆಯ ನಂತರ ಕಾಂಗ್ರೆಸ್ ಪಕ್ಷವು ಅದ್ಭುತ ಗ್ಯಾರಂಟಿಗಳನ್ನು ಘೋಷಿಸಿದೆ. ಮಹಿಳಾ ಮಹಾಲಕ್ಷ್ಮಿ ಯೋಜನೆಯಡಿ ಪ್ರತಿ ಬಡ ಕುಟುಂಬಕ್ಕೆ ತಿಂಗಳಿಗೆ ₹8,500ರಂತೆ ವಾರ್ಷಿಕ ₹1 ಲಕ್ಷ ನೀಡಲಾಗುವುದು. ಇದು ಪಕ್ಷದ ಎರಡನೆಯ ಗ್ಯಾರಂಟಿಯಾಗಿದೆ' ಎಂದು ಹೇಳಿದರು.

ರೈತರಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಜತೆಗೆ ಶೇ 50ರಷ್ಟು ಹೆಚ್ಚುವರಿ ಹಣ, ಉದ್ಯೋಗ ಖಾತ್ರಿ ಯೋಜನೆಯಡಿ ದಿನದ ಕನಿಷ್ಠ ಕೂಲಿ ₹400ಕ್ಕೆ ಏರಿಕೆ, ಕೆ.ಜಿ.ಯಿಂದ ಪಿ.ಜಿ. ವರೆಗೆ ಉಚಿತ ಶಿಕ್ಷಣದ ಭರವಸೆಗಳನ್ನು ಘೋಷಣೆ ಮಾಡಿದೆ.

ಪ್ರತಿ ವಸತಿರಹಿತ ಕುಟುಂಬಕ್ಕೆ ₹5 ಲಕ್ಷ ವೆಚ್ಚದ ಮನೆ, ಫಲಾನುಭವಿಗಳಿಗೆ ಮಾಸಿಕ ₹4,000 ಸಾಮಾಜಿಕ ಭದ್ರತಾ ಪಿಂಚಣಿ ಮತ್ತು ಅಂಗವಿಕಲರಿಗೆ ₹6,000 ನೀಡಲಾಗುವುದು ಎಂದು ಭರವಸೆ ನೀಡಿದೆ.

400 ಅಭ್ಯರ್ಥಿಗಳಿದ್ದರೆ ಮತಪತ್ರ ಬಳಕೆ: ದಿಗ್ವಿಜಯ್

ಅಗರ್ ಮಾಲ್ವಾ (ಪಿಟಿಐ): 'ಲೋಕಸಭಾ ಚುನಾವಣೆಗೆ ಮಧ್ಯ ಪ್ರದೇಶದ ರಾಜಗಢ ಕ್ಷೇತ್ರದಿಂದ 400 ಮಂದಿ ಅಭ್ಯರ್ಥಿಗಳು ಕಣಕ್ಕಿಳಿದರೆ, ಮತದಾನವು ಮತಪತ್ರಗಳ ಮೂಲಕ ನಡೆಯಲಿದೆ. ಇದಕ್ಕಾಗಿ ಶ್ರಮಿಸುತ್ತಿದ್ದೇನೆ' ಎಂದು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದಿಗ್ವಿಜಯ ಸಿಂಗ್ ಭಾನುವಾರ ತಿಳಿಸಿದರು.

ಕಚ್ನಾರಿಯಾ ಗ್ರಾಮದಲ್ಲಿ ಸಭೆಯೊಂದರಲ್ಲಿ ಭಾಗವಹಿಸಿದ್ದ ಅವರು, 'ನೀವು ಇವಿಎಂ ಮೂಲಕ ಮತದಾನ ಮಾಡಲು ಬಯಸುವಿರಾ ಅಥವಾ ಮತಪತ್ರದ ಮೂಲಕ ಮಾಡುವಿರಾ' ಎಂದು ಸಭಿಕರನ್ನು ಪ್ರಶ್ನಿಸಿದರು. ಆಗ ಸಭಿಕರು ಮತಪತ್ರದ ಮೂಲಕ ಮತದಾನ ಮಾಡಲು ಬಯಸುವುದಾಗಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಂಗ್, 'ಒಂದು ಕ್ಷೇತ್ರದಲ್ಲಿ ನೋಟಾ ಸೇರಿದಂತೆ ಅಭ್ಯರ್ಥಿಗಳ ಸಂಖ್ಯೆ 384 ದಾಟಿದರೆ ಇವಿಎಂ ಮೂಲಕ ಮತದಾನ ನಡೆಸಲು ಸಾಧ್ಯವಿಲ್ಲ. ಮತಪತ್ರದ ಮೂಲಕ ಮತದಾನ ನಡೆಸಬೇಕಾಗುತ್ತದೆ' ಎಂದರು.

ಆರ್‌ಎಸ್‌ಎಸ್ ಕಾರ್ಯಸೂಚಿ ಈಡೇರಿಸುವುದು ನಮ್ಮ ಜವಾಬ್ದಾರಿ: ನಿತಿನ್ ಗಡ್ಕರಿ

370ರ ಗುರಿ ಮುಟ್ಟಲು ದಕ್ಷಿಣದ ರಾಜ್ಯಗಳ ನೆರವು

ನಾಗ್ಪುರ (ಪಿಟಿಐ): 'ಬಿಜೆಪಿಯು ಸದ್ಯ ಸಂಸತ್‌ನಲ್ಲಿ 288 ಸದಸ್ಯ ಬಲ ಹೊಂದಿದೆ. ಇದನ್ನು ಉಳಿಸಿಕೊಳ್ಳುವುದರ ಜತೆಗೆ ದಕ್ಷಿಣದಿಂದ ಹೆಚ್ಚಿನ ಸ್ಥಾನಗಳನ್ನು ಗೆದ್ದು ಪ್ರಧಾನಿ ಮೋದಿ ಅವರ ಗುರಿಯಂತೆ 370 ಸ್ಥಾನಗಳನ್ನು ಗಳಿಸುತ್ತೇವೆ' ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಭರವಸೆ ವ್ಯಕ್ತಪಡಿಸಿದ್ದಾರೆ.

'ಪ್ರತಿ ರಾಜ್ಯದ ಲೆಕ್ಕಾಚಾರ ನೋಡುವ ಅಗತ್ಯವೇ ಇಲ್ಲ. ಈ ಬಾರಿ ನಾವು ದಕ್ಷಿಣದಲ್ಲಿ ಯಶಸ್ಸನ್ನು ಕಾಣಲಿದ್ದೇವೆ. ಮೋದಿ ಸರ್ಕಾರ ದಕ್ಷಿಣದಲ್ಲಿ ಮತ್ತು ಈಶಾನ್ಯ ರಾಜ್ಯಗಳಲ್ಲಿ ಮಾಡಿದ ಕೆಲಸಕ್ಕೆ ಫಲ ಸಿಗುವ ಕಾಲ ಬಂದಿದೆ' ಎಂದು ಹೇಳಿದರು.

'ಪಿಟಿಐ' ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು, 'ಕಳೆದ 10 ವರ್ಷಗಳಿಂದ ಮಾಡಿದ ಕೆಲಸಗಳ ಬಲದಿಂದ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು 400ಕ್ಕೂ ಹೆಚ್ಚಿನ ಸ್ಥಾನಗಳಲ್ಲಿ ಗೆದ್ದು, ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿ ಪಟ್ಟ ಅಲಂಕರಿಸುವುದರಲ್ಲಿ ಅನುಮಾನವೇ ಇಲ್ಲ' ಎಂದರು.

2025ರಲ್ಲಿ ಆರ್‌ಎಸ್‌ಎಸ್‌ಗೆ ನೂರು ವರ್ಷ ತುಂಬಲಿದ್ದು, ಈ ಬಗ್ಗೆ ನಿಮ್ಮ ಕಾರ್ಯಸೂಚಿ ಏನು ಎಂಬ ಪ್ರಶ್ನೆಗೆ, 'ನನಗೆ ವ್ಯಕ್ತಿಗತವಾಗಿ ಯಾವ ಕಾರ್ಯಸೂಚಿಯೂ (ಅಜೆಂಡಾ) ಇಲ್ಲ. ಆರ್‌ಎಸ್‌ಎಸ್ ಅದರ ಕಾರ್ಯಸೂಚಿ ಏನು ಅನ್ನುವುದನ್ನು ಹೇಳುತ್ತದೆ. ಅದನ್ನು ಈಡೇರಿಸುವುದು ನಮ್ಮ ಜವಾಬ್ದಾರಿಯಾಗಿದೆ' ಎಂದು ಉತ್ತರಿಸಿದರು.

ಬಿಜೆಪಿಯು ಚುನಾವಣಾ ಬಾಂಡ್‌ಗಳ ಮೂಲಕ ಹೆಚ್ಚಿನ ದೇಣಿಗೆ ಪಡೆದದ್ದು ಸಹಜ ಎಂದು ಗಡ್ಕರಿ ಅಭಿಪ್ರಾಯ ಪಟ್ಟರು. 'ಟಿ.ವಿ ಮಾಧ್ಯಮದಲ್ಲಿ ಕೂಡ ಟಿಆರ್‌ಪಿ ಹೆಚ್ಚು ಇರುವವರಿಗೆ ಹೆಚ್ಚು ಜಾಹೀರಾತು ಸಿಗುತ್ತದೆ. ಟಿಆರ್‌ಪಿ ಕಡಿಮೆ ಇದ್ದರೆ ಕಡಿಮೆ ದರದ ಜಾಹೀರಾತು ಸಿಗುತ್ತದೆ. ಇಂದು ನಾವು ಆಡಳಿತ ನಡೆಸುತ್ತಿದ್ದೇವೆ. ಹಾಗಾಗಿ ನಮಗೆ ಹೆಚ್ಚು ದೇಣಿಗೆ ಸಿಕ್ಕಿದೆ. ನಾಳೆ ಮತ್ತೊಂದು ಪಕ್ಷ ಅಧಿಕಾರಕ್ಕೆ ಬಂದರೆ, ಅದು ಹೆಚ್ಚು ದೇಣಿಗೆ ಪಡೆಯುತ್ತದೆ' ಎಂದು ಅವರು ಸಮರ್ಥಿಸಿಕೊಂಡರು.

ಕೇಜ್ರಿವಾಲ್ ಸೇರಿದಂತೆ ವಿರೋಧ ಪಕ್ಷಗಳ ಮುಖಂಡರ ವಿರುದ್ಧ ಇ.ಡಿ, ಸಿಬಿಐ, ಆದಾಯ ತೆರಿಗೆ ಇಲಾಖೆ ಮುಂತಾದ ಸಂಸ್ಥೆಗಳು ಕ್ರಮ ಜರುಗಿಸಿದ್ದರ ಬಗ್ಗೆ ಪ್ರತಿಕ್ರಿಯಿಸಿ, 'ನಾವು ನಮ್ಮಿಚ್ಛೆಯಂತೆ ಕ್ರಮ ಜರುಗಿಸಲಿಲ್ಲ. ಕಾನೂನು ಪ್ರಕಾರವಾಗಿ ಪ್ರಕರಣಗಳು ದಾಖಲಾಗಿವೆ. ಇದರಲ್ಲಿ ಮೋದೀಜಿ ಅಥವಾ ಬಿಜೆಪಿ ಪಾತ್ರ ಇಲ್ಲ' ಎಂದು ಸ್ಪಷ್ಟಪಡಿಸಿದರು.

'ಇಂಡಿಯಾ' ತೊರೆದ ಅಪ್ನಾ ದಳ

ಲಖನೌ (ಪಿಟಿಐ): ವಿರೋಧ ಪಕ್ಷಗಳ 'ಇಂಡಿಯಾ' ಕೂಟದಿಂದ ಹೊರಬಂದಿರುವ 'ಅಪ್ನಾ ದಳ' (ಕೆ) ಪಕ್ಷವು, ಅಸಾದುದ್ದೀನ್ ಒವೈಸಿ ಅವರ ಎಐಎಂಐಎಂ ಜತೆಗೆ ಮೈತ್ರಿ ಮಾಡಿಕೊಂಡು 'ಪಿಡಿಎಂ ನ್ಯಾಯ ಮೋರ್ಚಾ' ಎನ್ನುವ ಹೊಸ ಕೂಟವನ್ನು ಭಾನುವಾರ ರಚನೆ ಮಾಡಿದೆ.

ನಮ್ಮದು 'ಪಿಡಿಎಂ ನ್ಯಾಯ ಮೋರ್ಚಾ' ಅಂದರೆ ಪಿಚ್ಡಾ (ಹಿಂದುಳಿದವರು), ದಲಿತರು ಮತ್ತು ಮುಸ್ಲಿಮರಿಗೆ ನ್ಯಾಯ ಒದಗಿಸುವ ಕೂಟವಾಗಿದೆ ಎಂದು ಅಪ್ನಾ ದಳ ಪ್ರತಿಪಾದಿಸಿದೆ.

ರೆಪೊ ದರ ಯಥಾಸ್ಥಿತಿ?

ಏ.3ರಿಂದ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ಆರಂಭ

ಮುಂಬೈ (ಪಿಟಿಐ): ದೇಶದಲ್ಲಿ ಚಿಲ್ಲರೆ ಹಣದುಬ್ಬರವನ್ನು ಶೇ 4ರ ಮಿತಿಯಲ್ಲಿ ಕಾಯ್ದುಕೊಂಡು ಬೆಲೆಯಲ್ಲಿ ಸ್ಥಿರತೆ ಕಾಪಾಡಲು ಭಾರತೀಯ ರಿಸರ್ವ್ ಬ್ಯಾಂಕ್ ಪ್ರಯತ್ನಿಸುತ್ತಿದೆ.

ಹಾಗಾಗಿ, ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ಸಾಧ್ಯತೆಯಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಯು (ಎಂಪಿಸಿ) ಏಪ್ರಿಲ್ 3ರಿಂದ 5ರ ವರೆಗೆ ನಡೆಯಲಿದೆ. 2024–25ನೇ ಆರ್ಥಿಕ ವರ್ಷದಲ್ಲಿ ನಡೆಯುತ್ತಿರುವ ಮೊದಲ ಸಭೆ ಇದಾಗಿದೆ. ಕೊನೆಯ ದಿನದಂದು ಗವರ್ನರ್ ಶಕ್ತಿಕಾಂತ ದಾಸ್ ಅವರು ಸಭೆಯ ನಿರ್ಣಯವನ್ನು ಪ್ರಕಟಿಸಲಿದ್ದಾರೆ. ಸದ್ಯ ರೆಪೊ ದರವು ಶೇ 6.5ರಷ್ಟಿದೆ.

ಬ್ರಿಟನ್ ಹಾಗೂ ಅಮೆರಿಕ ಕೂಡ ಬಡ್ಡಿದರ ಕಡಿತಕ್ಕೆ ಸಂಬಂಧಿಸಿದಂತೆ ಕಾದುನೋಡುವ ತಂತ್ರ ಅನುಸರಿಸುತ್ತಿವೆ. ಆದರೆ, ಸ್ವಿಟ್ಜರ್ಲೆಂಡ್ ಬಡ್ಡಿದರ ಕಡಿತ ಮಾಡಿದೆ. ಮತ್ತೊಂದೆಡೆ ಜಪಾನ್‌ನಲ್ಲಿ ಎಂಟು ವರ್ಷಗಳಿಂದ ಜಾರಿಯಲ್ಲಿದ್ದ ಋಣಾತ್ಮಕ ಬಡ್ಡಿದರ ನೀತಿಯು ಮುಕ್ತಾಯಗೊಂಡಿದೆ.

ಹಾಗಾಗಿ, ಜಾಗತಿಕ ಮಟ್ಟದಲ್ಲಿ ಹಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರಕ್ಕೆ ಸಂಬಂಧಿಸಿ ಅನುಸರಿಸುತ್ತಿರುವ ನೀತಿಗಳ ಬಗ್ಗೆ ಆರ್‌ಬಿಐ ಅವಲೋಕಿಸಲಿದೆ.

‘ಚಿಲ್ಲರೆ ಹಣದುಬ್ಬರವು ಶೇ5ರಷ್ಟಿದೆ. ಅಲ್ಲದೆ, ಮುಂಬರುವ ದಿನಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗುವ ಸಂಭವವಿದೆ. ಆರ್ಥಿಕತೆ ಬೆಳವಣಿಗೆಯ ವೇಗವನ್ನು ಕಾಯ್ದುಕೊಳ್ಳಲು ಬಡ್ಡಿದರದಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಅಗತ್ಯವಿದೆ. ಹಾಗಾಗಿ, ಎಂಪಿಸಿ ಸಭೆಯು ಈ ಬಾರಿಯೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವ ನಿರೀಕ್ಷೆ ಹೆಚ್ಚಿದೆ’ ಎಂದು ಬ್ಯಾಂಕ್ ಆಫ್ ಬರೋಡಾದ ಮುಖ್ಯ ಅರ್ಥಶಾಸ್ತ್ರಜ್ಞ ಮದನ್ ಸಬ್ನವಿಸ್ ಹೇಳಿದ್ದಾರೆ.

‘ಹಣದುಬ್ಬರ ನಿಯಂತ್ರಣದ ಮೇಲೆ ಆರ್‌ಬಿಐ ಹೆಚ್ಚು ಗಮನ ಕೇಂದ್ರೀಕರಿಸಿದೆ. 2023–24ನೇ ಆರ್ಥಿಕ ವರ್ಷದ ತ್ರೈಮಾಸಿಕ ಅವಧಿಗಳಲ್ಲಿ ದೇಶದ ಜಿಡಿಪಿ ನಿರೀಕ್ಷೆಗಿಂತಲೂ ಹೆಚ್ಚು ಪ್ರಗತಿ ಕಂಡಿದೆ. ಹಾಗಾಗಿ, ಜಿಡಿಪಿ ಬೆಳವಣಿಗೆಯ ಮುನ್ನೋಟವನ್ನು ಪರಿಷ್ಕರಿಸುವ ಸಾಧ್ಯತೆಯೂ ಇದೆ’ ಎಂದಿದ್ದಾರೆ.

‘ಮುಂಗಾರು ಹಂಗಾಮಿನ ಸ್ಥಿತಿಗತಿ, ಆರ್ಥಿಕತೆ ಬೆಳವಣಿಗೆಯ ವೇಗ ಹಾಗೂ ಬಡ್ಡಿದರ ಕಡಿತ ಸಂಬಂಧ ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಕೈಗೊಳ್ಳುವ ನಿರ್ಣಯವನ್ನು ಆರ್‌ಬಿಐ ಅವಲೋಕಿಸುತ್ತಿದೆ. ಹಾಗಾಗಿ, ಆಗಸ್ಟ್‌ನಲ್ಲಿ ನಡೆಯುವ ಎಂಪಿಸಿ ಸಭೆಗೂ ಮೊದಲೇ ಹಣಕಾಸು ನೀತಿಯಲ್ಲಿ ಬದಲಾವಣೆ ತರುವ ಸಂಭವ ತೀರಾ ಕಡಿಮೆ’ ಎಂದು ರೇಟಿಂಗ್ಸ್ ಸಂಸ್ಥೆ ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಸಾಲದ ಬಡ್ಡಿದರ ಹೆಚ್ಚಿಸಿದ ಬಿಒಐ

ನವದೆಹಲಿ (ಪಿಟಿಐ): ಆರ್‌ಬಿಐನ ಹಣಕಾಸು ನೀತಿ ಸಮಿತಿ ಸಭೆಗೂ ಮುನ್ನವೇ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಇಂಡಿಯಾವು (ಬಿಒಐ), ಸಾಲದ ಮೇಲಿನ ಬಡ್ಡಿದರವನ್ನು ಶೇ 0.10ರಷ್ಟು ಏರಿಕೆ ಮಾಡಿದೆ.

ಹೊಸ ಬಡ್ಡಿದರವು ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ರೆಪೊ ದರ ಆಧರಿಸಿದ ಸಾಲದ ಮೇಲಿನ ಬಡ್ಡಿದರವನ್ನು (ಆರ್‌ಬಿಎಲ್‌ಆರ್) ಶೇ 9.30ಕ್ಕೆ ಹೆಚ್ಚಿಸಲಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ತಿಳಿಸಿದೆ.

ಸರ್ಕಾರಿ ಸ್ವಾಮ್ಯದ ಇಂಡಿಯನ್ ಬ್ಯಾಂಕ್, ಬಿಪಿಎಲ್‌ಆರ್ ಆಧಾರಿತ (ಬೆಂಚ್‌ಮಾರ್ಕ್ ಪ್ರೈಮ್ ಲೆಂಡಿಂಗ್ ರೇಟ್) ಸಾಲದ ಬಡ್ಡಿದರವನ್ನು ಶೇ 0.05ರಷ್ಟು ಹೆಚ್ಚಿಸಿದ್ದು, ಏಪ್ರಿಲ್ 3ರಿಂದ ಜಾರಿಗೆ ಬರಲಿದೆ ಎಂದು ತಿಳಿಸಿದೆ.

ಜಿಎಸ್‌ಟಿ ತನಿಖೆ: ಮಾರ್ಗಸೂಚಿ ಪ್ರಕಟ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ ವ್ಯತ್ಯಾಸ ಕುರಿತ ತನಿಖೆಗೆ ಸಂಬಂಧಿಸಿದಂತೆ ನೇರ ತೆರಿಗೆ ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿಯು (ಸಿಬಿಐಸಿ) ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ.

ಸರಕು ಮತ್ತು ಸೇವೆಗೆ ವಿಧಿಸುವ ಸುಂಕದ ವ್ಯತ್ಯಾಸಕ್ಕೆ ಸಂಬಂಧಿಸಿ ಬೃಹತ್ ಕೈಗಾರಿಕೆಗಳು ಅಥವಾ ಬಹುರಾಷ್ಟ್ರೀಯ ಕಂಪನಿಗಳ ವಿರುದ್ಧ ತನಿಖೆ ಕೈಗೊಳ್ಳುವುದಕ್ಕೂ ಮೊದಲು ಜಿಎಸ್‌ಟಿ ಕ್ಷೇತ್ರ ಅಧಿಕಾರಿಗಳು, ವಲಯ ಮಟ್ಟದ ಪ್ರಧಾನ ಮುಖ್ಯ ಆಯುಕ್ತರಿಂದ ಒಪ್ಪಿಗೆ ಪಡೆಯಬೇಕಿದೆ. ಕೇಂದ್ರ ಜಿಎಸ್‌ಟಿ ಅಧಿಕಾರಿಗಳು ಈ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಬೇಕಿದೆ ಎಂದು ಮಂಡಳಿಯು ಸೂಚಿಸಿದೆ.

ವಿವಿಧ ವಿಷಯಕ್ಕೆ ಸಂಬಂಧಿಸಿ ರಾಜ್ಯ ಜಿಎಸ್‌ಟಿ ಘಟಕ ಹಾಗೂ ಜಿಎಸ್‌ಟಿ ಗುಪ್ತಚರ ಮಹಾ ನಿರ್ದೇಶನಾಲಯದಿಂದ (ಡಿಜಿಜಿಐ) ತೆರಿಗೆದಾರನನ್ನು ಏಕಕಾಲಕ್ಕೆ ತನಿಖೆಗೆ ಒಳಪಡಿಸುವ ವೇಳೆ, ಒಂದು ತನಿಖಾ ಘಟಕಕ್ಕೆ ಎಲ್ಲಾ ಪ್ರಕರಣಗಳನ್ನು ಒಪ್ಪಿಸಲು ಪ್ರಧಾನ ಆಯುಕ್ತರು ಕ್ರಮ ಕೈಗೊಳ್ಳಬೇಕಿದೆ ಎಂದು ಮಾರ್ಗಸೂಚಿಯಲ್ಲಿ ಹೇಳಲಾಗಿದೆ.

ತನಿಖೆ ಆರಂಭಿಸಿದ ಒಂದು ವರ್ಷದೊಳಗೆ ಮುಕ್ತಾಯಗೊಳಿಸಿ ವರದಿ ಸಲ್ಲಿಸಲು ಗಡುವು ನಿಗದಿಪಡಿಸಲಾಗಿದೆ.

ತನಿಖೆ ನಡೆಸುವುದಕ್ಕೂ ಮೊದಲು ಸಂಬಂಧಪಟ್ಟ ಕಂಪನಿಯ ಮುಖ್ಯ ಅಧಿಕಾರಿಗೆ ಸಮನ್ಸ್ ಜಾರಿಗೆ ಬದಲಾಗಿ ಅಧಿಕೃತ ನೋಟಿಸ್ ನೀಡಬೇಕು. ಯಾವ ಕಾರಣಕ್ಕೆ ತನಿಖೆ ನಡೆಸಲಾಗುತ್ತಿದೆ ಎಂಬ ಬಗ್ಗೆ ಅದರಲ್ಲಿ ಸ್ಪಷ್ಟವಾಗಿ ವಿವರಿಸಬೇಕಿದೆ. ಪ್ರಕರಣಕ್ಕೆ ಸಂಬಂಧಿಸಿದ ದಾಖಲೆ ಹಾಜರುಪಡಿಸಲು ಸೂಕ್ತ ಕಾಲಾವಕಾಶ ನೀಡಬೇಕಿದೆ ಎಂದು ಮಂಡಳಿಯು ಹೇಳಿದೆ.

ಎಂ.ಎಫ್‌ನಲ್ಲಿ ಹೂಡಿದ ಧನವೃದ್ಧಿ ಹೇಗೆ?

ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ನಾನು ಈಕ್ವಿಟಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಲು ಸಿದ್ಧ. ಆದರೆ, ಮ್ಯೂಚುಯಲ್ ಫಂಡ್ ಕಂಪನಿಗಳು ನಮ್ಮ ಹಣದೊಂದಿಗೆ ಏನು ಮಾಡುತ್ತವೆ? ನಾವು ತೊಡಗಿಸಿದ ಹಣ ಹೆಚ್ಚಳವಾಗುವಂತೆ ಹೇಗೆ ಕೆಲಸ ಮಾಡುತ್ತವೆ? ಶೇ 12ರಿಂದ ಶೇ 14ರಷ್ಟು ಅಥವಾ ಅದಕ್ಕಿಂತ ಹೆಚ್ಚಿಗೆ ಲಾಭಾಂಶವನ್ನು ಹೇಗೆ ತಂದುಕೊಡುತ್ತವೆ? ಹೀಗೆ ಹತ್ತಾರು ಪ್ರಶ್ನೆಗಳು ನನ್ನಲ್ಲಿವೆ ಎಂದು ಅನೇಕರು ಹೇಳುತ್ತಾರೆ. ಅವರೆಲ್ಲರ ಗೊಂದಲ, ಅನುಮಾನಗಳಿಗೆ ಉತ್ತರ ಕೊಡುವ ಪ್ರಯತ್ನ ಇಲ್ಲಿದೆ.

ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿ ಎಷ್ಟು ವಿಧ?: ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳು ಹೂಡಿಕೆದಾರರ ಬಹುಪಾಲು ಹಣವನ್ನು ಷೇರು ಮಾರುಕಟ್ಟೆಯಲ್ಲಿ ಇರುವ ಕಂಪನಿಗಳ ಮೇಲೆ ತೊಡಗಿಸುತ್ತವೆ. ಈ ಫಂಡ್‌ಗಳಲ್ಲಿ ಲಾರ್ಜ್ ಕ್ಯಾಪ್ ಫಂಡ್, ಮಿಡ್ ಕ್ಯಾಪ್ ಫಂಡ್, ಲಾರ್ಜ್ ಆ್ಯಂಡ್ ಮಿಡ್ ಕ್ಯಾಪ್ ಫಂಡ್, ಫ್ಲೆಕ್ಸಿ ಕ್ಯಾಪ್ ಫಂಡ್, ಮಲ್ಟಿಕ್ಯಾಪ್ ಫಂಡ್, ಸ್ಮಾಲ್ ಕ್ಯಾಪ್ ಫಂಡ್, ಇಎಲ್‌ಎಸ್‌ಎಸ್ ಫಂಡ್, ಡಿವಿಡೆಂಡ್ ಈಲ್ಡ್ ಫಂಡ್, ವ್ಯಾಲ್ಯೂ ಫಂಡ್, ಕಾಂಟ್ರಾ ಫಂಡ್, ಫೋಕಸ್ಡ್ ಫಂಡ್ ಮತ್ತು ಸೆಕ್ಟೋರಲ್ ಥಿಮ್ಯಾಟಿಕ್ ಫಂಡ್ ಸೇರಿ ಒಟ್ಟು 12 ಬಗೆಯ ಫಂಡ್‌ಗಳಿವೆ.

ಈಕ್ವಿಟಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ನಿಯಮ: ಈಕ್ವಿಟಿ ಮ್ಯೂಚುಯಲ್ ಫಂಡ್‌ಗಳಲ್ಲಿ 12 ಮಾದರಿಗಳಿದ್ದು, ಪ್ರತಿಯೊಂದಕ್ಕೂ ಪ್ರತ್ಯೇಕ ಹೂಡಿಕೆಯ ನಿಯಮವಿದೆ. ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಇದನ್ನು ಜಾರಿಗೆ ತಂದಿದೆ.

ಲಾರ್ಜ್ ಕ್ಯಾಪ್ ಮ್ಯೂಚುಯಲ್ ಫಂಡ್‌ಗಳು ಹೂಡಿಕೆದಾರರ ಶೇ 80ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿರುವ 100 ಅಗ್ರಮಾನ್ಯ ಲಾರ್ಜ್ ಕ್ಯಾಪ್ ಕಂಪನಿಗಳ ಮೇಲೆ ತೊಡಗಿಸಬೇಕಾಗುತ್ತದೆ. ಇನ್ನುಳಿದ ಶೇ 20ರಷ್ಟು ಹಣವನ್ನು ಷೇರು ಮಾರುಕಟ್ಟೆ, ಸರ್ಕಾರಿ ಸಾಲ ಪತ್ರಗಳು ಹಾಗೂ ಮತ್ತಿತರ ಸುರಕ್ಷಿತ ಹೂಡಿಕೆಗಳಲ್ಲಿ ಹಾಕುವ ಬಗ್ಗೆ ಫಂಡ್ ಮ್ಯಾನೇಜರ್ ತೀರ್ಮಾನ ತೆಗೆದುಕೊಳ್ಳಬಹುದು.

ಮಿಡ್ ಕ್ಯಾಪ್ ಮ್ಯೂಚುಯಲ್ ಫಂಡ್‌ಗಳು ಹೂಡಿಕೆದಾರರ ಶೇ 65ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ 101ರಿಂದ 250ನೇ ಕ್ರಮಾಂಕದಲ್ಲಿ ಬರುವ ಮಧ್ಯಮ ಗಾತ್ರದ (ಮಿಡ್ ಕ್ಯಾಪ್) ಕಂಪನಿಗಳ ಮೇಲೆ ಹೂಡಬೇಕಾಗುತ್ತದೆ. ಬಾಕಿ ಶೇ 35ರಷ್ಟು ಹಣವನ್ನು ಷೇರು ಮಾರುಕಟ್ಟೆಯ ಸರ್ಕಾರಿ ಸಾಲ ಪತ್ರಗಳ ಮೇಲೆ ತೊಡಗಿಸಲು ಅವಕಾಶವಿದೆ.

ಸ್ಮಾಲ್ ಕ್ಯಾಪ್ ಮ್ಯೂಚುಯಲ್ ಫಂಡ್‌ಗಳು ಹೂಡಿಕೆದಾರರ ಶೇ 65ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ ಇರುವ 251ರ ನಂತರದ ಕ್ರಮಾಂಕದಲ್ಲಿ ಬರುವ ಸ್ಮಾಲ್ ಕ್ಯಾಪ್ ಕಂಪನಿಗಳ ಮೇಲೆ ಹೂಡಬೇಕಾಗುತ್ತದೆ. ಲಾರ್ಜ್ ಆ್ಯಂಡ್ ಮಿಡ್ ಕ್ಯಾಪ್ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆದಾರರ ಶೇ 35ರಷ್ಟು ಹಣವನ್ನು ಲಾರ್ಜ್ ಕ್ಯಾಪ್ ಕಂಪನಿಗಳ ಮೇಲೆ ಮತ್ತು ಶೇ 35ರಷ್ಟು ಹಣವನ್ನು ಮಿಡ್ ಕ್ಯಾಪ್ ಕಂಪನಿಗಳ ಮೇಲೆ ಹಾಕಬೇಕಾಗುತ್ತದೆ.

ಫ್ಲೆಕ್ಸಿ ಕ್ಯಾಪ್ ಫಂಡ್‌ಗಳು ಒಟ್ಟಾರೆಯಾಗಿ ಹೂಡಿಕೆದಾರರ ಶೇ65ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ ತೊಡಗಿಸಬೇಕು. ಫ್ಲೆಕ್ಸಿ ಕ್ಯಾಪ್ ಫಂಡ್‌ಗಳಲ್ಲಿ ಲಾರ್ಜ್ ಕ್ಯಾಪ್, ಮಿಡ್ ಕ್ಯಾಪ್ ಅಥವಾ ಸ್ಮಾಲ್ ಕ್ಯಾಪ್ ಕಂಪನಿಗಳಲ್ಲಿ ಹೂಡಿಕೆಗೆ ಅವಕಾಶವಿದೆ. ಯಾವುದರಲ್ಲಿ ಎಷ್ಟು ಹೂಡಿಕೆ ಮಾಡಬೇಕು ಎನ್ನುವುದು ಫಂಡ್ ಮ್ಯಾನೇಜರ್‌ನ ಆಯ್ಕೆಯಾಗಿರುತ್ತದೆ.

ಮಲ್ಟಿ ಕ್ಯಾಪ್ ಫಂಡ್‌ಗಳು ಹೂಡಿಕೆದಾರರ ಶೇ75ರಷ್ಟು ಮೊತ್ತವನ್ನು ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲಿ ಇಡಬೇಕು. ಇಎಲ್‌ಎಸ್‌ಎಸ್ ಫಂಡ್‌ಗಳು ಹೂಡಿಕೆದಾರರ ಶೇ 80ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೂಡಬೇಕು. ಲಾರ್ಜ್, ಮಿಡ್, ಸ್ಮಾಲ್ ಹೀಗೆ ಯಾವ ಮಾದರಿಯ ಫಂಡ್ ಕಂಪನಿಯನ್ನಾದರೂ ಇಲ್ಲಿ ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯ ಫಂಡ್ ಮ್ಯಾನೇಜರ್‌ಗೆ ಇರುತ್ತದೆ.

ಡಿವಿಡೆಂಡ್ ಈಲ್ಡ್ ಮ್ಯೂಚುಯಲ್ ಫಂಡ್‌ಗಳು ಶೇ65ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ ಹೆಚ್ಚು ಡಿವಿಡೆಂಡ್ ಕೊಡುವ ಕಂಪನಿಗಳ ಮೇಲೆ ತೊಡಗಿಸಬೇಕಾಗುತ್ತದೆ. ವ್ಯಾಲ್ಯೂ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆದಾರರ ಶೇ 65ರಷ್ಟು ಹಣವನ್ನು ಆಂತರಿಕ ಮೌಲ್ಯ ಹೊಂದಿರುವ, ಭವಿಷ್ಯದಲ್ಲಿ ಬೆಳವಣಿಗೆಯ ಮುನ್ನೋಟವಿರುವ ಕಂಪನಿಗಳಲ್ಲಿ ಹೂಡಿಕೆ ಮಾಡಬೇಕಾಗುತ್ತದೆ.

ಕಾಂಟ್ರಾ ಮ್ಯೂಚುಯಲ್ ಫಂಡ್‌ನಲ್ಲಿ ಷೇರು ಮಾರುಕಟ್ಟೆಯ ಲೆಕ್ಕಾಚಾರವನ್ನು ಮೀರಿ ಉತ್ತಮ ಲಾಭಾಂಶ ಕೊಡುವ ಕಂಪನಿಗಳನ್ನು ಆಯ್ಕೆ ಮಾಡಿ ಶೇ65ರಷ್ಟು ಹಣವನ್ನು ಆ ಕಂಪನಿಗಳ ಮೇಲೆ ತೊಡಗಿಸಬೇಕಾಗುತ್ತದೆ.

ಫೋಕಸ್ಡ್ ಮ್ಯೂಚುಯಲ್ ಫಂಡ್‌ನಲ್ಲಿ ಶೇ 65ರಷ್ಟು ಹಣವನ್ನು ಷೇರು ಮಾರುಕಟ್ಟೆಯಲ್ಲಿ ಇರುವ ಉತ್ತಮ ಕಂಪನಿಗಳ ಮೇಲೆ ಹೂಡಿಕೆ ಮಾಡಬೇಕಾಗುತ್ತದೆ. ಸೆಕ್ಟೋರಲ್ ಥಿಮ್ಯಾಟಿಕ್ ಫಂಡ್‌ನಲ್ಲಿ ನಿರ್ದಿಷ್ಟ ವಲಯದ (ಉದಾಹರಣೆಗೆ ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್) ಕಂಪನಿಗಳ ಮೇಲೆ ಶೇ 80ರಷ್ಟು ದುಡ್ಡು ಹಾಕಬೇಕಾಗುತ್ತದೆ.

ಹಣ ಹೂಡಿಕೆ ಹೇಗೆ?: ಮ್ಯೂಚುಯಲ್ ಫಂಡ್‌ಗಳು ನಮ್ಮ ಹಣವನ್ನು ಹೇಗೆ ಹೂಡಿಕೆ ಮಾಡುತ್ತವೆ ಎನ್ನುವುದನ್ನು ಪರಾಗ್ ಪರೀಕ್ ಫ್ಲೆಕ್ಸಿ ಕ್ಯಾಪ್ ಫಂಡ್ ಅನ್ನು ಉದಾಹರಣೆಯನ್ನಾಗಿಟ್ಟುಕೊಂಡು ಅರ್ಥ ಮಾಡಿಕೊಳ್ಳೋಣ. ಪರಾಗ್ ಪರೀಕ್ ಫ್ಲೆಕ್ಸಿ ಕ್ಯಾಪ್ ಫಂಡ್ ಅತಿದೊಡ್ಡ ಫ್ಲೆಕ್ಸಿ ಕ್ಯಾಪ್ ಫಂಡ್ ಆಗಿದ್ದು, ಸುಮಾರು ₹59,000 ಕೋಟಿ ಮೊತ್ತದ ಹಣವನ್ನು ಹೂಡಿಕೆದಾರರು ತೊಡಗಿಸಿದ್ದಾರೆ. ಫ್ಲೆಕ್ಸಿ ಕ್ಯಾಪ್ ಫಂಡ್‌ಗಳು ಲಾರ್ಜ್, ಮಿಡ್ ಅಥವಾ ಸ್ಮಾಲ್ ಕ್ಯಾಪ್ ಕಂಪನಿಗಳ ಮೇಲೆ ಹೂಡಿಕೆ ಮಾಡಬಹುದು. ಇದಕ್ಕೆ ಯಾವುದೇ ನಿರ್ಬಂಧ ಇರುವುದಿಲ್ಲ.

ಫಂಡ್ ಮ್ಯಾನೇಜರ್ ತಮ್ಮ ವಿವೇಚನೆ ಬಳಸಿ ತೀರ್ಮಾನ ಕೈಗೊಳ್ಳಬಹುದು. ಈ ಫಂಡ್‌ನಲ್ಲಿ ₹10 ಸಾವಿರ ಹೂಡಿಕೆ ಮಾಡಿದ್ದೀರಿ ಎಂದು ಭಾವಿಸಿ. ₹10 ಸಾವಿರದಲ್ಲಿ ₹5,800 ಲಾರ್ಜ್ ಕ್ಯಾಪ್ ಕಂಪನಿಗಳ ಮೇಲೆ, ₹655 ಮಿಡ್ ಕ್ಯಾಪ್ ಕಂಪನಿಗಳ ಮೇಲೆ ಮತ್ತು ₹775 ಸ್ಮಾಲ್ ಕ್ಯಾಪ್ ಕಂಪನಿಗಳ ಮೇಲೆ ಮತ್ತು ₹2,770 ನಗದಿನ ರೂಪದಲ್ಲಿ ಇರುತ್ತದೆ.

ಫೆಬ್ರುವರಿ 29ರ ಮಾಹಿತಿಯಂತೆ ಪರಾಗ್ ಪರೀಗ್ ಫ್ಲೆಕ್ಸಿ ಕ್ಯಾಪ್ ಫಂಡ್ ಒಟ್ಟು 46 ಷೇರುಗಳ ಮೇಲೆ ಹೂಡಿಕೆ ಮಾಡಿದೆ. ಎಚ್‌ಡಿಎಫ್‌ಸಿ ಬ್ಯಾಂಕ್, ಬಜಾಜ್ ಹೋಲ್ಡಿಂಗ್ಸ್ ಆ್ಯಂಡ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್, ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ, ಮಾರುತಿ ಸುಜುಕಿ, ಎಚ್‌ಸಿಎಲ್ ಟೆಕ್ನಾಲಜೀಸ್ ಹೀಗೆ ಬೇರೆ ಬೇರೆ ಕಂಪನಿಗಳ ಮೇಲೆ ಈ ಫಂಡ್ ಹೂಡಿಕೆ ಮಾಡಿದೆ.

ಅಲ್ಲದೆ ಗೂಗಲ್, ಅಮೆಜಾನ್, ಫೇಸ್‌ಬುಕ್ ಮತ್ತು ಮೈಕ್ರೋಸಾಫ್ಟ್‌ನಂತಹ ಜಾಗತಿಕ ಕಂಪನಿಗಳ ಮೇಲೂ ಈ ಫಂಡ್ ಹೂಡಿದೆ. ಅಂದರೆ ಒಂದು ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದರೆ ಹತ್ತಾರು ಕಂಪನಿಗಳ ಮೇಲೆ ಹೂಡಿಕೆ ಮಾಡಿದಂತೆ ಆಗುತ್ತದೆ. ಹೂಡಿಕೆಯಲ್ಲಿ ವೈವಿಧ್ಯತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತದೆ. ಕಂಪನಿಗಳು ಪ್ರಗತಿ ಸಾಧಿಸಿದಂತೆ ಫಂಡ್‌ಗೆ ಲಾಭವಾಗುತ್ತದೆ. ಆ ಲಾಭ ಮ್ಯೂಚುಯಲ್ ಫಂಡ್ ಹೂಡಿಕೆದಾರರಿಗೂ ಸಿಗುತ್ತದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಉತ್ತಮ ಗಳಿಕೆ ಕಂಡ ಸೂಚ್ಯಂಕಗಳು

ಮಾರ್ಚ್ 28ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ.

73,635 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಮತ್ತು 22,326 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ವಾರದ ಅವಧಿಯಲ್ಲಿ ತಲಾ ಶೇ 2ರಷ್ಟು ಗಳಿಕೆ ಕಂಡಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಕಳೆದ ಎರಡು ತಿಂಗಳಲ್ಲಿ ವಾರದ ಅವಧಿಯಲ್ಲಿ ಕಂಡ ದೊಡ್ಡಮಟ್ಟದ ಗಳಿಕೆ ಇದಾಗಿದೆ. ಮಿಡ್ ಕ್ಯಾಪ್ ಸೂಚ್ಯಂಕ ಕೂಡ ಶೇ 2ರಷ್ಟು ಗಳಿಸಿಕೊಂಡಿದೆ.

ವಲಯವಾರು ಪ್ರಗತಿಯಲ್ಲಿ ಮಾಧ್ಯಮ ಮತ್ತು ಮಾಹಿತಿ ತಂತ್ರಜ್ಞಾನ ವಲಯ ಹೊರತುಪಡಿಸಿ ಎಲ್ಲಾ ಕ್ಷೇತ್ರಗಳ ಸೂಚ್ಯಂಕಗಳು ಗಳಿಕೆ ದಾಖಲಿಸಿವೆ. ರಿಯಲ್ ಎಸ್ಟೇಟ್, ಅನಿಲ ಮತ್ತು ತೈಲ, ಮೂಲ ಸೌಕರ್ಯ ಸೂಚ್ಯಂಕ ಮತ್ತು ವಾಹನ ಉತ್ಪಾದನಾ ಸೂಚ್ಯಂಕಗಳು ಉತ್ತಮ ಗಳಿಕೆ ಕಂಡಿವೆ. ನಿಫ್ಟಿ ಬ್ಯಾಂಕ್ ಸೂಚ್ಯಂಕ ಶೇ 1ರಷ್ಟು ಹೆಚ್ಚಳ ದಾಖಲಿಸಿದೆ.

ನಿಫ್ಟಿಯಲ್ಲಿ 40 ಷೇರುಗಳು ಸಕಾರಾತ್ಮಕ ಗಳಿಕೆ ದಾಖಲಿಸಿವೆ. ಬಜಾಜ್ ಫೈನಾನ್ಸ್, ಎಲ್ ಆ್ಯಂಡ್ ಟಿ, ಬಜಾಜ್ ಫಿನ್‌ಸರ್ವ್ ಉತ್ತಮ ಗಳಿಕೆ ಕಂಡಿವೆ. ಮಿಡ್ ಕ್ಯಾಪ್‌ನಲ್ಲಿ ಮೆಟ್ರೊಪೊಲಿಸ್, ಸೀಮನ್ಸ್, ಇಂಡಿಗೊ, ಡಾ ಲಾಲ್ ಮತ್ತು ಚೋಳಮಂಡಲಂ ಇನ್ವೆಸ್ಟ್‌ಮೆಂಟ್ಸ್ ಹೆಚ್ಚಳವಾಗಿವೆ.

ಮುನ್ನೋಟ: ಏಪ್ರಿಲ್ 1ರಿಂದ ಕಂಪನಿಗಳ ತ್ರೈಮಾಸಿಕ ವರದಿ ಬಿಡುಗಡೆಯಾಗಲಿದೆ. ಏಪ್ರಿಲ್ 3ರಿಂದ ಆರ್‌ಬಿಐ ಹಣಕಾಸು ನೀತಿ ಸಮಿತಿ ಸಭೆ ನಡೆಯಲಿದೆ. ಭಾರತದ ಪಿಎಂಐ (ಪರ್ಚೇಸಿಂಗ್ ಮ್ಯಾನೇಜರ್ಸ್ ಇಂಡೆಕ್ಸ್) ದತ್ತಾಂಶ, ವಾಹನ ಮಾರಾಟದ ಅಂಕಿ-ಅಂಶ ಸೇರಿದಂತೆ ಪ್ರಮುಖ ಮಾಹಿತಿಗಳು ಹೊರಬೀಳಲಿವೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ADMISSION CORNER

ಸ್ಪರ್ಧಾಮಿತ್ರ ACADEMY

IAS/KAS Prelims & Mains

PSI/PDO/VAO

PGCET RRB/SSC/BANK

ADMISSION OPEN

ಬೆಂಗಳೂರು / ಮೈಸೂರು

9535111133 / 9535111166

ಭವಿಷ್ಯ

Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ

Travel

13.04.2024 6ದಿನಗಳು A/Cಬಸ್ಸಿನಲ್ಲಿ ಅಯೋಧ್ಯೆ, ಕಾಶಿ,ಗಯಾ, ಪ್ರಯೋಗರಾಜ್ (ಕೆಲವೇ ಸೀಟುಗಳಿವೆ) 12.07.2024 13/17ದಿನಗಳು ಅಮರನಾಥ್, ವೈಷ್ಣೋದೇವಿ, ಕಾಶ್ಮೀರ, ಅಮೃತಸರ್, ಆಗ್ರ,ದೆಹಲಿ ಇತ್ಯಾದಿ.28000/ಏಪ್ರಿಲ್, ಮೇನಲ್ಲಿ ಹಡಗು/ವಿಮಾನದಲ್ಲಿ ಅಂಡಮಾನ್ ಹವಳದ್ವೀಪ. Royal Package 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್'. 9739847429/ 9845560219

05.05.2024ರಿಂದ 25ದಿನಗಳ ಚಾರಧಾಮ್`ಸಮೇತ, ವೈಷ್ಣೋದೇವಿ,ಅಮೃತಸರ್`, ಕಾಶಿ, ಅಯೋಧ್ಯ, ಹರಿದ್ವಾರ್, ಆಗ್ರಾ ಇತ್ಯಾದಿ. 01.07.2024 ಮತ್ತು 12.07.2024ರಿಂದ 12ದಿನಗಳು ಅಮರನಾಥ್`ಸಮೇತ ಕಾಶ್ಮೀರ್, ಶ್ರೀನಗರ,ಗುಲ್ಮಾರ್ಗ್, ಅವಂತಿ ಪುರ,ವಾಘಬಾರ್ಡರ್`,ಇತ್ಯಾದಿ. ವಿಷ್ಣನ್`ಟ್ರಾವಲ್`ಲೈನ್ಸ್, ನಂ.20,`ಆರ್.ವಿ.ರಸ್ತೆ, ಬೆಂಗಳೂರು-04. 8105657052, 9480182865.

15.04.2024 23.06.2024 ಅಯೋಧ್ಯಾ ಕಾಶಿ,ಬುದ್ಧಗಯಾ ಅಲಹಾಬಾದ್ 28.04.2024 28.06.2024 11.07.2024 ಕಾಶ್ಮೀರ್ ಗುಲ್ಮಾರ್ಗ್ ವೈಷ್ಣೋದೇವಿ ವಾಘಬಾರ್ಡರ್ ಅಮರನಾಥ್. 11.05.2024 24.05.2024 08.06.2024 ಚಾರ್‌ಧಾಮ್ ಸಮೇತ ಪ್ರವಾಸ. ಸಂಪರ್ಕಿಸಿ. ವಿಷ್ಣನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು4. 26574131 8431888138 7204173686

14 ದಿನಗಳ ಚಾರ್ಧಾಮ್`ಪ್ರವಾಸ 11.05.24. 14ದಿನಗಳ ಅಯೋಧ್ಯೆ,ಕಾಶಿ ನೇಪಾಳ ಪ್ರವಾಸ 21.05.24. 14ದಿನಗಳ ಅಮರನಾಥ ಪ್ರವಾಸ 23.06.24. Twite Holidays. ಸಂಪರ್ಕಿಸಿ: 9611801143, 8088559962.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

ಸಾರ್ವಜನಿಕ ಪ್ರಕಟಣೆ

BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS

@500/-* PER SQCM

www.dhclassifieds.com BOOK NOW

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9886213331 | +91 9731810277
+91 9901641752 | 9845114560

*Conditions apply

ರಾಜ್ಯದಲ್ಲಿ ನೀರಿಲ್ಲವೆಂದು ಆಹ್ವಾನ ಸರಿಯಲ್ಲ: ಸಚಿವ

ಐ.ಟಿ ಕಂಪನಿಗಳಿಗೆ ಕೇರಳ ಗಾಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬರಗಾಲ ಮತ್ತು ಬೇಸಿಗೆಯಲ್ಲಿ ನೀರಿನ ಕೊರತೆ ಸಹಜ. ಇದಕ್ಕೆ ಕೇರಳವೂ ಹೊರತಲ್ಲ. ಆದರೆ, ಅಲ್ಲಿನ ಕೈಗಾರಿಕಾ ಸಚಿವರು ಬೆಂಗಳೂರಿನಲ್ಲಿ ನೀರಿಲ್ಲವೆಂದು ಇಲ್ಲಿನ ಐ.ಟಿ ಕಂಪನಿಗಳನ್ನು ತಮ್ಮ ರಾಜ್ಯಕ್ಕೆ ಬರುವಂತೆ ಆಹ್ವಾನಿಸುತ್ತಿರುವುದು ಒಕ್ಕೂಟ ವ್ಯವಸ್ಥೆಯ ತತ್ತ್ವಕ್ಕೆ ವಿರುದ್ಧವಾಗಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ ಪಾಟೀಲ ಹೇಳಿದ್ದಾರೆ.

ಕೇರಳ ಸಚಿವ ಪಿ. ರಾಜೀವ್ ಅವರು, ಐ.ಟಿ ಕಂಪನಿಗಳಿಗೆ ಆಹ್ವಾನಿಸಿರುವ ಸುದ್ದಿಯನ್ನು ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಇದು ಒಂದು ರೀತಿಯ ಕುಚೋದ್ಯದ ನಡೆಯಾಗಿದೆ’ ಎಂದು ಪ್ರಕಟಣೆಯಲ್ಲಿ ಟೀಕಿಸಿದ್ದಾರೆ.

ಎಂ.ಬಿ. ಪಾಟೀಲ

‘ನಾವೆಲ್ಲರೂ ಒಕ್ಕೂಟ ವ್ಯವಸ್ಥೆಯಲ್ಲಿದ್ದೇವೆ. ಪರಸ್ಪರ ಕೊಡುಕೊಳ್ಳುವಿಕೆ ಇರಬೇಕೇ ವಿನಾ ಪರಿಸ್ಥಿತಿಯ ಲಾಭ ಪಡೆಯಲು ಮುಂದಾಗಬಾರದು. ಇದರಿಂದ ಯಾರಿಗೂ ಒಳ್ಳೆಯದಾಗುವುದಿಲ್ಲ’ ಎಂದು ಎಚ್ಚರಿಸಿದ್ದಾರೆ.

ಬೆಂಗಳೂರಿನಲ್ಲಿ ಐ.ಟಿ ಕಂಪನಿಗಳು ನೆಲೆಯೂರಿರುವ ಪ್ರದೇಶಗಳಲ್ಲಿ ಗಂಭೀರ ಸ್ವರೂಪದಲ್ಲಿ ನೀರಿನ ಕೊರತೆ ಕಾಣಿಸಿಕೊಂಡಿಲ್ಲ. ಕರ್ನಾಟಕದಲ್ಲಿ ಕೇರಳ ಮೂಲದ ಲಕ್ಷಾಂತರ ಯುವಕ, ಯುವತಿಯರು ನೆಮ್ಮದಿಯಿಂದ ಕೆಲಸ ಮಾಡುತ್ತಿದ್ದಾರೆ ಎನ್ನುವುದನ್ನು ಅವರು ಮರೆಯಬಾರದು ಎಂದಿದ್ದಾರೆ.

ಪ್ರತ್ಯೇಕ ನೀರು ಪೂರೈಕೆ ವ್ಯವಸ್ಥೆ: ಕರ್ನಾಟಕದ ಎಲ್ಲ ಕೈಗಾರಿಕಾ ಪ್ರದೇಶಗಳಿಗೆ ಸಮೀಪದ ನದಿ ಮೂಲಗಳಿಂದ ನೀರು ಪೂರೈಕೆಗೆ ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲು ರಾಜ್ಯ ಸರ್ಕಾರ ಕಾರ್ಯಪ್ರವೃತ್ತವಾಗಿದೆ. ಬೆಂಗಳೂರಿನ ಕೈಗಾರಿಕಾ ಪ್ರದೇಶಗಳಿಗೆ ಕಾವೇರಿ ನದಿಯಿಂದ ನೀರು ಪೂರೈಸುವ ಸಂಬಂಧ ಪ್ರತ್ಯೇಕ ಯೋಜನೆ ರೂಪಿಸುವ ಬಗ್ಗೆಯೂ ಸಭೆ ನಡೆಸಿ ಚರ್ಚಿಸಲಾಗಿದೆ ಎಂದು ಸಚಿವ ಪಾಟೀಲ ತಿಳಿಸಿದ್ದಾರೆ.

ವಿಜಯಪುರದ ಮುಳವಾಡ ಕೈಗಾರಿಕಾ ಪ್ರದೇಶಕ್ಕೆ ಆಲಮಟ್ಟಿ, ಧಾರವಾಡ, ಕಿತ್ತೂರು, ದುರ್ಗದಕೇರಿ ಕೈಗಾರಿಕಾ ಪ್ರದೇಶಗಳಿಗೆ ಮಲಪ್ರಭಾ ನದಿಯಿಂದ ನೀರು ಪೂರೈಸುವ ಯೋಜನೆಗೆ ಟೆಂಡರ್ ಕರೆಯಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

24ನೇ ವರ್ಷದ ಪುಣ್ಯಸ್ಮರಣೆ



ಶ್ರೀ ವಿ. ಎಸ್. ಸದಾಶಿವಯ್ಯ

ಅಡಿಕೆ ವ್ಯಾಪಾರಿಗಳು. ಕೆ ಆರ್ ಮಾರ್ಕೆಟ್

ನಿಧನ: 01-04-2000

ನೀವು ನಮ್ಮನ್ನಗಲಿ 24 ವರ್ಷವಾಯಿತು ನಿಮ್ಮ ಸವಿನೆನಪು ನಮ್ಮ ಮನದಲ್ಲಿ ಸದಾ ಹಸಿರಾಗಿರುತ್ತದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುವ

ಇಂತಿ ನಿಮ್ಮ ಮಕ್ಕಳು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು.



ವೈಕುಂಠ ಸಮಾರಾಧನೆ

ಶ್ರೀಮತಿ ಸುಶೀಲಮ್ಮನವರು

ಕ್ಯಾಮೇನಹಳ್ಳಿ, ಹೊಳವನಹಳ್ಳಿ ಹೋ. ಕೊರಟಗೆರೆ ತಾ. ತುಮಕೂರು ಜಿಲ್ಲೆ ಇವರು ಮಾಡುವ ವಿಜ್ಞಾಪನೆಗಳು ದಿನಾಂಕ 23-3-2024ನೇ ಶನಿವಾರ ನನ್ನ ಪೂಜ್ಯ ಪತಿಯವರಾದ

ಶ್ರೀಯುತ ಯರ್ರಪ್ಪ. ಹೆಚ್.ಸಿ.ರವರು

(ನಿವೃತ್ತ ಕೃಷಿ ಉಪ ನಿರ್ದೇಶಕರು)

(ದಿ. ಶ್ರೀ ಚಿಕ್ಕಪ್ಪಯ್ಯ & ಶ್ರೀಮತಿ ಮರಿಯಮ್ಮರವರ ಮಗ) ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ: 02-04-2024 ನೇ ಮಂಗಳವಾರ ಮಧ್ಯಾಹ್ನ 12:30ಕ್ಕೆ ಸ್ವಗೃಹ ಕ್ಯಾಮೇನಹಳ್ಳಿ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ: ದುಃಖತಪ್ತರು: ಶ್ರೀಮತಿ ಸುಶೀಲಮ್ಮ & ಮಕ್ಕಳು ಹಾಗೂ ಕುಟುಂಬವರ್ಗದವರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಇಂದಿನಿಂದ ಕೊಬ್ಬರಿ ಖರೀದಿ

ಪ್ರಜಾವಾಣಿ ವಾರ್ತೆ

ತುಮಕೂರು: ಕನಿಷ್ಠ ಬೆಂಬಲ ಬೆಲೆಯಡಿ ಸೋಮವಾರದಿಂದ (ಏಪ್ರಿಲ್ 1) ಕೊಬ್ಬರಿ ಖರೀದಿ ಪ್ರಕ್ರಿಯೆ ಆರಂಭವಾಗಲಿದೆ.

ನೋಂದಣಿ ಕಾರ್ಯ ಮುಗಿದ 20 ದಿನಗಳ ನಂತರ ಸರ್ಕಾರ ಕೊಬ್ಬರಿ ಖರೀದಿಗೆ ಮುಂದಾಗಿದೆ. ಜಿಲ್ಲೆಯ 26 ಕೇಂದ್ರಗಳಲ್ಲಿ ಏಕಕಾಲಕ್ಕೆ ಖರೀದಿ ಶುರುವಾಗಲಿದೆ. ಖರೀದಿ ಕೇಂದ್ರಗಳಲ್ಲಿ ಅಧಿಕಾರಿಗಳು, ಗ್ರೇಡರ್‌ಗಳು, ತೂಕದ ಯಂತ್ರ, ಕೊಬ್ಬರಿ ತುಂಬಲು ಬೇಕಾದ ಚೀಲಗಳು, ಸಂಗ್ರಹಕ್ಕೆ ಗೋದಾಮು ಸೇರಿದಂತೆ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಜಿಲ್ಲೆಯಾದ್ಯಂತ 27,212 ರೈತರು 3,17,917 ಕ್ವಿಂಟಲ್ ಕೊಬ್ಬರಿ ಮಾರಾಟಕ್ಕೆ ಹೆಸರು ನೋಂದಣಿ ಮಾಡಿದ್ದಾರೆ. ಆರಂಭದಲ್ಲಿ ಒಂದು ಕೇಂದ್ರದಲ್ಲಿ ದಿನವೊಂದಕ್ಕೆ 100 ಕ್ವಿಂಟಲ್‌ನಿಂದ 150 ಕ್ವಿಂಟಲ್ ಕೊಬ್ಬರಿ ಖರೀದಿಸಲಾಗುತ್ತದೆ. ಪ್ರತಿದಿನ 10ರಿಂದ 15 ರೈತರು ಕೊಬ್ಬರಿ ಮಾರಾಟ ಮಾಡಬಹುದು. ಈಗಾಗಲೇ, ನೋಂದಣಿ ಮಾಡಿಕೊಂಡಿರುವ ಕೇಂದ್ರಗಳಲ್ಲಿಯೇ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

ಎಲ್ಲಾ ಖರೀದಿ ಕೇಂದ್ರಗಳ ಬಳಿ ಏಪ್ರಿಲ್ 6ರ ವರೆಗೆ ಮಾರುಕಟ್ಟೆಗೆ ಕೊಬ್ಬರಿ ತರಬೇಕಿರುವ ರೈತರ ಪಟ್ಟಿ ಪ್ರಕಟಿಸ ಲಾಗಿದೆ. ಹೆಸರು ನೋಂದಣಿ ಮಾಡಿಕೊಂಡಿರುವ ಆಧಾರದ ಮೇಲೆ ಪಟ್ಟಿ ಹಾಕಲಾಗಿದೆ. ಎಲ್ಲ ರೈತರು ಒಂದೇ ದಿನ ಕೇಂದ್ರಗಳ ಹತ್ತಿರ ಬಂದು ಕಾಯುವುದನ್ನು ತಪ್ಪಿಸುವ ಉದ್ದೇಶದಿಂದ ಮುಂಚಿತವಾಗಿಯೇ ರೈತರಿಗೆ ಮಾಹಿತಿ ನೀಡಲಾಗಿದೆ.

₹6,329 ಕೋಟಿ ತೆರಿಗೆ ಮರುಪಾವತಿ ನಿರೀಕ್ಷೆ: ಇನ್ಫೊಸಿಸ್

ನವದೆಹಲಿ (ಪಿಟಿಐ): ಆದಾಯ ತೆರಿಗೆ ಇಲಾಖೆಯಿಂದ ₹6,329 ಕೋಟಿಯಷ್ಟು ತೆರಿಗೆ ಮರುಪಾವತಿಯನ್ನು (ರೀಫಂಡ್) ನಿರೀಕ್ಷಿಸಲಾಗುತ್ತಿದೆ ಎಂದು ದೇಶದ ಎರಡನೇ ಅತಿದೊಡ್ಡ ಐ.ಟಿ ಸೇವಾ ಕಂಪನಿಯಾದ ಇನ್ಫೊಸಿಸ್ ತಿಳಿಸಿದೆ.

2007–08ರಿಂದ 2015–16, 2017–18 ಹಾಗೂ 2018–19ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಆದಾಯ ತೆರಿಗೆ ಇಲಾಖೆಯಿಂದ ಮರುಪಾವತಿಯ ಆದೇಶ ಸ್ವೀಕರಿಸಲಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ತೆರಿಗೆ ಪಾವತಿ ಎಷ್ಟು?: 2022–23ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ಒಟ್ಟು ₹2,763 ಕೋಟಿ, 2011–12ನೇ ಆರ್ಥಿಕ ವರ್ಷದಲ್ಲಿ ₹4 ಕೋಟಿ ತೆರಿಗೆ ಪಾವತಿಗೆ (ಬಡ್ಡಿ ಸೇರಿದಂತೆ) ಆದೇಶ ಸ್ವೀಕರಿಸಲಾಗಿದೆ. ಕಂಪನಿಯ ಅಂಗಸಂಸ್ಥೆಗಳು ₹277 ಕೋಟಿ ತೆರಿಗೆ ಬಾಧ್ಯತೆಯನ್ನು ಹೊಂದಿವೆ ಎಂದು ವಿವರಿಸಿದೆ.

ಜೊಮಾಟೊಗೆ ಜಿಎಸ್‌ಟಿ ನೋಟಿಸ್

ನವದೆಹಲಿ (ಪಿಟಿಐ): ಜಿಎಸ್‌ಟಿ, ಬಡ್ಡಿ, ದಂಡ ಸೇರಿ ಒಟ್ಟು ₹23.26 ಕೋಟಿ ಪಾವತಿಸುವಂತೆ ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯು, ಆನ್‌ಲೈನ್ ಆಹಾರ ವಿತರಣಾ ಸಂಸ್ಥೆಯಾದ ಜೊಮಾಟೊ ಕಂಪನಿಗೆ ನೋಟಿಸ್ ನೀಡಿದೆ.

ಇಲಾಖೆಯು 2018–19ನೇ ಸಾಲಿನ ತೆರಿಗೆ ಪಾವತಿ ಸಂಬಂಧ ಹೊರಡಿಸಿರುವ ಆದೇಶ ಪ್ರಶ್ನಿಸಿ ಸಕ್ಷಮ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ಜೊಮಾಟೊ ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ವ್ಯಾಟಿಕನ್‌ನ ಸೇಂಟ್ ಪೀಟರ್ ಸ್ಕ್ವೇರ್‌ನಲ್ಲಿ ಪೋಪ್ ಫ್ರಾನ್ಸಿಸ್ ಅವರ ನೇತೃತ್ವದಲ್ಲಿ ನಡೆದ ‘ಈಸ್ಟರ್ ಸಂಡೆ’ ಸಾಮೂಹಿಕ ಪ್ರಾರ್ಥನೆಯಲ್ಲಿ ಸೇರಿದ್ದ ಕ್ರೈಸ್ತರ ಸಮೂಹ –ಎ.ಪಿ ಚಿತ್ರ

ಈಸ್ಟರ್ ಸಂಡೆಯಂದೇ ‘ಲಿಂಗತ್ವ ಅಲ್ಪಸಂಖ್ಯಾತರ ದಿನ’ ಘೋಷಣೆಗೆ ಟೀಕೆ

ವಾಷಿಂಗ್ಟನ್ (ಎ.ಪಿ): ಪ್ರಸಕ್ತ ವರ್ಷ ‘ಈಸ್ಟರ್ ಸಂಡೇ’ ಆಗಿರುವ ಮಾರ್ಚ್ 31 ಅನ್ನು ‘ಲಿಂಗತ್ವ ಅಲ್ಪಸಂಖ್ಯಾತರ ದಿನ’ (ಟ್ರಾನ್ಸ್‌ಜೆಂಡರ್ ಡೇ ಆಫ್ ವಿಸಿಬಿಲಿಟಿ) ಎಂದು ಘೋಷಿಸಿದ್ದ ನಡೆಗೆ ಅಧ್ಯಕ್ಷ ಜೋ ಬೈಡನ್ ತೀವ್ರ ಟೀಕೆಗೆ ಗುರಿಯಾಗಿದ್ದಾರೆ.

ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರ ಪ್ರಚಾರ ಅಭಿಯಾನದ ತಂಡದವರು ಹಾಗೂ ಅಮೆರಿಕದ ಧಾರ್ಮಿಕ ಸಂಪ್ರದಾಯವಾದಿಗಳು ಬೈಡನ್ ಸರ್ಕಾರದ ಈ ತೀರ್ಮಾನದ ವಿರುದ್ಧ ಧ್ವನಿ ಎತ್ತಿದ್ದಾರೆ.

ದೇಶದಾದ್ಯಂತ ಇರುವ ಲಿಂಗತ್ವ ಅಲ್ಪಸಂಖ್ಯಾತರ ಜೀವನಮಟ್ಟ ಸುಧಾರಣೆ ಹಾಗೂ ಲಿಂಗ ಸಮಾನತೆ ಪರವಾಗಿ ಧ್ವನಿ ಎತ್ತಲು, ಎಲ್ಲ ಅಮೆರಿಕನ್ನರು ಮಾರ್ಚ್ 31ರಂದು ಒಂದುಗೂಡಬೇಕು ಎಂದು ಅಧ್ಯಕ್ಷ ಜೋ ಬೈಡನ್ ಶುಕ್ರವಾರ ಕರೆ ನೀಡಿದ್ದರು.

‘ಮಾರ್ಚ್ 31 ಈ ವರ್ಷ ‘ಈಸ್ಟರ್ನ್ ಸಂಡೆ’ ಆಗಿತ್ತು. ಇದು, ಕ್ರೈಸ್ತರ ಪ್ರಮುಖ ಧಾರ್ಮಿಕ ಆಚರಣೆ ದಿನ. ಧರ್ಮ ಸೂಕ್ಷ್ಮತೆ ಇಲ್ಲದ, ರೋಮನ್ ಕ್ಯಾಥೋಲಿಕ್ ಆದ ಬೈಡನ್ ಅವರ ನಿರ್ಧಾರ ಖಂಡನೀಯ. ಅವರು ಕ್ಷಮೆ ಕೇಳಬೇಕು’ ಎಂದು ಟ್ರಂಪ್ ಪ್ರಚಾರ ತಂಡ ಆಗ್ರಹಿಸಿದೆ.

‘ಅಮೆರಿಕದ ಲಕ್ಷಾಂತರ ಕ್ಯಾಥೋಲಿಕ್‌ಗಳು, ಕ್ರೈಸ್ತರು ‘ಈಸ್ಟರ್ ಸಂಡೆ’ಯನ್ನು ಯೇಸುವಿನ ಪುನರುತ್ಥಾನ ದಿನವಾಗಿ ಆಚರಿಸುತ್ತಾರೆ. ಅವರ ನಂಬಿಕೆಗಳಿಗೆ ಪೆಟ್ಟುಬಿದ್ದಿದೆ. ಇದಕ್ಕಾಗಿ ಕ್ಷಮೆ ಕೇಳಲಿ’ ಎಂದು ಪ್ರಚಾರ ತಂಡದ ಕಾರ್ಯದರ್ಶಿ ಕರೋಲೈನ್ ಲೀವಿಟ್ ಆಗ್ರಹಿಸಿದ್ದಾರೆ.

'ಲೋಕತಂತ್ರ ಉಳಿಸಿ' ರ್‍ಯಾಲಿಯಲ್ಲಿ ಸುನೀತಾ ಕೇಜ್ರಿವಾಲ್ ಹೇಳಿಕೆ

'ದಬ್ಬಾಳಿಕೆ ಹೆಚ್ಚು ದಿನ ನಡೆಯದು'

ನವದೆಹಲಿ (ಪಿಟಿಐ): ದಬ್ಬಾಳಿಕೆಯು ಕೆಲಸಕ್ಕೆ ಬರುವುದಿಲ್ಲ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜೈಲಿನಲ್ಲಿ ಹೆಚ್ಚು ದಿನ ಇರಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಅವರ ಪತ್ನಿ ಸುನೀತಾ ಕೇಜ್ರಿವಾಲ್ ಅವರು ದೆಹಲಿಯ ರಾಮಲೀಲಾ ಮೈದಾನದಲ್ಲಿ 'ಇಂಡಿಯಾ' ಮೈತ್ರಿಕೂಟ ಆಯೋಜಿಸಿದ್ದ 'ಲೋಕತಂತ್ರ ಉಳಿಸಿ' ರ್‍ಯಾಲಿಯಲ್ಲಿ ಹೇಳಿದರು.

ಜೈಲಿನಲ್ಲಿ ಇರುವ ತಮ್ಮ ಪತಿ ಕಳುಹಿಸಿದ್ದ ಸಂದೇಶವನ್ನು ಅವರು ಓದಿಹೇಳಿದರು. ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕೇ ಎಂದೂ ಸುನೀತಾ ಅವರು ಅಲ್ಲಿ ಸೇರಿದ್ದವರನ್ನು ಕೇಳಿದರು.

'ಕೇಜ್ರಿವಾಲ್ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸುತ್ತಿದೆ. ಅವರು ರಾಜೀನಾಮೆ ನೀಡಬೇಕೇ? ಅವರ ಬಂಧನಕ್ಕೆ ಸಮರ್ಥನೆ ಇದೆಯೇ? ಅವರು ಸಿಂಹ. ಅವರನ್ನು ಜೈಲಿನಲ್ಲಿ ಬಹುಕಾಲ ಇರಿಸಿಕೊಳ್ಳಲು ಆಗುವುದಿಲ್ಲ' ಎಂದು ಸುನೀತಾ ಹೇಳಿದರು.

ತಮ್ಮ ಪತಿಯನ್ನು ಆಶೀರ್ವದಿಸಿದ್ದಕ್ಕಾಗಿ ಸುನೀತಾ ಜನರಿಗೆ ಧನ್ಯವಾದ ಅರ್ಪಿಸಿದರು. ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿದ್ದಾರೆ.

'ಇಂಡಿಯಾ' ಒಕ್ಕೂಟದ ಪರವಾಗಿ ಕೇಜ್ರಿವಾಲ್ ಅವರು ಆರು ಗ್ಯಾರಂಟಿಗಳನ್ನು ತಮ್ಮ ಸಂದೇಶದಲ್ಲಿ ಉಲ್ಲೇಖಿಸಿದ್ದಾರೆ. ನಿರಂತರ ವಿದ್ಯುತ್ ಪೂರೈಕೆ, ಬಡವರಿಗೆ ಉಚಿತವಾಗಿ ವಿದ್ಯುತ್ ಪೂರೈಕೆ, ಸರ್ಕಾರಿ ಶಾಲೆಗಳು, ರೈತರಿಗೆ ಕನಿಷ್ಠ ಬೆಂಬಲ ಬೆಲೆ ಮತ್ತು ದೆಹಲಿಗೆ ಪೂರ್ಣಪ್ರಮಾಣದ ರಾಜ್ಯದ ಸ್ಥಾನಮಾನ ಅವರ ಗ್ಯಾರಂಟಿಗಳಲ್ಲಿ ಸೇರಿವೆ.

'ದೆಹಲಿಯ ಜನರು ಕಳೆದ 75 ವರ್ಷಗಳಿಂದ ಅನ್ಯಾಯ ಎದುರಿಸಿದ್ದಾರೆ. ಅವರ ಸರ್ಕಾರದ ಕೈಕಾಲು ಕಟ್ಟಿಹಾಕಲಾಗಿತ್ತು. ಇಂಡಿಯಾ ಮೈತ್ರಿಕೂಟವು ಅಧಿಕಾರಕ್ಕೆ ಬಂದಲ್ಲಿ ದೆಹಲಿಗೆ ಪೂರ್ಣಪ್ರಮಾಣದ ರಾಜ್ಯದ ಸ್ಥಾನಮಾನ ನೀಡಲಾಗುತ್ತದೆ. ಇಂಡಿಯಾ ಮೈತ್ರಿಕೂಟಕ್ಕೆ ನೀವು ಒಂದು ಅವಕಾಶ ನೀಡಿದಲ್ಲಿ ನಾವು ಮಹಾನ್ ರಾಷ್ಟ್ರದ ನಿರ್ಮಾಣ ಮಾಡುತ್ತೇವೆ' ಎಂದು ಸುನೀತಾ ಅವರು ಕೇಜ್ರಿವಾಲ್ ಅವರ ಸಂದೇಶ ಓದುವಾಗ ಹೇಳಿದರು.

ಸುನೀತಾ ಅವರು ರಾಜಕೀಯ ರ್‍ಯಾಲಿಯೊಂದರಲ್ಲಿ ಭಾಷಣ ಮಾಡಿದ್ದು ಇದೇ ಮೊದಲು. 'ತಾಯಿ ಭಾರತಿಗೆ ನೋವಾಗಿದೆ. ಜನರಿಗೆ ನಿರಂತರ ವಿದ್ಯುತ್ ಸಿಗದೆ ಇದ್ದಾಗ ಅಥವಾ ಚಿಕಿತ್ಸೆ ಸಿಗದೆ ಯಾರಾದರೂ ಮೃತಪಟ್ಟಾಗ ಆಕೆಗೆ ನೋವಾಗುತ್ತದೆ' ಎಂದು ಸುನೀತಾ ಹೇಳಿದರು.

ರಾಮ–ರಾವಣನ ಕಥೆ ನೆನಪಿಸಿದ ಪ್ರಿಯಾಂಕಾ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆಯು ಸಮಾನ ನೆಲೆಯಲ್ಲಿ ನಡೆಯುವುದನ್ನು ಖಾತರಿಪಡಿಸಬೇಕು ಎಂದು ಚುನಾವಣಾ ಆಯೋಗವನ್ನು 'ಇಂಡಿಯಾ' ಮೈತ್ರಿಕೂಟ ಒತ್ತಾಯಿಸಿದೆ.

ಅಲ್ಲದೆ, ಬಿಜೆಪಿಯು ಪ್ರಜಾತಂತ್ರಕ್ಕೆ ವಿರುದ್ಧವಾದ ರೀತಿಯಲ್ಲಿ ಅಡ್ಡಿಗಳನ್ನು ಸೃಷ್ಟಿಸುವ ಕೆಲಸ ಮಾಡುತ್ತಿದ್ದರೂ ಒಕ್ಕೂಟವು ಹೋರಾಡಿ, ಜಯಗಳಿಸಿ, ದೇಶದ ಪ್ರಜಾತಂತ್ರವನ್ನು ಉಳಿಸಲಿದೆ ಎಂದು ಹೇಳಿದೆ.

ಇಲ್ಲಿನ ರಾಮಲೀಲಾ ಮೈದಾನದಲ್ಲಿ ಭಾನುವಾರ ನಡೆದ 'ಲೋಕತಂತ್ರ ಉಳಿಸಿ' ರ್‍ಯಾಲಿಯಲ್ಲಿ ಮೈತ್ರಿಕೂಟದ ಬೇಡಿಕೆಗಳನ್ನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಓದಿಹೇಳಿದರು.

'ನಾನು ಬಾಲ್ಯದಿಂದಲೂ ರಾಮಲೀಲಾ ಮೈದಾನಕ್ಕೆ ಬರುತ್ತಿದ್ದೇನೆ. ಪ್ರತಿವರ್ಷ ಇಲ್ಲಿ ರಾವಣನ ಪ್ರತಿಕೃತಿಯನ್ನು ದಹಿಸಲಾಗುತ್ತದೆ' ಎಂದು ಪ್ರಿಯಾಂಕಾ ನೆನಪಿಸಿಕೊಂಡರು.

'ನಾನು ಚಿಕ್ಕವಳಿದ್ದಾಗ ನನ್ನ ಅಜ್ಜಿ ಇಂದಿರಾ ಅವರ ಜೊತೆ ಇಲ್ಲಿಗೆ ಬರುತ್ತಿದ್ದೆ. ಅವರು ನನಗೆ ರಾಮಾಯಣದ ಕಥೆ ಹೇಳುತ್ತಿದ್ದರು. ಇಂದು ಅಧಿಕಾರದಲ್ಲಿ ಇರುವವರು ತಮ್ಮನ್ನು ರಾಮಭಕ್ತರು ಎಂದು ಕರೆದುಕೊಳ್ಳುತ್ತಾರೆ. ಅವರಿಗೆ ಒಂದಿಷ್ಟು ಮಾತು ಹೇಳಬೇಕು ಎಂದು ನನಗೆ ಅನ್ನಿಸಿತು. ಒಂದು ಸಾವಿರ ವರ್ಷಗಳ ಹಿಂದಿನ ಕಥೆಯನ್ನು ಹಾಗೂ ಅದರ ಸಂದೇಶವನ್ನು ನಾನು ಅವರಿಗೆ ಹೇಳಬೇಕು...' ಎಂದರು.

'ರಾಮನು ಸತ್ಯಕ್ಕಾಗಿ ಹೋರಾಟ ನಡೆಸಿದಾಗ ಅವನಲ್ಲಿ ಅಧಿಕಾರ, ಸಂಪನ್ಮೂಲ ಅಥವಾ ಒಂದು ರಥ ಕೂಡ ಇರಲಿಲ್ಲ. ಆದರೆ, ರಾವಣನ ಬಳಿ ರಥಗಳು, ಸಂಪನ್ಮೂಲ, ಸೇನೆ, ಚಿನ್ನ ಇದ್ದವು. ರಾಮನ ಬಳಿ ಸತ್ಯ, ಭರವಸೆ, ನಂಬಿಕೆ, ಪ್ರೀತಿ, ದಯೆ, ತಾಳ್ಮೆ, ಧೈರ್ಯ, ವಿನಯ ಇದ್ದವು. ಅಧಿಕಾರ ಶಾಶ್ವತ ಅಲ್ಲ, ಅಹಂಕಾರವು ನುಚ್ಚುನೂರಾಗುತ್ತದೆ ಎಂಬ ಸಂದೇಶವನ್ನು ರಾಮನ ಜೀವನ ನೀಡುತ್ತದೆ ಎಂಬುದನ್ನು ನಾನು ಅಧಿಕಾರದಲ್ಲಿ ಇರುವವರಿಗೆ ಹಾಗೂ ಪ್ರಧಾನಿ ಮೋದಿ ಅವರಿಗೆ ಹೇಳಲು ಬಯಸುತ್ತೇನೆ' ಎಂದು ಹೇಳಿದರು.

ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರ ಪತ್ನಿ ಕಲ್ಪನಾ ಸೋರೇನ್, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪತ್ನಿ ಸುನೀತಾ ಕೇಜ್ರಿವಾಲ್ ಮತ್ತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು 'ಇಂಡಿಯಾ' ಮೈತ್ರಿಕೂಟ ದೆಹಲಿಯ ರಾಮಲೀಲಾ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಬಂಧನ ವಿರುದ್ಧ 'ಇಂಡಿಯಾ' ಒಂದು

ಒಂದನೇ ಪುಟದಿಂದ...

'ಲೋಕತಂತ್ರ ಉಳಿಸಿ' ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಎಲ್ಲ ನಾಯಕರು, 'ದೇಶದ ಪ್ರಜಾಪ್ರಭುತ್ವಕ್ಕೆ ಸಂಚಕಾರ ಎದುರಾಗಿದೆ' ಎಂದು ಕಳವಳ ವ್ಯಕ್ತಪಡಿಸಿದರು. 'ಬಿಜೆಪಿಯು ಕೇಂದ್ರ ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ಪ್ರಜಾಪ್ರಭುತ್ವವನ್ನು ನಾಶಪಡಿಸುತ್ತಿದೆ' ಎಂದೂ ಆರೋಪಿಸಿದರು.

ಭಾರತದ ಪ್ರಜಾಪ್ರಭುತ್ವವನ್ನು ಉಳಿಸಲು ಮತ್ತು ಗೆಲ್ಲಿಸಲು 'ಇಂಡಿಯಾ' ಒಕ್ಕೂಟ ಹೋರಾಟ ಮಾಡುತ್ತದೆ ಎಂಬ ಬದ್ಧತೆಯನ್ನು ಎಲ್ಲ ನಾಯಕರೂ ಈ ವೇಳೆ ವ್ಯಕ್ತಪಡಿಸಿದರು.

'ಪ್ರಜಾಪ್ರಭುತ್ವ ಬೇಕೊ, ಸರ್ವಾಧಿಕಾರ ಬೇಕೊ': ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ನಿಮಗೆ ಪ್ರಜಾಪ್ರಭುತ್ವ ಬೇಕೊ ಅಥವಾ ಸರ್ವಾಧಿಕಾರ ಬೇಕೊ ಎಂಬುದನ್ನು ನಿರ್ಧರಿಸಿ. ಸರ್ವಾಧಿಕಾರವನ್ನು ಬೆಂಬಲಿಸುವವರನ್ನು ದೇಶದಿಂದ ಹೊರಹಾಕಬೇಕಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

> **ಆರ್‌ಎಸ್‌ಎಸ್– ಬಿಜೆಪಿಯು ವಿಷಕಾರಿಯಾಗಿದ್ದು, ದೇಶವನ್ನು ನಾಶಮಾಡುತ್ತಿವೆ. ಎಲ್ಲ ವಿಪಕ್ಷಗಳು ಒಟ್ಟಾಗಿ, ಬಿಜೆಪಿಯನ್ನು ಸೋಲಿಸಬೇಕಿದೆ**
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಸಿಪಿಎಂನ ಸೀತಾರಾಂ ಯೆಚೂರಿ, 'ಇಂದು ಇಲ್ಲಿ ಭಾರತದ ರಾಜಕೀಯದ ಹೊಸ ಶಕ್ತಿ ಉದಯಿಸಿದೆ. ಸ್ವಾತಂತ್ರ್ಯದ ಘೋಷಣೆ ಮೊಳಗುತ್ತಿದೆ. ನಮ್ಮ ಸ್ವಾತಂತ್ರ್ಯವೇ ನಮ್ಮ ಸಂವಿಧಾನ ಮತ್ತು ಗಣರಾಜ್ಯವನ್ನು ರಕ್ಷಿಸಲಿದ್ದು, ಅದನ್ನು ನಾವು ಪಡೆಯುತ್ತೇವೆ' ಎಂದರು. ಟಿಎಂಸಿ ಸಂಸದ ಡೆರೆಕ್ ಒಬ್ರಾಯನ್, 'ಇದು ಬಿಜೆಪಿ ವಿರುದ್ಧ ಪ್ರಜಾಪ್ರಭುತ್ವದ ಹೋರಾಟವಾಗಿದೆ' ಎಂದು ಸಾರಿದರು. ಟಿಎಂಸಿಯು 'ಇಂಡಿಯಾ' ಒಕ್ಕೂಟದ ಭಾಗವಾಗಿದ್ದು, ಮುಂದುವರಿಯುತ್ತದೆ' ಎಂದು ಹೇಳಿದರು.

ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು, 'ಬಿಜೆಪಿಯು ಈ ಬಾರಿ 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವುದಾಗಿ ಹೇಳುತ್ತಿದೆ. ಹಾಗಾದರೆ ನಿಮಗೆ ಎಎಪಿ ನಾಯಕನ ಕಂಡರೆ ಹೆದರಿಕೆ ಏಕೆ' ಎಂದು ಪ್ರಶ್ನಿಸಿದರು.

'ನೀವು ಚುನಾಯಿತ ಮುಖ್ಯಮಂತ್ರಿಗಳನ್ನು ಜೈಲಿಗೆ ಕಳುಹಿಸಿದ್ದೀರಿ. ಭಾರತೀಯರಷ್ಟೇ ಅಲ್ಲ, ಇಡೀ ವಿಶ್ವವೇ ಇದನ್ನು ಟೀಕಿಸುತ್ತಿದೆ' ಎಂದು ಹೇಳುವ ಮೂಲಕ ಅವರು ವಿಶ್ವಸಂಸ್ಥೆ, ಅಮೆರಿಕ ಮತ್ತು ಜರ್ಮನಿಯ ಪ್ರತಿಕ್ರಿಯೆಗಳನ್ನು ಪರೋಕ್ಷವಾಗಿ ಉಲ್ಲೇಖಿಸಿದರು.

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೋರೇನ್ ಅವರ ಪತ್ನಿ ಕಲ್ಪನಾ ಸೋರೇನ್, ಪಂಜಾಬಿನ ಮುಖ್ಯಮಂತ್ರಿ ಭಗವಂತ ಮಾನ್, ಎನ್‌ಸಿ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ, ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಭಾಗವಹಿಸಿದ್ದರು.

'ಇಂಡಿಯಾ' ಮೈತ್ರಿಕೂಟದ ಬೇಡಿಕೆಗಳು

- ಚುನಾವಣಾ ಆಯೋಗವು ಚುನಾವಣೆಯಲ್ಲಿ ಸ್ಪರ್ಧೆಯು ಸಮಾನ ನೆಲೆಯಲ್ಲಿ ನಡೆಯುವುದನ್ನು ಖಾತರಿಪಡಿಸಬೇಕು.
- ಚುನಾವಣೆಯ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಂಡು ಜಾರಿ ನಿರ್ದೇಶನಾಲಯ, ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆ ಕ್ರಮ ಕೈಗೊಳ್ಳುವುದನ್ನು ಆಯೋಗವು ತಡೆಯಬೇಕು.
- ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಹೇಮಂತ್ ಸೋರೇನ್ ಮತ್ತು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ತಕ್ಷಣ ಬಿಡುಗಡೆ ಮಾಡಬೇಕು.
- ವಿರೋಧ ಪಕ್ಷಗಳ ಹಣಕಾಸಿನ ಮೂಲಗಳನ್ನು ಬಲಪ್ರಯೋಗದ ಮೂಲಕ ಬತ್ತಿಸುವ ಕೆಲಸ ತಕ್ಷಣವೇ ನಿಲ್ಲಬೇಕು.
- ಬಿಜೆಪಿಯು ಚುನಾವಣಾ ಬಾಂಡ್ ಯೋಜನೆಯ ಮೂಲಕ 'ಸುಲಿಗೆ' ನಡೆಸಿರುವುದನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಮೂಲಕ ತನಿಖೆಗೆ ಒಳಪಡಿಸಬೇಕು.

ಬೆದರಿಕೆಗಳಿಗೆ ಬಗ್ಗುವುದಿಲ್ಲ: ಪ್ರಧಾನಿ

ಮೀರತ್ (ಪಿಟಿಐ): ಲೋಕಸಭಾ ಚುನಾವಣೆಯು ಎರಡು ಗುಂಪುಗಳ ನಡುವಿನ ಹೋರಾಟವಾಗಿದ್ದು, ಒಂದು ಗುಂಪು (ಎನ್‌ಡಿಎ) ಭ್ರಷ್ಟಾಚಾರವನ್ನು ಬೇರು ಸಮೇತ ಕಿತ್ತೊಗೆಯಲು ಪ್ರಯತ್ನಿಸುತ್ತಿದ್ದರೆ, ಮತ್ತೊಂದು ಗುಂಪು ('ಇಂಡಿಯಾ') ಭ್ರಷ್ಟರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಪ್ರತಿಕ್ರಿಯಿಸಿದರು.

ಮೀರತ್‌ನಲ್ಲಿ ಚುನಾವಣಾ ರ್‍ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ತಮ್ಮ ಮೇಲೆ ದಾಳಿ ಮಾಡುವ ಮೂಲಕ ಭ್ರಷ್ಟಾಚಾರದ ವಿರುದ್ಧದ ಯುದ್ಧವನ್ನು ತಡೆಯಲಾಗದು ಎಂದು ವಿರೋಧ ಪಕ್ಷಗಳಿಗೆ ಎಚ್ಚರಿಕೆ ಕೊಟ್ಟರು.

ನೃತ್ಯ ಪ್ರದರ್ಶನ

ಅಂತರರಾಷ್ಟ್ರೀಯ ಲಿಂಗತ್ವ ಅಲ್ಪಸಂಖ್ಯಾತರ ದಿನದ ಅಂಗವಾಗಿ ಪ್ರಯಾಗ್‌ರಾಜ್‌ನಲ್ಲಿ ಭಾನುವಾರ ನಡೆದ ರ್‍ಯಾಲಿಯಲ್ಲಿ ಲಿಂಗತ್ವ ಅಲ್ಪಸಂಖ್ಯಾತರು ನೃತ್ಯ ಪ್ರದರ್ಶಿಸಿದರು —ಪಿಟಿಐ ಚಿತ್ರ

'ಅಪಾಚೆ ಹೆಲಿಕಾಪ್ಟರ್‌ಗಳಿಂದ ಸಾಮರ್ಥ್ಯ ವೃದ್ಧಿ'

ಮುಂಬೈ (ಪಿಟಿಐ): 'ವಾಯುಪಡೆಗೆ ಈಚೆಗಷ್ಟೇ ಸೇರಿಸಿರುವ ಅಪಾಚೆ ಹೆಲಿಕಾಪ್ಟರ್‌ಗಳು ಸೇನೆಯ ಪಶ್ಚಿಮ ವಲಯದಲ್ಲಿ ವಾಯುದಾಳಿ ಬಲವನ್ನು ಹೆಚ್ಚಿಸಲಿವೆ' ಎಂದು ಸೇನೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ಸಂದರ್ಶನ ನೀಡಿರುವ ದಕ್ಷಿಣ ವಲಯದ ಜನರಲ್ ಆಫೀಸರ್ ಇನ್ ಚೀಫ್ ಲೆಫ್ಟಿನೆಂಟ್ ಜನರಲ್ ಎ.ಕೆ. ಸಿಂಗ್ ಅವರು, 'ಅಪಾಚೆ ಹೆಲಿಕಾಪ್ಟರ್‌ಗಳು ಭಿನ್ನ ಹವಾಮಾನ ಪರಿಸ್ಥಿತಿ, ಭೂ ಪರಿಸ್ಥಿತಿಯಲ್ಲೂ ಕಾರ್ಯನಿರ್ವಹಿಸಲು ಸಮರ್ಥವಾಗಿವೆ. ಸೇನಾ ಕಾರ್ಯಾಚರಣೆಯ ಕಾರ್ಯತತ್ಪರತೆ ಮೇಲೆ ಈ ಹೆಲಿಕಾಪ್ಟರ್‌ಗಳು ಗುರುತರ ಪ್ರಭಾವ ಬೀರಲಿವೆ' ಎಂದು ಹೇಳಿದರು.

ಮಧ್ಯಮ ತೂಕದ, ದಾಳಿ ನಡೆಸಬಲ್ಲ ಈ ಹೆಲಿಕಾಪ್ಟರ್ ಅನ್ನು ದಕ್ಷಿಣ ಕಮಾಂಡ್ ವಲಯಕ್ಕೆ ಇದೇ ಮಾರ್ಚ್ 15ರಂದು ಮೊದಲ ಬಾರಿಗೆ ಪರಿಚಯಿಸಲಾಯಿತು. ಈ ವಲಯಕ್ಕೆ ಅಪಾಚೆ ಎಚ್–64ಇ ಹೆಲಿಕಾಪ್ಟರ್‌ಗಳನ್ನು ಒದಗಿಸಲಾಗುತ್ತದೆ ಎಂದರು.

ಒಟ್ಟು ಆರು ಹೆಲಿಕಾಪ್ಟರ್‌ಗಳನ್ನು ಭಾರತಕ್ಕೆ ಒದಗಿಸಲು ಬೋಯಿಂಗ್ ಸಂಸ್ಥೆ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಎರಡು ಹಂತಗಳಲ್ಲಿ ಈ ಹೆಲಿಕಾಪ್ಟರ್‌ಗಳು ದೇಶಕ್ಕೆ ಬಂದಿಳಿಯಲಿವೆ ಎಂದು ತಿಳಿಸಿದರು.

ಈ ಹೆಲಿಕಾಪ್ಟರ್‌ಗಳನ್ನು ಹಲವು ಬಗೆಯ ಕಾರ್ಯಾಚರಣೆಗಳಿಗೆ ಅನುಕೂಲವಾಗುವಂತೆ ಅಭಿವೃದ್ಧಿಪಡಿಸಲಾಗಿದೆ. ಟ್ಯಾಂಕ್ ನಿರೋಧಕ ಕ್ಷಿಪಣಿಗಳನ್ನು ಉಡಾವಣೆ ಮಾಡುವ ಮತ್ತು ಆಗಸದಿಂದಲೇ ವಿಮಾನ ಹಾಗೂ ಹೆಲಿಕಾಪ್ಟರ್‌ಗಳನ್ನು ಗುರಿಯಾಗಿಸಿಕೊಂಡು ಕ್ಷಿಪಣಿ ಉಡಾವಣೆ ಸಾಮರ್ಥ್ಯವನ್ನು ಈ ಹೆಲಿಕಾಪ್ಟರ್ ಹೊಂದಿವೆ ಎಂದರು.

ಪಂಜಾಬ್: ಕೇಕ್ ಸೇವಿಸಿ 10ರ ಬಾಲಕಿ ಸಾವು

ಪಟಿಯಾಲ (ಪಿಟಿಐ): ತನ್ನ ಹುಟ್ಟುಹಬ್ಬದಂದು ಕೇಕ್ ತಿಂದಿದ್ದ 10 ವರ್ಷ ವಯಸ್ಸಿನ ಬಾಲಕಿಯೊಬ್ಬಳು ಮೃತಪಟ್ಟಿರುವ ಘಟನೆ ಈಚೆಗೆ ಇಲ್ಲಿ ನಡೆದಿದೆ. ವಿಷಾಹಾರ ಸೇವನೆಯಿಂದ ಸಾವು ಸಂಭವಿಸಿದೆ ಎಂದು ಅಂದಾಜಿಸಲಾಗಿದ್ದು, ಕೇಕ್ ಅಂಗಡಿಯ ಮಾಲೀಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಮೃತ ಬಾಲಕಿಯ ತಾಯಿ ದಾಖಲಿಸಿರುವ ದೂರಿನ ಆಧಾರದಲ್ಲಿ ಭಾರತೀಯ ದಂಡ ಸಂಹಿತೆಯ ಸೆಕ್ಷನ್ 273 (ವಿಷಕಾರಿ ಆಹಾರ ಅಥವಾ ಪಾನೀಯ ಮಾರಾಟ) ಮತ್ತು 304ಎ (ನಿರ್ಲಕ್ಷ್ಯದಿಂದ ಸಾವಿಗೆ ಕಾರಣವಾಗುವುದು) ಅಡಿ ದೂರು ದಾಖಲಿಸಲಾಗಿದೆ. ಬಾಲಕಿಯ ದೇಹದ ಜೀರ್ಣಾಂಗ ವ್ಯವಸ್ಥೆಯ ಮಾದರಿಗಳನ್ನು ಪರೀಕ್ಷೆಗಾಗಿ ಕಳಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೇಕನ್ನು ಮಾರ್ಚ್ 24ರಂದು ಆನ್‌ಲೈನ್ ಮೂಲಕ ತರಿಸಲಾಗಿತ್ತು. ಕೇಕು ತಿಂದ ಕೆಲಹೊತ್ತಿನಲ್ಲಿ ಕುಟುಂಬದ ಎಲ್ಲಾ ಸದಸ್ಯರೂ ವಾಂತಿ ಮಾಡಿಕೊಳ್ಳಲು ಆರಂಭಿಸಿದರು. ತಮ್ಮ ಮಗಳು ಮರುದಿನ ಬೆಳಿಗ್ಗೆ ಮೃತಪಟ್ಟಳು ಎಂದು ತಾಯಿಯು ದೂರಿನಲ್ಲಿ ಹೇಳಿದ್ದರು.

'ಬಾಲಕಿಯ ಕುಟುಂಬದ ಸದಸ್ಯರು ಗುರುವಾರ ನನ್ನನ್ನು ಭೇಟಿಯಾಗಿದ್ದರು. ಪೊಲೀಸ್ ಮತ್ತು ಆರೋಗ್ಯ ಇಲಾಖೆಯಲ್ಲಿ ದೂರು ದಾಖಲಿಸುವಂತೆ ಅವರಿಗೆ ಹೇಳಿದ್ದೆ. ಅವರ ಮನೆಗೆ ಹೋಗಿ ಕೇಕ್‌ನ ಮಾದರಿಗಳನ್ನು ಸಂಗ್ರಹಿಸುವಂತೆ ಆಹಾರ ತಪಾಸಣೆ ತಂಡಕ್ಕೆ ಸೂಚಿಸಿದ್ದೇನೆ' ಎಂದು ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ಅಸ್ಸಾಂನ 19 ಕಲೆಗಳಿಗೆ ಜಿ.ಐ. ಗರಿ

ಗುವಾಹಟಿ (ಪಿಟಿಐ): ಅಸ್ಸಾಂನ ಸುಮಾರು 19 ಉತ್ಪನ್ನ ಮತ್ತು ಕರಕುಶಲ ಕಲೆಗಳಿಗೆ ಭೌಗೋಳಿಕ ಮಾನ್ಯತೆ (ಜಿ.ಐ.) ದೊರಕಿದೆ ಎಂದು ರಾಜ್ಯದ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಅವರು ಭಾನುವಾರ ತಿಳಿಸಿದ್ದಾರೆ.

ಈ 19 ಉತ್ಪನ್ನಗಳಲ್ಲಿ 13 ಉತ್ಪನ್ನಗಳು ರಾಜ್ಯದ ಅತ್ಯಂತ ದೊಡ್ಡ ಬುಡಕಟ್ಟು ಸಮುದಾಯವಾದ ಬೋಡೊ ಸಮುದಾಯಕ್ಕೆ ಸಂಬಂಧಿಸಿವೆ.

ಈ ಕುರಿತು 'ಎಕ್ಸ್'ನಲ್ಲಿ ಮೊದಲಿಗೆ ಮಾಹಿತಿ ಹಂಚಿಕೊಂಡಿರುವ ಅವರು, 'ನಬಾರ್ಡ್, ಆರ್‌ಒ ಗುವಾಹಟಿ ಮತ್ತು ಜಿಐ ತಜ್ಞ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ರಜನಿ ಕಾಂತ್ ಅವರ ಬೆಂಬಲದೊಂದಿಗೆ ಅಸ್ಸಾಂನ ಆರು ಸಾಂಪ್ರದಾಯಿಕ ಕಲೆಗಳಿಗೆ ಜಿಐ ಮನ್ನಣೆ ದೊರಕಿದೆ' ಎಂದು ಬರೆದಿದ್ದಾರೆ.

'ರಾಜ್ಯದ ಬಿಹು ಢೋಲ್ (ವಾದ್ಯ), ಜಾಪಿ (ಸಾಂಪ್ರದಾಯಿಕ ಟೋಪಿ), ಸರ್ಥೇಬಾಡಿ ಕಲೆ, ಅಶಾರಿಕಾಂಡಿ ಟೆರ್ರಾಕೋಟ ಕಲೆ, ಅಸ್ಸಾಂ ಮಡಕೆ ಕಲೆ, ಕೈಮಗ್ಗದ ಉತ್ಪನ್ನಗಳಿಗೆ ಈ ಮನ್ನಣೆ ದೊರಕಿದೆ. ಈ ಉತ್ಪನ್ನಗಳು ರಾಜ್ಯದ ಇತಿಹಾಸದೊಂದಿಗೆ ಬೆಸೆದುಕೊಂಡಿವೆ ಮತ್ತು ಪ್ರತಿದಿನ ಸುಮಾರು 1 ಲಕ್ಷ ಜನರ ಬದುಕಿಗೆ ಆಸರೆಯಾಗಿವೆ' ಎಂದಿದ್ದರು.

ಬಳಿಕ ಮತ್ತೊಂದು ಪೋಸ್ಟ್ ಮಾಡಿರುವ ಅವರು, 'ಬೋಡೊ ಸಮುದಾಯದ 13 ಉತ್ಪನ್ನಗಳಿಗೂ ಭೌಗೋಳಿಕ ಮಾನ್ಯತೆ ದೊರೆತಿದೆ' ಎಂದಿದ್ದಾರೆ.

2022ರ ದ್ವಿತೀಯಾರ್ಧದಲ್ಲಿ ಜಿ.ಐ. ಮನ್ನಣೆಗಾಗಿ ಅರ್ಜಿ ಸಲ್ಲಿಸಲಾಗಿತ್ತು. ಶನಿವಾರವಷ್ಟೇ ಜಿ.ಐ. ದೃಢೀಕರಣ ದೊರಕಿದೆ.

ರಾಜ್ಯಪಾಲರ ವರ್ತನೆಗೆ ಆಕ್ಷೇಪ

ಹೈದರಾಬಾದ್ (ಪಿಟಿಐ): ಚುನಾಯಿತ ಶಾಸಕರು ಅಂಗೀಕರಿಸಿದ ಮಸೂದೆಗಳನ್ನು ಅನಿರ್ದಿಷ್ಟಾವಧಿವರೆಗೆ ಹಿಡಿದಿಟ್ಟುಕೊಳ್ಳುವ ರಾಜ್ಯಪಾಲರ ವರ್ತನೆ ಸರಿಯಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ಎಚ್ಚರಿಸಿದರು. ಅವರು, ಪಂಜಾಬ್ ರಾಜ್ಯಪಾಲರನ್ನು ಒಳಗೊಂಡ ಪ್ರಕರಣವೊಂದನ್ನು ಉಲ್ಲೇಖಿಸಿ ಈ ಕುರಿತು ಹೇಳಿಕೆ ನೀಡಿದರು.

ಇಲ್ಲಿನ ಎನ್‌ಎಎಲ್‌ಎಸ್‌ಎಆರ್ ಕಾನೂನು ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ ನ್ಯಾಯಾಲಯಗಳು ಮತ್ತು ಸಂವಿಧಾನ ಅಧಿವೇಶನದ ಐದನೇ ಆವೃತ್ತಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಪ್ರಧಾನ ಭಾಷಣ ಮಾಡಿದರು.

ಮಹಾರಾಷ್ಟ್ರ ವಿಧಾನಸಭೆಯ ಪ್ರಕರಣವನ್ನೂ ಉಲ್ಲೇಖಿಸಿದ ಅವರು, ಸಾಕಷ್ಟು ಪುರಾವೆಗಳ ಕೊರತೆಯ ನಡುವೆಯೂ ರಾಜ್ಯಪಾಲರು ಸದನದ ಬಲಾಬಲ ಪರೀಕ್ಷೆಗೆ ಸೂಚಿಸಿದ್ದು, ಅತಿಕ್ರಮಣದ ಮತ್ತೊಂದು ನಿದರ್ಶನ ಎಂದು ಹೇಳಿದರು.

ರಾಜ್ಯಪಾಲರು ತೆಗೆದುಕೊಂಡ ಕ್ರಮಗಳನ್ನು ಅಥವಾ ಅವರಿಂದಾದ ಲೋಪಗಳನ್ನು ಸಾಂವಿಧಾನಿಕ ನ್ಯಾಯಾಲಯಗಳ ಮುಂದೆ ಪರಿಗಣನೆಗೆ ತರುವುದು, ಸಂವಿಧಾನದ ಅಡಿಯಲ್ಲಿ ಆರೋಗ್ಯಕರ ಬೆಳವಣಿಗೆಯಲ್ಲ ಎಂದರು.

ನೋಟು ರದ್ದತಿ ಕುರಿತು ಪ್ರಸ್ತಾಪ: ₹500 ಮತ್ತು ₹1,000 ಮುಖಬೆಲೆಯ ನೋಟುಗಳನ್ನು ರದ್ದುಪಡಿಸಿದ ಪ್ರಕರಣದಲ್ಲಿ ತಾನು ಅಸಮ್ಮತಿ ಸೂಚಿಸಿದ್ದನ್ನೂ ಅವರು ಈ ವೇಳೆ ಪ್ರಸ್ತಾಪಿಸಿದರು. '2016ರಲ್ಲಿ ಕೇಂದ್ರ ಸರ್ಕಾರ ಈ ನಿರ್ಧಾರ ಪ್ರಕಟಿಸಿದಾಗ, ₹500 ಮತ್ತು 1,000 ಮುಖಬೆಲೆಯ ನೋಟುಗಳು ಒಟ್ಟಾರೆ ಕರೆನ್ಸಿಯಲ್ಲಿ ಶೇ 86ರಷ್ಟಿದ್ದವು. ಅದರಲ್ಲಿ ಶೇ 98ರಷ್ಟು ವಾಪಸಾದವು. ಕಪ್ಪು ಹಣವನ್ನು ಸಕ್ರಮವಾಗಿ ಪರಿವರ್ತಿಸುವ ಒಂದು ಉತ್ತಮ ಮಾರ್ಗ ಇದು ಎಂದು ಭಾವಿಸಿದ್ದೆವು. ಆದರೆ, ಸಾಮಾನ್ಯ ವ್ಯಕ್ತಿಯ ಸಂಕಟವು ನಿಜಕ್ಕೂ ನನ್ನ ಮನ ಕಲಕಿತು. ಆದ್ದರಿಂದ ನಾನು ಅಸಮ್ಮತಿ ಸೂಚಿಸಬೇಕಾಯಿತು' ಎಂದು ಅವರು ವಿವರಿಸಿದರು.

ಅಡ್ವಾಣಿಗೆ 'ಭಾರತ ರತ್ನ' ಪ್ರದಾನ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬಿಜೆಪಿಯ ಹಿರಿಯ ನಾಯಕ, ಮಾಜಿ ಉಪಪ್ರಧಾನಿ ಎಲ್.ಕೆ. ಅಡ್ವಾಣಿ ಅವರಿಗೆ ಅವರ ನಿವಾಸದಲ್ಲಿ ಭಾನುವಾರ ಭಾರತ ರತ್ನ ಪ್ರದಾನ ಮಾಡಿದರು.

ಈ ವೇಳೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಗೃಹ ಸಚಿವ ಅಮಿತ್ ಶಾ ಮತ್ತು ಅಡ್ವಾಣಿ ಕುಟುಂಬಸ್ಥರು ಉಪಸ್ಥಿತರಿದ್ದರು ಎಂದು ರಾಷ್ಟ್ರಪತಿ ಭವನವು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ತಿಳಿಸಿದೆ.

ಕಾರ್ಯಕ್ರಮದ ಬಗ್ಗೆ 'ಎಕ್ಸ್'ನಲ್ಲಿ ಸಂತಸ ವ್ಯಕ್ತಪಡಿಸಿದ ಮೋದಿ ಅವರು, 'ಅಡ್ವಾಣಿ ಅವರಿಗೆ ಭಾರತ ರತ್ನ ಪ್ರದಾನ ಮಾಡಿದ ಕ್ಷಣವನ್ನು ಕಣ್ತುಂಬಿಕೊಂಡಿರುವುದು ತುಂಬಾ ವಿಶೇಷವಾಗಿದೆ. ಇದು ಅವರು ದೇಶದ ಪ್ರಗತಿಗೆ ನೀಡಿದ ಕೊಡುಗೆಗೆ ಸಂದ ಗೌರವ' ಎಂದಿದ್ದಾರೆ.

'ಸಾರ್ವಜನಿಕ ಸೇವೆಗಾಗಿ ಅಡ್ವಾಣಿಯವರು ಮಾಡಿದ ತ್ಯಾಗ ಮತ್ತು ನವ ಭಾರತ ನಿರ್ಮಾಣದಲ್ಲಿನ ಅವರ ಪಾತ್ರ ಇತಿಹಾಸದಲ್ಲಿ ಅಚ್ಚೊತ್ತಿದೆ. ಕಳೆದ ಕೆಲವು ದಶಕಗಳಲ್ಲಿ ಅವರ ಜೊತೆಯಲ್ಲಿ ಕೆಲಸ ಮಾಡಲು ಅವಕಾಶ ಸಿಕ್ಕಿರುವುದಕ್ಕೆ ಹೆಮ್ಮೆಯಾಗುತ್ತಿದೆ' ಎಂದರು.

ಮಾಜಿ ಉಪಪ್ರಧಾನಿ ಎಲ್‌.ಕೆ.ಅಡ್ವಾಣಿ ಅವರಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ಭಾರತ ರತ್ನ ಪ್ರದಾನ ಮಾಡಿದರು. ಪ್ರಧಾನಿ ನರೇಂದ್ರ ಮೋದಿ ಇದ್ದಾರೆ —ಪಿಟಿಐ ಚಿತ್ರ

ರಾಷ್ಟ್ರಪತಿಗೆ ಅಗೌರವ: ಕಾಂಗ್ರೆಸ್

ನವದೆಹಲಿ (ಪಿಟಿಐ): 'ಎಲ್.ಕೆ. ಅಡ್ವಾಣಿ ಅವರಿಗೆ ಭಾರತ ರತ್ನ ಪ್ರದಾನ ಮಾಡುವಾಗ, ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಅಗೌರವ ತೋರಿದ್ದಾರೆ' ಎಂದು ಕಾಂಗ್ರೆಸ್ ಆರೋಪಿಸಿದೆ.

ಚಿತ್ರಗಳನ್ನು ಜೈರಾಮ್ ರಮೇಶ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ಚಿತ್ರಗಳಲ್ಲಿ ಅಡ್ವಾಣಿ ಮತ್ತು ಮೋದಿ ಕುರ್ಚಿಗಳಲ್ಲಿ ಆಸೀನರಾಗಿದ್ದರೆ, ರಾಷ್ಟ್ರಪತಿ ನಿಂತಿದ್ದಾರೆ. 'ನಮ್ಮ ರಾಷ್ಟ್ರಪತಿಗೆ ಅಗೌರವ ತೋರಲಾಗಿದೆ. ಪ್ರಧಾನಿ ನಿಂತಿರಬೇಕಿತ್ತು' ಎಂದು ಚಿತ್ರಗಳ ಜೊತೆಗೆ ಉಲ್ಲೇಖಿಸಿದ್ದಾರೆ.

'ಕೈ'ಗೆ ಮತ್ತೊಂದು ಶಾಕ್

ಒಂದನೇ ಪುಟದಿಂದ...

ಕೆಲ ನಾಯಕರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ನಡೆದ ಶೋಧ ಕಾರ್ಯಾಚರಣೆಗಳ ವೇಳೆಯಲ್ಲಿ ವಶಪಡಿಸಿಕೊಂಡ ಡೈರಿಗಳಲ್ಲಿ ಉಲ್ಲೇಖಿಸಿರುವ 'ದೇಣಿಗೆ ನಮೂದು'ಗಳಿಗೂ ಕಾಂಗ್ರೆಸ್ ಮೇಲೆ ತೆರಿಗೆ ವಿಧಿಸಲಾಗಿದೆ ಎಂದು ಮೂಲಗಳು ಮಾಹಿತಿ ನೀಡಿವೆ. ಈಗಾಗಲೇ, ಹಿಂದಿನ ವರ್ಷಗಳ ತೆರಿಗೆ ಬೇಡಿಕೆಗಳಿಗೆ ಸಂಬಂಧಿಸಿದಂತೆ ತೆರಿಗೆ ಅಧಿಕಾರಿಗಳು ಪಕ್ಷದ ಖಾತೆಯಿಂದ ₹135 ಕೋಟಿ ಹಿಂಪಡೆದಿದ್ದಾರೆ.

ಇದನ್ನು ಪ್ರಶ್ನಿಸಿ, ಸಲ್ಲಿಸಲಾಗಿರುವ ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ವಿಚಾರಣೆಗೆ ಬರುವ ಸಾಧ್ಯತೆ ಇದೆ ಎಂದು ಕಾಂಗ್ರೆಸ್ ಮುಖಂಡರು ತಿಳಿಸಿದ್ದಾರೆ.

ಶೋಧ ಕಾರ್ಯಾಚರಣೆ ಸಂದರ್ಭದಲ್ಲಿ ದೊರೆತಿರುವ ಇತರ ಡೈರಿಗಳಲ್ಲಿ ಬಿಜೆಪಿ ನಾಯಕರ ಹೆಸರುಗಳೂ ಇವೆ. ಆದರೆ ಇಲ್ಲಿರುವ 'ದೇಣಿಗೆ ನಮೂದು'ಗಳಿಗೆ ಯಾವುದೇ ತೆರಿಗೆ ವಿಧಿಸಲಾಗಿಲ್ಲ ಎಂದು ಕಾಂಗ್ರೆಸ್ ನಾಯಕರು ದೂರಿದ್ದಾರೆ.

'ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಪ್ರಮುಖ ವಿರೋಧ ಪಕ್ಷವನ್ನು ಆರ್ಥಿಕವಾಗಿ ದುರ್ಬಲಗೊಳಿಸಲಾಗುತ್ತಿದೆ. ಬಿಜೆಪಿ ತೆರಿಗೆ ಭಯೋತ್ಪಾದನೆಯಲ್ಲಿ ತೊಡಗಿದೆ. ಇದರಿಂದಾಗಿ, ಚುನಾವಣೆಯಲ್ಲಿ ಸರ್ವರಿಗೂ ಸಮಾನ ಅವಕಾಶ ತತ್ವವು ಪಾಲನೆ ಆಗುತ್ತಿಲ್ಲ. ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು' ಎಂದು ಕಾಂಗ್ರೆಸ್ ನಾಯಕರು ಆಗ್ರಹಿಸಿದ್ದಾರೆ.

ಗ್ಯಾನವಾಪಿ ಮಸೀದಿ ಸಮಿತಿ ಅರ್ಜಿ ವಿಚಾರಣೆ ಇಂದು

ನವದೆಹಲಿ (ಪಿಟಿಐ): ಗ್ಯಾನವಾಪಿ ಮಸೀದಿಯಲ್ಲಿಯ 'ವ್ಯಾಸ ತೆಹಖಾನಾ'ದಲ್ಲಿ ಪೂಜೆ ಸಲ್ಲಿಸಲು ಹಿಂದೂ ಧರ್ಮೀಯರಿಗೆ ಅವಕಾಶ ನೀಡಿ ಕೆಳಹಂತದ ನ್ಯಾಯಾಲಯವೊಂದು ನೀಡಿರುವ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಎತ್ತಿಹಿಡಿದಿರುವುದನ್ನು ಪ್ರಶ್ನಿಸಿ ಮಸೀದಿ ನಿರ್ವಹಣಾ ಸಮಿತಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರನ್ನು ಒಳಗೊಂಡ ನ್ಯಾಯಪೀಠವು ಅಂಜುಮಾನ್ ಇಂತೆಝಾಮಿಯಾ ಮಸ್ಜಿದ್ ಸಮಿತಿಯ ಅರ್ಜಿಯ ವಿಚಾರಣೆ ನಡೆಸಲಿದೆ.

ಕೆಳಹಂತದ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಮಸೀದಿ ಸಮಿತಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ಫೆ.26ರಂದು ತಿರಸ್ಕರಿಸಿತ್ತು. ಜೊತೆಗೆ, ವ್ಯಾಸ ತೆಹಖಾನಾದಲ್ಲಿ ಹಿಂದೂಗಳು ಪೂಜೆ ಸಲ್ಲಿಸುವುದನ್ನು 1993ರ ಉತ್ತರ ಪ್ರದೇಶ ಸರ್ಕಾರವು ನಿಷೇಧಿಸಿದ್ದನ್ನು 'ಅಕ್ರಮ' ಎಂದೂ ಕರೆದಿತ್ತು.

ಇನ್ನುಮುಂದೆ ಹಿಂದೂ ಅರ್ಚಕರೊಬ್ಬರು ಅಲ್ಲಿ ಪೂಜೆ ನೆರವೇರಿಸಬಹುದು ಎಂದು ನ್ಯಾಯಾಲಯ ಆದೇಶಿಸಿತ್ತು.

ಬಿಜೆಪಿ ಸಂಸದ ದುಬೆ ವಿರುದ್ಧ ಎಫ್‌ಐಆರ್

ದೇವಘರ (ಜಾರ್ಖಂಡ್), (ಪಿಟಿಐ): ದೇವಘರ ಜಿಲ್ಲೆಯ ಖಾಸಗಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು ಮೋಸದಿಂದ ಅತಿಕ್ರಮಿಸಿಕೊಂಡ ಆರೋಪದ ಮೇಲೆ ಬಿಜೆಪಿಯ ಗೊಡ್ಡಾ ಸಂಸದ ನಿಶಿಕಾಂತ್ ದುಬೆ ಮತ್ತು ಅವರ ಪತ್ನಿ ಸೇರಿದಂತೆ ಒಟ್ಟು ಏಳು ಜನರ ವಿರುದ್ಧ ಶನಿವಾರ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ನಿಶಿಕಾಂತ್ ದುಬೆ

'ದುಬೆ ಮತ್ತು ಅವರ ಪತ್ನಿ ಬಾಬಾ ಬೈದ್ಯನಾಥ್ ಮೆಡಿಕಲ್ ಟ್ರಸ್ಟ್ ಮೂಲಕ ತಮ್ಮ ಸಂಸ್ಥೆಗೆ ಸಂಬಂಧಿಸಿದ ದಾಖಲೆಗಳನ್ನು ದುರುಪಯೋಗಡಿಸಿಕೊಂಡು ಹರಾಜು ಮೂಲಕ ಆಸ್ಪತ್ರೆಯನ್ನು ವಶಪಡಿಸಿಕೊಂಡಿದ್ದಾರೆ' ಎಂದು ಶಿವ ದತ್ತ ಶರ್ಮಾ ಎಂಬುವವರು ಆರೋಪಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ದೇವಘರ ಜಿಲ್ಲೆಯ ಜಸಿಡೀಹ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಾಗಿ ನಾನು ₹ 93 ಕೋಟಿ ಸಾಲ ಮಾಡಿದ್ದೇನೆ. ಮೆಡಿಕಲ್ ಕೌನ್ಸಿಲ್ ಆಫ್ ಇಂಡಿಯಾದಿಂದ ಕಾಲೇಜಿಗೆ ಅನುಮೋದನೆ ಪಡೆಯಲು ವಿಫಲವಾದ ನಂತರ, ಈ ಸಾಲದ ಮೊತ್ತವನ್ನು ಬ್ಯಾಂಕ್ ನಿಷ್ಕ್ರಿಯ ಎಂದು ಘೋಷಿಸಿತು. ಈ ಸಂದರ್ಭದಲ್ಲಿ ನನ್ನನ್ನು ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಲಿಕ್ಕಾಗಿ ಪಾಲುದಾರರನ್ನು ಹುಡುಕುವ ಭರವಸೆ ನೀಡಿದ ದುಬೆ, ನನ್ನಿಂದ ₹ 20 ಲಕ್ಷ ಪಡೆದಿದ್ದರು. ಆದರೆ, ಕಳೆದ ಡಿಸೆಂಬರ್‌ನಲ್ಲಿ ಕಾಲೇಜನ್ನು ಹರಾಜಿಗೆ ಹಾಕಿದ್ದಾರೆ. ಈ ಹರಾಜಿನಲ್ಲಿ ಬಾಬಾ ಬೈದ್ಯನಾಥ್ ಮೆಡಿಕಲ್ ಟ್ರಸ್ಟ್ ಒಂದೇ ಭಾಗಿಯಾಗಿತ್ತು' ಎಂದು ಶರ್ಮಾ ಎಫ್‌ಐಆರ್‌ನಲ್ಲಿ ಉಲ್ಲೇಖಿಸಿದ್ದಾರೆ.

'ಜಾರ್ಖಂಡ್‌ನಲ್ಲಿ ಕಾಂಗ್ರೆಸ್ ಮತ್ತು ಜೆಎಂಎಂ ನೇತೃತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನನ್ನ ವಿರುದ್ಧ ದಾಖಲಾದ 44ನೇ ಪ್ರಕರಣವಿದು. ಈ ವೈದ್ಯಕೀಯ ಕಾಲೇಜನ್ನು ಡಿಆರ್‌ಟಿ ನ್ಯಾಯಾಲಯದ ಹರಾಜಿನಲ್ಲಿ ಖರೀದಿಸಲಾಗಿದೆ. ಹೈಕೋರ್ಟ್ ಇದಕ್ಕೆ ಅನುಮತಿ ನೀಡಿದೆ. ನಾನು ಟ್ರಸ್ಟಿಯಲ್ಲ. ಬಿಜೆಪಿಯ ಸೈನಿಕ. ನನ್ನ ಮೇಲಿನ ಆರೋಪಗಳು ಸಾಬೀತಾದರೆ ರಾಜಕಾರಣದಿಂದ ನಿವೃತ್ತಿಯಾಗುವೆ' ಎಂದು ಲೋಕಸಭಾ ಚುನಾವಣೆಯಲ್ಲಿ ಮತ್ತೆ ಇದೇ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ದುಬೆ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಟೈಗರ್ ಟ್ರಯಂಫ್–24' ಕ್ಕೆ ತೆರೆ

ನವದೆಹಲಿ(ಪಿಟಿಐ): ಭಾರತ ಮತ್ತು ಅಮೆರಿಕ ಕಳೆದ 14 ದಿನಗಳಿಂದ ಕೈಗೊಂಡಿದ್ದ 'ದ್ವಿಪಕ್ಷೀಯ ಮೂರು ಪಡೆಗಳ' ಜಂಟಿ ಸಮರಾಭ್ಯಾಸ ಮತ್ತು 'ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ' (ಎಚ್‌ಎಡಿಆರ್) ಕಾರ್ಯಾಚರಣೆ ಮುಕ್ತಾಯಗೊಂಡಿತು ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಮಾರ್ಚ್ 18ರಿಂದ 30 ರವರೆಗೆ ಈ ಕಾರ್ಯಾಚರಣೆ ನಡೆಯಿತು. ಅಮೆರಿಕದ ಯುದ್ಧನೌಕೆ 'ಸಾಮರ್‌ಸೆಟ್'ನಲ್ಲಿ, ಸಮಾರೋಪ ಸಮಾರಂಭ ಮಾರ್ಚ್ 30ರಂದು ನೆರವೇರಿತು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆಂಧ್ರಪ್ರದೇಶದ ವಿಶಾಖಪಟ್ಟಣ ಹಾಗೂ ಕಾಕಿನಾಡದಲ್ಲಿ ನಡೆದ ತಾಲೀಮಿನ 2ನೇ ಆವೃತ್ತಿಯಲ್ಲಿ, ಎರಡೂ ದೇಶಗಳ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಪಾಲ್ಗೊಂಡು, ತಮ್ಮ ಶಕ್ತಿ ಪ್ರದರ್ಶನ ನೀಡಿದವು.

ಎರಡೂ ದೇಶಗಳ ಭದ್ರತಾ ಪಡೆಗಳ ಸಿಬ್ಬಂದಿ ಮಾರ್ಚ್ 25ರಂದು ಹಮ್ಮಿಕೊಂಡಿದ್ದ ಹೋಳಿ ಹಬ್ಬದಲ್ಲಿ ಪಾಲ್ಗೊಂಡಿದ್ದರು. ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಂಡಿದ್ದ ಹೋಳಿ ಆಚರಣೆಯು ಭಾರತದ ವೈವಿಧ್ಯಮಯ ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶ ಹೊಂದಿತ್ತು ಎಂದೂ ತಿಳಿಸಿದ್ದಾರೆ.

ರಷ್ಯಾ ಸೇನೆಯಲ್ಲಿರುವ ವ್ಯಕ್ತಿಯ ಕುಟುಂಬ ಸಂಪರ್ಕಿಸಿದ ಸಿಬಿಐ

ಶ್ರೀನಗರ (ಪಿಟಿಐ): ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಹೋರಾಡಲು ರಷ್ಯಾ ಸೇನೆ ನೇಮಕ ಮಾಡಿಕೊಂಡಿರುವ ಕಾಶ್ಮೀರ ಮೂಲದ ವ್ಯಕ್ತಿ ಆಜಾದ್ ಯೂಸುಫ್ ಕುಮಾರ್ (31) ಅವರ ಕುಟುಂಬ ಸದಸ್ಯರ ಹೇಳಿಕೆಗಳನ್ನು ಸಿಬಿಐ ದಾಖಲಿಸಿಕೊಂಡಿದೆ.

ಪುಲ್ವಾಮಾ ಮೂಲದ ಆಜಾದ್ ಎಂಜಿನಿಯರಿಂಗ್ ಪದವೀಧರರು. ಯೂಟ್ಯೂಬರ್ ಒಬ್ಬನು ದುಬೈನಲ್ಲಿ ಉತ್ತಮ ಉದ್ಯೋಗ ಕೊಡಿಸುವ ಆಮಿಷ ತೋರಿಸಿ, ರಷ್ಯಾ ಸೇನೆಗೆ ನೇಮಕ ಮಾಡಿದ್ದಾನೆ ಎಂದು ಆಜಾದ್ ಕುಟುಂಬ ಸದಸ್ಯರು ಪೊಲೀಸರಿಗೆ ದೂರು ನೀಡಿದ್ದರು. ಆ ಬಳಿಕ, 19 ಮಂದಿ ಮತ್ತು ವೀಸಾ ಏಜೆನ್ಸಿಯೊಂದರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಸಿಬಿಐ ಹೇಳಿಕೆ ದಾಖಲಿಸಿಕೊಂಡಿದೆ.

ಈ ಕುರಿತು ಆಜಾದ್ ಸಹೋದರ ಸಾಜದ್ ಅಹಮದ್ ಕುಮಾರ್ ಅವರು ಸುದ್ದಿಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ತಮ್ಮ ಸಹೋದರನ ಕುರಿತು ಸಿಬಿಐ ಅಧಿಕಾರಿಗಳು ಪ್ರಶ್ನೆ ಕೇಳಿದರು. ತನಿಖೆ ಸಲುವಾಗಿ ದೆಹಲಿಯ ಸಿಬಿಐ ಕಚೇರಿಗೆ ಹಾಜರಾಗುವಂತೆಯೂ ಹೇಳಿದರು. ಆರ್ಥಿಕ ಮುಗ್ಗಟ್ಟಿನ ಕಾರಣ ದೆಹಲಿಗೆ ಬರಲು ಸಾಧ್ಯವಿಲ್ಲ ಎಂದು ಹೇಳಿದ್ದಾಗಿ ಅವರು ಹೇಳಿದರು.

ಸಂಕಷ್ಟದಲ್ಲಿರುವ ಇನ್ನೂ 12 ಯುವಕರ ಕುಟುಂಬಗಳನ್ನೂ ಸಿಬಿಐ ಸಂಪರ್ಕಿಸಿದೆ ಎಂದು ಅವರು ಹೇಳಿದ್ದಾರೆ.

ಕಾಶ್ಮೀರದಲ್ಲಿ ದಾಖಲೆ ಸಂಖ್ಯೆಯಲ್ಲಿ ಪ್ರವಾಸಿಗರ ಆಗಮನ

ಸ್ಥಳೀಯರ ಹೋಮ್‌ಸ್ಟೇಗಳ ಹೆಚ್ಚಳ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಕಾಶ್ಮೀರದಲ್ಲಿ ದಾಖಲೆಯ ಸಂಖ್ಯೆಯಲ್ಲಿ ಪ್ರವಾಸಿಗರು ಬರತೊಡಗಿದ್ದು, ಅಲ್ಲಿನ ಪ್ರವಾಸಿಗರ ಮೂಲಸೌಕರ್ಯವೂ ಹೆಚ್ಚು ಹೆಚ್ಚು ಅಭಿವೃದ್ಧಿ ಕಾಣುತ್ತಿದೆ. ಇದೀಗ ಜಮ್ಮು–ಕಾಶ್ಮೀರದ ಸ್ಥಳೀಯ ಜನರು ತಮ್ಮ ವಸತಿ ಇರುವ ಸ್ಥಳಗಳಲ್ಲಿಯೇ ಹೋಮ್‌ಸ್ಟೇಗಳನ್ನು (ಪ್ರವಾಸಿಗರ ವಾಸತಾಣ) ಪ್ರಾರಂಭಿಸುತ್ತಿದ್ದಾರೆ. ಕಾಶ್ಮೀರ ಪ್ರವಾಸೋದ್ಯಮ ಇಲಾಖೆಯಲ್ಲಿ ಬರೋಬ್ಬರಿ 12,000 ಹೋಮ್‌ಸ್ಟೇ ಹಾಸಿಗೆಗಳನ್ನು ನೋಂದಾಯಿಸಲಾಗಿದೆ ಎಂದು ಇಲಾಖೆಯ ನಿರ್ದೇಶಕ ರಾಜಾ ಯಾಕೂಬ್ ಫಾರೂಕ್ ಅವರು ಬಹಿರಂಗಪಡಿಸಿದ್ದಾರೆ.

> **ಮುಖ್ಯಾಂಶಗಳು**
> - **ಅಭಿವೃದ್ಧಿ ಕಾಣುತ್ತಿರುವ ಮೂಲಸೌಕರ್ಯ**
> - **ತಾವಿರುವ ಸ್ಥಳದಲ್ಲೇ ಹೋಮ್‌ಸ್ಟೇ ಪ್ರಾರಂಭಿಸುತ್ತಿರುವ ಸ್ಥಳೀಯರು**
> - **ಹೋಮ್‌ಸ್ಟೇ ಪ್ರಾರಂಭಿಸಲು ಸರ್ಕಾರದಿಂದ ₹50,000 ಸಹಾಯಧನ**

ಸ್ಥಳೀಯರೇ ಹೋಮ್‌ಸ್ಟೇ ಪ್ರಾರಂಭಿಸುವುದರಿಂದ ಒಂದೆಡೆ ಪ್ರವಾಸಿಗರ ವಸತಿ ವೆಚ್ಚ ಅಗ್ಗವಾಗುವುದಲ್ಲದೇ ಸ್ಥಳೀಯರಿಗೂ ಆರ್ಥಿಕ ಸಹಾಯ ಸಿಗಲಿದೆ. ಜಮ್ಮು–ಕಾಶ್ಮೀರಕ್ಕೆ ಬರುತ್ತಿದ್ದ ಪ್ರವಾಸಿಗರು ಈವರೆಗೆ ತಮ್ಮ ವಸತಿ ಮತ್ತು ಇತರ ಮೂಲಸೌಕರ್ಯಗಳಿಗಾಗಿ ಪ್ರಮುಖ ನಗರಗಳು ಮತ್ತು ಪಟ್ಟಣಗಳ ಹೋಟೆಲ್‌ಗಳು ಮತ್ತು ರೆಸಾರ್ಟ್‌ಗಳನ್ನೇ ಅವಲಂಬಿಸಬೇಕಿತ್ತು.

'ಮಿಷನ್ ಯೂತ್' ಯೋಜನೆಯಡಿಯಲ್ಲಿ ಹೋಮ್‌ಸ್ಟೇಗಳನ್ನು ಸ್ಥಾಪಿಸಲು ಇಚ್ಛಿಸುವ ಯುವಕ–ಯುವತಿಯರಿಗೆ ಸರ್ಕಾರ ₹50,000 ಸಹಾಯಧನ ನೀಡುತ್ತದೆ.

ಕಾಶ್ಮೀರದ ಕೇರಾನ್, ತಂಗಧಾರ್, ಬಂಗಸ್ ಕಣಿವೆ, ಗುರೇಜ್, ದಾವರ್ ಮತ್ತು ಉರಿ ಸೇರಿದಂತೆ ಹಲವಾರು ಗಡಿಪ್ರದೇಶಗಳಲ್ಲಿ ಹೋಮ್‌ಸ್ಟೇ ಪ್ರಾರಂಭಿಸುವತ್ತ ಜನರು ಹೆಚ್ಚು ಗಮನ ಹರಿಸುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಈ ಹೋಮ್‌ಸ್ಟೇಗಳಿಗೆ ಭೇಟಿ ನೀಡಿದ ಪ್ರವಾಸಿಗರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ ಎಂದು ಫಾರೂಕ್ ತಿಳಿಸಿದರು.

ಸ್ಥಳೀಯರು ತಮ್ಮ ಹೋಮ್‌ಸ್ಟೇಗಳಿಗೆ ಬರುವ ಪ್ರವಾಸಿಗರನ್ನು ಬಹಳ ಆದರದಿಂದ ಕಾಣುತ್ತಾರೆ ಮತ್ತು ಅತಿಥಿಗಳಿಗೆ ಉತ್ತಮ ಸೇವೆ ನೀಡುತ್ತಾರೆ. ಹೋಮ್‌ಸ್ಟೇಗಳು ಪ್ರವಾಸಿಗರಿಗೆ ಕೇವಲ ವಸತಿ ತಾಣಗಳಲ್ಲದೇ ಸ್ಥಳೀಯ ಆಹಾರ, ಸಂಸ್ಕೃತಿ ಮತ್ತು ಆಚರಣೆಗಳನ್ನು ತಿಳಿದುಕೊಳ್ಳಲು ಸಹಕಾರಿ ಆಗಿವೆ.

ಮೋಹಿತ್ ಶರ್ಮಾ ಅಮೋಘ ದಾಳಿ • ಸಾಯಿ ಸುದರ್ಶನ್, ಮಿಲ್ಲರ್ ಮಿಂಚಿನ ಆಟ

ಸನ್‌ರೈಸರ್ಸ್ 'ಓಟ'ಕ್ಕೆ ಗುಜರಾತ್ ತಡೆ

ಅಹಮದಾಬಾದ್ (ಪಿಟಿಐ): ಆಲ್‌ರೌಂಡ್ ಆಟವಾಡಿದ ಗುಜರಾತ್ ಟೈಟನ್ಸ್ ತಂಡವು ಸನ್‌ರೈಸರ್ಸ್ ಹೈದರಾಬಾದ್ ತಂಡದ 'ಓಟ'ಕ್ಕೆ ತಡೆಯೊಡ್ಡಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆತಿಥೇಯ ಗುಜರಾತ್ ತಂಡವು 7 ವಿಕೆಟ್‌ಗಳಿಂದ ಜಯಿಸಿತು.

ಅನುಭವಿ ವೇಗಿ ಮೋಹಿತ್ ಶರ್ಮಾ (25ಕ್ಕೆ3) ಉತ್ತಮ ಬೌಲಿಂಗ್ ಮುಂದೆ ಸನ್‌ರೈಸರ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 162 ರನ್ ಗಳಿಸಿತು. ತನ್ನ ಕಳೆದ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು ಐಪಿಎಲ್ ಇತಿಹಾಸದ ಗರಿಷ್ಠ ಮೊತ್ತ (277) ದಾಖಲಿಸಿತ್ತು. ಆದರೆ ಇಲ್ಲಿ ಮೋಹಿತ್ ಹಾಗೂ ಉಳಿದ ಬೌಲರ್‌ಗಳು ಸನ್‌ರೈಸರ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದರು.

ಗುರಿ ಬೆನ್ನಟ್ಟಿದ ಗುಜರಾತ್ ತಂಡವು ಸಾಯಿ ಸುದರ್ಶನ್ (45; 36ಎ) ಮತ್ತು ಡೇವಿಡ್ ಮಿಲ್ಲರ್ (ಔಟಾಗದೆ 44) ಅವರ ಬ್ಯಾಟಿಂಗ್ ಬಲದಿಂದ 19.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 168 ರನ್ ಗಳಿಸಿತು.

ಮಧ್ಯಾಹ್ನ ಆರಂಭವಾದ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಸನ್‌ರೈಸರ್ಸ್ ತಂಡದ ಬ್ಯಾಟರ್‌ಗಳು ದೊಡ್ಡ ಮೊತ್ತ ಗಳಿಸಲಿಲ್ಲ. ಅಭಿಷೇಕ್ ಶರ್ಮಾ (29; 20ಎ) ಮತ್ತು ಅಬ್ದುಲ್ ಸಮದ್ (29; 14ಎ) ಅವರಿಬ್ಬರೇ ಗರಿಷ್ಠ ಸ್ಕೋರರ್‌ಗಳು. ಮಯಂಕ್ ಅಗರವಾಲ್ ಮತ್ತು ಟ್ರಾವಿಸ್ ಹೆಡ್ ಮೊದಲ ವಿಕೆಟ್ ಜೊತೆಯಾಟದಲ್ಲಿ 34 ರನ್ ಸೇರಿಸಿದರು. ಐದನೇ ಓವರ್‌ನಲ್ಲಿ ಅಜ್ಮತ್‌ವುಲ್ಲಾ ಬೌಲಿಂಗ್‌ನಲ್ಲಿ ಮಯಂಕ್ ಔಟಾದರು. 10 ಓವರ್‌ಗಳಾಗುಷ್ಟರಲ್ಲಿ ತಂಡವು 3 ವಿಕೆಟ್ ನಷ್ಟಕ್ಕೆ 74 ರನ್ ಗಳಿಸಿತ್ತು.

ಕಳೆದ ಪಂದ್ಯದಲ್ಲಿ ಅಬ್ಬರಿಸಿದ್ದ ಅಭಿಷೇಕ್, ಏಡನ್ ಮರ್ಕರಂ, ಹೆನ್ರಿಚ್ ಕ್ಲಾಸೆನ್ ಅವರನ್ನು ಕಟ್ಟಿಹಾಕುವಲ್ಲಿ ಬೌಲರ್‌ಗಳು ಸಫಲರಾದರು.

ಗುಜರಾತ್ ತಂಡಕ್ಕೆ ವೃದ್ಧಿಮಾನ್ ಸಹಾ ಮತ್ತು ನಾಯಕ ಗಿಲ್ ಉತ್ತಮ ಆರಂಭ ನೀಡಿದರು. ನಾಲ್ಕು ಓವರ್‌ಗಳಲ್ಲಿ 36 ರನ್ ಸೇರಿಸಿದರು. ಐದನೇ ಓವರ್‌ನಲ್ಲಿ ಸಹಾ ಮತ್ತು ಹತ್ತನೇ ಓವರ್‌ನಲ್ಲಿ ಗಿಲ್ ಔಟಾದರು. ಈ ಹಂತದಲ್ಲಿ ಸಾಯಿ ಸುದರ್ಶನ್ ಮತ್ತು ಮಿಲ್ಲರ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು.

ಆದರೂ ಸನ್‌ರೈಸರ್ಸ್ ಬೌಲರ್‌ಗಳು ಎದುರಾಳಿ ಬ್ಯಾಟರ್‌ಗಳ ಮೇಲೆ ಒತ್ತಡ ಹಾಕುವ ಪ್ರಯತ್ನ ಮಾಡಿದರು. ಇದರಿಂದಾಗಿ ಪಂದ್ಯದ ಫಲಿತಾಂಶ ಕೊನೆಯ ಓವರ್‌ನಲ್ಲಿ ನಿರ್ಧಾರವಾಯಿತು. ಮಿಲ್ಲರ್ ಮತ್ತು ವಿಜಯಶಂಕರ್ (14 ರನ್) ತಂಡವನ್ನು ಗೆಲುವಿನ ದಡ ಸೇರಿಸಿದರು. ಆತಿಥೇಯ ತಂಡವು ಟೂರ್ನಿಯಲ್ಲಿ ಎರಡನೇ ಜಯ ಸಾಧಿಸಿತು.

ಗುಜರಾತ್ ಟೈಟನ್ಸ್ ತಂಡದ ಮೋಹಿತ್ ಶರ್ಮಾ ಅವರು ವಿಕೆಟ್ ಗಳಿಸಿದ ನಂತರ ಕಾಣಿಸಿಕೊಂಡಿದ್ದು ಹೀಗೆ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್: 8 ವಿಕೆಟ್‌ಗೆ 162 (20 ಓವರುಗಳಲ್ಲಿ)
ಹೆಡ್ ಬಿ ನೂರ್ ಅಹ್ಮದ್ 19 (14ಎ, 4x3)
ಮಯಂಕ್ ಸಿ ನಲ್ಕಂಡೆ ಬಿ ಒಮರ್‌ಝೈ 16 (17ಎ 4x2)
ಅಭಿಷೇಕ್ ಸಿ ಗಿಲ್ ಬಿ ಶರ್ಮಾ 29 (20ಎ, 4x2, 6x2)
ಮರ್ಕರಂ ಸಿ ರಶೀದ್ ಬಿ ಯಾದವ್ 17 (19ಎ)
ಕ್ಲಾಸೆನ್ ಬಿ ರಶೀದ್ ಖಾನ್ 24 (13ಎ, 4x1, 6x2)
ಶಾಬಾಜ್ ಸಿ ತೆವಾಟಿಯಾ ಬಿ ಶರ್ಮಾ 22 (20ಎ, 4x1, 6x1)
ಸಮದ್ ರನ್‌ಔಟ್ (ನೂರ್/ ಸಹಾ) 29 (14ಎ, 4x3, 6x1)
ಸುಂದರ್ ಸಿ ರಶೀದ್ ಬಿ ಶರ್ಮಾ 0 (1ಎ)
ಕಮಿನ್ಸ್ ಔಟಾಗದೇ 2 (2ಎ)
ಇತರೆ: 4 (ಬೈ 2, ವೈಡ್ 2)
ವಿಕೆಟ್ ಪತನ: 1–13 (ಮಯಂಕ್ ಅಗರವಾಲ್, 4.2), 2–58 (ಟ್ರಾವಿಸ್ ಹೆಡ್, 6.4), 3–74 (ಅಭಿಷೇಕ್ ಶರ್ಮಾ, 9.6), 4–108 (ಹೆನ್ರಿಚ್ ಕ್ಲಾಸೆನ್, 13.4), 5–114 (ಏಡನ್ ಮರ್ಕರಂ, 14.4), 6–159 (ಶಾಬಾಜ್ ಅಹ್ಮದ್, 19.2), 7–159 (ವಾಷಿಂಗ್ಟನ್ ಸುಂದರ್, 19.3), 8–162 (ಅಬ್ದುಲ್ ಸಮದ್, 19.6)
ಬೌಲಿಂಗ್: ಅಜ್ಮತ್‌ಉಲ್ಲಾ ಒಮರ್‌ಝೈ 3–0–24–1; ಉಮೇಶ್ ಯಾದವ್ 3–0–28–1; ರಶೀದ್ ಖಾನ್ 4–0–33–1; ನೂರ್ ಅಹ್ಮದ್ 4–0–32–1; ಮೋಹಿತ್ ಶರ್ಮಾ 4–0–25–3; ದರ್ಶನ್ ನಲ್ಕಂಡೆ 2–0–18–0.

ಗುಜರಾತ್ ಟೈಟನ್ಸ್: 3 ವಿಕೆಟ್‌ಗೆ 168 (19.1 ಓವರುಗಳಲ್ಲಿ)
ವೃದ್ಧಿಮಾನ್ ಸಿ ಕಮಿನ್ಸ ಬಿ ಶಾಬಾಜ್ 25 (13ಎ,4x1, 6x2)
ಗಿಲ್ ಸಿ ಸಮದ್ ಬಿ ಮಾರ್ಕಂಡೆ 36 (28, 4x2, 6x1)
ಸುದರ್ಶನ್ ಸಿ ಅಭಿಷೇಕ್ ಬಿ ಕಮಿನ್ಸ್ 45 (36ಎ, 4x4, 6x1)
ಮಿಲ್ಲರ್ ಔಟಾಗದೇ 44 (27ಎ, 4x4, 6x2)
ವಿಜಯಶಂಕರ್ ಔಟಾಗದೇ 14 (11ಎ, 4x2)
ಇತರೆ: 4 (ವೈಡ್ 4)
ವಿಕೆಟ್ ಪತನ: 1–36 (ವೃದ್ಧಿಮಾನ್ ಸಹಾ, 4.1), 2–74 (ಶುಭಮನ್ ಗಿಲ್, 9.1), 3–138 (ಸಾಯಿ ಸುದರ್ಶನ್, 16.1)
ಬೌಲಿಂಗ್: ಭುವನೇಶ್ವರ ಕುಮಾರ್ 4–0–27–0; ಶಾಬಾಜ್ ಅಹ್ಮದ್ 2–0–20–1; ಜಯದೇವ್ ಉನದ್ಕತ್ 3.1–0–33–0; ವಾಷಿಂಗ್ಟನ್ ಸುಂದರ್ 3–0–27–0; ಮಯಂಕ್ ಮಾರ್ಕಂಡೆ 3–0–33–1; ಪ್ಯಾಟ್ ಕಮಿನ್ಸ್ 4–0–28–1
ಪಂದ್ಯದ ಆಟಗಾರ: ಮೋಹಿತ್ ಶರ್ಮಾ

ಫಲಿತಾಂಶ: ಗುಜರಾತ್ ಟೈಟನ್ಸ್ ತಂಡಕ್ಕೆ 7 ವಿಕೆಟ್ ಜಯ

ಡೆಲ್ಲಿ ತಂಡಕ್ಕೆ ಮೊದಲ ಜಯ

ರಿಷಭ್, ವಾರ್ನರ್ ಅರ್ಧಶತಕ • ಚೆನ್ನೈ ತಂಡಕ್ಕೆ ಸೋಲು

ವಿಶಾಖಪಟ್ಟಣ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಡೆಲ್ಲಿ ಕ್ಯಾಪಿಟಲ್ಸ್ ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಗೆಲುವಿನ ಖಾತೆಯನ್ನು ತೆರೆಯಿತು. ರಿಷಭ್ ಪಂತ್ ಸಾರಥ್ಯದ ತಂಡವು ಭಾನುವಾರ ನಡೆದ ಪಂದ್ಯದಲ್ಲಿ 20 ರನ್‌ಗಳಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮಣಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಇಳಿದ ಡೆಲ್ಲಿ ತಂಡಕ್ಕೆ ಪೃಥ್ವಿ ಶಾ (43; 27ಎ, 4X4, 6X2), ಡೇವಿಡ್ ವಾರ್ನರ್ (52; 35ಎ, 4X5, 6X3) ಮತ್ತು ರಿಷಭ್ (51; 32ಎ, 4x4, 6x3) ಬಲ ತುಂಬಿದರು. ಹೀಗಾಗಿ, 20 ಓವರ್‌ಗಳಲ್ಲಿ ತಂಡವು ಐದು ವಿಕೆಟ್‌ಗೆ 191 ರನ್ ಕಲೆ ಹಾಕಿತು.

ಕಠಿಣ ಸವಾಲನ್ನು ಬೆನ್ನಟ್ಟಿದ ಚೆನ್ನೈ ತಂಡಕ್ಕೆ ಖಲೀಲ್ ಅಹಮ್ಮದ್ ಆರಂಭದಲ್ಲೇ ಆಘಾತ ನೀಡಿದರು. 7 ರನ್ ಗಳಿಸುವಷ್ಟರಲ್ಲಿ ಆರಂಭಿಕ ಆಟಗಾರರಾದ ನಾಯಕ ಋತುರಾಜ್ ಗಾಯಕವಾಡ್ ಮತ್ತು ರಚಿನ್ ರವೀಂದ್ರ ಅವರನ್ನು ಕಳೆದುಕೊಂಡಿತು. ಈ ಎರಡು ವಿಕೆಟ್‌ಗಳೂ ಖಲೀಲ್ ಅಹಮ್ಮದ್ ಪಾಲಾದವು.

ನಂತರದಲ್ಲಿ ಅಜಿಂಕ್ಯ ರಹಾನೆ (45; 30ಎ, 4x5, 6x2) ಮತ್ತು ಡೆರಿಲ್ ಮಿಚೆಲ್ (34; 26ಎ, 4x1, 6x2) ಮೂರನೇ ವಿಕೆಟ್‌ಗೆ 68 ರನ್ ಸೇರಿಸಿ ಭರವಸೆ ಮೂಡಿಸಿದರು. ಅವರು ನಿರ್ಗಮಿಸಿದ ಬಳಿಕ ಶಿವಂ ದುಬೆ ಮತ್ತು ಶಮೀರ್ ರಿಜ್ವಿ ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ. ಆದರೆ, ಕೊನೆಯಲ್ಲಿ ಮಹೇಂದ್ರಸಿಂಗ್ ಧೋನಿ ಮತ್ತು ರವೀಂದ್ರ ಜಡೇಜ ಹೋರಾಟ ತೋರಿದರೂ ತಂಡವನ್ನು ಗೆಲುವಿನ ದಡಕ್ಕೆ ಸೇರಿಸಲು ಸಾಧ್ಯವಾಗಲಿಲ್ಲ. ನಿಗದಿತ ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 171 ರನ್ ಗಳಿಸಲಷ್ಟೇ ಶಕ್ತವಾಯಿತು. ಕ್ಯಾಪಿಟಲ್ಸ್ ಪರ ಮುಕೇಶ್ ಕುಮಾರ್ ಮೂರು ವಿಕೆಟ್ ಪಡೆದು ಮಿಂಚಿದರು. ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದ್ದ ಚೆನ್ನೈ ತಂಡಕ್ಕೆ ನಿರಾಸೆಯಾಯಿತು.

ಲಯಕ್ಕೆ ಪಂತ್: ಇದಕ್ಕೂ ಮೊದಲು ಡೆಲ್ಲಿ ತಂಡದ ಪೃಥ್ವಿ ಮತ್ತು ವಾರ್ನರ್ ಮೊದಲ ವಿಕೆಟ್ ಜೊತೆಯಾಟದಲ್ಲಿ 93 ರನ್ ಸೇರಿಸಿ ಉತ್ತಮ ಅಡಿಪಾಯ ಹಾಕಿದರು. ಹತ್ತನೇ ಓವರ್‌ನಲ್ಲಿ ವಾರ್ನರ್ ವಿಕೆಟ್ ಪಡೆದ ಮುಸ್ತಫಿಜುರ್ ಅವರು ಜೊತೆಯಾಟ ಮುರಿದರು. ಆದರೆ ಕ್ರೀಸ್‌ಗೆ ಬಂದ ರಿಷಭ್ ತಮ್ಮ ಹಳೆಯ ಆಟದ ವೈಭವ ಮೆರೆದರು.

ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಸುಮಾರು 15 ತಿಂಗಳು ಕ್ರಿಕೆಟ್‌ನಿಂದ ದೂರವಿದ್ದ ರಿಷಭ್ ಈ ಟೂರ್ನಿಯ ಮೂಲಕ ಮರಳಿದ್ದಾರೆ. ಕಳೆದ ಎರಡೂ ಪಂದ್ಯಗಳಲ್ಲಿ ಅವರು ರನ್ ಗಳಿಸಲು ಸ್ವಲ್ಪ ಕಷ್ಟಪಟ್ಟಿದ್ದರು. ಆದರೆ ಈ ಪಂದ್ಯದಲ್ಲಿ 159.38ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಕೊನೆಯ ಹಂತದ ಓವರ್‌ಗಳಲ್ಲಿ ಒಂದೆಡೆ ವಿಕೆಟ್‌ಗಳು ಪತನವಾಗುತ್ತಿದ್ದರೂ ರಿಷಭ್ ಮಾತ್ರ ದಿಟ್ಟತನದಿಂದ ಬೌಲರ್‌ಗಳನ್ನು ಎದುರಿಸಿದರು. ತಮ್ಮ ನೆಚ್ಚಿನ ರಿವರ್ಸ್ ಸ್ವೀಪ್, ಸ್ಕೂಪ್ ಹೊಡೆತಗಳನ್ನು ಪ್ರಯೋಗಿಸಿದರು. 19ನೇ ಓವರ್‌ನಲ್ಲಿ ಪಂತ್ ಅವರನ್ನು ಮಥೀಶ್ ಪಥಿರಾಣ ಔಟ್ ಮಾಡಿದರು.

ಈ ಸೋಲಿನೊಂದಿಗೆ ಚೆನ್ನೈ ತಂಡವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಿಂದ 2ನೇ ಸ್ಥಾನಕ್ಕೆ ಕುಸಿದರೆ, ಡೆಲ್ಲಿ 9ನೇ ಸ್ಥಾನದಿಂದ 7ನೇ ಸ್ಥಾನಕ್ಕೆ ಏರಿದೆ.

ಸಂಕ್ಷಿಪ್ತ ಸ್ಕೋರು: ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 191 (ಪೃಥ್ವಿ ಶಾ 43, ಡೇವಿಡ್ ವಾರ್ನರ್ 52, ರಿಷಭ್ ಪಂತ್ 51, ಮಿಚೆಲ್ ಮಾರ್ಷ್ 18; ಮಥೀಶ ಪಥಿರಾಣ 31ಕ್ಕೆ3, ರವೀಂದ್ರ ಜಡೇಜ 43ಕ್ಕೆ1, ಮುಸ್ತಫಿಜುರ್ ರೆಹಮಾನ್ 47ಕ್ಕೆ1). **ಚೆನ್ನೈ ಸೂಪರ್ ಕಿಂಗ್ಸ್:** 20 ಓವರ್‌ಗಳಲ್ಲಿ 6 ವಿಕೆಟ್‌ಗೆ 171 (ಅಜಿಂಕ್ಯ ರಹಾನೆ 45, ಡೆರಿಲ್ ಮಿಚೆಲ್ 34, ಮಹೇಂದ್ರ ಸಿಂಗ್ ಧೋನಿ ಔಟಾಗದೆ| 37, ರವೀಂದ್ರ ಜಡೇಜ ಔಟಾಗದೆ 21; ಮುಕೇಶ್ ಕುಮಾರ್ 21ಕ್ಕೆ 3, ಖಲೀಲ್ ಅಹಮ್ಮದ್ 21ಕ್ಕೆ 2). **ಪಂದ್ಯದ ಆಟಗಾರ:** ಖಲೀಲ್ ಅಹಮ್ಮದ್. **ಫಲಿತಾಂಶ:** ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ 20 ರನ್ ಜಯ

ಧೋನಿ ಮಿಂಚಿನ ಆಟ

ಕೊನೆಯ ಎರಡು ಪಂದ್ಯಗಳಲ್ಲಿ ಬ್ಯಾಟಿಂಗ್‌ಗೆ ಇಳಿಯದ ಚೆನ್ನೈ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಈ ಪಂದ್ಯದಲ್ಲಿ ಅಬ್ಬರಿಸಿದರು. ಕೇವಲ 16 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ ಔಟಾಗದೆ 37 ರನ್ ಗಳಿಸಿದರು. ಬೌಂಡರಿ, ಸಿಕ್ಸರ್ ಬಾರಿಸುತ್ತಿದ್ದಂತೆ ಪ್ರೇಕ್ಷಕರು 'ಧೋನಿ.. ಧೋನಿ..' ಎಂದು ಕೂಗಿ ಸಂಭ್ರಮಿಸಿದರು.

ಅರ್ಧಶತಕ ಗಳಿಸಿದ ಸಂಭ್ರಮದಲ್ಲಿ ರಿಷಭ್ ಪಂತ್ –ಪಿಟಿಐ ಚಿತ್ರ

ತವರಿನಂಗಳದಲ್ಲಿ ಮುಂಬೈಗೆ ಜಯದ ತವಕ

ಮೂರನೇ ಗೆಲುವಿನ ಮೇಲೆ ರಾಜಸ್ಥಾನ ರಾಯಲ್ಸ್ ಕಣ್ಣು • ರೋಹಿತ್, ಬೂಮ್ರಾ ಮೇಲೆ ನಿರೀಕ್ಷೆ

ಮುಂಬೈ (ಪಿಟಿಐ): ಹಾರ್ದಿಕ್ ಪಾಂಡ್ಯ ನಾಯಕರಾದ ನಂತರ ಮುಂಬೈ ಇಂಡಿಯನ್ಸ್ ತಂಡವು ಇದೇ ಮೊದಲ ಬಾರಿ ತವರಿನಂಗಳದಲ್ಲಿ ಆಡಲಿದೆ.

ಸೋಮವಾರ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಮುಂಬೈ ತಂಡವು ರಾಜಸ್ಥಾನ ರಾಯಲ್ಸ್ ವಿರುದ್ಧ ಕಣಕ್ಕಿಳಿಯಲಿದೆ.

ಜಸ್‌ಪ್ರೀತ್ ಬೂಮ್ರಾ



ಯಜುವೇಂದ್ರ ಚಾಹಲ್

ಅಹಮದಾಬಾದ್‌ನಲ್ಲಿ ಗುಜರಾತ್ ಟೈಟನ್ಸ್ ಮತ್ತು ಹೈದರಾಬಾದಿನಲ್ಲಿ ಸನ್‌ರೈಸರ್ಸ್ ವಿರುದ್ಧ ಮುಂಬೈ ಸೋತಿತ್ತು.

ಮುಂಬೈ ತಂಡವು ಕಳೆದ ಕೆಲವು ಟೂರ್ನಿಗಳಲ್ಲಿ ಇದೇ ರೀತಿ ಆರಂಭಿಕ ಪಂದ್ಯಗಳಲ್ಲಿ ಸೋತು, ನಂತರ ಪುಟಿದೆದ್ದು ಅಮೋಘವಾಗಿ ಆಡಿರುವ ಉದಾಹರಣೆಗಳು ಇವೆ. ಆದರೆ ಇಲ್ಲಿ ನೆಟ್ ರನ್ ರೇಟ್ (-0.925) ಕೂಡ ಅತ್ಯಂತ ಕಡಿಮೆ ಇದೆ. ಗಾಯಗೊಂಡಿರುವ ಸೂರ್ಯಕುಮಾರ್ ಯಾದವ್ ಅವರ ಗೈರುಹಾಜರಿಯೂ ಮುಂಬೈ ತಂಡವನ್ನು ಕಾಡುತ್ತಿದೆ. ಉಭಯ ತಂಡಗಳು ಕಳೆದ ಐದು ಸಲ ಮುಖಾಮುಖಿಯಾದಾಗ ಮುಂಬೈ 4–1 ಗೆಲುವಿನ ದಾಖಲೆ ಹೊಂದಿದೆ. ಇದರಿಂದಾಗಿ ಮತ್ತೊಂದು ಗೆಲುವಿನ ವಿಶ್ವಾಸದಲ್ಲಿದೆ. ಆದರೆ ಈ ಸಲ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನವು ಆಡಿದ ಎರಡೂ ಪಂದ್ಯಗಳಲ್ಲಿ ಜಯಿಸಿದೆ.

ಮುಂಬೈ ತಂಡಕ್ಕೆ ರೋಹಿತ್ ಶರ್ಮಾ ಬಿರುಸಿನ ಆರಂಭ ನೀಡುತ್ತಿದ್ದಾರೆ. ಇಶಾನ್ ಕಿಶನ್, ಟಿಮ್ ಡೇವಿಡ್ ಹಾಗೂ ಕಳೆದ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ತಿಲಕ್ ವರ್ಮಾ ಉತ್ತಮ ಲಯದಲ್ಲಿದ್ದಾರೆ. ಆದರೆ ನಾಯಕ ಹಾರ್ದಿಕ್ ತಮ್ಮ ನಿರ್ಧಾರಗಳನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳುವ ಅವಶ್ಯಕತೆ ಇದೆ. ತಂಡದ ಪ್ರಮುಖ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಅನುಭವ ಮತ್ತು ಪ್ರತಿಭೆಯನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಲು ಆದ್ಯತೆ ನೀಡಬೇಕಿದೆ. ಸ್ಪಿನ್ನರ್ ಪಿಯೂಷ್ ಚಾವ್ಲಾ ಕೂಡ ಅನುಭವಿಯಾಗಿದ್ದಾರೆ. ಸ್ಥಳೀಯ ಆಟಗಾರ ಶಮ್ಸ್ ಮುಲಾನಿ ಐಪಿಎಲ್‌ಗೆ ಹೊಸಬರು. ಆದರೆ ವಾಂಖೆಡೆಯಲ್ಲಿ ಆಡುವ ಅನುಭವ ಅವರಿಗೆ ಬಹಳಷ್ಟಿದೆ.

ಹೋದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾದ 17 ವರ್ಷದ ಕೆವಾನಾ ಮಪಾಕಾ ಅವರಿಗೆ ಮೊದಲ ಓವರ್ ಹಾಕುವ ಅವಕಾಶ ನೀಡಲಾಗಿತ್ತು. ರಾಜಸ್ಥಾನ ತಂಡದಲ್ಲಿ ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್ ತಮ್ಮ ಲಯಕ್ಕೆ ಮರಳಬೇಕಿದೆ. ಮೊದಲ ಪಂದ್ಯದಲ್ಲಿ ಸಂಜು ಮತ್ತು ಎರಡನೇ ಪಂದ್ಯದಲ್ಲಿ ರಿಯಾನ್ ಪರಾಗ್ ಅಮೋಘವಾಗಿ ಬ್ಯಾಟಿಂಗ್ ಮಾಡಿ ತಂಡದ ಗೆಲುವಿಗೆ ಕಾರಣರಾಗಿದ್ದರು.

ಬೌಲಿಂಗ್ ವಿಭಾಗವೂ ಸಮರ್ಥವಾಗಿದೆ. ಯಜುವೇಂದ್ರ ಚಾಹಲ್, ನಾಂದ್ರೆ ಬರ್ಗರ್, ಆರ್. ಅಶ್ವಿನ್ ಉತ್ತಮ ಲಯದಲ್ಲಿದ್ದಾರೆ. ಆವೇಶ್ ಖಾನ್ ಡೆತ್ ಓವರ್‌ನಲ್ಲಿಯೂ ತಮ್ಮ ಸಾಮರ್ಥ್ಯ ಮೆರೆದಿದ್ದಾರೆ. ಹೀಗಾಗಿ ತಂಡವು ಮುಂಬೈಗಿಂತಲೂ ಹೆಚ್ಚು ಸಮತೋಲನ ಹೊಂದಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಬಲಾಬಲ	
ಪಂದ್ಯ	28
ಮುಂಬೈ ಜಯ	15
ರಾಯಲ್ಸ್ ಜಯ	12
ಫಲಿತಾಂಶವಿಲ್ಲ	1

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಕೋಲ್ಕತ್ತ ನೈಟ್ ರೈಡರ್ಸ್	2	2	0	4	1.047
ಚೆನ್ನೈ ಸೂಪರ್ ಕಿಂಗ್ಸ್	3	2	1	4	0.976
ರಾಜಸ್ಥಾನ ರಾಯಲ್ಸ್	2	2	0	4	0.800
ಗುಜರಾತ್ ಟೈಟನ್ಸ್	3	2	1	4	-0.738
ಸನ್‌ರೈಸರ್ಸ್ ಹೈದರಾಬಾದ್	3	1	2	2	0.204
ಲಖನೌ ಸೂಪರ್ ಜೈಂಟ್ಸ್	2	1	1	2	0.025
ಡೆಲ್ಲಿ ಕ್ಯಾಪಿಟಲ್ಸ್	3	1	2	2	-0.016
ಪಂಜಾಬ್ ಕಿಂಗ್ಸ್	3	1	2	2	-0.337
ರಾಯಲ್ ಚಾಲೆಂಜರ್ಸ್ ಬೆಂಗಳೂರು	3	1	2	2	-0.711
ಮುಂಬೈ ಇಂಡಿಯನ್ಸ್	2	0	2	0	-0.925

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (181ರನ್)

ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (7 ವಿಕೆಟ್)

ತವರಿನಂಗಳದಲ್ಲಿ ಪಾಂಡ್ಯಗೆ 'ಟೆಸ್ಟ್'

ಮುಂಬೈ (ಪಿಟಿಐ): ಕಳೆದ ಎರಡು ಪಂದ್ಯಗಳಲ್ಲಿ ಮುಂಬೈ ಇಂಡಿಯನ್ಸ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅವರ ವಿರುದ್ಧ ಪ್ರೇಕ್ಷಕರು ಟೀಕೆಗಳ ಮಳೆ ಸುರಿಸಿದ್ದರು. ಕ್ರೀಡಾಂಗಣದಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಅವರನ್ನು ಅಪಹಾಸ್ಯ ಮಾಡಿದ್ದರು.

ಇದೀಗ ಪಾಂಡ್ಯ ತಮ್ಮ ತಂಡದ ತವರಿನಂಗಳದಲ್ಲಿ ಆಡಲಿದ್ದಾರೆ. ನಾಯಕತ್ವ ವಹಿಸಿಕೊಂಡ ನಂತರ ಮೊದಲ ಬಾರಿಗೆ ವಾಂಖೆಡೆಯಲ್ಲಿ ಆಡುತ್ತಿದ್ದಾರೆ. ಇಲ್ಲಿಯ ಅಭಿಮಾನಿಗಳು ಅವರನ್ನು ಹೇಗೆ ಬರ ಮಾಡಿಕೊಳ್ಳುತ್ತಾರೆ ಎಂಬ ಕುತೂಹಲ ಈಗ ಗರಿಗೆದರಿದೆ.

ಆದರೆ ಈ ಸವಾಲನ್ನು ಪಾಂಡ್ಯ ಗೆದ್ದು ಬರುತ್ತಾರೆ ಎಂದು ರಾಜಸ್ಥಾನ ರಾಯಲ್ಸ್ ತಂಡದ ವೇಗಿ ಟ್ರೆಂಟ್ ಬೌಲ್ಟ್ ಮತ್ತು ಮುಂಬೈ ತಂಡದ ಸ್ಪಿನ್ನರ್ ಪಿಯೂಷ್ ಚಾವ್ಲಾ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹಾರ್ದಿಕ್ ಪಾಂಡ್ಯ

'ಹಾರ್ದಿಕ್ ಪಾಂಡ್ಯ ಅವರು ನನ್ನ ನೆಚ್ಚಿನ ಕ್ರಿಕೆಟಿಗರಲ್ಲಿ ಒಬ್ಬರಾಗಿದ್ದಾರೆ. ಇಂತಹ ಅಪಹಾಸ್ಯಗಳ ಭರಾಟೆಯು ಬಹಳ ದಿನ ನಡೆಯುವುದಿಲ್ಲ. ಹಾರ್ದಿಕ್ ಇಂತಹದೆಲ್ಲವನ್ನೂ ಬದಿಗಿಟ್ಟು ತಮ್ಮ ಕೆಲಸದ ಮೇಲೆ ಗಮನವಿಡುವಂತಹ ಗಟ್ಟಿ ಆಟಗಾರ' ಎಂದು ಟ್ರೆಂಟ್ ಬೌಲ್ಟ್ ಹೇಳಿದ್ದಾರೆ.

'ಜನಸಮೂಹದ ಮೇಲೆ ನಮ್ಮ ನಿಯಂತ್ರಣವಿಲ್ಲ. ಆದ್ದರಿಂದ ನಾವು ಏನೂ ಮಾಡಲು ಸಾಧ್ಯವಿಲ್ಲ. ಆದರೆ ನಮ್ಮ ಕೆಲಸದ ಮೇಲಷ್ಟೇ ಗಮನ ಸಾಧಿಸಿ ಉತ್ತಮವಾಗಿ ಆಡಬೇಕು' ಎಂದು ಚಾವ್ಲಾ ಹೇಳಿದ್ದಾರೆ.

ಬಾಂಗ್ಲಾ ವಿರುದ್ಧ ಮುಂದುವರಿದ ಶ್ರೀಲಂಕಾ ಪ್ರಾಬಲ್ಯ

ಚಿತ್ತಗಾಂಗ್ (ಎಎಫ್‌ಪಿ): ಶ್ರೀಲಂಕಾ ಎರಡನೇ ಹಾಗೂ ಅಂತಿಮ ಕ್ರಿಕೆಟ್ ಟೆಸ್ಟ್ ಪಂದ್ಯದ ಎರಡನೇ ದಿನವೂ ಪ್ರಾಬಲ್ಯ ಸಾಧಿಸಿ ಮೊದಲ ಇನಿಂಗ್ಸ್‌ನಲ್ಲಿ 531 ರನ್‌ಗಳ ಭಾರಿ ಮೊತ್ತ ಗಳಿಸಿತು. ಆದರೆ ಕಮಿಂದು ಮೆಂಡಿಸ್ ಸತತ ಮೂರು ಇನಿಂಗ್ಸ್‌ನಲ್ಲಿ ಹ್ಯಾಟ್ರಿಕ್ ಶತಕದ ಅವಕಾಶವನ್ನು ಭಾನುವಾರ ಕೇವಲ ಎಂಟು ರನ್‌ಗಳಿಂದ ಕಳೆದುಕೊಂಡರು.

ಆದರೆ ಇಷ್ಟು ದೊಡ್ಡ ಮೊತ್ತದಲ್ಲಿ ಯಾವುದೇ ಬ್ಯಾಟರ್ ಶತಕ ಇರಲಿಲ್ಲ. ಆ ಮಟ್ಟಿಗೆ ಭಾರತದ ದಾಖಲೆ (9 ವಿಕೆಟ್‌ಗೆ 524) ಯನ್ನು ಲಂಕಾ ಸುಧಾರಿಸಿತು! 1976ರಲ್ಲಿ ನ್ಯೂಜಿಲೆಂಡ್ ವಿರುದ್ಧ ಕಾನ್ಪುರದಲ್ಲಿ ಭಾರತ ಗಳಿಸಿದ್ದ ಈ ಮೊತ್ತದಲ್ಲಿ ಒಂದೂ ಶತಕ ಇರಲಿಲ್ಲ.

ಬಾಂಗ್ಲಾದೇಶ ಎರಡನೇ ದಿನದಾಟ ಮುಗಿದಾಗ 1 ವಿಕೆಟ್‌ಗೆ 55 ರನ್ ಗಳಿಸಿತ್ತು. ಇನ್ನೂ 476 ರನ್ ಹಿಂದಿದೆ.

ಇದಕ್ಕೆ ಮೊದಲು ಶ್ರೀಲಂಕಾ ಇನಿಂಗ್ಸ್‌ನಲ್ಲಿ (ಶನಿವಾರ: 4 ವಿಕೆಟ್‌ಗೆ 314) ಅಸಿತ್ ಫೆರ್ನಾಂಡೊ ಕೊನೆಯವರಾಗಿ ನಿರ್ಗಮಿಸಿದಾಗ, ಇನ್ನೊಂದು ತುದಿಯಲ್ಲಿ ಕಮಿಂದು ಮೆಂಡಿಸ್ ಅಜೇಯ 92 ರನ್ ಗಳಿಸಿದ್ದರು. ಅವರು ಮೊದಲ ಟೆಸ್ಟ್‌ನ ಎರಡೂ ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 102 ಮತ್ತು 164 ರನ್ ಹೊಡೆದಿದ್ದರು.

ಮೆಂಡಿಸ್ ಬಿಟ್ಟರೆ, ಧನಂಜಯ ಡಿಸಿಲ್ವ (70), ದಿನೇಶ್ ಚಾಂದಿಮಲ್ (59), ಕುಸಲ್ ಮೆಂಡಿಸ್ (93) ದಿಮುತ್ ಕರುಣಾರತ್ನೆ (86) ಮತ್ತು ನಿಶನ್ ಮಧುಷ್ಕ (57) ಅವರೂ ಅರ್ಧ ಶತಕ ಗಳಿಸಿದ್ದರು. ಬಾಂಗ್ಲಾ ಕಡೆ ಮಾಜಿ ನಾಯಕ ಶಕೀಬ್ ಅಲ್ ಹಸನ್ 37 ಓವರುಗಳಲ್ಲಿ 110 ರನ್ನಿತ್ತು 3 ವಿಕೆಟ್ ಪಡೆದರು.

ರೋಹನ್–ಎಬ್ಡೆನ್‌ಗೆ ಪ್ರಶಸ್ತಿ

ಮಯಾಮಿ ಓಪನ್: ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಕನ್ನಡಿಗ

ಮಯಾಮಿ ಅಮೆರಿಕ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯನ್ ಜತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಇಲ್ಲಿ ನಡೆದ ಮಯಾಮಿ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು. ಈ ಗೆಲುವಿನೊಂದಿಗೆ ಎಟಿಪಿ ಮಾಸ್ಟರ್ಸ್ 1000 ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಅತ್ಯಂತ ಹಿರಿಯ ಆಟಗಾರ ಎಂಬ ತಮ್ಮದೇ ದಾಖಲೆಯನ್ನು 44 ವರ್ಷದ ರೋಹನ್ ಬಲಪಡಿಸಿಕೊಂಡರು.

ಕನ್ನಡಿಗ ರೋಹನ್ ಮತ್ತು 36 ವರ್ಷದ ಎಬ್ಡೆನ್ ಅವರೊಂದಿಗೆ ಶನಿವಾರ ತಡರಾತ್ರಿ ನಡೆದ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ 6-7(3), 6-3, 10-6 ರಿಂದ ಕ್ರೊವೇಷ್ಯಾದ ಇವಾನ್ ದೊಡಿಗ್ ಮತ್ತು ಅಮೆರಿಕದ ಆಸ್ಟಿನ್ ಕ್ರಾಜಿಕ್ ವಿರುದ್ಧ ಗೆಲುವು ಸಾಧಿಸಿದರು. ಈ ಜೋಡಿಗೆ ಪ್ರಸಕ್ತ ವರ್ಷದಲ್ಲಿ ದೊರೆತ ಎರಡನೇ ಪ್ರಶಸ್ತಿಯಾಗಿದೆ. ಜನವರಿಯಲ್ಲಿ ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು.

ಕಳೆದ ವರ್ಷ ಇಂಡಿಯನ್ಸ್ ವೆಲ್ಸ್‌ನಲ್ಲಿ ಪ್ರಶಸ್ತಿ ಗೆದ್ದಾಗ ಎಟಿಪಿ ಟೂರ್ನಿಯಲ್ಲಿ ಈ ಸಾಧನೆ ಮಾಡಿದ ಅತ್ಯಂತ ಹಿರಿಯ ಆಟಗಾರ ಎಂಬ ದಾಖಲೆ ನಿರ್ಮಿಸಿದ್ದ ರೋಹನ್ ಅವರು, ಇದೀಗ ತಮ್ಮದೇ ದಾಖಲೆಯನ್ನು ಮುರಿದರು.

ಕೊಡಗಿನ ರೋಹನ್ ಅವರಿಗೆ ಇದು 14ನೇ ಎಟಿಪಿ ಮಾಸ್ಟರ್ಸ್ 1000 ಫೈನಲ್ ಆಗಿತ್ತು. ಒಟ್ಟಾರೆಯಾಗಿ ಅನುಭವಿ ಆಟಗಾರನ 63ನೇ ಎಟಿಪಿ ಟೂರ್ ಮಟ್ಟದ ಫೈನಲ್ ಮತ್ತು 26ನೇ ಡಬಲ್ಸ್ ಪ್ರಶಸ್ತಿಯಾಗಿದೆ. ಭಾರತದ ಟೆನಿಸ್ ದಿಗ್ಗಜ ಲಿಯಾಂಡರ್ ಪೇಸ್ ನಂತರ ಎಲ್ಲಾ ಒಂಬತ್ತು ಎಟಿಪಿ ಮಾಸ್ಟರ್ಸ್ 1000 ಸ್ಪರ್ಧೆಗಳಲ್ಲಿ ಫೈನಲ್ ತಲುಪಿದ ಎರಡನೇ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಅಗ್ರ ಶ್ರೇಯಾಂಕದ ರೋಹನ್–ಎಬ್ಡೆನ್ ಜೋಡಿಗೆ ಆರಂಭಿಕ ಸೆಟ್‌ನಲ್ಲಿ ಎರಡನೇ ಶ್ರೇಯಾಂಕದ ಇವಾನ್–ಆಸ್ಟಿನ್ ಜೋಡಿಯಿಂದ ಪ್ರಬಲ ಸ್ಪರ್ಧೆ ಎದುರಾಯಿತು. ಸಮಬಲದ ಹೋರಾಟದಲ್ಲಿ ಟೈಬ್ರೇಕರ್ ಮೂಲಕ ಎದುರಾಳಿ ತಂಡವು ಮೇಲುಗೈ ಸಾಧಿಸಿತು. ಆದರೆ, ಎರಡನೇ ಸೆಟ್‌ನಲ್ಲಿ ತಿರುಗೇಟು ನೀಡಿದ ಭಾರತ–ಆಸ್ಟ್ರೇಲಿಯಾ ಜೋಡಿ ಸ್ಕೋರ್ ಸಮಬಲಗೊಳಿಸಿತು. ಅದೇ ಲಯವನ್ನು ಮುಂದುವರಿಸಿದ ಜೋಡಿಯು ನಿರ್ಣಾಯಕ ಸೆಟ್‌ನಲ್ಲೂ ಪಾರಮ್ಯ ಮೆರೆದರು.

ಈ ಗೆಲುವಿನ ಮೂಲಕ ರೋಹನ್ ಮತ್ತೆ ಎಟಿಪಿ ರ್‍ಯಾಂಕಿಂಗ್‌ನಲ್ಲಿ ಮತ್ತೆ ಅಗ್ರಸ್ಥಾನಕ್ಕೆ ಏರಿದರು. ಆಸ್ಟ್ರೇಲಿಯಾ ಓಪನ್ ಗೆದ್ದ ಬಳಿಕ ಅಗ್ರಸ್ಥಾನಕ್ಕೆ ಏರಿದ್ದ ಅವರು, ಈ ಸಾಧನೆ ಮಾಡಿದ ಹಿರಿಯ ಆಟಗಾರ ಎಂಬ ದಾಖಲೆಯನ್ನೂ ನಿರ್ಮಿಸಿದ್ದರು. ಆದರೆ, ದುಬೈ ಚಾಂಪಿಯನ್‌ಶಿಪ್‌ನಲ್ಲಿ ಕ್ವಾರ್ಟರ್‌ಫೈನಲ್‌ನಲ್ಲಿ ನಿರ್ಗಮನ ಮತ್ತು ಇಂಡಿಯನ್ ವೆಲ್ಸ್ ಮಾಸ್ಟರ್ಸ್‌ನಲ್ಲಿ ಆರಂಭಿಕ ಸುತ್ತಿನಲ್ಲಿ ಸೋತ ಬಳಿಕ ಡಬಲ್ಸ್ ರ್‍ಯಾಂಕಿಂಗ್‌ನಲ್ಲಿ ಅವರು ಎರಡನೇ ಸ್ಥಾನಕ್ಕೆ ಜಾರಿದ್ದರು.

ಫೈನಲ್‌ನ ಪಂದ್ಯದ ವೇಳೆ ಚರ್ಚಿಸುತ್ತಿರುವ ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ –ಎಎಫ್‌ಪಿ ಚಿತ್ರ

ಕೊಡವ ಹಾಕಿ : ಚೊದುಮಂಡ ತಂಡಕ್ಕೆ ಜಯ

ನಾಪೋಕ್ಲು (ಕೊಡಗು ಜಿಲ್ಲೆ): ಚೊದುಮಂಡ ತಂಡವು ಕೊಡವ ಕುಟುಂಬಗಳ ನಡುವಿನ ಕುಂಡ್ಯೋಳಂಡ ಕಪ್ ಹಾಕಿ ಟೂರ್ನಿಯಲ್ಲಿ ಭಾನುವಾರ ಅನ್ನೇರಕಂಡ ತಂಡದ ವಿರುದ್ಧ 6-0ರಿಂದ ಜಯ ದಾಖಲಿಸುವ ಮೂಲಕ ಮುಂದಿನ ಸುತ್ತಿಗೆ ಮುನ್ನಡೆಯಿತು.

ಇಲ್ಲಿನ ಚೆರಿಯಪರಂಬುವಿನ ಜನರಲ್ ಕೆ.ಎಸ್.ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಲೀಗ್ ಸುತ್ತಿನ ಪಂದ್ಯದಲ್ಲಿ ಚೊದುಮಂಡ ಪರ ಉತ್ತಮ ಪ್ರದರ್ಶನ ತೋರಿದ ನಿಖಿಲ್ ಕಾವೇರಪ್ಪ ಭರ್ಜರಿ 5 ಗೋಲು ಗಳಿಸಿದರು. ಗಗನ್ ಗಣಪತಿ ಒಂದು ಗೋಲು ಹೊಡೆದರು.

ಮತ್ತೊಂದು ಪಂದ್ಯದಲ್ಲಿ ಗುಮ್ಮಟ್ಟಿರ ತಂಡವು 3–1 ಅಂತರದಿಂದ ಅಯ್ಯಮಂಡ ತಂಡದ ವಿರುದ್ಧ ಗೆಲುವು ಸಾಧಿಸಿತು. ವಿಜೇತ ತಂಡದ ಪರ ಗುಮ್ಮಟಿರ ದೇವಮ್ಮ ಮಹಿಳಾ ಗೋಲ್‌ಕೀಪರ್ ಆಗಿ ಗಮನ ಸೆಳೆದರು.

ಉದಿಯಂಡ, ಅನ್ನಾಡಿಯಂಡ, ಚೋದುಮಂಡ, ಕನ್‌ಂಬೀರ, ಕುಕ್ಕೇರ, ಅಲ್ಲಾಪಿರ, ಗುಮ್ಮಟಿರ, ಕವಾಡಿಚಂ, ಕೂಡಂಡ ಸೇರಿದಂತೆ ಒಟ್ಟು 17 ತಂಡಗಳು ಮುಂದಿನ ಸುತ್ತಿಗೆ ಅರ್ಹತೆ ಪಡೆದವು.

ದಿನದ ಫಲಿತಾಂಶ: ಉದಿಯಂಡ ತಂಡವು ನಾಟೋಳಂಡ ವಿರುದ್ಧ 2-0 ಅಂತರದಿಂದ; ಅನ್ನಾಡಿಯಂಡ ತಂಡ 3–2 ಅಂತರದಿಂದ ಬೊಳ್ಳೇರ ವಿರುದ್ಧ; ಪೂದ್ರಿ ಮಾಡ ತಂಡ 3–1ರಿಂದ ಕುಕ್ಕೆರ ಎದುರು; ಕವಾಡಿಚಂಡ ತಂಡ 3-1 ಅಂತರದಿಂದ ಪಾರುವಂಗಡ ವಿರುದ್ಧ ಗೆಲುವು ಸಾಧಿಸಿದವು.

ಪಾಕಿಸ್ತಾನ ತಂಡಕ್ಕೆ ಮತ್ತೆ ಬಾಬರ್ ಅಜಂ ನಾಯಕತ್ವ

ಲಾಹೋರ್ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಗೆ ಎರಡು ತಿಂಗಳ ಮುಂಚಿತ ವಾಗಿ ಪಾಕಿಸ್ತಾನ ಕ್ರಿಕೆಟ್ ತಂಡಕ್ಕೆ ಬಾಬರ್ ಅಜಂ ಅವರನ್ನು ನಾಯಕರಾಗಿ ಮರುನೇಮಕ ಮಾಡಲಾಗಿದೆ.

ವೇಗದ ಬೌಲರ್ ಶಾಹೀನ್ ಶಾ ಆಫ್ರಿದಿ ಬದಲಿಗೆ ಬಾಬರ್ ಅವರನ್ನು ಭಾನುವಾರ ನೇಮಕಗೊಂಡಿದ್ದಾರೆ. ಜನವರಿಯಲ್ಲಿ ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲಿ ಶಾಹಿನ್ ನೇತೃತ್ವದ ಪಾಕಿಸ್ತಾನ ತಂಡವು 1-4 ಅಂತರದಲ್ಲಿ ಸೋತಿತ್ತು. ಅದರ ಬೆನ್ನಲ್ಲೇ ಪಿಸಿಬಿಯ ಆಯ್ಕೆ ಸಮಿತಿಯು ಸರ್ವಾನುಮತದಿಂದ ಈ ನಿರ್ಧಾರ ಕೈಗೊಂಡಿದೆ.

ಭಾರತದಲ್ಲಿ ಕಳೆದ ವರ್ಷ ನಡೆದ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಕಳಪೆ ಪ್ರದರ್ಶನದ ಬಳಿಕ ಬಾಬರ್ ಅವರನ್ನು ಟಿ20, ಏಕದಿನ ಮತ್ತು ಟೆಸ್ಟ್ ತಂಡದ ನಾಯಕತ್ವದಿಂದ ಕೆಳಗಿಳಿಸಲಾಗಿತ್ತು. ಇದೀಗ ಮತ್ತೆ ಟಿ20 ಮತ್ತು ಏಕದಿನ ತಂಡದ ಚುಕ್ಕಾಣಿಯನ್ನು ಅವರ ಹೆಗಲಿಗೆ ವಹಿಸಲಾಗಿದೆ. ಶಾನ್ ಮಸೂದ್ ಪ್ರಸ್ತುತ ಪಾಕಿಸ್ತಾನ ಟೆಸ್ಟ್ ತಂಡವನ್ನು ಮುನ್ನಡೆಸುತ್ತಿದ್ದು, ಅದಕ್ಕೂ ಬಾಬರ್ ಅವರನ್ನು ನೇಮಿಸುವ ಸಾಧ್ಯತೆ ಇದೆ. ಈ ಬಗ್ಗೆ ನಂತರದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ ಎಂದು ಪಿಸಿಬಿ ಮೂಲಗಳು ತಿಳಿಸಿವೆ.

ಕರ್ನಾಟಕ ರಣಜಿ ವಿಜಯಕ್ಕೆ 50 ವರ್ಷ: ಕ್ರಿಕೆಟಿಗ ಗಾವಸ್ಕರ್ ಸಲಹೆ

ಕ್ರೀಡಾಂಗಣದ ದ್ವಾರಗಳಿಗೆ ದಿಗ್ಗಜರ ಹೆಸರಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ತಂಡವು ಪ್ರಥಮ ರಣಜಿ ಟ್ರೋಫಿ ಜಯಿಸಿದ ಸುವರ್ಣ ಸಂಭ್ರಮ ಆಚರಿಸುತ್ತಿದೆ. ದೇಶದ ಕ್ರಿಕೆಟ್‌ಗೆ ಅಮೂಲ್ಯ ಕಾಣಿಕೆ ನೀಡಿರುವ ರಾಜ್ಯದ ಹಲವಾರು ಆಟಗಾರರು ಇದ್ದಾರೆ. ಅವರ ಹೆಸರುಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದ ದ್ವಾರಗಳು ಮತ್ತು ಸ್ಟ್ಯಾಂಡ್‌ಗಳಿಗೆ ನಾಮಕರಣ ಮಾಡಬೇಕು ಎಂದು ಕ್ರಿಕೆಟ್ ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ ಹೇಳಿದ್ದಾರೆ.

ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ವಿನೂ ಮಂಕಡ್, ಸುನಿಲ್ ಗಾವಸ್ಕರ್ ಹಾಗೂ ಸಚಿನ್ ತೆಂಡೂಲ್ಕರ್, ದೆಹಲಿಯ ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದಲ್ಲಿ ಬಿಷನ್ ಸಿಂಗ್ ಬೇಡಿ, ಮೊಹಿಂದರ್ ಅಮರನಾಥ್ ಹಾಗೂ ವೀರೇಂದ್ರ ಸೆಹ್ವಾಗ್ ಅವರ ಹೆಸರುಗಳನ್ನು ಸ್ಟ್ಯಾಂಡ್‌ಗಳು ಮತ್ತು ದ್ವಾರಗಳಿಗೆ ನಾಮಕರಣ ಮಾಡಲಾಗಿದೆ. ಅದೇ ಮಾದರಿಯಲ್ಲಿ ಬೆಂಗಳೂರಿನಲ್ಲಿಯೂ ಮಾಡಬೇಕು ಎಂದು ಗಾವಸ್ಕರ್ ಸಲಹೆ ನೀಡಿದ್ದಾರೆ.



ಸುನಿಲ್ ಗಾವಸ್ಕರ್

ಭಾನುವಾರ ಕರ್ನಾಟಕ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಯಲ್ಲಿ ಆಯೋಜಿ ಸಿದ್ದ 1974ರ ರಣಜಿ ಟ್ರೋಫಿ ವಿಜೇತ ಆಟಗಾರರ ಸನ್ಮಾನ ಸಮಾರಂಭದಲ್ಲಿ ಗಾವಸ್ಕರ್ ಅವರು ವಿಡಿಯೊ ಮೂಲಕ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಅವರು, 'ಕರ್ನಾಟಕದ ಕ್ರಿಕೆಟಿಗರು ಬಹಳ ದೊಡ್ಡ ಸಾಧನೆ ಮಾಡಿದ್ದಾರೆ. ಪ್ರಸನ್ನ ಬಳಗವು 50 ವರ್ಷಗಳ ಹಿಂದೆ ಮಾಡಿದ ಸಾಧನೆಯು ಸ್ಮರಣಾರ್ಹವಾದದ್ದು. ಆ ಜಯದಿಂದಾಗಿ ಕರ್ನಾಟಕವು ಭಾರತದ ಕ್ರಿಕೆಟ್ ಕ್ಷೇತ್ರದ ಶಕ್ತಿಕೇಂದ್ರವಾಗಿ ಬೆಳೆಯಿತು. ಅಲ್ಲಿಂದ ಇಲ್ಲಿಯವರೆಗೆ ಹಲವು ಆಟಗಾರರನ್ನು ದೇಶಕ್ಕೆ ಸಮರ್ಪಿಸಿದೆ. ಆದ್ದರಿಂದ ರಾಜ್ಯದ ದಿಗ್ಗಜ ಆಟಗಾರರ ಹೆಸರುಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದ ದ್ವಾರಗಳು ಮತ್ತು ಸ್ಟ್ಯಾಂಡ್‌ಗಳಿಗೆ ನಾಮಕರಣ ಮಾಡಬೇಕು. ಆ ಮೂಲಕ ಗೌರವಿಸಬೇಕು' ಎಂದು ಗಾವಸ್ಕರ್ ಹೇಳಿದರು.

ಅವಕಾಶಗಳ ಬಾಗಿಲು ತೆರೆದ ಜಯ: ರಣಜಿ ಟ್ರೋಫಿ ಗೆಲ್ಲುವುದು ಹೇಗೆಂದು ತೋರಿಸಿಕೊಟ್ಟ ಶ್ರೇಯ ಕರ್ನಾಟಕದ ಇಎಎಸ್ ಪ್ರಸನ್ನ ನಾಯಕತ್ವದ ತಂಡಕ್ಕೆ ಸಲ್ಲಬೇಕು. ಅ ತಂಡದ ಸಾಧನೆಯ ಕತೆಗಳೇ ತಮಗೆ ಪ್ರೇರಣೆಯಾದವು. ಅಂದಿನ ಜಯದಿಂದಾಗಿ ಕರ್ನಾಟಕದ ಕ್ರಿಕೆಟ್‌ಗೆ ಅವಕಾಶಗಳ ಬಾಗಿಲು ತೆರೆಯಿತು ಎಂದು ಕಾರ್ಯಕ್ರಮದಲ್ಲಿ ಹಾಜರಿದ್ದ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹೇಳಿದರು.

'ನಾವು ಕರ್ನಾಟಕದ 15 ಮತ್ತು 17 ವರ್ಷದೊಳಗಿನವರ ತಂಡಗಳನ್ನು ಪ್ರತಿನಿಧಿಸುವ ಸಂದರ್ಭದಲ್ಲಿ ಪ್ರಸನ್ನ ಬಳಗದ ಯಶೋಗಾಥೆಗಳನ್ನು ಕೇಳಿ ರೋಮಾಂಚನಗೊಳ್ಳುತ್ತಿದ್ದೆವು. ಆ ತಂಡದಲ್ಲಿ ಆಡಿದ ಮಹನೀಯರು ನಮ್ಮ ವಯೋಮಿತಿಯ ತಂಡಗಳ ಕೋಚ್ ಅಥವಾ ಮ್ಯಾನೇಜರ್ ಆಗಿ ಬರುತ್ತಿದ್ದರು. ಅವರೊಂದಿಗಿನ ಒಡನಾಟದಿಂದ ಬಹಳಷ್ಟು ಕಲಿತೆವು' ಎಂದರು.

ರಣಜಿ ವಿಜೇತ ತಂಡದ ಜಿ.ಆರ್. ವಿಶ್ವನಾಥ್, ಸೈಯದ್ ಕಿರ್ಮಾನಿ, ಬ್ರಿಜೇಶ್ ಪಟೇಲ್, ಸುಧಾಕರ್ ರಾವ್, ಸಿದ್ದರಾಮ, ಬಿ. ರಘುನಾಥ್, ಸಂಜಯ ದೇಸಾಯಿ ಎಸ್. ವಿಜಯಪ್ರಕಾಶ್ ಅವರನ್ನು ಗೌರವಿಸಲಾಯಿತು.

'ಆ ಟೂರ್ನಿಯ ಸೆಮಿಫೈನಲ್‌ನಲ್ಲಿ ಬ್ರಿಜೇಶ್ ಆರಂಭ ಕೆಲವು ಎಸೆತಗಳಲ್ಲಿ ಹಿಂಜರಿಕೆಯಿಂದ ಬ್ಯಾಟಿಂಗ್ ಮಾಡಿದ್ದರು. ಒಮ್ಮೆ ಬೇರೂರಿದ ನಂತರ ಬೌಲರ್‌ಗಳಿಗೆ ಸಿಂಹಸ್ವಪ್ನವಾದರು' ಎಂದು ವಿಶ್ವನಾಥ್ ನೆನಪಿಸಿಕೊಂಡರು.

ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಸುನಿಲ್ ಜೋಶಿ ಮತ್ತು ಆರ್. ವಿನಯಕುಮಾರ್ ವಿಡಿಯೊ ಸಂದೇಶಗಳ ಮೂಲಕ ಶುಭ ಕೋರಿದರು. ಭಾರತ ತಂಡದ ಮಾಜಿ ಆಟಗಾರರಾದ ವೆಂಕಟೇಶ್ ಪ್ರಸಾದ್, ದೊಡ್ಡಗಣೇಶ್, ಸುಜಿತ್ ಸೋಮಸುಂದರ್, ಎನ್‌ಸಿಎ ನಿರ್ದೇಶಕ ವಿವಿಎಸ್ ಲಕ್ಷ್ಮಣ್ ಇದ್ದರು.